ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಕ್ತವರ್ಣಕ್ಕೆ ತಿರುಗಿದ ಚಂದ್ರ

ಭಾರತ ಸೇರಿ ವಿಶ್ವದ ಹಲವು ಕಡೆ ವರ್ಷದ ಮೊದಲ ಚಂದ್ರಗ್ರಹಣವನ್ನು ಮಂಗಳವಾರ ಜನ ವೀಕ್ಷಿಸಿದರು. ಮಧ್ಯಾಹ್ನ 3.20ಕ್ಕೆ ಶುರುವಾಗಿ ಸಂಜೆ 6.40ಕ್ಕೆ ಮುಕ್ತಾಯವಾಗಿದೆ. ಕೆಲವು ನಿಮಿಷ ರಕ್ತವರ್ಣಕ್ಕೆ ಚಂದ್ರ ತಿರುಗಿದ್ದ. ದೇಶದೆಲ್ಲೆಡೆ ಪೂಜೆ, ಹವನಗಳು ನಡೆದಿವೆ. ನೀವು ನೋಡುತ್ತಿರುವ ಚಂದ್ರಗ್ರಹಣದ ದೃಶ್ಯ ಬೆಂಗಳೂರಿನಲ್ಲಿ ಕಂಡುಬಂದಿದ್ದು. -ಚಿತ್ರ ಸುಧಾಕರ್ ದೇವರಾಜ್

ಸೊಂಪಾದ ಪುಟಗಳು

ಹಾಗಾದರೆ ದಿಲ್ಲಿ ಅಬಕಾರಿ ನೀತಿ ಹಗರಣ ನಡೆದೇ ಇಲ್ಲವೇ?
ಜನಪಥ
ರಾಘವಶರ್ಮ ನಿಡ್ಲೆ 6

ಯುದ್ಧ: ಜಗತ್ತು ಮನೆಯೊಂದು ಮೂರು ಬಾಗಿಲು!
ಯುದ್ಧಕಾಂಡ
ರವೀ ಸಜಂಗದ್ದೆ 7

ದಾರಿದೀಪೋಕ್ತಿ

ನಮ್ಮ ಬದುಕಿನಲ್ಲಿ ಸಮಸ್ಯೆಗಳು ಎದುರಾದಾಗ ಅಥವಾ ಪರಿಸ್ಥಿತಿಗಳು ನಮಗೆ ವಿರುದ್ಧವಾಗಿದ್ದಾಗ, ನಾವು ನನ್ನ ಹಣೆಬರಹ ಸರಿಯಿಲ್ಲ', ಸರಕಾರ ಸರಿ ಇಲ್ಲ' ಅಥವಾ ಜನರು ಕೆಟ್ಟವರು' ಎಂದು ಇತರರನ್ನು ಅಥವಾ ಸಂದರ್ಭಗಳನ್ನು ದೂಷಿಸುತ್ತಾ ಕುಳಿತುಕೊಳ್ಳುತ್ತೇವೆ. ನಮ್ಮ ಸಮಸ್ಯೆಗಳಿಗೆ ನಾವೇ ಕಾರಣ ಆಗಿರುತ್ತೇವೆ.

ವಕ್ರತುಂಡೋಕ್ತಿ

ಜೀವನದಲ್ಲಿ ನಮಗೆ ಬೇಕಾದವರು ನಮ್ಮನ್ನು ಬಿಟ್ಟು ಹೋದಾಗ ಯಾರೂ ತಲೆ ಚಚ್ಚಿಕೊಳ್ಳುವುದಿಲ್ಲ. ಆದರೆ ಚಾರ್ಜರ್ ಹಾಕಿ ಸ್ವಿಚ್ ಆನ್ ಮಾಡದೇ ಇದ್ದಾಗ ಎಲ್ಲರೂ ತಲೆ ಚಚ್ಚಿಕೊಳ್ಳುತ್ತಾರೆ.

ಚಿನ್ನಸ್ವಾಮಿಯಲ್ಲೇ ಆಡ್ತೀವಿ: ಆರ್‌ಸಿಬಿ

ಬೆಂಗಳೂರು: ಈ ವರ್ಷ ಐಪಿಎಲ್ ಪಂದ್ಯಗಳು ಬೆಂಗಳೂರಿನಲ್ಲಿ ನಡೆಯುತ್ತವೆಯೋ, ಇಲ್ಲವೋ ಎಂಬ ಗೊಂದಲಗಳಿಗೆ ತೆರೆಬಿದ್ದಿದೆ. ಸ್ವತಃ ಆರ್‌ಸಿಬಿಯೇ ಚಿನ್ನಸ್ವಾಮಿಯಲ್ಲಿ ತಾನು 5 ಪಂದ್ಯಗಳನ್ನು ಆಡುತ್ತೇನೆ, ಬಾಕಿ 2 ಪಂದ್ಯಗಳನ್ನು ಛತ್ತೀಸ್‌ಗಢದ ರಾಯಪುರದಲ್ಲಿ ಆಡುತ್ತೇನೆ ಎಂದಿದೆ. ಈ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿರುವ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಕೂಡ ಇದನ್ನು ಪುಷ್ಟೀಕರಿಸಿದ್ದಾರೆ. ಕೂಟದ ಆರಂಭಿಕ ಪಂದ್ಯ ಮತ್ತು ಐಪಿಎಲ್ ನಿಯಮಗಳ ಪ್ರಕಾರ ಫೈನಲ್ ಕೂಡ ಬೆಂಗಳೂರಿನಲ್ಲೇ ನಡೆಯುವ ಆಶಾವಾದವಿದೆ.

ಅಮೆರಿಕದಲ್ಲಿ ಗುಂಡಿನ ದಾಳಿ: ಭಾರತೀಯ ವಿದ್ಯಾರ್ಥಿನಿ ಸಾವು

ನ್ಯೂಯಾರ್ಕ್: ದುಷ್ಕರ್ಮಿಯೊಬ್ಬ ಅಮಾಯಕರ ಮೇಲೆ ಮನಬಂದಂತೆ ಗುಂಡು ಹಾರಿಸಿ ನಾಲ್ವರು ವಿದ್ಯಾರ್ಥಿಗಳನ್ನು ಹತ್ಯೆ ಮಾಡಿರುವ ಘಟನೆ ಅಮೆರಿಕದ ಆಸ್ಟಿನ್‌ನಲ್ಲಿ ನಡೆದಿದೆ. ಮೃತಪಟ್ಟವರ ಪೈಕಿ ಒಬ್ಬ ಭಾರತೀಯ ಮೂಲದ ವಿದ್ಯಾರ್ಥಿನಿ ಸವಿತಾ ಶಾನ್ ಕೂಡ ಒಬ್ಬರು. 21 ವರ್ಷದ ಸವಿತಾ ಅತ್ಯಂತ ಪ್ರತಿಭಾವಂತೆ ಎಂದು ಹೊಗಳ ಲಾಗಿದೆ. ಘಟನೆಯ ಹಿಂದೆ ಉಗ್ರರ ಕೈವಾಡವಿದೆ ಎಂಬ ಸಂಶಯವಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಅಮೆರಿಕ, ಇಸ್ರೇಲ್ ದಾಳಿ ಇನ್ನಷ್ಟು ತೀವ್ರ, ಇರಾನ್‌ನಲ್ಲಿ ಸಾವಿನ ಸಂಖ್ಯೆ 790ಕ್ಕೂ ಅಧಿಕ

ಅತ್ಯುಗ್ರವಾಗಿ ತಿರುಗಿಬಿದ್ದ ಇರಾನ್, ದುಬೈನಲ್ಲಿನ ಆಸ್ಟ್ರೇಲಿಯಾ, ಅಮೆರಿಕ ನೆಲೆಗಳ ಮೇಲೆ ದಾಳಿ

ಅಮೆರಿಕವನ್ನು ಗುರಿಯಾಗಿಸಿ ಸೌದಿ ಅರೇಬಿಯಾದ ರಿಯಾಧ್ ಮೇಲೂ ಡ್ರೋನ್ ಮೂಲಕ ಆಕ್ರಮಣ

ಇರಾನ್ ಉಗ್ರಾವತಾರ

ದೆಹಲಿ: ಇರಾನ್ ವಿರುದ್ಧ ಅಮೆರಿಕ, ಇಸ್ರೇಲ್ ಯುದ್ಧ 4ನೇ ದಿನಕ್ಕೆ ಕಾಲಿಟ್ಟಿದೆ. ದಿನೇದಿನೇ ಪರಿಸ್ಥಿತಿ ಭೀಕರವಾಗುತ್ತಿದೆ. ಅಮೆರಿಕ ಇರಾನ್ ಮೇಲೆ ಮಾಡುತ್ತಿರುವ ದಾಳಿಗೆ ಪ್ರತಿಯಾಗಿ, ಇರಾನ್ ಬಹ್ರೇನ್, ಕುವೈತ್, ಕತಾರ್, ಸೌದಿ ಅರೇಬಿಯಾದಲ್ಲಿರುವ ಅಮೆರಿಕ ಸೇನಾನೆಲೆಗಳ ಮೇಲೆ ದಾಳಿ ಎಸಗಿದೆ. ಇಸ್ರೇಲ್ ಸೇರಿ ಮಧ್ಯಪ್ರಾಚ್ಯದಲ್ಲಿರುವ 12 ದೇಶಗಳಲ್ಲಿ ಬಾಂಬ್ ಸ್ಫೋಟದ ಸದ್ದು ಕೇಳಿ ಬರುತ್ತಿದೆ. ಇದರ ನಡುವೆ ಇರಾನ್‌ನಲ್ಲಿ 4.3 ತೀವ್ರತೆಯ ಭೂಕಂಪನ ಸಂಭವಿಸಿದೆ ಎಂದು ಹೇಳಲಾಗುತ್ತಿದೆ. ಆದರೆ ಇದು ಭೂಕಂಪನವಲ್ಲ, ಇರಾನ್ ನಡೆಸಿದ ಅಣುಪರೀಕ್ಷೆ ಎಂದು ಇನ್ನೂ ಕೆಲವು ಮೂಲಗಳು ಹೇಳಿವೆ. ಇಂಡೋನೇಷ್ಯಾದ ಸುಮಾತ್ರಾದಲ್ಲೂ 6.1 ತೀವ್ರತೆಯ ಕಂಪನವಾಗಿದೆ.

ಇರಾನ್‌ನಲ್ಲಿ ಸಾವಿನ ಸಂಖ್ಯೆ ಮಿತಿಮೀರಿ ಹೋಗುತ್ತಿದೆ. ಸದ್ಯದ ಪ್ರಕಾರ 790ಕ್ಕೂ ಅಧಿಕ ಸಾವುಗಳಾಗಿವೆ ಎನ್ನಲಾಗಿದೆ. ಕಳೆದ ಹಲವು ದಶಕಗಳಲ್ಲೇ ಮಧ್ಯಪೂರ್ವ ಭಾಗದಲ್ಲಿ ಸಂಭವಿಸಿದ ಅತಿ ಗಂಭೀರ ಯುದ್ಧ ಇದು. ಅಮೆರಿಕ -ಇಸ್ರೇಲ್ ದೇಶಗಳು ಫೆ.28ರಂದು ಟೆಹರಾನ್ ಮೇಲೆ ನಡೆಸಿದ ದಾಳಿಯಿಂದ ಶುರುವಾದ ಯುದ್ಧ ಇನ್ನಷ್ಟು ಏರುತ್ತಿದೆ. ಅಮೆರಿಕ ಅರಬ್ ರಾಷ್ಟ್ರಗಳನ್ನೇ ಬಳಸಿಕೊಂಡು ಇನ್ನೊಂದು ಅರಬ್ ದೇಶವನ್ನು ನಿರ್ನಾಮ ಮಾಡುವ ಕಾಯಕದಲ್ಲಿ ಭರ್ಜರಿ ಯಶಸ್ಸು ಕಾಣುವ ಲೆಕ್ಕಾಚಾರದಲ್ಲಿದೆ.

ಸೌದಿ ಅರೇಬಿಯಾದ ರಿಯಾಧ್‌ನಲ್ಲಿರುವ ಅಮೆರಿಕ ಸೇನಾನೆಲೆ ಮೇಲೆ ಇರಾನ್ 2 ಡ್ರೋನ್ ದಾಳಿ ನಡೆಸಿದೆ. ಇದರಿಂದ ಸಣ್ಣಪ್ರಮಾಣದ ಬೆಂಕಿ ಕಾಣಿಸಿಕೊಂಡಿದೆ. ಬಹಳ ಹಾನಿಯೇನಾಗಿಲ್ಲ ಎಂದು ಸೌದಿ ಸರ್ಕಾರ ಹೇಳಿದೆ. ಈ ಕಟ್ಟಡದಿಂದ ಈಗಾಗಲೇ ಅಮೆರಿಕದ ಸಿಬ್ಬಂದಿ ಹೊರ ನಡೆದಿದ್ದಾರೆ ಎಂದು ತಿಳಿಸಲಾಗಿದೆ. ಸೋಮವಾರ ಕುವೈತ್‌ನಲ್ಲಿರುವ ಅಮೆರಿಕ ಸೇನಾನೆಲೆಗಳ ಮೇಲೆ ಇರಾನ್ ದಾಳಿ ಮಾಡಿತ್ತು.

ಕತಾರ್ ಕಾರ್ಯಾಚರಣೆ ಸ್ಥಗಿತ: ಇರಾನ್ ಕೊಲ್ಲಿ ದೇಶಗಳ ತೈಲ ಘಟಕಗಳ ಮೇಲೆ ದಾಳಿ ಮಾಡಿರುವುದರಿಂದ ತೈಲಬೆಲೆ ಏರುವ ಸಾಧ್ಯತೆಯಿದೆ. ಕತಾರ್ ತನ್ನ ಜೈವಿಕ ಅನಿಲ ಉತ್ಪಾದನಾ ಘಟಕದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದೆ.

ಇರಾನ್‌ನಲ್ಲಿ 165 ಶಾಲಾ ಬಾಲಕಿಯರು ಬಲಿ

ಶನಿವಾರ ಇರಾನ್‌ನ ಮಿನಾಬ್ ನಗರದಲ್ಲಿ ಅಮೆರಿಕ-ಇಸ್ರೇಲ್ ನಡೆಸಿದ ಕ್ಷಿಪಣಿ ದಾಳಿಗೆ 165 ಅಮಾಯಕ ಶಾಲಾ ಬಾಲಕಿಯರು ಮೃತಪಟ್ಟಿದ್ದಾರೆಂದು ತಿಳಿದುಬಂದಿದೆ. ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಮೆರವಣಿಗೆ ಮಂಗಳವಾರ ನಡೆದಿದೆ. ಈ ವೇಳೆ ಜನಸಾಗರವೇ ಹರಿದುಬಂದಿತ್ತು. ಮುಗ್ಧ ಶಾಲಾ ಬಾಲಕಿಯರ ದಾಳಿಗೆ ಕಾರಣರಾದ ಅಮೆರಿಕ ಹಾಗೂ ಇಸ್ರೇಲ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಸ್ರೇಲ್ ದಾಳಿ: 13 ಇರಾನ್ ಯೋಧರು ಬಲಿ

ಇರಾನ್ ರಾಜಧಾನಿ ಟೆಹರಾನ್‌ನಲ್ಲಿರುವ ಇರಾನ್ ಅಧ್ಯಕ್ಷರ ಕಚೇರಿ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿದೆ. ಇರಾನಿನ ವಿವಿಧೆಡೆ ಇರುವ ಐಆರ್‌ಜಿಸಿ ಕಮಾಂಡ್ ಗುರಿ ಮಾಡಿದ ಅಮೆರಿಕದ ಮಿಸೈಲ್ ದಾಳಿ ಪರಿಣಾಮ, ಬುಶೆಹನರ್ ಜಾಮ್-ದಿರ್ ನಗರಗಳಲ್ಲಿ ಐಆರ್‌ಜಿಸಿಯ ವಾಯುಪಡೆ ಮತ್ತು ನೌಕಾಪಡೆಯ 5 ಸೈನಿಕರು ಸಾವನ್ನಪ್ಪಿದ್ದಾರೆ. ಆಗ್ನೇಯ ಇರಾನಿನ ವಾಯುನೆಲೆಯಲ್ಲಿ 13 ಸೈನಿಕರು ಬಲಿಯಾಗಿದ್ದಾರೆ.

ತೈಲಬೆಲೆ ಬ್ಯಾರೆಲ್‌ಗೆ 100 ಡಾಲರ್

ಇರಾನ್‌ನಲ್ಲಿನ ಹೊರ್ಮುಜ್ ಜಲಸಂಧಿ ಬಂದ್ ಆಗಿದೆ. ಇದರಿಂದಾಗಿ 27 ಭಾರತೀಯ ಧ್ವಜವುಳ್ಳ ಹಡಗುಗಳು ಅಲ್ಲಿ ಸಿಲುಕಿಕೊಂಡಿವೆ. ₹10,000 ಕೋಟಿಗೂ ಅಧಿಕ ಮೌಲ್ಯದ ಸರಕು ಅಪಾಯಕ್ಕೆ ಸಿಲುಕಿದೆ. ಹೊರ್ಮುಜ್ ಬಂದ್ ಆಗಿರುವುದರಿಂದ ತೈಲಬೆಲೆ ತೀವ್ರ ಏರಿಕೆಯಾಗಿದೆ. ಬ್ಯಾರೆಲ್‌ಗೆ 100 ಡಾಲರ್‌ಗೆ ತಲುಪಿದೆ. ಭಾರತ ದಲ್ಲೂ ಸ್ಥಿತಿ ವಿಕೋಪಕ್ಕೆ ಹೋಗುವ ಆತಂಕವಿದೆ.

ಇನ್ನೂ 50 ದಿನಗಳಿಗೆ ಆಗುವಷ್ಟು ತೈಲ ಸಂಗ್ರಹ

ಭಾರತದಲ್ಲಿ ಇನ್ನೂ 50 ದಿನಗಳಿಗೆ ಆಗುವಷ್ಟು ತೈಲಸಂಗ್ರಹವಿದೆ. ಕಚ್ಚಾತೈಲ 25 ದಿನಗಳಿಗೆ ಆಗುವಷ್ಟಿದ್ದರೆ, ಸಂಸ್ಕರಿತ ಪೆಟ್ರೋಲಿಯಂ ಉತ್ಪನ್ನಗಳು ಇನ್ನೂ 25 ದಿನಗಳಿಗಾಗುವಷ್ಟಿದೆ. ಆದ್ದರಿಂದ ಆತಂಕಪಡುವ ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರದ ಮೂಲಗಳು ಹೇಳಿವೆ. ಇದೇ ವೇಳೆ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ, ಎಲ್‌ಎನ್‌ಜಿಯನ್ನು ತರಿಸಿಕೊಳ್ಳಲು ಇತರೆ ದೇಶಗಳತ್ತ ಮುಖಮಾಡಿದೆ. ಸದ್ಯಕ್ಕೆ ಬೆಲೆಯೇರಿಕೆ ಮಾಡುವ ಯಾವುದೇ ಉದ್ದೇಶವಿಲ್ಲ ಎಂದು ಮೂಲಗಳು ಹೇಳಿವೆ.

ಅಣುಪರೀಕ್ಷೆಯಲ್ಲ

ಈಗಾಗಲೇ ಅಮೆರಿಕ-ಇಸ್ರೇಲ್ ಹೊಡೆತದಿಂದ ತತ್ತರಿಸಿರುವ ಇರಾನ್‌ನಲ್ಲಿ 4.3 ತೀವ್ರತೆಯ ಭೂಕಂಪನ ಸಂಭವಿಸಿದೆ. ಫಾರ್ಸ್ ಪ್ರಾಂತ್ಯದ ಖೋನ್ಜ್ ಪ್ರದೇಶದ ಗೆರಾಶ್ ಜಿಲ್ಲೆಯಲ್ಲಿ ಕಂಪನ ಕಂಡುಬಂದಿದೆ. ಇರಾನಿನ ದಕ್ಷಿಣ ಭಾಗದಲ್ಲಿ ಭೂಕಂಪನ ಸಾಮಾನ್ಯ. ಅಣ್ವಸ್ತ್ರ ಪ್ರಯೋಗದಿಂದಾಗುವ ಕಂಪನಕ್ಕೂ, ಮಾಮೂಲಿ ಭೂಕಂಪನಕ್ಕೂ ವ್ಯತ್ಯಾಸವಿದೆ ಎಂದು ತಜ್ಞರು ಹೇಳಿದ್ದಾರೆ. ಸಾಮಾಜಿಕ ತಾಣಗಳಲ್ಲಿ ಮಾತ್ರ ಇರಾನ್ ಅಣ್ವಸ್ತ್ರ ಪರೀಕ್ಷೆಯ ಫಲ ಇದು ಎನ್ನಲಾಗಿದೆ.

ಸೋನಿಯಾ ವಾಗ್ದಾಳಿ

ಇರಾನ್ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಹತ್ಯೆಯ ಬಗ್ಗೆ ಮೋದಿ ಸರ್ಕಾರ ಮೌನ ವಹಿಸಿರುವುದು ತಟಸ್ಥವಲ್ಲ, ಬದಲಾಗಿ ಪಲಾಯನವಾಗಿದೆ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಟೀಕಿಸಿದ್ದಾರೆ. ಇದು ಭಾರತದ ವಿದೇಶಾಂಗ ನೀತಿಯ ದಿಕ್ಕು ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಗಂಭೀರ ಅನುಮಾನಗಳನ್ನು ಹುಟ್ಟುಹಾಕುತ್ತದೆ ಎಂದು ಸೋನಿಯಾ ಗಾಂಧಿ ಮೋದಿ ಸರ್ಕಾರದ ವಿರುದ್ಧ ತೀವ್ರ ಟೀಕೆ ಮಾಡಿದ್ದಾರೆ.

ಯುದ್ಧಭೂಮಿಯಿಂದ ಶಾಸಕ ಭೋಜೇಗೌಡ, ಶ್ರೀನಿವಾಸ್ ವಾಪಸ್

ಬೆಂಗಳೂರಿಗೆ ಮರಳಿದ 500 ಕನ್ನಡಿಗರು

ಬೆಂಗಳೂರು: ಇಸ್ರೇಲ್-ಇರಾನ್ ಯುದ್ಧದಿಂದಾಗಿ ರದ್ದಾಗಿದ್ದ ವಿಮಾನಯಾನ ಸೇವೆ ಸೋಮವಾರದಿಂದ ಆರಂಭವಾಗಿದ್ದು, ಸಾಕಷ್ಟು ಕನ್ನಡಿಗರು ತಾಯ್ನಾಡಿಗೆ ಮರಳಿದ್ದಾರೆ. ಅಬುಧಾ ಬಿಯಿಂದ ಬೆಂಗಳೂರಿಗೆ ಬಂದ 2 ವಿಮಾನಗಳಲ್ಲಿ ಹಂತಹಂತವಾಗಿ 500ಕ್ಕೂ ಹೆಚ್ಚು ಕನ್ನಡಿಗರು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದಾರೆ. ಸೋಮ ವಾರ ರಾತ್ರಿ 10 ಗಂಟೆ ಹೊತ್ತಿಗೆ ಅಬುಧಾಬಿ ಯಿಂದ ಬಂದ ವಿಮಾನ ದಲ್ಲಿ 210 ಪ್ರಯಾಣಿ ಕರು (ಕನ್ನಡಿಗರು) ಸುರಕ್ಷಿತವಾಗಿ ಮರಳಿದ್ದಾರೆ. ಮಂಗಳವಾರ ಬೆಳಗ್ಗಿನ ಜಾವ 3:20ಕ್ಕೆ ಅಬುಧಾಬಿ ಯಿಂದ ಬಂದ ವಿಮಾನದಲ್ಲಿ 300ಕ್ಕೂ ಹೆಚ್ಚು ಕನ್ನಡಿಗರು ತಾಯ್ನಾಡಿಗೆ ಮರಳಿ, ನಿಟ್ಟುಸಿರು ಬಿಟ್ಟಿದ್ದಾರೆ. ದುಬೈನಲ್ಲಿ ಸಿಲುಕಿದ್ದ ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು ಅವರು ಸುರಕ್ಷಿತವಾಗಿ ಬೆಂಗಳೂರಿಗೆ ಬಂದಿಳಿದಿದ್ದಾರೆ.

ಯುದ್ಧದ ಪರಿಸ್ಥಿತಿಯಿಂದಾಗಿ ಮಧ್ಯಪ್ರಾಚ್ಯ ದೇಶಗಳಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ದುಬೈ, ಅಬುಧಾಬಿ, ರಿಯಾಧ್, ಜೆಡ್ಡಾ, ದೋಹಾ ಮತ್ತಿತರ ನಗರಗಳ ವಾಯುಪ್ರದೇಶ ಗಳನ್ನು ನಿರ್ಬಂಧಿಸಲಾಗಿತ್ತು. ಈ ಕಾರಣದಿಂದಾಗಿ ಶನಿವಾರದಿಂದ ಮಧ್ಯಪ್ರಾಚ್ಯದಿಂದ ಬೆಂಗಳೂರಿಗೆ ಬರಬೇಕಿದ್ದ ವಿಮಾನಗಳ ಹಾರಾಟವನ್ನು ಸ್ಥಗಿತಗೊಳಿಸಲಾಗಿತ್ತು. ಸೋಮವಾರ ಬೆಳಗ್ಗೆಯಿಂದ ಪರಿಸ್ಥಿತಿ ಆಧರಿಸಿ ವಿಮಾನ ಸೇವೆ ಮರುಸ್ಥಾಪಿಸಲು ನಿರ್ಧರಿಸಲಾಗಿತ್ತು. → 4

42 ವಿಮಾನ ಹಾರಾಟ ರದ್ದು

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಾಯುಪ್ರದೇಶದ ನಿರ್ಬಂಧಗಳ ಹಿನ್ನೆಲೆಯಲ್ಲಿ ಮಂಗಳವಾರ ವಿಮಾನ ಸಂಚಾರದಲ್ಲಿ ಭಾರಿ ವ್ಯತ್ಯಯ ಉಂಟಾಗಿದೆ. ಒಟ್ಟು 42 ವಿಮಾನಗಳ ಹಾರಾಟ ರದ್ದುಗೊಳಿಸಲಾಗಿದೆ. ಇದರಲ್ಲಿ 21 ಆಗಮನ ಮತ್ತು 21 ನಿರ್ಗಮನ ವಿಮಾನಗಳು ಸೇರಿವೆ. ಈ ವ್ಯತ್ಯಯದಿಂದಾಗಿ ಮುಖ್ಯವಾಗಿ ಅಬುಧಾಬಿ, ರಿಯಾದ್, ಜೆಡ್ಡಾ, ದಮ್ಮಮ್, ದುಬೈ ಮತ್ತು ದೋಹಾ ಸೇರಿದಂತೆ ಪ್ರಮುಖ ನಗರಗಳ ವಿಮಾನ ಸಂಚಾರದ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ.

ಫೋನ್ ಕದ್ದಾಲಿಕೆ ಆರೋಪಕ್ಕೆ ಪ್ರತಿಪಕ್ಷ ನಾಯಕರ ವಿರುದ್ಧ ಸಿಎಂ ಕೆಂಡ

ತಂದೆಯಿಂದ ಎಚ್‌ಡಿಕೆಗೆ ಗೂಢ ಪಾಠ: ಸಿದ್ದು

ಬೆಂಗಳೂರು: ನಿರುದ್ಯೋಗಿ ಪ್ರತಿಪಕ್ಷ ನಾಯಕರಿಂದ ನನ್ನ ಮತ್ತು ಡಿ.ಕೆ.ಶಿವಕುಮಾರ್ ನಡುವಿನ ಸಂಬಂಧಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಲೇ ಇದ್ದಾರೆ. ಇದರಿಂದ ಅವರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು ನಮ್ಮ ಹಾಲು-ಜೇನಿನಂತಹ ಸಂಬಂಧದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ.

ಪ್ರತಿಪಕ್ಷ ನಾಯಕ ಆರ್.ಅಶೋಕ್ ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ನನ್ನ ಹಾಗೂ ಡಿ.ಕೆ.ಶಿವಕುಮಾರ್ ನಡುವಿನ ಹಾಲುಜೇನಿನ ಸಂಬಂಧಕ್ಕೆ ಹುಳಿ ಹಿಂಡುವ ಪ್ರತಿಪಕ್ಷಗಳ ಕುತಂತ್ರ ಎಂದಿಗೂ ಫಲಿಸಲ್ಲ. → 4

ಕರ್ನಾಟಕದ ರಾಜಕೀಯ ಇತಿಹಾಸದ ಪುಟಗಳನ್ನು ನೋಡಿದರೆ ಫೋನ್ ಕದ್ದಾಲಿಕೆ, ಗೂಢಚರ್ಯೆಗಳೆಲ್ಲ ಯಾವ ಪಕ್ಷದ ದುಷ್ಕೃತ್ಯಗಳು ಎನ್ನುವುದು ಅರಿವಾಗುತ್ತದೆ. ಈ ದುರ್ಬುದ್ಧಿಯ ಕಾರಣದಿಂದಾಗಿಯೇ ರಾಜ್ಯ ರಾಜಕೀಯದಲ್ಲಿ ಆಪರೇಷನ್ ಕಮಲ, ರೆಸಾರ್ಟ್ ರಾಜಕಾರಣ, ವಚನಭಂಗದಂತಹ ಅನಿಷ್ಟಗಳು ಕಾಣಿಸಿಕೊಂಡಿರುವುದು.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಿದ್ದರಾಮಯ್ಯನವರೇ ಈ ನಡುವೆ ನೀವು ಬಹಳ ಪುರುಸೊತ್ತಾಗಿದ್ದೀರಿ ಎಂದು ಭಾವಿಸಿದ್ದೇನೆ. ಕೆಲಸ ಮಾಡುವುದು ಬಿಟ್ಟು ಕೌಂಟರ್ ಕೊಡುವುದರಲ್ಲಿ ಹೆಚ್ಚು ಬ್ಯುಸಿಯಾಗಿದ್ದೀರಿ. ಕುಂಬಳಕಾಯಿ ಕಳ್ಳ ಎಂದರೆ ನಾನೇ.. ನಾನೇ.. ಹೆಗಲು ಮುಟ್ಟಿ ನೋಡಿಕೊಂಡರೆ ನಾನೇನು ಮಾಡಲಿ? ನಿಮ್ಮ ಪುಂಖಾನುಪುಂಖ ಪುರಾಣ ನೋಡಿದರೆ ನಿಮಗೆ ಮತ್ತೊಬ್ಬರನ್ನು ಆಡಿಕೊಳ್ಳುವುದರಲ್ಲೇ ಆಸಕ್ತಿ ಇದ್ದಂತಿದೆ.
-ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

4.5 ಲಕ್ಷ ಕೋ.ರು. ಬಜೆಟ್, ವೆಚ್ಚಕ್ಕೆ 3 ಲಕ್ಷ ಕೋ.ರು. ಬೇಕು
ಇತರೆ ಖರ್ಚುಗಳಿಗೆ ಉಳಿಯುವುದು ಶೇ.35 ಹಣ ಮಾತ್ರ

ರಾಜ್ಯ ಬಜೆಟ್‌ಗೆ ಬದ್ಧತೆಯ ಭಾರ

ಬೆಂಗಳೂರು: ದಾಖಲೆಯ ಬಜೆಟ್ ಮಂಡಿಸುವ ಹೊಸ್ತಿಲಿನಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 17ನೇ ಬಜೆಟ್ 4.5 ಲಕ್ಷ ಕೋಟಿ ರು. ದಾಟುವುದು ಬಹುತೇಕ ನಿಶ್ಚಿತವಾಗಿದ್ದರೂ, ಈ ಬಾರಿಯೂ ಬದ್ಧತಾ ವೆಚ್ಚದ ಹೊರೆಯೇ ಸರಕಾರಕ್ಕೆ ಬಹುದೊಡ್ಡ ಸಮಸ್ಯೆಯಾಗಿದೆ.

ರಾಜ್ಯ ಸರಕಾರಕ್ಕೆ ವರ್ಷದಿಂದ ವರ್ಷಕ್ಕೆ ಬದ್ಧತಾ ವೆಚ್ಚ ಹೆಚ್ಚಾಗುತ್ತಲೇ ಸಾಗಿದ್ದು, ಇದರೊಂದಿಗೆ ಪಂಚಗ್ಯಾರಂಟಿ ಯೋಜನೆಗಳೂ ಸೇರಿಸಿಕೊಂಡಿರುವುದರಿಂದ ಭಾರೀ ಪ್ರಮಾಣದ ಅನುದಾನ ವೇತನ, ಪಿಂಚಣಿ, ಸಾಲ, ಬಡ್ಡಿ ಮರುಪಾವತಿ, ಗ್ಯಾರಂಟಿ ಯೋಜನೆಗಳಿಗೆ ಹಣ ಮೀಸಲಿಡಬೇಕಿದೆ. ಈ ಬಾರಿ ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಗೆ ಮುಂದಿನ ಮೂರು ವರ್ಷದಲ್ಲಿ 70 ಸಾವಿರ ಕೋಟಿ ರು. ಮೀಸಲಿಡುವುದಾಗಿ ಹೇಳಿರುವುದರಿಂದ, ಇದಕ್ಕೂ ಪ್ರತ್ಯೇಕ ಅನುದಾನ ನೀಡಬೇಕಿದೆ.

ಆರ್ಥಿಕ ಇಲಾಖೆಯ ಪ್ರಕಾರ ಪಿಂಚಣಿ, ಬಡ್ಡಿ ಪಾವತಿ ಮತ್ತಿತರ ಬದ್ಧತಾ ವೆಚ್ಚಗಳ ಹೊರೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸರಕಾರಿ ನೌಕರರಿಗೆ ವೇತನಕ್ಕೆಂದೇ 94,446 ಕೋಟಿ ರು, ಪಿಂಚಣಿಗೆ 42,438 ಕೋಟಿ ರು., ಸಾಮಾಜಿಕ ಭದ್ರತಾ ಯೋಜನೆಗಳಿಗೆ 87,918 ಕೋಟಿ ರು., ಬಡ್ಡಿ ಪಾವತಿ, ಸಾಲ ಮರುಪಾವತಿಗೆ 45 ಸಾವಿರ ಕೋಟಿ ರು. ಮೀಸಲಿಡಬೇಕಿದೆ. ಈ ಮೂಲಕ ರಾಜ್ಯ ಸರಕಾರ ಬದ್ಧತಾ ವೆಚ್ಚಕ್ಕಾಗಿಯೇ ಸರಿಸುಮಾರು 3 ಲಕ್ಷ ಕೋಟಿ ರು. ಮೀಸಲಿಡಬೇಕಾಗಿದೆ.

ಯಾವುದಕ್ಕೆ, ಎಷ್ಟು ಹಣ ಮೀಸಲಿಡಬೇಕು?

- ರಾಜ್ಯದ ಸರಕಾರಿ ನೌಕರರ ವೇತನ ಪಾವತಿಗೆ: 94446 ಕೋಟಿ ರು.
- ರಾಜ್ಯ ಪಡೆದುಕೊಂಡಿರುವ ಸಾಲ, ಬಡ್ಡಿ ಪಾವತಿ: 45,600 ಕೋಟಿ ರು.
- ಸರಕಾರಿ ನೌಕರರ ಪಿಂಚಣಿ ಪಾವತಿ ವೆಚ್ಚ: 42,438 ಕೋಟಿ ರು.
- ಸರಕಾರದ ಗ್ಯಾರಂಟಿ ಯೋಜನೆಗಳಿಗೆ ಬೇಕಾದ ಹಣ: 51,034 ಕೋಟಿ ರು.

ಈ ಬಾರಿ ಖಾಲಿಯಿರುವ 56432 ಹುದ್ದೆ ಭರ್ತಿ ಮಾಡಲು ಮುಂದಾಗಿರುವುದರಿಂದ, ಈ ನೌಕರರು ವೇತನಕ್ಕೂ ಅನುದಾನ ನೀಡಬೇಕಿದೆ. ಸಿದ್ದರಾಮಯ್ಯ 2025-26ರಲ್ಲಿ 4.09 ಲಕ್ಷ ಕೋಟಿ ರು. ಬಜೆಟ್ ಮಂಡಿಸಿದ್ದರು. ಈ ಬಾರಿ ಬಜೆಟ್ ಗಾತ್ರ 4.50 ಲಕ್ಷ ಕೋಟಿ ರು. ಗೇರಬಹುದು. → 4

ಪ್ರಕರಣ ನ್ಯಾಯಾಲಯದಲ್ಲಿದೆ, ಕರ್ನಾಟಕ ಭೂಸ್ವಾಧೀನ ಮಾಡುವಂತಿಲ್ಲ: ಕೇಂದ್ರಕ್ಕೆ ಆಂಧ್ರ
ಸ್ಪಷ್ಟನೆ ಕೋರಿ ಕೇಂದ್ರದಿಂದ ರಾಜ್ಯಕ್ಕೆ ಪತ್ರ | ಕೇಂದ್ರ ಮಧ್ಯಪ್ರವೇಶಿಸಲು ಡಿಕೆಶಿ ಆಗ್ರಹ

ಆಲಮಟ್ಟಿ ಅಣೆಕಟ್ಟು ಎತ್ತರಿಸಲು ಆಂಧ್ರಪ್ರದೇಶ ಅಡ್ಡಿ

ಬೆಂಗಳೂರು: ಕೃಷ್ಣಾ ಮೇಲ್ದಂಡೆಯ ಮೂರನೇ ಹಂತದ ಭೂಸ್ವಾಧೀನ ಪ್ರಕ್ರಿಯೆಗೆ ಆಂಧ್ರ ಸರಕಾರ ಕ್ಯಾತೆ ತೆಗೆದು, ಕೇಂದ್ರ ಸರಕಾರಕ್ಕೆ ಪತ್ರ ಬರೆದಿದೆ. ಇದಕ್ಕೆ ಪ್ರತಿಯಾಗಿ ಕೇಂದ್ರ ಜಲಶಕ್ತಿ ಇಲಾಖೆ ರಾಜ್ಯ ಸರಕಾರಕ್ಕೆ ಪತ್ರ ಬರೆದು ಸ್ಪಷ್ಟನೆ ನೀಡುವಂತೆ ಕೇಳಿಕೊಂಡಿದೆ.

ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 519 ಮೀ.ನಿಂದ 524 ಮೀ.ಗೇರಿಸಲು ಅವಕಾಶ ನೀಡಬಾರದು ಮತ್ತು ಗಜೆಟ್ ನೋಟಿಫಿಕೇಶನ್ ಮಾಡಬಾರದು ಎಂದು ಆಂಧ್ರಪ್ರದೇಶ ಸರಕಾರ ಕೇಂದ್ರ ಸರಕಾರಕ್ಕೆ ಪತ್ರ ಬರೆದಿದೆ. ಈ ಹಿಂದೆ ರಾಜ್ಯ ಸರಕಾರ ಜಲಾಶಯದ ಎತ್ತರ ಹೆಚ್ಚಿಸಿಕೊಳ್ಳಲು 1.33 ಲಕ್ಷ ಎಕರೆ ಭೂಮಿಯನ್ನು ಒಂದೇ ಬಾರಿಗೆ ಸ್ವಾಧೀನಪಡಿಸಿಕೊಳ್ಳಲು ಸಚಿವ ಸಂಪುಟದಲ್ಲಿ ನಿರ್ಧರಿಸಿತ್ತು. ಇದಕ್ಕಾಗಿ 70 ಸಾವಿರ ಕೋಟಿ ರು. ಹಣವನ್ನು ಮೂರು ಹಂತದಲ್ಲಿ ನಿಗದಿ ಮಾಡಿಕೊಂಡಿತ್ತು. ಆದರೀಗ ಆಂಧ್ರಪ್ರದೇಶ ಆಕ್ಷೇಪವೆತ್ತಿರುವುದು ಕರ್ನಾಟಕಕ್ಕೆ ಹಿನ್ನಡೆಯಾಗಿದೆ ಎನ್ನಲಾಗುತ್ತಿದೆ.

ಪತ್ರದಲ್ಲಿ ಏನಿದೆ?: ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಬಾಕಿ ಇರುವಾಗ ಕರ್ನಾಟಕವು ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಿರುವುದು ಕಾನೂನುಬಾಹಿರ. ಯುಕೆಪಿ ಹಂತ-3ರಲ್ಲಿ ಕರ್ನಾಟಕ ಸಚಿವ ಸಂಪುಟ ಸುಮಾರು 1.33 ಲಕ್ಷ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು

ಮತ್ತು 70,000 ಕೋಟಿ ರು. ಪರಿಹಾರ ನೀಡಲು ಅನುಮೋದನೆ ನೀಡಿದೆ. ಅಣೆಕಟ್ಟು ಎತ್ತರ ಹೆಚ್ಚಳದಿಂದ ಮಹಾರಾಷ್ಟ್ರದ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗುವ ಭೀತಿಯಿದೆ ಎಂದು ಮಹಾರಾಷ್ಟ್ರ ಸಿಎಂ ಎಚ್ಚರಿಸಿದ್ದಾರೆ. ಆದ್ದರಿಂದ ನ್ಯಾಯಾಲಯದ ಅಂತಿಮ ತೀರ್ಪು ಬರುವವರೆಗೆ ಗಜೆಟ್ ಅಧಿಸೂಚನೆಯನ್ನು ಹೊರಡಿಸಬಾರದು ಎಂಬ ತಡೆಯಾಜ್ಞೆ ಜಾರಿಯಲ್ಲಿದೆ ಎಂದು ಆಂಧ್ರ ಹೇಳಿದೆ. ಆಂಧ್ರಪ್ರದೇಶದ ಈ ಪತ್ರದ ಬೆನ್ನಲ್ಲೇ, ಕೇಂದ್ರ ಜಲಶಕ್ತಿ ಸಚಿವಾಲಯವು ಕರ್ನಾಟಕ ಸರಕಾರದ ವಿವರಣೆ ಕೇಳಿದೆ.

ಕೇಂದ್ರ ಮಧ್ಯಪ್ರವೇಶಿಸಲಿ: ಈ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆಂಧ್ರಪ್ರದೇಶದವರು ಈ ಮಟ್ಟಕ್ಕೆ ಹೋಗುತ್ತಾರೆ ಎಂದು ನಾನು ಎಣಿಸಿರಲಿಲ್ಲ. 12 ವರ್ಷದಿಂದ ಈ ವಿಚಾರವಾಗಿ ನೋಟಿಫಿಕೇಷನ್ ಮಾಡಿ ಎಂದು ಒತ್ತಡ ಹೇರುತ್ತಿದ್ದೇವೆ. 2010ರ ಡಿ.30ರಲ್ಲಿ ಈ ಬಗ್ಗೆ ತೀರ್ಮಾನವಾಗಿತ್ತು. 177 ಟಿಎಂಸಿಯಿಂದ 330 ಟಿಎಂಸಿ ಬಳಕೆಗೆ ಅವಕಾಶ ನೀಡಲಾಗಿತ್ತು ಎಂದರು.

ಮಾ.10ರಿಂದ ಲೋಕಸಭೆ ಕಲಾಪ ಆರಂಭವಾಗಲಿವೆ. ಅಲ್ಲಿ ನಮ್ಮ ರಾಜ್ಯದ ಸಂಸದರು ಪ್ರಧಾನಿ, ಜಲಶಕ್ತಿ ಸಚಿವರ ಮೇಲೆ ಒತ್ತಡ ಹೇರಬೇಕು. ಬಜೆಟ್ ಅಧಿವೇಶನದ ಮಧ್ಯೆಯೇ ಒಂದೆರಡು ದಿನ ಸಮಯ ಮಾಡಿಕೊಂಡು ದೆಹಲಿಗೆ ಹೋಗಿ ಕೇಂದ್ರ ಸರಕಾರದ ನಾಯಕರನ್ನು ಭೇಟಿ ಮಾಡುತ್ತೇನೆ ಎಂದು ಶಿವಕುಮಾರ್ ಹೇಳಿದ್ದಾರೆ.

ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳಕ್ಕೆ ಆಂಧ್ರಪ್ರದೇಶ ಸರಕಾರ ಅಡ್ಡಗಾಲು ಹಾಕುತ್ತಿದೆ. ಈ ವಿಚಾರ ಸುಪ್ರೀಂಕೋರ್ಟ್‌ನಲ್ಲಿದೆ, ಭೂಸ್ವಾಧೀನ ಮಾಡಬಾರದು ಎಂದು ಕೇಂದ್ರ ಸರಕಾರಕ್ಕೆ ಪತ್ರ ಬರೆದಿದೆ. ಕೂಡಲೇ ಕೇಂದ್ರ ಸರಕಾರ ಮಧ್ಯ ಪ್ರವೇಶಿಸಿ ಈ ಹಿಂದೆ ಆಗಿರುವ ಆದೇಶದ ಪ್ರಕಾರ ನಡೆದುಕೊಳ್ಳಬೇಕು.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಈಗಾಗಲೇ 20 ಸಾವಿರ ಕೋಟಿ ರು. ಖರ್ಚು

ಈಗಾಗಲೇ ನಾವು 20 ಸಾವಿರ ಕೋಟಿ ರು. ಹಣವನ್ನು ಯೋಜನೆಗೆ ಖರ್ಚು ಮಾಡಿದ್ದೇವೆ. ದೇವರ ದಯೆಯಿಂದ ಸುಂದರೇಶ್ ಅನ್ನುವವರು ರಾಜ್ಯದ ಹಿತಕ್ಕೆ ಧಕ್ಕೆಯಾಗದಂತೆ ತೀರ್ಪು ನೀಡಿದರು. ಲಿಮಿಟೇಶನ್ ಆರ್ಡರ್‌ಗಳನ್ನು ನಿಗದಿತ ಸಮಯದ ಒಳಗೆ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಮರುಪರಿಶೀಲನೆ ಮಾಡಿ ಮತ್ತೊಂದು ಅವಕಾಶ ನೀಡುತ್ತೇವೆ ಎಂದು ಹೇಳಿದ್ದಾರೆ. ಈ ಹಿಂದೆ ಅಣೆಕಟ್ಟು ಪ್ರಾರಂಭ ಮಾಡಿದಾಗ ಭೂಪರಿಹಾರ 2 ಸಾವಿರ ರು. ಇತ್ತು. ಈಗ 40 ಲಕ್ಷ ರು. ಇದೆ. ಹಿಂದೆ ಆದೇಶ ಬಂದಾಗ ನಮ್ಮ ರಾಜ್ಯದವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದೇ ತಪ್ಪಾಯಿತು. ಅಂದು ಈ ತೀರ್ಮಾನವನ್ನು ಯಾರು ಮಾಡಿದರೋ ಗೊತ್ತಿಲ್ಲ. ನ್ಯಾಯಲಯಕ್ಕೆ ಹೋದರೆ ನಾವೇ ಕೈಯನ್ನು ಮೊಸಳೆ ಬಾಯಿಗೆ ನೀಡಿದಂತೆ ಎಂದು ಶಿವಕುಮಾರ್ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ದುಬಾರಿ ಮೊಬೈಲ್ ಕಳವು: ಬಂಧನ

ಬೆಂಗಳೂರು: ಮೊಬೈಲ್ ಕದಿಯಲು ವಿಮಾನದಿಂದ ಬರುತ್ತಿದ್ದ ಖದೀಮರು ಖಾಕಿ ಬಲಗೆ ಬಿದ್ದಿರುವ ಘಟನೆ ಬೆಳಕಿಗೆ ಬಂದಿದೆ. ಈ ಖದೀಮರು ಸಣ್ಣ ಪುಟ್ಟ ಮೊಬೈಲ್‌ಗಳನ್ನು ಮುಟ್ಟುತ್ತಲೂ ಇರಲಿಲ್ಲ. ಐಫೋನ್ ಸೇರಿದಂತೆ ಇತರ ದುಬಾರಿ ಫೋನ್‌ಗಳು ಮಾತ್ರ ಇವರ ಟಾರ್ಗೆಟ್ ಆಗಿದ್ದವು. ದೊಡ್ಡ ದೊಡ್ಡ ಪಾರ್ಟಿ, ಕಾರ್ಯಕ್ರಮಗಳಿಗೆ ಹೋಗುತ್ತಿದ್ದ ಆರೋಪಿಗಳು, ಅಲ್ಲಿ ತಮ್ಮ ಕೈಚಳಕ ತೋರುತ್ತಿದ್ದರು. ಜತೆಗೆ ಐಷಾರಾಮಿ ಬಸ್‌ಗಳಲ್ಲೂ ಕಳ್ಳತನ ನಡೆಸುತ್ತಿದ್ದರು. ಒಂದೆರಡು ಸಂಗೀತ ಕಾರ್ಯಕ್ರಮಗಳಲ್ಲಿ ಕೇವಲ ಒಂದೇ ಗಂಟೆಯಲ್ಲಿ 14 ಮೊಬೈಲ್‌ಗಳನ್ನು ಇವರು ಕದ್ದಿದ್ದರು. ದೇವನಹಳ್ಳಿ ಬಳಿಯ ಚನ್ನರಾಯಪಟ್ಟಣದಲ್ಲಿಯೂ ಆರೋಪಿಗಳು ಮೊಬೈಲ್ ಕಳವು ಮಾಡಿದ್ದು, ಅಲ್ಲಿಂದ ವೈಟ್‌ಫೀಲ್ಡ್ ಕಡೆ ಬಡುವಾಗ ಬಸ್‌ನಲ್ಲಿ ಮತ್ತೊಂದು ಐಫೋನ್ ಕದ್ದಿದ್ದರು. ಈ ಮೊಬೈಲ್ ಪತ್ತೆಗಾಗಿ ಪೊಲೀಸರು ಬೆನ್ನುಬಿದ್ದಾಗ ಆರೋಪಿಗಳು ಲಾಕ್ ಆಗಿದ್ದಾರೆ. ಲಾಡ್ಜ್ ಒಂದರಲ್ಲಿ ಕದ್ದ ಮೊಬೈಲ್ ನೋಡುವಾಗ ಎಂಟ್ರಿಕೊಟ್ಟಿದ್ದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ದೆಹಲಿ ಮೂಲದ ಜಯಚಂದ್ರ ಮತ್ತು ತರುಣ್ ಬಂಧಿತರಾಗಿದ್ದು, ಇವರಿಂದ 10 ಲಕ್ಷ ಮೌಲ್ಯದ 14 ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಮೊಬೈಲ್‌ಗಳನ್ನು ಕದಿಯಲೆಂದೇ ಆರೋಪಿಗಳು ದೆಹಲಿಂದ ನಗರಕ್ಕೆ ವಿಮಾನದಲ್ಲಿ ಬರುತ್ತಿದ್ದರು ಎಂಬುದು ಗೊತ್ತಾಗಿದ್ದು, ಈ ಬಗ್ಗೆ ತನಿಖೆ ಮುಂದುವರಿದಿದೆ.

ವಿರಾಮ
ಪ್ರತಿ ಭಾನುವಾರ

ಪ್ರತ್ಯೇಕ 3 ಪ್ರಕರಣಗಳಲ್ಲಿ ಮೂವರ ಸೆರೆ | 5 ಕೆ.ಜಿ. ಹೈಡ್ರೋಗಾಂಜಾ ವಶ

17 ಕೋಟಿ ರು. ಮೌಲ್ಯದ ವಿವಿಧ ಮಾದಕ ವಸ್ತುಗಳ ಜಪ್ತಿ

ಬೆಂಗಳೂರು: ರಾಜಧಾನಿ ಪೊಲೀಸರಿಂದ ಡ್ರಗ್ಸ್ ಬೇಟೆ ಮುಂದುವರೆದಿದ್ದು, ಪ್ರತ್ಯೇಕ ಮೂರು ಪ್ರಕರಣಗಳಲ್ಲಿ 17 ಕೋಟಿ ರು. ಮೌಲ್ಯದ ಮಾದಕವಸ್ತುಗಳನ್ನು ಜಪ್ತಿ ಮಾಡಿಕೊಳ್ಳುವಲ್ಲಿ ಸಫಲರಾಗಿದ್ದಾರೆ.

ವ್ಯವಸ್ಥಿತ ಜಾಲದ ಮೂಲಕ ದುಬಾರಿ ಬೆಲೆಯ ಮಾದಕವಸ್ತುಗಳನ್ನು ತರಿಸಿಕೊಂಡು ನಗರದಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಆಧರಿಸಿ ಪೊಲೀಸರು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ 17 ಕೋಟಿ ಮೌಲ್ಯದ 8,335 ಎಲ್‌ಎಸ್‌ಡಿ ಸ್ಟ್ರಿಪ್ಸ್‌ಗಳು, 5 ಕೆ.ಜಿ. ಹೈಡ್ರೋಗಾಂಜಾ, 534 ಗ್ರಾಂ ಚರಸ್ ಹಾಗೂ ಕೃತ್ಯಕ್ಕೆ ಬಳಸಿದ ಎರಡು ಬೈಕ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ನಡೆಯುವ ಪಾರ್ಟಿಗಳಿಗೆ ಡ್ರಗ್ಸ್ ಸರಬರಾಜು ಮಾಡಲು ಥೈಲ್ಯಾಂಡ್‌ನಿಂದ ತರಿಸಿಕೊಂಡು ಬಾಗಲೂರಿನ ಫ್ಲ್ಯಾಟ್‌ವೊಂದರಲ್ಲಿ ಇಟ್ಟುಕೊಂಡು ದಂಧೆ ನಡೆಸಲು ಸಿದ್ಧತೆ ನಡೆಸುತ್ತಿದ್ದ ಮಹಿಳೆ ಸೇರಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಸಿಸಿಬಿ ಡಿಸಿಪಿ-2 ರಾಜ ಇಮಾಮ್ ಖಾಸಿಮ್ ಮತ್ತು ಎಸಿಪಿ ಮಹಾನಂದ್ ನೇತೃತ್ವದ ಸಿಸಿಬಿ ನಾರ್ಕೋಟಿಕ್ಸ್ ತಂಡವು ಕೇರಳ ಮೂಲದ ಅಶ್ವಿನ್ (27) ಮತ್ತು ಮೊಬಿನಾ (25) ಎಂಬುವರನ್ನು ಬಂಧಿಸಿದೆ. ಡ್ರಗ್ಸ್ ಮಾರಾಟವನ್ನೇ ಕಸುಬು ಮಾಡಿಕೊಂಡಿದ್ದ ಆರೋಪಿಗಳು, ಥೈಲ್ಯಾಂಡ್‌ನಲ್ಲಿರುವ ವಿನ್ಸೆಂಟ್ ಎಂಬಾತನಿಂದ ಡ್ರಗ್ಸ್ ಪಡೆಯುತ್ತಿದ್ದರು. ವಿನ್ಸೆಂಟ್ ಸೂಚಿಸಿದ ಜಾಗಗಳಲ್ಲಿ ಅಶ್ವಿನ್ ಮತ್ತು ಮೊಬಿನಾ ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡು, ಬೇಡಿಕೆಗನುಗುಣವಾಗಿ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮೊದಲ ಬಾರಿಗೆ ದೊಡ್ಡ ಮಟ್ಟದಲ್ಲಿ ಎಲ್‌ಎಸ್‌ಡಿ ಸ್ಟ್ರಿಪ್ಸ್ ವಶಕ್ಕೆ ಪಡೆಯಲಾಗಿದೆ. ಒಂದು ಎಲ್‌ಎಸ್‌ಡಿ ಸ್ಟ್ರಿಪ್ಸ್ ಸುಮಾರು 3 ಸಾವಿರವಿದೆ. ಖಚಿತ ಮಾಹಿತಿ ಆಧರಿಸಿ ಫ್ಲ್ಯಾಟ್‌ವೊಂದರ ಮೇಲೆ ತಪಾಸಣೆ ನಡೆಸಿದಾಗ 8,335 ಸ್ಟ್ರಿಪ್ಸ್, 5 ಕೆ.ಜಿ. ಹೈಡ್ರೋಗಾಂಜಾ, 534 ಗ್ರಾಂ ಚರಸ್ ದೊರೆತಿದೆ ಎಂದು ಪೊಲೀಸರು ಹೇಳಿದ್ದಾರೆ.

> ಪ್ರತ್ಯೇಕ ಮೂರು ಪ್ರಕರಣಗಳಲ್ಲಿ 17 ಕೋಟಿ ರು. ಮೌಲ್ಯದ ವಿವಿಧ ಮಾದಕ ವಸ್ತುಗಳನ್ನ ವಶಕ್ಕೆ ಪಡೆದು ಮೂವರನ್ನ ಬಂಧಿಸಲಾಗಿದೆ. ಯಾರಿಂದ ಡ್ರಗ್ಸ್ ತರಿಸಿಕೊಂಡು ಯಾರಿಗೆ ಮಾರಾಟ ಮಾಡಲು ಮುಂದಾಗಿದ್ದರು ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ.
> – ಸೀಮಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಆಯುಕ್ತ

55 ಲಕ್ಷ ಮೌಲ್ಯದ ಹ್ಯಾಸಿಸ್ ಆಯಿಲ್ ವಶ:ವ್ಯವಸ್ಥಿತ ಜಾಲದ ಮೂಲಕ ಕಡಿಮೆ ಬೆಲೆಗೆ ಮಾದಕವಸ್ತು ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾರಾಟ ಅಕ್ರಮವಾಗಿ ಸಂಪಾದನೆ ಮಾಡುತ್ತಿದ್ದ ಆರೋಪದಡಿ ಲಿಂಗರಾಜ್ ದಾಸ್ ಎಂಬುವನನ್ನ ವೈಟ್‌ಫೀಲ್ಡ್ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ 55 ಲಕ್ಷ ಮೌಲ್ಯದ 27 ಕೆ.ಜಿ ಗಾಂಜಾ 3, 200 ಕೆ.ಜಿ. ಹ್ಯಾಸಿಸ್ ಆಯಿಲ್ ವಶಕ್ಕೆ ಪಡೆದುಕೊಂಡಿದ್ದಾರೆ.

ಚಾಕಲೇಟ್, ಬಿಸ್ಕತ್ ಬಾಕ್ಸ್‌ನಲ್ಲಿ ಡ್ರಗ್ಸ್

ಯಾರಿಗೂ ಅನುಮಾನ ಬಾರದಿರಲಿ ಎಂದು ಚಾಕಲೇಟ್ ಹಾಗೂ ಬಿಸ್ಕತ್ ಬಾಕ್ಸ್‌ಗಳಲ್ಲಿ ಹೈಡ್ರೋಗಾಂಜಾ ಪ್ಯಾಕ್ ಮಾಡಿ ವಿದೇಶದಿಂದ ನಗರದ ಅಂಚೆ ಕಚೇರಿಗೆ ಪಾರ್ಸೆಲ್ ಮಾಡಿದ್ದ ದಂಧೆಕೋರರ ಯೋಜನೆಯನ್ನು ಪೊಲೀಸರು ತಲೆಕೆಳಗಾಗಿಸಿದ್ದಾರೆ. ವಿದೇಶದಿಂದ ನಗರದ ಕೆಂಪೇಗೌಡನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಅಂಚೆ ಕಚೇರಿಗೆ ಬಂದಿದ್ದ ಪಾರ್ಸೆಲ್‌ವೊಂದನ್ನು ಬಿಚ್ಚಿ ನೋಡಿದಾಗ ಬಿಸ್ಕತ್ ಹಾಗೂ ಚಾಕಲೇಟ್ ಬಾಕ್ಸ್‌ಗಳಲ್ಲಿ 1.5 ಕೋಟಿ ಮೌಲ್ಯದ ಒಂದೂವರೆ ಹೈಡ್ರೋಗಾಂಜಾ ಬಚ್ಚಿಟ್ಟಿರುವುದು ಪತ್ತೆಯಾಗಿದೆ. ವಿದೇಶದಿಂದ ಯಾರಿಗೆ ಅಪರಿಚಿತ ಆರೋಪಿ ಕಳುಹಿಸಿದ್ದ ಎಂಬುದರ ಬಗ್ಗೆ ತನಿಖೆ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

1.40 ಕೋಟಿ ರು.ಮಾಲು ವಶ: ಕಳ್ಳರಿಬ್ಬರ ಬಂಧನ

ಬೆಂಗಳೂರು: ಸುಮಾರು 31 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಕುಖ್ಯಾತ ಕಳ್ಳ ಸೇರಿ ಇಬ್ಬರನ್ನು ಬಂಧಿಸಿರುವ ಮಾದನಾಯಕನಹಳ್ಳಿ ಪೊಲೀಸರು 19.5 ಲಕ್ಷ ನಗದು ಸೇರಿ 1.40 ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಕೊಡಿಗೇಹಳ್ಳಿ ಸಿದ್ದು ಅಲಿಯಾಸ್ ನಾಗರಾಜ್(32) ಹಾಗೂ ಜೆಪಿ ನಗರದ ಸಾರಕ್ಕಿಯ ಮುನಿರಾಜು (49)ಬಂಧಿತ ಆರೋಪಿಗಳಾಗಿದ್ದು, ಆರೋಪಿ ಸಿದ್ದು 31ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಆತನ ವಿರುದ್ಧ ಗೂಂಡಾ ಕಾಯ್ದೆ ದಾಖಲಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಂಧಿತ ಆರೋಪಿಗಳಿಂದ 19.5 ಲಕ್ಷ ನಗದು ಸೇರಿ 1.40 ಕೋಟಿ ಮೌಲ್ಯದ 711 ಗ್ರಾಂ ಚಿನ್ನಾಭರಣ, ಕಾರು, 2 ದ್ವಿ-ಚಕ್ರ ವಾಹನಗಳನ್ನು ವಶ ಪಡೆದುಕೊಳ್ಳಲಾಗಿದೆ. ಮಾದನಾಯಕನಹಳ್ಳಿದ ಅಂಚೆಪಾಳ್ಯ ಗ್ರಾಮದ ಪ್ರಕೃತಿ ಲೇಔಟ್‌ನ ಲೀನಾ ಅವರ ಮನೆಗೆ ಕಳೆದ 2025 ರ ಆ.7 ರಂದು ಮನೆಯ ಬೀಗ ಮುರಿದು ಒಳನುಗ್ಗಿ ಬೀರುವಿನಲ್ಲಿದ್ದ 248 ಗ್ರಾಂ ಚಿನ್ನಾಭರಣಗಳ ಕಳ್ಳತನ ಪ್ರಕರಣ ದಾಖಲಿಸಿ ವಿವಿಧ ಆಯಾಮಗಳಲ್ಲಿ ತನಿಖೆಯನ್ನು ಕೈಗೊಂಡು, ಖಚಿತ ಮಾಹಿತಿ ಆಧರಿಸಿ ಕಳೆದ ಜ.11 ರಂದು ಓರ್ವನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಮತ್ತಿಬ್ಬರು ಸಹಚರರು ಭಾಗಿಯಾಗಿರುವುದಾಗಿ ತಿಳಿಸಿರುತ್ತಾನೆ. ಆತನ ವಶದಿಂದ 348 ಗ್ರಾಂ ಚಿನ್ನಾಭರಣಗಳು ಮತ್ತು ಕೃತ್ಯಕ್ಕೆ ಬಳಸಿದ ಬೈಕ್ ಅನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು. ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಇಬ್ಬರು ಸಹಚರರ ಪೈಕಿ ಓರ್ವ ಸಹಚರನನ್ನು ಚಾಮರಾಜನಗರ ಮಲೆಮಹದೇಶ್ವರ ಬೆಟ್ಟದಲ್ಲಿ ಬಂಧಿಸಲಾಯಿತು ಎಂದು ತಿಳಿಸಿದರು.

ಆಯುಕ್ತ ಸೀಮಂತ್ ಕುಮಾರ್ ಸಿಂಗ್

ಅಡಮಾನವಿಟ್ಟ ಚಿನ್ನಾಭರಣ ಜಪ್ತಿ

ವಶಕ್ಕೆ ಪಡೆದ ವ್ಯಕ್ತಿಯನ್ನು ವಿಚಾರಣೆ ನಡೆಸಿ ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ. ವಶಕ್ಕೆ ಪಡೆದ ಆರೋಪಿಗಳಿಬ್ಬರನ್ನು ಸುದೀರ್ಘ ವಿಚಾರಣೆ ನಡೆಸಿ, ಕಳವು ಮಾಡಿದ ಚಿನ್ನಾಭರಣಗಳನ್ನು ವಿವಿಧ ಜ್ಯುವೆಲರಿ ಅಂಗಡಿಗಳಲ್ಲಿ ಅಡಮಾನವಿಟ್ಟಿರುವುದಾಗಿ ತಿಳಿಸಿದ್ದು ಅವುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿ ಸಿದ್ದು 30 ರಿಂದ 32 ಮನೆಗಳಲ್ಲಿ ಕಳ್ಳತನ ಯತ್ನ, ವಾಹನ ಕಳವು ಪ್ರಕರಣಗಳಲ್ಲಿ ಭಾಗಿಯಾಗಿರುತ್ತಾನೆ. ಆತನ ಪತ್ತೆಯಿಂದ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ 13 ಕಳವು ಪ್ರಕರಣಗಳು ಮತ್ತು ನೆಲಮಂಗಲ ಟೌನ್ ಪೊಲೀಸ್ ಠಾಣೆಯ ಎರಡು ಕಳವು ಪ್ರಕರಣಗಳಲ್ಲಿ ಪತ್ತೆಯಾಗಿವೆ ಎಂದರು.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು
ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ದಿನಾಂಕ: 23.03.2026 (ಬೆಳಿಗ್ಗೆ 10.00 ರಿಂದ 10.30 ರವರೆಗೆ), [ಮಾರಾಟ ಮುಗಿಯುವವರೆಗೆ ತಲಾ 5 ನಿಮಿಷಗಳ ಅವಧಿಯನ್ನು ಅನಿಯಮಿತವಾಗಿ ವಿಸ್ತರಿಸಲಾಗಿದೆ.] ರಂದು ಸ್ವತ್ತನ್ನು "ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ" ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: ರೂ.1,40,46,104.28/– (ರೂಪಾಯಿ ಒಂದು ಕೋಟಿ ನಲವತ್ತು ಲಕ್ಷದ ನಲವತ್ತಾರು ಸಾವಿರದ ಒಂದುನೂರ ನಾಲ್ಕು ಮತ್ತು ಇಪ್ಪತ್ತೆಂಟು ಪೈಸೆ ಮಾತ್ರ) ಜೊತೆಗೆ ದಿನಾಂಕ: 02.03.2026 ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು ರವರಿಂದ ಸಾಲಗಾರರಾದ: (1) ಶ್ರೀ ಡಿ ಆರ್ ಎ ಕೃಷ್ಣ ಬಿನ್ ಡಿ ರಘುನಾಥ್, # 233, 10ನೇ ಬಿ ಮೇನ್, ಹೊರಮಾವು ಹತ್ತಿರ, ರಿಂಗ್ ರೋಡ್ ಸಿಗ್ನಲ್, ಕಲ್ಯಾಣ್ ನಗರ, ದೊಡ್ಡ ಬಾಣಸವಾಡಿ, ಬೆಂಗಳೂರು ಉತ್ತರ–560043. (2) ಶ್ರೀಮತಿ ಲಕ್ಷ್ಮಿ ಡಿ ಕೆ ಕೋಂ ಡಿ ಆರ್ ಎ ಕೃಷ್ಣ, # 233, 10ನೇ ಮೇನ್, ಕಲ್ಯಾಣ ನಗರ, ದೊಡ್ಡ ಬಾಣಸವಾಡಿ, ಬೆಂಗಳೂರು ಉತ್ತರ–560043. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.
ಅರ್ನೆಸ್ಟ್ ಹಣವನ್ನು M/s PSB Alliance Private Limited (https://baanknet.com/) ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ ದಿನಾಂಕ: 20.03.2026 ರ ಸಂಜೆ 5.00 ಗಂಟೆಯೊಳಗೆ ಠೇವಣಿ ಮಾಡಬೇಕು.
(₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಫ್ಲಾಟ್ ನಂ.302, 2ನೇ ಮಹಡಿಯು, "DEVI GRAND VIEW" ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಕಟ್ಟಡದಲ್ಲಿದ್ದು, ವಿಸ್ತೀರ್ಣ 1500 ಚದರ ಅಡಿ. ಜೊತೆಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿದೆ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳ ಜೊತೆಗೆ 279.00 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ಒಳಗೊಂಡಿದೆ. ಈ ಆಸ್ತಿಯು ಜೆ ಪಿ ನಗರ, 7ನೇ ಫೇಸ್, ಪುಟ್ಟೇನಹಳ್ಳಿ ವಾರ್ಡ್ – 187, ಸಾರಕ್ಕಿಕೆರೆ ಗ್ರಾಮ, ಉತ್ತರ ಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು. ಪೂರ್ವಕ್ಕೆ : ಖಾಸಗಿ ಆಸ್ತಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ನಂ.19, ದಕ್ಷಿಣಕ್ಕೆ : ಖಾಸಗಿ ಆಸ್ತಿ. Coordinates of the described property: 12.53568 N, 77.34585 E	ರೂ. 52.50	ರೂ. 5.25	ರೂ. 1.00	18.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: (www.canarabank.com) ನಲ್ಲಿ ಒದಗಿಸಲಾಗಿದೆ ಅಥವಾ M/s PSB Alliance Private Limited (https://baanknet.com/) ಪೋರ್ಟಲ್‌ನ ಇ–ವ್ಯಾಲೆಟ್ ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 9439058121 ಮತ್ತು 9483544116) ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.
ದಿನಾಂಕ : 03.03.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು
ಎಆರ್‌ಎಂ–1 ಶಾಖೆ
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು ರವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ದಿನಾಂಕ : 24.03.2026 ರಂದು (ಬೆಳಿಗ್ಗೆ 10.30 ರಿಂದ ಬೆಳಿಗ್ಗೆ 11.00 ರವರೆಗೆ) ಸ್ವತ್ತನ್ನು "ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ" ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: ರೂ. 6,02,51,985.46 (ರೂಪಾಯಿ ಆರು ಕೋಟಿ ಎರಡು ಲಕ್ಷದ ಐವತ್ತೊಂದು ಸಾವಿರದ ಒಂಭೈನೂರ ಎಂಭತ್ತೈದು ಮತ್ತು ನಲವತ್ತಾರು ಪೈಸೆ ಮಾತ್ರ) ಜೊತೆಗೆ ದಿನಾಂಕ: 01.03.2026 ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ ಬೆಂಗಳೂರು ರವರಿಂದ ಸಾಲಗಾರರಾದ: (1) ಶ್ರೀ ಸೆಂಥಿಲ್ ಎಲುಮಲೈ ಬಿನ್ ಎಲುಮುಲೈ ಗೋವಿಂದರಾಜ್, # 10, O 2ನೇ ಬೀದಿ, ಶ್ರೀ ಕಾಂಪ್ಲೆಕ್ಸ್ ಹತ್ತಿರ, ಶಿವನ್ ಚೆಟ್ಟಿ ಗಾರ್ಡನ್ಸ್, ಬೆಂಗಳೂರು–560042. (2) ಮೆ॥ ಪಿಎಸ್‌ಬಿ ಡಿಸ್ಟ್ರಿಬ್ಯೂಟರ್ಸ್, 19/1, ಸದಾಶಿವ ರೆಡ್ಡಿ ಕಾಂಪೌಂಡ್, ಬಾಲ್ಡ್ವಿನ್ ಶಾಲೆಯ ಹಿಂಭಾಗ, ಆರ್ ಎಂ ನಗರ ಮುಖ್ಯ ರಸ್ತೆ, ಬಾಣಸವಾಡಿ, ಬೆಂಗಳೂರು–560043. (3) ಶ್ರೀ ಸೆಂಥಿಲ್ ಎಲುಮಲೈ, ಬಿನ್ 401/7, 14ನೇ ಮೇನ್, ಹಳೆಯ ಮಡಿವಾಳ, ಬಿಟಿಎಂ 1ನೇ ಹಂತ, ಬೆಂಗಳೂರು–560029. (4) ಶ್ರೀ ಭಾಸ್ಕರ್ ಎಂ, ನಂ. 1534, 39ನೇ ಕ್ರಾಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು–560041. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.
ಅರ್ನೆಸ್ಟ್ ಹಣವನ್ನು M/s PSB Alliance Private Limited (https://baanknet.com) ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ ದಿನಾಂಕ: 23.03.2026ರ ಸಂಜೆ 5.00 ಗಂಟೆಯೊಳಗೆ ಠೇವಣಿ ಮಾಡಬೇಕು.
(₹. ಲಕ್ಷಗಳಲ್ಲಿ)

ಲಾಟ್	ಸ್ಥಿರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಫ್ಲಾಟ್ ನಂ.ಎಫ್–402, 3ನೇ ಮಹಡಿ ಎಫ್ ಬ್ಲಾಕ್, ಸರ್ವೆ ನಂ.108/3, 108/2, ವಿಸ್ತೀರ್ಣ ಸೂಪರ್ ಬಿಲ್ಟ್‌ಅಪ್ ಪ್ರದೇಶ 1089 ಚದರ ಅಡಿ, ಜೊತೆಗೆ 400 ಚದರ ಅಡಿ ಅವಿಭಾಜಿತ ಭಾಗ, ಬಡ್ಡಿ ಹಿತಾಸಕ್ತಿಯನ್ನೊಳಗೊಂಡ ಭೂಮಿಯು ಗಾರ್ಡನ್ ರೆಸಿಡೆನ್ಸಿ ಅಪಾರ್ಟ್‌ಮೆಂಟ್, ಬೊಮ್ಮಸಂದ್ರ, ಜಿಗಿಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–560099ರಲ್ಲಿದೆ. ಚಕ್ಕುಬಂದಿ: ಉತ್ತರಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ದಕ್ಷಿಣಕ್ಕೆ: ಕಾಮನ್ ಕಾರಿಡಾರ್, ಪೂರ್ವಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ಪಶ್ಚಿಮಕ್ಕೆ: ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಆಸ್ತಿಯ ನಂ.ಎಫ್–401. Coordinates of the property, Latitude- 12.8053267N, Longitude- 77.6770091.	₹. 40.00	₹. 4.00	₹. 1.00
2	ಫ್ಲಾಟ್ ನಂ.ಎಫ್–403, 3ನೇ ಮಹಡಿ ಎಫ್ ಬ್ಲಾಕ್, ಸರ್ವೆ ನಂ.108/3, 108/2, ವಿಸ್ತೀರ್ಣ ಸೂಪರ್ ಬಿಲ್ಟ್‌ಅಪ್ ಪ್ರದೇಶ 1089 ಚದರ ಅಡಿ, ಜೊತೆಗೆ 400 ಚದರ ಅಡಿ ಅವಿಭಾಜಿತ ಭಾಗ, ಬಡ್ಡಿ ಹಿತಾಸಕ್ತಿಯನ್ನೊಳಗೊಂಡ ಭೂಮಿಯು ಗಾರ್ಡನ್ ರೆಸಿಡೆನ್ಸಿ ಅಪಾರ್ಟ್‌ಮೆಂಟ್, ಬೊಮ್ಮಸಂದ್ರ, ಜಿಗಿಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–560099ರಲ್ಲಿದೆ. ಚಕ್ಕುಬಂದಿ: ಉತ್ತರಕ್ಕೆ: ಕಾಮನ್ ಕಾರಿಡಾರ್, ದಕ್ಷಿಣಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ಪೂರ್ವಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ಪಶ್ಚಿಮಕ್ಕೆ: ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಆಸ್ತಿಯ ಖಾಸಗಿ ನಂ.ಎಫ್–404, Coordinates of the property, Latitude- 12.8053267N, Longitude- 77.6770091.	₹. 40.00	₹. 4.00	₹. 1.00
3	ಫ್ಲಾಟ್ ನಂ.ಎಫ್–404, 3ನೇ ಮಹಡಿ ಎಫ್ ಬ್ಲಾಕ್, ಸರ್ವೆ ನಂ.108/3, 108/2, ವಿಸ್ತೀರ್ಣ ಸೂಪರ್ ಬಿಲ್ಟ್‌ಅಪ್ ಪ್ರದೇಶ 1089 ಚದರ ಅಡಿ, ಜೊತೆಗೆ 400 ಚದರ ಅಡಿ ಅವಿಭಾಜಿತ ಭಾಗ, ಬಡ್ಡಿ ಹಿತಾಸಕ್ತಿಯನ್ನೊಳಗೊಂಡ ಭೂಮಿಯು ಗಾರ್ಡನ್ ರೆಸಿಡೆನ್ಸಿ ಅಪಾರ್ಟ್‌ಮೆಂಟ್, ಬೊಮ್ಮಸಂದ್ರ, ಜಿಗಿಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–560099ರಲ್ಲಿದೆ. ಚಕ್ಕುಬಂದಿ: ಉತ್ತರಕ್ಕೆ: ಕಾಮನ್ ಕಾರಿಡಾರ್, ದಕ್ಷಿಣಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ಪೂರ್ವಕ್ಕೆ: ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಆಸ್ತಿಯ ಖಾಸಗಿ ನಂ.ಎಫ್–403, ಪಶ್ಚಿಮಕ್ಕೆ: ಲಿಫ್ಟ್ ಪ್ರದೇಶ. Coordinates of the property: Latitude- 12.8053267N, Longitude- 77.6770091.	₹. 40.00	₹. 4.00	₹. 1.00
4	ಹಳೆಯ ವಾಸಯೋಗ್ಯ ವಿಲ್ಲಾ: ಸರ್ವೆ ನಂ.119/2, ಪಂಚಾಯತ್ ಖಾತಾ 92/180, ಎಸ್ ಮೇಡಹಳ್ಳಿ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರಿನಲ್ಲಿದೆ. ಪ್ರಸ್ತುತ ಆಸ್ತಿಯ ವಿಲ್ಲಾ ನಂ.180/6ಎ, ಸರ್ಜಾಪುರ ಅತಿಪಲ್ಲಿ ಕ್ರಾಸ್ ರಸ್ತೆ, ಸರ್ಜಾಪುರ, ಬೆಂಗಳೂರು–562124. ವಿಸ್ತೀರ್ಣ 3841.66 ಚದರ ಅಡಿ. ಚಕ್ಕುಬಂದಿ: ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆಸ್ತಿ ಸರ್ವೆ ನಂ.117, ಪೂರ್ವಕ್ಕೆ: ಆಸ್ತಿ ಸರ್ವೆ ನಂ.119/1, ಪಶ್ಚಿಮಕ್ಕೆ: ಆಸ್ತಿ ಸರ್ವೆ ನಂ.119/3. Coordinates of the property, Latitude- 12.834639, Longitude- 77.780889	₹. 222.00	₹. 22.20	₹. 1.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ಕೆನರಾ ಬ್ಯಾಂಕ್‌ನ ವೆಬ್‌ಸೈಟ್ (www.canarabank.com) ಅಥವಾ ಮೆ॥ ಪಿಎಸ್‌ಬಿ ಅಲೈಯನ್ಸ್ ಪ್ರೈವೇಟ್ ಲಿಮಿಟೆಡ್ (https://baanknet.com/) ಪೋರ್ಟಲ್‌ನ ಇ–ವ್ಯಾಲೆಟ್‌ನಲ್ಲಿ ಒದಗಿಸಲಾದ "ಇ–ಹರಾಜು" ಲಿಂಕ್ ಅನ್ನು ನೋಡಿ. ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು ಮೊಬೈಲ್ ಸಂಖ್ಯೆ: 9901642631 ಮತ್ತು 9483544116 ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.
ದಿನಾಂಕ : 02.03.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

ಆಸ್ಪತ್ರೆ ನಿರ್ದೇಶಕನ ವಿರುದ್ಧ ಅತ್ಯಾಚಾರ ಕೇಸ್

ಬೆಂಗಳೂರು: ಆಸ್ಪತ್ರೆಯಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಜಯನಗರದಲ್ಲಿ ಇರುವ ಆಸ್ಪತ್ರೆಯೊಂದ ಕಾರ್ಯಕಾರಿ ನಿರ್ದೇಶಕರ ವಿರುದ್ಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ತ್ರಿವಿಕ್ರಂರಾವ್ ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಮೂರು ದಿನಗಳ ಹಿಂದೆ ಸಂತ್ರಸ್ತೆ ನೀಡದ ದೂರಿನ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ. ದೂರು ನೀಡಿದ ಮಹಿಳೆ ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಸಭೆ ಹಾಗೂ ವೃತ್ತಿ ಸಂಬಂಧ ಚರ್ಚೆ ನಡೆಸುವುದಾಗಿ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಲಾಗಿದೆ ಎಂದು ದೂರು ನೀಡಲಾಗಿದೆ. ದೂರಿನ ಮೇರೆಗೆ ಆರೋಪಿ ವಿರುದ್ಧ ಅತ್ಯಾಚಾರ ಆರೋಪದಡಿ ಪ್ರಕರಣ ದಾಖಲು ಮಾಡಲಾಗಿದೆ. ತ್ರಿವಿಕ್ರಂ ರಾವ್ ಅವರು ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

PUBLIC NOTICE
This is to inform the general public that our client **M/s Janakal Sankalpa Ventures,** a Partnership Firm, office at # 52, 2nd Floor, 12 th Cross, Triveni Complex, 3 rd Main Road, Mahalakshmi Layout, Bangalore 560 086 by its Partners (1) Mr. Surendra Babu P & (2) Mr. Ramesh L, has intends to avail a credit facility from SMFG India Home Finance Company Limited having its office at NM complex #6 First Floor Service Road, Remco layout, Hampi Nagar, RPC Layout, Attiguppe Metro Station Vijayanagar, Bangalore-560040, by creating a charge on the security of deposit of title deeds in respect of the Schedule Property mentioned below.
That our client has been represented by its respective land owners that the only surviving legal heirs of Late Venkatesh is Mr. Manikanta (30 years presently), who also appeared as the only surviving legal heirs in OS No.155/2015 before the Hon'ble Additional Civil Judge and JMFC, Anekal. Apart from him, there are no other surviving legal heirs to Late Venkatesh, son of Late Tayappa. Apart from the above person, any other person/s who has/have any claim, right, title and interest on the Schedule Property, should make his/their claim / objection to the said proposed transaction to the address mentioned herein below **within 07 days** from the date of this notice. In the event no information is received by me within 07 days from the date of the publication of this Notice, the claim or objection, if any shall deemed to have been waived off and our client would proceed with the proposed transaction.
Schedule Property
All that piece and parcel of property bearing extract of E Swathu Katha **No.264, assigned to residentially converted lands bearing New Survey No.236 & 237, Old Survey Nos.117, Block Nos.B37 & B24, Property No.150200102701021778, admeasuring 7321.55 square meter i.e 78,779.87 square feet out of 02 Acres i.e 8093.71 square meter, situated at S Medahalli Village, Sarjapura Hobli, Anekal Taluk, comprising of a multistoried residential building named as 'JANAKAL STELLAR HEIGHTS' comprising of a ground and ten upper floors building** & bounded on: **East by :** Remaining Portion of land in Re Survey No. 117; **West by :** Road; **North by :** Remaining Portion of land in Re Survey No. 117; **South by:** Remaining Portion of land in Re Survey No. 117
Name of Advocate: M/s Target Law,
Advocates & Legal Consultants
59, 'SAMPIGE', East Park Road
15 th Cross, Malleshwaram
Bangalore 560003, Ph: 080-40972387

PUBLIC NOTICE
This is to inform the General Public that **SMT.S.V.LAKSHMAMMA,** W/o B. T. Srinivasa, is the owner of immovable property mentioned in the schedule hereunder and she has lost the original Gift Deed dated 26/06/2004 Document No.11347/2004-05, Book-1, stored in CD No.101, executed by Smt.Hanumakka in favour of her son Sri.B.T. Srinivas registered in the office of sub registrar, Kengeri, In case anybody having any claims or in possession of the said document, shall inform the under singed and handover the same within **SEVEN DAYS** from the date of publication of this notice.
"SCHEDULE PROPERTY All that piece and parcel of the immovable Property of bearing **Site No.61, Khatha No.44, Old BBMP Khatha No.1630/1432/44 BBMP EPID No.1189302746 comes under the limits of BBMP measuring East to West 40 Feet and North to South 30 Feet totally measuring 1200 Square Feet situated at Babasahebrapalya Basaveshwaranagar Village, Kengeri Hobli, Bangalore South Taluk** and bounded on : **East by :** Property belongs to Doddachannappa, **West by :** Road, **North by :** Property belongs to Bettathimmaiah **South by :** Property belongs to Sampulu and Puttaswamappa,
NAMA AMOGH, Advocate
No.5, 11th Main Road, Padmanabha Nagar,
Bangalore-560070. Cell # 9341401302

PUBLIC NOTICE
This is notify the general public that our client Residental site bearing No.08,BBMP, PID No.5437231062 Khata no.1972/08/448/56/3, Measuring East to West 30 feet, North to South 40 feet in all measuring 1200sq ft. land bearing Sy. No.56/3 Situated At Andharahalli Village Yashavanhapur hobli Banglore North is being purchased by my client Smt. Gowramma w/o Late Nagaraj residing in banglore south.if any person or any others has any supporting documents with the undersigned should contact the mentioned advocate on or before 7 working days. No claim will be entertained beyond the period of 7 working days.
SM Associates,
Mr.Manjunath Ph-9901633378

ಟಿಡಿಆರ್ ಕುರಿತು ಸರಕಾರಕ್ಕೆ ದೂರು ಸಲ್ಲಿಕೆ

ಬೆಂಗಳೂರು: ನಗರಾಭಿವೃದ್ಧಿ ಇಲಾಖೆ ಫೆ.5ರಂದು ಹೊಸದಾಗಿ ಪ್ರೀಮಿಯಂ ನೆಲ ವಿಸ್ತೀರ್ಣ ಅನುಪಾತ (ಎಫ್‌ಎಆರ್) ನೀತಿ ಹೊರಡಿಸಿದ್ದು, ಸಾರ್ವಜನಿಕರ ವಲಯದಲ್ಲಿ ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ.ಸಿಎಂ ಸಿದ್ದರಾಮಯ್ಯ, ಡಿಸಿಎಂ ಮತ್ತು ಬೆಂಗಳೂರು ನಗರ ಉಸ್ತುವಾರಿ ಸಚಿವ ಡಿ.ಕೆ. ಶಿವಕುಮಾರ್, ಸರಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್, ಗ್ರೇಟರ್ ಬೆಂಗಳೂರು ಮುಖ್ಯ ಆಯುಕ್ತ ಎಂ. ಮಹೇಶ್ವರರಾವ್, ಜಿಬಿಎ ಮುಖ್ಯ ಯೋಜನೆ ಮುಖ್ಯಸ್ಥರಿಗೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಆಯುಕ್ತ ಮೇಜರ್ ಮಣ್ಣಿವಣ್ಣನ್ ಅವರಿಗೆ ಮಾಹಿತಿ ಹಕ್ಕು ಅಧ್ಯಯನ ಕೇಂದ್ರ, ಅಧ್ಯಕ್ಷ ಬಿ.ಎಚ್.ವೀರೇಶ್ ಎಂಬುವರು ದೂರು ನೀಡಿದ್ದಾರೆ. ಭೂಮಾಲೀಕರು ಬದಲು ಡೆವಲಪರ್‌ಗಳಿಗೆ ಮಾತ್ರ ಲಾಭ ಅನುಕೂಲವಾಗಲಿದೆ. ಈ ನೀತಿಯಿಂದ ಕಟ್ಟಡ ನಿರ್ಮಾಣ ಮಾಡುತ್ತಿರುವವರು ಮತ್ತು ಕಟ್ಟಡ ನಿರ್ಮಿಸುವವರು, ಸ್ಥಳಿಯ ಯೋಜನಾ ಪ್ರಾಧಿಕಾರದಿಂದ ಶುಲ್ಕ ಪಾವತಿಸಿ ಪ್ರೀಮಿಯಂ ಎಫ್‌ಎಆರ್ ಪಡೆದು ಹೆಚ್ಚುವರಿ ಕಟ್ಟಡ ನಿರ್ಮಿಸಿಕೊಳ್ಳುತ್ತಾರೆ. 12 ಮೀಟರ್‌ನಿಂದ 18 ಮೀಟರ್ ಅಗಲದ ರಸ್ತೆ ಹೊಂದಿರುವ ಕಟ್ಟಡಗಳಿಗೆ ಶೇ.40 ಮತ್ತು 18 ಮೀಟರ್‌ಗಿಂತ ಅಧಿಕ ಅಗಲ ಹೊಂದಿರುವ ಕಟ್ಟಡಗಳು ಶೇ.60 ಗರಿಷ್ಠ ಪ್ರೀಮಿಯಂ ಎಫ್‌ಎಆರ್ ಪಡೆಯಬಹುದು ಎಂದು ನಿಯಮದಲ್ಲಿ ಉಲ್ಲೇಖಿಸಲಾಗಿದೆ. ಇದು ರಾಷ್ಟ್ರೀಯ ನಗರ ಯೋಜನೆ ಮಾರ್ಗಸೂಚಿ ಉಲ್ಲಂಘನೆಯಾಗಿದೆ. ಪ್ರೀಮಿಯಂ ಶುಲ್ಕದಿಂದ ಸರಕಾರಕ್ಕೆ ತಕ್ಕಮಟ್ಟಿಗೆ ಆದಾಯ ಬರಬಹುದು. ಆದರೆ, ಎತ್ತರದ ಕಟ್ಟಡಗಳ ನಿರ್ಮಾಣದಿಂದ ಭವಿಷ್ಯದಲ್ಲಿ ರಸ್ತೆ, ಒಳಚರಂಡಿ, ಕುಡಿಯುವ ನೀರು ಇತರ ಮೂಲಸೌಕರ್ಯ ಕಲ್ಪಿಸುವ ಸವಾಲು ಸರಕಾರ ಎದುರಾಗಲಿವೆ.

ಕರ್ನಾಟಕ ಬ್ಯಾಂಕ್ ಲಿ.,
(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು–575002)
ನಿಮ್ಮ ಕುಟುಂಬದ ಬ್ಯಾಂಕ್, ಭಾರತಾದ್ಯಂತ
ಶಾಖೆ – ಶ್ರೀರಾಮಪುರಂ
ಹಿರಿಯ ಶಾಖಾ ವ್ಯವಸ್ಥಾಪಕರು,
ನಂ. 113, ಎರಡನೇ ಮಹಡಿ, ಕೆ.ಹೆಚ್ ರಸ್ತೆ
ಬೆಂಗಳೂರು–560027
ದೂರವಾಣಿ: 080–22955805, ಫ್ಯಾಕ್ಸ್: 080–22245034,
ಇ–ಮೇಲ್: bangalore.ro@ktkbank.com ,
ವೆಬ್‌ಸೈಟ್: www.karnatakabank.com,
CIN LBS110KA 1024PLC001128
ವಾಹನದ ಹರಾಜು ಮಾರಾಟ "ಎಲ್ಲಿ ಹೇಗಿದೆಯೋ ಹಾಗೆ"
ವಾಹನದ ಹರಾಜು ದಿನಾಂಕ 04-03-2026 ರಿಂದ 11-03-2026

ಕ್ರಮ ಸಂ.	ಮಾಡೆಲ್	ನೋಂದಣಿ ಸಂ.	ವರ್ಷ	ಆರ್‌ಸಿ ವಿವರ	ರಿಮಾರ್ಕ್ಸ್	ಇನ್‌ವಾರ್ಡ್ ದಿನಾಂಕ
1.	ಮಾರುತಿ ವಾಗನರ್/ ಆರ್	KA04MS0125	2016	ಆರ್‌ಸಿ ಇಲ್ಲ	NOC & RTO FORMS 29,30,35	22.03.2022

ದಿನಾಂಕ: 03.03.2026
ಸ್ಥಳ: ಬೆಂಗಳೂರು
ಸಹಿ/– ಹಿರಿಯ ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಶ್ರೀರಾಂಪುರ ಶಾಖೆ, ಬೆಂಗಳೂರು

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ: 471/ 2024
ಅರ್ಜಿದಾರರು : 1. ಶ್ರೀಮತಿ. ಗೌರಮ್ಮ ಕೋಂ. ಬೈರಪ್ಪ ವಯಸ್ಸು 79 ವರ್ಷ, ವಾಸ: ನಂ.55, ಕನಕಪುರ ಮುಖ್ಯ ರಸ್ತೆ, ನೆಲಗುಳಿ, ಬೋಳಾರೆ ಅಂಚೆ, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇನ್ನೊಬ್ಬರು.
ವಿರುದ್ಧ
ಎದುರುದಾರರು : 1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ, 2. ಗ್ರಾಮ ಲೆಕ್ಕಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಚಿಕ್ಕಮ್ಮನವರಾದ ಶ್ರೀಮತಿ.ತಿಮ್ಮಕ್ಕ ಕೋಂ ಲೇಟ್.ಸಿದ್ದಯ್ಯ @ ಪೀಚಯ್ಯ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹುಳಗೊಂಡನಹಳ್ಳಿ ಗ್ರಾಮದಲ್ಲಿ ದಿನಾಂಕ:05.06.2003 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 10.04.2026 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.
2026 ರ ಮಾರ್ಚ್ 3ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು:
ರವಿಚಂದ್ರ, ಆರ್, ವಕೀಲರು
ಸ್ಥಳ: ಕನಕಪುರ
ದಿನಾಂಕ: 27.02.2026

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ: 472/ 2024
ಅರ್ಜಿದಾರರು : 1. ಶ್ರೀಮತಿ. ಗೌರಮ್ಮ ಕೋಂ. ಬೈರಪ್ಪ ವಯಸ್ಸು 79 ವರ್ಷ, ವಾಸ: ನಂ.55, ಕನಕಪುರ ಮುಖ್ಯ ರಸ್ತೆ, ನೆಲಗುಳಿ, ಬೋಳಾರೆ ಅಂಚೆ, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇನ್ನೊಬ್ಬರು.
ವಿರುದ್ಧ
ಎದುರುದಾರರು : 1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ, 2. ಗ್ರಾಮ ಲೆಕ್ಕಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಅಕ್ಕನವರಾದ ಶ್ರೀಮತಿ ಬೈರಮ್ಮ ಕೋಂ ಲೇಟ್.ತಿಮ್ಮಯ್ಯ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹುಳಗೊಂಡನಹಳ್ಳಿ ಗ್ರಾಮದಲ್ಲಿ ದಿನಾಂಕ: 16.12.2008 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 10.04.2026 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.
2026 ರ ಮಾರ್ಚ್ 3ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು:
ರವಿಚಂದ್ರ, ಆರ್, ವಕೀಲರು
ಸ್ಥಳ: ಕನಕಪುರ
ದಿನಾಂಕ: 27.02.2026

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ: 473/ 2024
ಅರ್ಜಿದಾರರು : 1. ಶ್ರೀಮತಿ. ಗೌರಮ್ಮ ಕೋಂ. ಬೈರಪ್ಪ ವಯಸ್ಸು 79 ವರ್ಷ, ವಾಸ: ನಂ.55, ಕನಕಪುರ ಮುಖ್ಯ ರಸ್ತೆ, ನೆಲಗುಳಿ, ಬೋಳಾರೆ ಅಂಚೆ, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇನ್ನೊಬ್ಬರು.
ವಿರುದ್ಧ
ಎದುರುದಾರರು : 1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ, 2. ಗ್ರಾಮ ಲೆಕ್ಕಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾಯಿಯವರಾದ ಶ್ರೀಮತಿ ಲಕ್ಷ್ಮಮ್ಮ ಕೋಂ ಲೇಟ್.ಸಿದ್ದಯ್ಯ @ ಪೀಚಯ್ಯ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹುಳಗೊಂಡನಹಳ್ಳಿ ಗ್ರಾಮದಲ್ಲಿ ದಿನಾಂಕ :12.02.1958 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 10.04.2026 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.
2026 ರ ಮಾರ್ಚ್ 3ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು:
ರವಿಚಂದ್ರ, ಆರ್, ವಕೀಲರು
ಸ್ಥಳ: ಕನಕಪುರ
ದಿನಾಂಕ: 27.02.2026

ಹನಿಟ್ರ್ಯಾಪ್ ಕೇಸ್: ಮುನಿರತ್ನ ವಿರುದ್ಧ ಮರು ತನಿಖೆಗೆ ಆದೇಶ

ಬೆಂಗಳೂರು: ಶಾಸಕ ಮುನಿರತ್ನ ವಿರುದ್ಧದ ಹನಿಟ್ರ್ಯಾಪ್ ಪ್ರಕರಣದ ಕುರಿತು ಸಿಐಡಿ, ಎಸ್‌ಐಟಿ ಸಲ್ಲಿಸಿದ್ದ 'ಬಿ' ರಿಪೋರ್ಟ್ ಅನ್ನು ತಿರಸ್ಕರಿಸಿ, ಮರು ತನಿಖೆ ನಡೆಸುವಂತೆ ಕರ್ನಾಟಕ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ. ಈ ಮೂಲಕ ಪ್ರಕರಣ ಮತ್ತೆ ಚುರುಕುಗೊಂಡಿದ್ದು, ಶಾಸಕರಿಗೆ ಕಾನೂನು ಸಂಕಷ್ಟ ಎದುರಾಗುವ ಸಾಧ್ಯತೆ ಹೆಚ್ಚಾಗಿದೆ.

ಜೆಡಿಎಸ್ ಮುಖಂಡ ಲಗ್ಗೆರೆ ನಾರಾಯಣಸ್ವಾಮಿ ಸಲ್ಲಿಸಿದ್ದ ದೂರಿನ ತನಿಖೆ ಪೂರ್ಣಗೊಳಿಸಿದ ಎಸ್‌ಐಟಿ ಅಧಿಕಾರಿಗಳು ಸಾಕ್ಷಿಯ ಅಭಾವವೆಂದು ಉಲ್ಲೇಖಿಸಿ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ಆದರೆ, ಇದನ್ನು ಪ್ರಶ್ನಿಸಿ ನಾರಾಯಣಸ್ವಾಮಿ ಮರು ಅರ್ಜಿ ಸಲ್ಲಿಸಿದ್ದರು. ದೂರುದಾರರ ಪರ ಹಿರಿಯ ವಕೀಲ ಸಿ. ಎಚ್. ಹನುಮಂತರಾಯ ವಾದ ಮಂಡಿಸಿ, ಧ್ವನಿಮುದ್ರಣ ಸೇರಿದಂತೆ ಪ್ರಾಥಮಿಕ ಸಾಕ್ಷ್ಯಾಧಾರಗಳನ್ನು ಸಲ್ಲಿಸಲಾಗಿದೆ. ಆದರೂ ಪೊಲೀಸರು ಸಮರ್ಪಕ ತನಿಖೆ ನಡೆಸದೆ 'ಬಿ' ರಿಪೋರ್ಟ್ ಸಲ್ಲಿಸಿದ್ದಾರೆ ಎಂದು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ. ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ ನಡೆಸುವ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ವಾದಗಳನ್ನು ಆಲಿಸಿ, 'ಬಿ' ರಿಪೋರ್ಟ್ ಅನ್ನು ರದ್ದುಗೊಳಿಸಿ, ಪ್ರಕರಣದ ಮುಂದಿನ ತನಿಖೆ ನಡೆಸುವಂತೆ ಸಿಐಡಿ ಎಸ್‌ಐಟಿಗೆ ನಿರ್ದೇಶನ ನೀಡಿದರು. ವಿಚಾರಣೆಯನ್ನು ಮಾರ್ಚ್ 30ಕ್ಕೆ ಮುಂದೂಡಲಾಗಿದೆ. ಈ ಆದೇಶದಿಂದ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ.

ಏನಿದು ಹನಿಟ್ರ್ಯಾಪ್ ಪ್ರಕರಣ?

ಜೆಡಿಎಸ್ ಮುಖಂಡ ಲಗ್ಗೆರೆ ನಾರಾಯಣಸ್ವಾಮಿ ಅವರು 2024ರ ಡಿಸೆಂಬರ್‌ನಲ್ಲಿ ನಂದಿನಿ ಲೇಔಟ್ ಠಾಣೆಗೆ ದೂರು ಸಲ್ಲಿಸಿದ್ದರು. ತಮ್ಮ ಹಾಗೂ ಪತ್ನಿ ಮಂಜುಳಾ ಅವರ ವಿರುದ್ಧ ಹನಿಟ್ರ್ಯಾಪ್ ಸಂಚು ರೂಪಿಸಿ, ತೇಜೋವಧೆ ಮಾಡಲು ಯತ್ನಿಸಿದ್ದಾರೆ ಎಂದು ಅವರು ಆರೋಪಿಸಿದ್ದರು. ಅಲ್ಲದೆ, ಪತ್ನಿಯ ಕೊಲೆಗೆ ಷಡ್ಯಂತ್ರ ರೂಪಿಸಿ ಸುಪಾರಿ ನೀಡಲಾಗಿದೆ ಎಂಬ ಗಂಭೀರ ಆರೋಪವನ್ನೂ ಮಾಡಿದ್ದರು. ಈ ಪ್ರಕರಣದ ತನಿಖೆಯನ್ನು ನಂತರ ಸಿಐಡಿ ಎಸ್‌ಐಟಿಗೆ ವರ್ಗಾವಣೆ ಮಾಡಲಾಗಿತ್ತು.

ಅಗ್ನಿ ಅವಘಡ: ಗೃಹಿಣಿ ದುರ್ಮರಣ

ಬೆಂಗಳೂರು: ಕಂಟ್ರ್ಯಾಕ್ಟರ್ ರಮೇಶ್ ಬಾಬು ಅವರ ನಾಲ್ಕು ಅಂತಸ್ತಿನ ಮನೆಯಲ್ಲಿ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಅವರ ಪತ್ನಿ ಸವಿತಾ (53) ಅವರು ಮೃತಪಟ್ಟಿರುವ ಘಟನೆ ಗಾಯತ್ರಿ ನಗರದಲ್ಲಿ ನಡೆದಿದೆ. ಮನೆಯ ಮೂರನೇ ಮಹಡಿಯ ಅಡುಗೆ ಮನೆಯಲ್ಲಿ ಮೊದಲು ಕಾಣಿಸಿಕೊಂಡ ಬೆಂಕಿ ಕ್ಷಣಾರ್ಧದಲ್ಲಿ ವ್ಯಾಪಿಸಿದೆ. ಸುದ್ದಿ ತಿಳಿಯುತ್ತಿದ್ದಂತೆಯೇ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಕಾರ್ಯಾಚರಣೆ ನಡೆಸಿದ್ದು, ಮನೆಯಲ್ಲಿದ್ದ ರಮೇಶ್ ಬಾಬು, ಅವರ ತಾಯಿ ಸಣ್ಣಮ್ಮ ಹಾಗೂ ಮಗನನ್ನು ಪ್ರಾಣಾಪಾಯದಿಂದ ರಕ್ಷಿಸಿದ್ದಾರೆ. ಸದ್ಯ ಗಾಯಗೊಂಡವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮಲ್ಲೇಶ್ವರಂ ಎಸಿಪಿ ವೇಣುಗೋಪಾಲ್ ಹಾಗೂ ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸಮಾಚಾರ ಸಣ್ಣದಲ್ಲ

ನಿರ್ದೇಶಕರಾಗಿ ವೀರೇಂದ್ರ ಕೆ.ನೇಮಕ



ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ನಿರ್ದೇಶಕ ಮಂಡಳಿಯ ನಿರ್ದೇಶಕರಾಗಿ ಕೆಪಿಸಿಎಲ್ ಎಂಪ್ಲಾಯೀಸ್ ಯೂನಿಯನ್ ಅಧ್ಯಕ್ಷ ವೀರೇಂದ್ರ ಕೆ.ಅವರನ್ನು ನೇಮಕ ಮಾಡಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಕೆಪಿಸಿಎಲ್ ಎಂಪ್ಲಾಯೀಸ್ ಯೂನಿಯನ್ ವತಿಯಿಂದ ನಿರ್ದೇಶಕ ಮಂಡಳಿಗೆ ನೇಮಕಾತಿ ನಡೆದಿರುವುದು ಇದೇ ಮೊದಲು. ಇತ್ತೀಚೆಗೆ ಕೆಪಿಸಿಎಲ್ ಅಧ್ಯಕ್ಷ ರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ನಿಗಮ ಮಂಡಳಿ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಇಂಧನ ಇಲಾಖೆ ಈ ಕುರಿತು ಆದೇಶ ಹೊರಡಿಸಿದೆ. ಈ ಮೂಲಕ ಕೆಪಿಸಿಎಲ್ ನಿರ್ದೇಶಕ ಮಂಡಳಿ ನಿರ್ದೇಶಕರಾಗಿ ವೀರೇಂದ್ರ ಕೆ. ಅವರನ್ನು ನೇಮಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಂಶೋಧನಾ ಸಹಾಯಕರಿಗೆ ಅರ್ಜಿ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಬಿ. ಬಸವಲಿಂಗಪ್ಪ ಅಭಿವೃದ್ಧಿ ಅಧ್ಯಯನ ಸಂಸ್ಥೆ ಒಂದು ವರ್ಷದ ಅವಧಿಗಾಗಿ ರಿಸರ್ಚ್ ಅಸಿಸ್ಟೆಂಟ್ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭಿವೃದ್ಧಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಜತೆಗೆ ತತ್ಸಮಾನ, ಎನ್ಇಟಿ, ಎಸ್ಎಲ್ಇಟಿ, ಪಿಎಚ್.ಡಿ ಪದವಿ ಹೊಂದಿರುವ ಪರಿಶಿಷ್ಟ ಜಾತಿ ಅಭ್ಯರ್ಥಿಗಳು ಮಾ.18 ರ ಸಂಜೆ 5 ಗಂಟೆಯೊಳಗೆ ಅರ್ಜಿಗಳನ್ನು ಸಂಯೋಜಕರು, ಬಿ. ಬಸವಲಿಂಗಪ್ಪ ಅಭಿವೃದ್ಧಿ ಅಧ್ಯಯನ ಸಂಸ್ಥೆ, ಎಂಸಿಎ ವಿಭಾಗ, ಮನೋವಿಜ್ಞಾನ ಕಟ್ಟಡ, ಜ್ಞಾನಭಾರತಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಗರ್ಭಧಾರಣೆಗೆ ಬೊಜ್ಜು ಅಡ್ಡಿ: ಕಳವಳ

ಬೆಂಗಳೂರು: ಸಂತಾನೋತ್ಪತ್ತಿ ವಯಸ್ಸಿನಲ್ಲಿ ಬೊಜ್ಜು ಸ್ಥಿರವಾಗಿ ಆಗುತ್ತಿರುವ ಏರಿಕೆಯ ಕುರಿತು ತಜ್ಞರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಇದು ಕರ್ನಾಟಕದಲ್ಲಿ ತಾಯಂದಿರು ಮತ್ತು ನವಜಾತ ಶಿಶುಗಳ ಆರೋಗ್ಯಕ್ಕೆ ಅವ್ಯಕ್ತವಾದ ಆದರೆ ಗಮನಾರ್ಹವಾದ ಬೆದರಿಕೆಯಾಗಿದೆ ಎಂದು ಎಚ್ಚರಿಸಿದ್ದಾರೆ.ಮೊದಲ ಗರ್ಭಧಾರಣೆಯ ಪೂರ್ವದಲ್ಲಿ ಮೆಟಾಬಾಲಿಕ್ ಸಿಂಡ್ರೋಮ್‌ನ ಲಕ್ಷಣಗಳು ಯುವತಿಯರಲ್ಲಿ ಈ ಮೊದಲು ಇರುತ್ತಿರಲಿಲ್ಲ. ಈಗಿನ ಯುವತಿಯರಲ್ಲಿ ಅದು ಸಾಮಾನ್ಯವಾಗುತ್ತಿರುವುದು ಚಿಂತೆಯ ವಿಷಯ. ತೂಕ ನಿರ್ವಹಣೆಯು ದೇಹವು ಹೇಗೆ ಕಾಣುತ್ತಿದೆ ಎಂಬುದಕ್ಕೆ ಮಾತ್ರ ಸಂಬಂಧಿಸಿದ್ದಲ್ಲ, ಇದು ಸುರಕ್ಷಿತ ಗರ್ಭಧಾರಣೆಯನ್ನು ಮತ್ತು ಭವಿಷ್ಯದ ಆರೋಗ್ಯಕರ ಪೀಳಿಗೆಯನ್ನು ನಿರ್ಮಿಸುವುದಕ್ಕೂ ಸಂಬಂಧಿಸಿದೆ. ಸಣ್ಣ ಮತ್ತು ಸ್ಥಿರವಾದ ಜೀವನಶೈಲಿ ಬದಲಾವಣೆಗಳು ಈ ಫಲಿತಾಂಶಗಳನ್ನು ಪರಿವರ್ತಿಸಬಹುದು. ವೈದ್ಯರಾಗಿ, ಮಹಿಳೆಯರು ತಮ್ಮ ಭವಿಷ್ಯವನ್ನು ಯೋಜಿಸುವಷ್ಟೇ ಎಚ್ಚರಿಕೆಯಿಂದ ತಮ್ಮ ದೇಹವನ್ನು ಗರ್ಭಧಾರಣೆಗೆ ಸಿದ್ಧಪಡಿಸಬೇಕೆಂದು ನಾವು ಒತ್ತಾಯಿಸುತ್ತೇವೆ ಎಂದು ಬೆಂಗಳೂರಿನ ರಾಧಾಕೃಷ್ಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರಾದ ಡಾ. ವಿದ್ಯಾ ವಿ ಭಟ್ ಹೇಳಿದರು. ಸಂತಾನೋತ್ಪತ್ತಿ ವಯಸ್ಸಿನ ಮಹಿಳೆಯರಲ್ಲಿ ಏರಿಕೆಯಾಗುವುದು ಹೆಚ್ಚಿದ ಬಂಜೆತನ, ಹೆಚ್ಚಿನ ಗರ್ಭಪಾತ ದರಗಳು, ಹೆಚ್ಚಿನ ಅಪಾಯದ ಗರ್ಭಧಾರಣೆಗಳು ಮತ್ತು ತಾಯಂದಿರಿಗೆ ಇನ್ನಷ್ಟು ತೊಡಕುಗಳು ಉಂಟಾಗುವುದಕ್ಕೆ ಸಂಬಂಧಿಸಿದೆ. ಹಾರ್ಮೋನುಗಳ ಸಮತೋಲನವನ್ನು ಬೊಜ್ಜು ಅಡ್ಡಿಪಡಿಸುತ್ತದೆ ಮತ್ತು ಅನಿಯಮಿತ ಅಂಡೋತ್ಪತ್ತಿ, ಇನ್ಸುಲಿನ್ ಪ್ರತಿರೋಧ ಮತ್ತು ಕೆಲವು ಸಂದರ್ಭಗಳಲ್ಲಿ ಅಂಡಾಣು ಗುಣಮಟ್ಟವು ಕಡಿಮೆಯಾಗುವುದನ್ನೂ ನಾವು ಗಮನಿಸುತ್ತೇವೆ ಎಂದು ಅವರು ಹೇಳಿದರು.

ಸನ್‌ರೂಫ್ ಅನುಭವ ಸೆಂಟರ್ ಆರಂಭ

ಬೆಂಗಳೂರು: ವಿಶ್ವದ ಮೊದಲ ವೆಲ್‌ನೆಸ್ ಲೈಟಿಂಗ್ ವ್ಯವಸ್ಥೆಯಾಗಿ ಪರಿಚಿತವಾಗಿರುವ ಸನ್‌ರೂಫ್ ಬೆಂಗಳೂರಿನಲ್ಲಿ ತನ್ನ ಹೊಸ ಎಕ್ಸ್‌ಪೀರಿಯನ್ಸ್ ಸೆಂಟರ್ ಸ್ಥಾಪಿಸಿದೆ. ಈ ಮೂಲಕ ವೆಲ್‌ನೆಸ್ ಲೈಟಿಂಗ್ ಕ್ಷೇತ್ರದಲ್ಲಿ ಮಹತ್ವದ ಮೈಲುಗಲ್ಲನ್ನು ಸಾಧಿಸಿದೆ ಎಂದು ಸಂಸ್ಥೆಯ ಸಹ ಸಂಸ್ಥಾಪಕ ಇಶಾತ್ ಜೈನ್ ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ದೆಹಲಿ, ಮುಂಬೈ, ಸೂರತ್ ಮತ್ತು ಮೊಹಾಲಿಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳಿಗೆ ಬೆಂಗಳೂರು ಹೊಸ ಸೇರ್ಪಡೆಯಾಗಿದ್ದು, ಮುಂದಿನ ಕೇಂದ್ರವನ್ನು ಹೈದರಾಬಾದ್‌ನಲ್ಲಿ ಆರಂಭಿಸುವ ಯೋಜನೆ ಇದೆ. ನಗರೀಕರಣ ಹೆಚ್ಚುತ್ತಿರುವ ನಡುವೆ ಆಧುನಿಕ ಜೀವನ ಶೈಲಿಯಿಂದ ಮನುಷ್ಯರು ಒಳಾಂಗಣಕ್ಕೆ ಸೀಮಿತ ಆಗಿದ್ದಾರೆ. ಇದು ಮನಸ್ಥಿತಿ ಮತ್ತು ದೈಹಿಕ ಆರೋಗ್ಯದ ಮೇಲೆಯೂ ಪರಿಣಾಮ ಬೀರುತ್ತದೆ. ಇದಕ್ಕೆ ಪರಿಹಾರವಾಗಿ ಸನ್ ರೂಫ್ ಅತ್ಯಾಧುನಿಕ ಆಪ್ಟಿಕ್ಸ್, ವಿಶೇಷ ಲೆನ್ಸ್ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ವ್ಯವಸ್ಥೆಗಳ ಮೂಲಕ ಹೊಸತನ ನೀಡುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಣ್ಣಗಳು ಕಿವಿ ನೋವು, ಸೈನಸ್ ಸೋಂಕಿಗೆ ಕಾರಣ

ಬೆಂಗಳೂರು: ಹೋಳಿ ಹಬ್ಬ ಬಣ್ಣಗಳ, ಸಂಭ್ರಮದ ಮತ್ತು ಸ್ನೇಹದ ಪ್ರತೀಕ. ಆದರೆ ಇದೇ ಬಣ್ಣಗಳ ಸಡಗರವು ಕಿವಿ, ಮೂಗು ಹಾಗೂ ಸೈನಸ್ ಸಂಬಂಧಿತ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದೆಂದು ಎಂದು ವೈದ್ಯೆ ಡಾ.ಸೌಮ್ಯ ಎಂ.ಎಸ್ ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಹೋಳಿ ಸಂದರ್ಭದಲ್ಲಿ ಬಳಸುವ ಕೃತಕ ಬಣ್ಣಗಳಲ್ಲಿ ಕೈಗಾರಿಕಾ ಡೈಗಳು, ಸೀಸ, ತಾಮ್ರದ ಸಲ್ಫೇಟ್, ಕ್ರೋಮಿಯಂ ಮತ್ತು ಮೈಕಾ ಧೂಳಿನಂತಹ ರಾಸಾಯನಿಕಗಳು ಇರುವ ಸಾಧ್ಯತೆ ಇದೆ. ಇವು ಕಿವಿ ಮತ್ತು ಮೂಗಿನ ಒಳಪದರಗಳಿಗೆ ತೀವ್ರ ಕಿರಿಕಿರಿ ಉಂಟುಮಾಡಿ ಉರಿಯೂತ ಹಾಗೂ ಸೋಂಕಿಗೆ ದಾರಿ ಮಾಡಿಕೊಡುತ್ತದೆ ಎಂದರು.

ಒಂದೇ ಬ್ಲಾಕ್‌ನ ಹತ್ತಾರು ಅಭ್ಯರ್ಥಿಗಳು ರ್‍ಯಾಂಕ್ | ಕೆಪಿಎಸ್‌ಸಿ ಮುಖ್ಯ ಪರೀಕ್ಷೆ ಫಲಿತಾಂಶಕ್ಕೆ ಅನುಮಾನ

ಫಲಿತಾಂಶ ಅಕ್ರಮ ಶಂಕೆ: ತನಿಖೆಗೆ ಆಗ್ರಹ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಗೆಜೆಟೆಡ್ ಪ್ರೊಬೇಷನರ್ಸ್ (ಗ್ರೂಪ್ ಎ ಮತ್ತು ಗ್ರೂಪ್ ಬಿ ಹುದ್ದೆಗಳು) ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದೆ. ಒಂದೇ ಬ್ಲಾಕ್‌ನ ಹತ್ತಾರು ಅಭ್ಯರ್ಥಿಗಳು ರ್‍ಯಾಂಕ್ ಪಡೆದಿರುವುದು ಅನುಮಾನಕ್ಕೆ ಕಾರಣವಾಗಿದ್ದು, ಕೂಡಲೇ ತನಿಖೆ ನಡೆಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಈ ಫಲಿತಾಂಶವು ಹಗಲು ದರೋಡೆಯಾಗಿದ್ದು, ಸಮಗ್ರ ತನಿಖೆ ನಡೆಸಬೇಕು. ಮುಂಬರುವ ಯಾವುದೇ ನೇಮಕಾತಿಯನ್ನು ಕೆಪಿಎಸ್‌ಸಿಗೆ ನೀಡಬಾರದು ಎಂದು ಅಭ್ಯರ್ಥಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ಅವರೆಲ್ಲರೂ ನೈಜ ಅಭ್ಯರ್ಥಿಗಳೇ ಆಗಿದ್ದಲ್ಲಿ ಅವರೆಲ್ಲರ ಉತ್ತರ ಪತ್ರಿಕೆಗಳ ಪ್ರತಿ ಎಲ್ಲರಿಗೂ ಸಿಗುವಂತೆ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಅವರು ತೆಗೆದುಕೊಂಡಿರುವ ಮಾಧ್ಯಮವನ್ನು ಕೂಡ ತಿಳಿಸಬೇಕು. ಇಲ್ಲವಾದಲ್ಲಿ ಉಳಿದ ಅಭ್ಯರ್ಥಿಗಳಿಗೆ ವಿಶೇಷವಾಗಿ ಕನ್ನಡ ಮಾಧ್ಯಮದವರಿಗೆ ಅನ್ಯಾಯವಾಗಲಿದೆ ಎಂದು ಒತ್ತಾಯಿಸಿದ್ದಾರೆ. ಇದರ ವಿರುದ್ಧ ಹೋರಾಟವಾಗಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಅಪಾಯಕಾರಿ ಸನ್ನಿವೇಶಗಳು ಎದುರಾಗಲಿವೆ. ಈಗಾಗಲೇ ಕೆಪಿಎಸ್‌ಸಿ ಮಹಾನ್ ಭ್ರಷ್ಟಾಚಾರದ ಮಸಿಯನ್ನು ಮೆತ್ತುಕೊಂಡಿದೆ. ಇದಕ್ಕೆ ಕೆಎಎಸ್ ಪರೀಕ್ಷೆ ಮತ್ತೊಂದು ಸೇರ್ಪಡೆಯಾಗಿದೆ ಅಷ್ಟೇ ಎಂದು ತೀವ್ರ ಬೇಸರ ತೋಡಿಕೊಂಡಿದ್ದಾರೆ. ಪಿಡಿಒ ನೇಮಕಾತಿಯಲ್ಲಿಯೂ ಅಕ್ರಮ ಆರೋಪ.ಕೆಪಿಎಸ್‌ಸಿ ಈ ಹಿಂದೆ ನಡೆಸಿದ ಪಿಡಿಒ ಪರೀಕ್ಷೆಯಲ್ಲಿಯೂ ಅಕ್ರಮ ನಡೆದಿದೆ. ಒಂದೇ ಊರಿನ ಐದು ಮಂದಿ ಆಯ್ಕೆಯಾಗಿದ್ದಾರೆ. ದುರಾದೃಷ್ಟವೆಂದರೆ ಅವರಿಗೆ ಇಂಗ್ಲಿಷ್, ಕಂಪ್ಯೂಟರ್ ಜ್ಞಾನ ಗೊತ್ತಿಲ್ಲ. ಮೆಂಟಲ್ ಎಬಿಲಿಟಿ ಕೂಡ ಅಷ್ಟಕಷ್ಟೇ. ಹೀಗಿದ್ದರೂ ಆಯ್ಕೆಯಾಗಿದ್ದು ಹೇಗೆ ಎಂಬ ಪ್ರಶ್ನೆ ಎದುರಾಗಿದೆ ಎಂದು ಅಭ್ಯರ್ಥಿಗಳು ಸಾಮಾಜಿಕ ತಾಣದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

> ಅಭ್ಯರ್ಥಿಗಳ ಸರಣಿ ಪಟ್ಟಿ ವಿರುದ್ಧ ಹೋರಾಟ ಮಾಡಲು ಸಿದ್ಧತೆ ನಡೆಸಲಾಗುತ್ತಿದೆ. ಯೋಜನೆ ರೂಪಿಸಿ ಶೀಘ್ರವೇ ರಾಜ್ಯಾದ್ಯಂತ ದೊಡ್ಡ ಮಟ್ಟದಲ್ಲಿ ಹೋರಾಟ ಆರಂಭಿಸುತ್ತೇವೆ. ಒಂದು ವೇಳೆ ಅವರೆಲ್ಲರೂ ನೈಜ ಅಭ್ಯರ್ಥಿಗಳಾಗಿದ್ದಲ್ಲಿ ಅವರೆಲ್ಲರ ಉತ್ತರ ಪತ್ರಿಕೆಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು.
> – ಕಾಂತಕುಮಾರ್, ಅಧ್ಯಕ್ಷ ಎಕೆಎಸ್‌ಎಸ್‌ಎ ಸಂಘಟನೆ

ಮುಖ್ಯ ಪರೀಕ್ಷೆ 1:3 ಪಟ್ಟಿ ಪ್ರಕಟ

ಮುಖ್ಯ ಪರೀಕ್ಷೆಯಿಂದ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) ಅರ್ಹರಾದ ಅಭ್ಯರ್ಥಿಗಳ 1:3ರ ಅನುಪಾತದ ಪಟ್ಟಿಯನ್ನು ಕೆಪಿಎಸ್‌ಸಿ ಬಿಡುಗಡೆ ಮಾಡಿದೆ. 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿಗಾಗಿ 2025ರ ಫೆ.13ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಒಟ್ಟು 384 ಹುದ್ದೆಗಳನ್ನು ಈ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಕಳೆದ ವರ್ಷದ ಮೇ 3, 5, 7 ಹಾಗೂ 9ರಂದು ಮುಖ್ಯ ಪರೀಕ್ಷೆಯನ್ನು ನಡೆಸಲಾಗಿತ್ತು. ಅದರಂತೆ, ಉಳಿಕೆ ಮೂಲ ವೃಂದದಲ್ಲಿ 930 ಹಾಗೂ ಹೈದರಾಬಾದ್- ಕರ್ನಾಟಕ ವೃಂದದಲ್ಲಿ 222 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಅರ್ಹರೆಂದು ಕೆಪಿಎಸ್‌ಸಿ ಘೋಷಿಸಿದೆ. ಆದರೆ, ಈ ಪಟ್ಟಿಯು ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳ ಅಂತಿಮ ತೀರ್ಪಿಗೆ ಒಳಪಟ್ಟಿದೆ ಎಂದು ಕೆಪಿಎಸ್‌ಸಿ ಸ್ಪಷ್ಟಪಡಿಸಿದೆ. ಸಂದರ್ಶನದ ವೇಳಾಪಟ್ಟಿಯನ್ನು ಇನ್ನಷ್ಟೇ ಪ್ರಕಟಿಸಬೇಕಿದೆ.

ಮಾ.5ರೊಳಗೆ ಪಟ್ಟಿ ಪ್ರಕಟಿಸಿ, ಬಳಿಕ ಸುಪ್ರೀಂಗೆ ಸಲ್ಲಿಕೆ

ಐದು ಪಾಲಿಕೆಗಳ ಚುನಾವಣಾ ಮೀಸಲು ಪಟ್ಟಿ ಪ್ರಕಟಕ್ಕೆ ಸಿದ್ಧತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣಾ ಮೀಸಲಾತಿ ಪಟ್ಟಿ ಸಿದ್ಧಗೊಂಡಿದ್ದು, ಇನ್ನೆರೆಡು ದಿನದಲ್ಲಿ ಅಂತಿಮ ಪಟ್ಟಿ ಬಿಡುಗಡೆಯಾಗಲಿದೆ. ಐದು ನಗರ ಪಾಲಿಕೆಗಳ 369 ವಾರ್ಡ್‌ಗಳ ಮೀಸಲು ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಮಾ.5ರೊಳಗೆ ಬಿಡುಗಡೆ ಮಾಡಿ ನಂತರ ಸುಪ್ರಿಂಕೋರ್ಟ್‌ಗೆ ಸಲ್ಲಿಸಲು ತೀರ್ಮಾನಿಸಲಾಗಿದೆ.

- ಕರಡು ಪಟ್ಟಿಯಲ್ಲಿ ಶೇ.50ರಷ್ಟು ಮೀಸಲು ಮಹಿಳೆಯರಿಗೆ ನೀಡಿಲ್ಲ
- 369 ವಾರ್ಡ್ ಮೀಸಲಿನಲ್ಲಿ ಮುಗಿಯದ ಗೊಂದಲ

ಈ ಹಿಂದೆ ಬಿಡುಗಡೆ ಮಾಡಲಾಗಿದ್ದ ಕರಡು ಮೀಸಲಾತಿ ಪಟ್ಟಿಗೆ ನೂರಾರು ಆಕ್ಷೇಪಣೆಗಳು ಬಂದಿದ್ದವು. ಹೀಗಾಗಿ ಕೆಲವು ಲೋಪ ದೋಷಗಳನ್ನು ಸರಿಪಡಿಸಿ ಅಂತಿಮ ಪಟ್ಟಿ ಸಿದ್ಧಪಡಿಸಲಾಗಿದೆ. ಕರಡು ಪಟ್ಟಿಯಲ್ಲಿ ಮಹಿಳೆಯರಿಗೆ ಶೇ.50 ರಷ್ಟು ಮೀಸಲಾತಿ ಕಲ್ಪಿಸಲು ಸಾಧ್ಯವಾಗಿರಲಿಲ್ಲ. ಈ ಕುರಿತಂತೆ ಬಂದಿದ್ದ ಆಕ್ಷೇಪಣೆಗಳನ್ನು ನಿವಾರಣೆ ಮಾಡಿ ಅಂತಿಮ ಪಟ್ಟಿಯಲ್ಲಿ ಮಹಿಳೆಯರಿಗೆ ಆಗಿದ್ದ ಅನ್ಯಾಯವನ್ನು ಸರಿಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಐದು ನಗರ ಪಾಲಿಕೆಗಳ 369 ವಾರ್ಡ್‌ಗಳ ಪೈಕಿ ಮಹಿಳೆಯರಿಗೆ 185 ಸ್ಥಾನಗಳನ್ನು ನೀಡಲಾಗಿದೆ ಎಂದು ತಿಳಿದುಬಂದಿದೆ. ಉಳಿದಂತೆ ಕೆಲವು ಪ್ರದೇಶಗಳಿಗೆ ಈ ಹಿಂದೆ ನಿಗದಿಪಡಿಸಿದ್ದ ಮೀಸಲಾತಿಯನ್ನು ಬದಲು ಮಾಡಲಾಗಿದೆ ಎಂದು ವರದಿಯಾಗಿದೆ. ಕೆಲವು ವಾರ್ಡ್‌ಗಳಲ್ಲಿ ಟಿಕೆಟ್ ಕೈ ತಪ್ಪುವ ಸಾಧ್ಯತೆ ಇದೆ ಎಂದು ಕೆಲ ಯುವ ಕಾಂಗ್ರೆಸ್ ಕಾರ್ಯಕರ್ತರು ಪಟ್ಟು ಹಿಡಿದ ಪರಿಣಾಮ ಆಡಳಿತ ಪಕ್ಷಕ್ಕೆ ಅನುಕೂಲವಾಗುವಂತೆ ಕೆಲವು ವಾರ್ಡ್‌ಗಳ ಮೀಸಲಾತಿಯನ್ನು ಬದಲಾಯಿಸಲಾಗಿದೆ ಎನ್ನಲಾಗಿದೆ.

ವಾರ್ಡ್ ವಿಂಗಡಣೆಯೂ ಸಿದ್ಧ

ಅಂತಿಮ ಮೀಸಲಾತಿ ಪಟ್ಟಿ ಜತೆಗೆ ವಾರ್ಡ್ ಪುನರ್ವಿಂಗಡಣೆ ಪಟ್ಟಿಯೂ ಸಿದ್ಧಗೊಂಡಿದ್ದು ಈ ಎರಡು ಪಟ್ಟಿಗಳನ್ನು ಸರಕಾರ ಸುಪ್ರಿಂಕೋರ್ಡ್‌ಗೆ ಸಲ್ಲಿಕೆ ಮಾಡಲಿದೆ ಎಂದು ತಿಳಿದುಬಂದಿದೆ.ಒಂದು ಕಡೆ ಯಾವುದೇ ಪಕ್ಷಗಳಿಗೂ ಜಿಬಿಎ ಚುನಾವಣೆ ಬೇಕಿಲ್ಲದಿದ್ದರೂ ನ್ಯಾಯಾಲಯದ ಒತ್ತಡದಿಂದಾಗಿ ಚುನಾವಣಾ ಕಾರ್ಯಗಳನ್ನು ಮುಂದುವರೆಸಬೇಕಾಗಿದೆ. ಈ ಕಾನೂನು ಒತ್ತಡಗಳ ನಡುವೇಯೂ ಏನಾದರೂ ಮಾಡಿ ಜಿಬಿಎ ಚುನಾವಣೆಗಳನ್ನು ಮುಂದೂಡಬೇಕು ಎಂಬ ಪ್ರಯತ್ನಗಳು ಮುಂದುವರೆದಿವೆ.

ಸಿಎಂಗೆ ತಮ್ಮದೇ ಶಾಸಕರ ಮೇಲೆ ನಂಬಿಕೆ ಇಲ್ಲ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಮ್ಮದೇ ಪಕ್ಷದ ಶಾಸಕರ ಮೇಲೆ ನಂಬಿಕೆ ಇಲ್ಲದ ಕಾರಣ ಅವರ ಚಲನವಲನಗಳ ಬಗ್ಗೆ ಗುಪ್ತಚರ ವಿಭಾಗದ ಮೂಲಕ ಮಾಹಿತಿ ಕಲೆ ಹಾಕಲು ಮುಂದಾಗಿರಬಹುದೆಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಸಂಶಯ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಯಾರಿಗೆ ಸಚಿವರು ಮತ್ತು ಶಾಸಕರ ಮೇಲೆ ನಂಬಿಕೆ ಇರುವುದಿಲ್ಲವೋ ಅಂಥವರ ಮೇಲೆ ಅವರ ಚಟುವಟಿಕೆಗಳ ಕುರಿತು ಗುಪ್ತಚರ ಇಲ್ಲವೇ ತಮದೇ ಆಂತರಿಕ ಮೂಲಗಳಿಂದ ಮಾಹಿತಿ ಕಲೆ ಹಾಕುತ್ತಾರೆ. ಈಗ ಮುಖ್ಯಮಂತ್ರಿಗಳ ಪರಿಸ್ಥಿತಿಯೂ ಅದೇ ಆಗಿರಬಹುದು ಎಂದು ಹೇಳಿದರು.

> ಇರಾನ್ ಯುದ್ಧದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನಡೆಗೆ ವಿಪಕ್ಷಗಳು ಟೀಕೆ ಮಾಡುತ್ತಿರುವ ಕುರಿತ ಮಾತನಾಡಿ, ಭಾರತ ಅಲಿಪ್ತ ನೀತಿಗೆ ತಿಲಾಂಜಲಿ ಹಾಡಿಲ್ಲ. ರಾಷ್ಟ್ರದ ಹಿತಾಸಕ್ತಿಗೆ ಅನುಗುಣವಾಗಿ ಕಾಲಕಾಲಕ್ಕೆ ನಿರ್ಧಾರ ತಗೊಳ್ಳುತ್ತದೆ. ಕಾಂಗ್ರೆಸ್‌ಗೆ ಭಾರತದ ಹಿತಾಸಕ್ತಿಗಿಂತ ಅದರ ಹಿತಾಸಕ್ತಿ ಮುಖ್ಯವಾಗಿದೆ. ರಾಜಕೀಯ ದೃಷ್ಟಿ, ರಾಜಕೀಯ ಲಾಭ ಇಟ್ಟುಕೊಂಡು ಕಾಂಗ್ರೆಸ್ ಮಾತಾಡುತ್ತದೆ. ಅದಕ್ಕೆ ತನ್ನ ವೋಟ್ ಬ್ಯಾಂಕ್ ಮುಖ್ಯ. ಬಿಜೆಪಿ ಭಾರತದ ಪರ ನಿಲುವು ತೆಗೆದುಕೊಳ್ಳುವ ಪಕ್ಷ .
> -ಸಿ.ಟಿ.ರವಿ. ಪರಿಷತ್ ಸದಸ್ಯ

ಸರಕಾರ ಉಳಿಸಿಕೊಳ್ಳಲು ಅಥವಾ ಕುರ್ಚಿ ಉಳಿಸಿಕೊಳ್ಳಲು ಗೂಢಚಾರಿಕೆ ಅಥವಾ ಫೋನ್ ಟ್ಯಾಪಿಂಗ್ ಸಿಎಂಗೆ ಅನಿವಾರ್ಯ ಇರಬಹುದು. ಆದರೆ ಜನ ನಿಮ್ಮ ಸರಕಾರದ ಬಗ್ಗೆ ಏನು ಹೇಳುತ್ತಿದ್ದಾರೆ ಎಂಬುದನ್ನು ಸಿಎಂ ತಿಳಿದುಕೊಳ್ಳಲಿ. ಜನ ಈ ಸರಕಾರದ ಮೇಲೆ ಬೇಸರಗೊಂಡಿದ್ದಾರೆ. ಜನಾಭಿಪ್ರಾಯ ತಿಳಿಯಲು ಗೂಢಚಾರಿಕೆ ಅಥವಾ ಫೋನ್ ಟ್ಯಾಪಿಂಗ್ ಅಗತ್ಯ ಇಲ್ಲ. ಜನ ಏನು ಹೇಳುತ್ತಾರೆ ಅಂತ ಕಿವಿ ತೆರೆದು ಕೇಳಿಸಿಕೊಂಡರೆ ಸಾಕು ಎಚ್.ಡಿ.ಕುಮಾರಸ್ವಾಮಿ ಮತ್ತು ಅಶೋಕ ಫೋನ್ ಟ್ಯಾಪಿಂಗ್ ಆಗುತ್ತಿದೆ ಎಂದಿದ್ದಾರೆ. ಅವರಿಗೆ ಅದರ ಬಗ್ಗೆ ಮಾಹಿತಿ ಇರಬಹುದು. ಆದರೆ ಸಿಎಂಗೆ ಜನರ ನಾಡಿಮಿಡಿತ ತಿಳಿದಿರಬೇಕು ಎಂದರು.

ಸಿಟಿ ಸಿವಿಲ್ ಕೋರ್ಟ್‌ಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ಸಿಟಿ ಸಿವಿಲ್ ಕೋರ್ಟ್ ಆವರಣವನ್ನು ಸ್ಫೋಟಿಸುವುದಾಗಿ ಅಪರಿಚಿತರು ಇ-ಮೇಲ್ ಮೂಲಕ ಬೆದರಿಕೆ ಹಾಕಿದ್ದಾರೆ. ಇದರಿಂದ ಎಚ್ಚೆತ್ತುಕೊಂಡ ಪೊಲೀಸರು ಮತ್ತು ಭದ್ರತಾ ಪಡೆಗಳು ಇಡೀ ಕೋರ್ಟ್ ಆವರಣವನ್ನು ಜಾಲಾಡಿದ್ದು, ಅಂತಿಮವಾಗಿ ಇದೊಂದು ಹುಸಿ ಬಾಂಬ್ ಬೆದರಿಕೆ ಎಂದು ದೃಢಪಟ್ಟಿದೆ. ಮಂಗಳವಾರ ಬೆಳಗ್ಗೆ ಕೋರ್ಟ್ ಅಧಿಕೃತ ಇ ಮೇಲ್ ವಿಳಾಸಕ್ಕೆ ಸಂದೇಶ ಬಂದಿತ್ತು. ಇನ್ನು ಈ ಬೆದರಿಕೆ ಇ ಮೇಲ್ ತಮಿಳು ಭಾಷೆಯಲ್ಲಿದೆ. ಸುದ್ದಿ ತಿಳಿಯುತ್ತಿದ್ದಂತೆ ಹಲಸೂರು ಗೇಟ್ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿದರು. ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳದೊಂದಿಗೆ ಕೋರ್ಟ್‌ನ ಪ್ರತಿ ಕೊಠಡಿ, ಕಾರಿಡಾರ್ ಮತ್ತು ಪಾರ್ಕಿಂಗ್ ಪ್ರದೇಶಗಳಲ್ಲಿ ತೀವ್ರ ಶೋಧ ನಡೆಸಲಾಯಿತು. ಸುದೀರ್ಘ ಪರಿಶೀಲನೆಯ ನಂತರ ಯಾವುದೇ ಅನುಮಾನಾಸ್ಪದ ವಸ್ತುಗಳು ಅಥವಾ ಸ್ಫೋಟಕಗಳು ಪತ್ತೆಯಾಗಿಲ್ಲ. ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸಲು ಕಿಡಿಗೇಡಿಗಳು ಈ ರೀತಿ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಇ ಮೇಲ್ ಕಳುಹಿಸಿದ ಕಿಡಿಗೇಡಿಗಳ ಪತ್ತೆಗಾಗಿ ಸೈಬರ್ ಕ್ರೈಂ ವಿಭಾಗದ ನೆರವು ಪಡೆಯಲಾಗುತ್ತಿದೆ. ಹಲಸೂರು ಗೇಟ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

ಕನ್ನಡ ಭಾಷೆ ಜನರಿಗೋಸ್ಕರ ಉಳಿಯಬೇಕು

ಬೆಂಗಳೂರು: ಯಶವಂತಪುರ ವಿಧಾನಸಭಾ ಕ್ಷೇತ್ರದ ಕಸಾಪ ವತಿಯಿಂದ ನಗರದ ಯಶವಂತಪುರದ ಭುವನೇಶ್ವರಿ ನಗರದಲ್ಲಿ ಮಂಗಳವಾರ ಸಾಹಿತಿ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಹೆಸರಿನ ರಸ್ತೆಯ ನಾಮಫಲಕ ಅನಾವರಣಗೊಳಿಸಲಾಯಿತು.

ಈ ವೇಳೆ ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಭಾಷೆ ಮತ್ತು ಕನ್ನಡ. ಜನರಿಗೋಸ್ಕರ ಉಳಿಯಬೇಕು. ಕನ್ನಡ ಉಳಿಸಿ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು. ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ, ಯಾವುದೇ ಪ್ರಶಸ್ತಿಗೆ ಆಸೆ ಪಟ್ಟವನಲ್ಲ ಜನರ ಪ್ರೀತಿಗೆ ಅಂಬಲಿಸಿದ ಸಾಮಾನ್ಯ ವ್ಯಕ್ತಿಯಾಗಿ ಬಂದವನು, ಪೋಷಕರು ಮಕ್ಕಳಿಗೆ ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಬೇಕು.

ಉತ್ತಮ ಪುಸ್ತಕ ಶ್ರೇಷ್ಠವಾದ ಮನಸ್ಸು ಹೊಂದಿರುವ ಒಬ್ಬ ಸ್ನೇಹಿತ ಇದ್ದಂತೆ, ಮಕ್ಕಳಿಗೆ ಸಂಸ್ಕಾರದ ಜತೆಗೆ ಸಂಸ್ಕೃತಿ ಕಲಿಸುವ ಜವಾಬ್ದಾರಿ ಪೋಷಕರ ಮೇಲಿದೆ ಎಂದರು. ಯಶವಂತಪುರ ವಿಧಾನಸಭಾ ಕ್ಷೇತ್ರದ ಕಸಾಪ ಅಧ್ಯಕ್ಷ ಎಚ್.ಎಸ್.ಸುಧೀಂದ್ರ ಕುಮಾರ್ ಮಾತನಾಡಿ, ಕನ್ನಡಕ್ಕೆ ಹಿಡಿದಿರುವ ಗ್ರಹಣವನ್ನು ದೂರ ಮಾಡುವ ಮೂಲಕ ಕನ್ನಡ ನಾಡು ನುಡಿ ಭಾಷೆ ಸಂಸ್ಕೃತಿಯನ್ನು ಪಸರಿಸುವ ನಿಟ್ಟಿನಲ್ಲಿ ಕಸಾಪ ದೃಢ ಹೆಜ್ಜೆ ಇಟ್ಟಿದೆ ಎಂದರು.

ಸಾಹಿತಿ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಹೆಸರಿನ ರಸ್ತೆಯ ನಾಮಫಲಕ ಅನಾವರಣಗೊಳಿಸಲಾಯಿತು. ಈ ವೇಳೆ ವೇಳೆ ಶಾಸಕ ಎಸ್.ಟಿ. ಸೋಮಶೇಖರ್, ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಯಶವಂತಪುರ ವಿಧಾನಸಭಾ ಕ್ಷೇತ್ರದ ಕಸಾಪ ಅಧ್ಯಕ್ಷ ಎಚ್.ಎಸ್.ಸುಧೀಂದ್ರ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಸ್ಕಾಂ ವಾಟ್ಸ್‌ಆಪ್ ಸೇವೆ ಆರಂಭ

ಬೆಂಗಳೂರು: ವಿದ್ಯುತ್ ಪೂರೈಕೆ ಸಂಬಂಧಿತ ದೂರುಗಳ ತ್ವರಿತ ಪರಿಹಾ ರಕ್ಕಾಗಿ ಬೆಸ್ಕಾಂ 11 ವಾಟ್ಸ್‌ಆಪ್ ಸಹಾ ಯವಾಣಿ ಸಂಖ್ಯೆಗಳ ಸೇವೆಯನ್ನು ಆರಂಭಿಸಿದೆ. ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳ ಗ್ರಾಹಕರು ತಮ್ಮ ಪ್ರದೇಶಕ್ಕೆ ಸಂಬಂಧಿಸಿದ ವಾಟ್ಸ್‌ಆಪ್ ಸಂಖ್ಯೆಗೆ ಸಂದೇಶ ಕಳುಹಿಸುವ ಮೂಲಕ ದೂರುಗಳನ್ನು ದಾಖಲಿಸಬಹುದು ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಇತ್ತೀಚಿನ ದಿನಗಳಲ್ಲಿ 24★7 ಸಹಾ ಯವಾಣಿ ಸಂಖ್ಯೆ 1912 ಗೆ ಹೆಚ್ಚಿನ ಕರೆಗಳು ಬರುತ್ತಿ ರುವುದರಿಂದ ಕೆಲವೊಮ್ಮೆ ಸಂಪರ್ಕ ಸಾಧ್ಯವಾಗದ ಸಮಸ್ಯೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ವಾಟ್ಸ್‌ಆಪ್ ಸಹಾಯವಾಣಿ ಸೇವೆ ಪರಿಚಯಿಸಲಾಗಿದೆ. ಗ್ರಾಹಕರು ವಿದ್ಯುತ್ ವ್ಯತ್ಯಯ, ತಂತಿ ಕಳಚುವುದು, ಟ್ರಾನ್ಸ್‌ಫಾರ್ಮರ್ ದೋಷ ಸೇರಿದಂತೆ ಇತರೆ ಸಮಸ್ಯೆಗಳ ಕುರಿತು ತಮ್ಮ ಪ್ರದೇಶದ ವಾಟ್ಸ್‌ಆಪ್ ಸಂಖ್ಯೆಗೆ ಸಂದೇಶದ ಜತೆಗೆ ಫೋಟೋ ಮತ್ತು ವಿಡಿಯೊಗಳನ್ನು ಕಳುಹಿಸಬಹುದು. ಸಂಬಂಧಿತ ಅಧಿಕಾ ರಿಗಳು ದೂರುಗಳನ್ನು ಪರಿಶೀಲಿಸಿ ಶೀಘ್ರ ಕ್ರಮ ಕೈಗೊಳ್ಳಲಿದ್ದಾರೆ.

ಜಿಲ್ಲಾವಾರು ವಾಟ್ಸ್‌ಆಪ್ ಸಂಖ್ಯೆಗಳು

ಬೆಂಗಳೂರು ನಗರ ಜಿಲ್ಲೆ: ದಕ್ಷಿಣ ವೃತ್ತ 8277884011, ಪಶ್ಚಿಮ ವೃತ್ತ 8277884012, ಪೂರ್ವ ವೃತ್ತ 8277884013, ಉತ್ತರ ವೃತ್ತ 8277884014. ಇತರೆ ಜಿಲ್ಲೆಗಳಾದ ಕೋಲಾರ 8277884015, ಚಿಕ್ಕಬಳ್ಳಾಪುರ 8277884016, ಬೆಂಗಳೂರು ಗ್ರಾಮಾಂತರ 8277884017, ರಾಮನಗರ 8277884018, ತುಮಕೂರು 8277884019, ಚಿತ್ರದುರ್ಗ 8277884020, ದಾವಣಗೆರೆ 8277884021.

ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರೈಸಿದ ಹಿನ್ನೆಲೆ ಡಿಸಿಎಂ ಡಿಕೆಶಿ ಡಿನ್ನರ್ ಸಭೆ

ಸಿಎಂ, ಎಲ್ಲ ಶಾಸಕರಿಗೆ ಡಿನ್ನರ್ ಸಭೆಗೆ ಆಹ್ವಾನ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ನಾಯಕತ್ವ ಗೊಂದಲದ ನಡುವೆಯೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾ.10ರಂದು ಡಿನ್ನರ್ ಆಯೋಜಿಸಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಡಿಕೆಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಮಾರ್ಚ್ 10ಕ್ಕೆ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಡಿನ್ನರ್ ಪಾರ್ಟಿ ಆಯೋಜಿಸಲಾಗಿದೆ. ಆರಂಭದಲ್ಲಿ ಈ ಔತಣಕೂಟವನ್ನು ಶಕ್ತಿ ಪ್ರದರ್ಶನ ಎನ್ನಲಾಗಿತ್ತು. ಆದರೆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಲ್ಲ ಶಾಸಕರು, ಸಚಿವರಿಗೂ ಆಹ್ವಾನ ನೀಡಲಾಗಿದೆ ಎಂದು ಸ್ವತಃ ಡಿ.ಕೆ.ಶಿವಕುಮಾರ್ ಹೇಳುವ ಮೂಲಕ ವಿವಾದಕ್ಕೆ ತೆರೆ ಎಳೆದಿದ್ದಾರೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸುದ್ದಿಗಾರರು ಡಿ.ಕೆ.ಶಿವಕುಮಾರ್ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಪರಮೇಶ್ವರ್ ಅವರ ದಾಖಲೆ ಮುರಿಯುತ್ತೀರಾ ಎಂದು ಕೇಳಿದಾಗ, ಹೊಸ ರಕ್ತ ಬರಬೇಕು. ಹೊಸ ಆಲೋಚನೆ ಬರಬೇಕು. ನಾವೆಲ್ಲಾ ಮೊದಲ ಬಾರಿ ಶಾಸಕರಾದಾಗಲೇ ಮಂತ್ರಿಯಾದವರು. ನಾನು ಪರಮೇಶ್ವರ್ ಅವರು, ಎಚ್.ಕೆ ಪಾಟೀಲ್, ರಾಮಲಿಂಗಾ ರೆಡ್ಡಿ, ಎಲ್ಲರೂ ಮಂತ್ರಿಯಾದವರೇ. ನಾವಿಗ ಹಿರಿಯ ನಾಗರಿಕರಾಗಿದ್ದೇವೆ. ಹೊಸಬರು ಬರಲಿ. ನನಗೆ ಆರು ವರ್ಷ ಸಾಕು ಎಂದರು.

ನಾನು ಸ್ಟ್ರೀಟ್ ಫೈಟರ್, ಹೇಗೆ ಹೋರಾಟ ಮಾಡಬೇಕು ಎಂದು ನನಗೆ ಗೊತ್ತಿದೆ. ನನ್ನ ಹೋರಾಟ ಅಧಿಕಾರಕ್ಕಾಗಿ ಅಲ್ಲ, ಪಕ್ಷದ ಒಳಗಲ್ಲ, ನನ್ನ ಹೋರಾಟ ಪಕ್ಷದ ಹೊರಗೆ. ನಾನು ಸುಮ್ಮನಾಗಿದ್ದೇನೆ ಎಂದು ಭಾವಿಸಿದರೆ ಅದು ಅವರಿಗೆ ಬಿಟ್ಟ ವಿಚಾರ. ನಾನು ಪ್ರಯತ್ನ ಮಾಡುವ ಅಗತ್ಯವಿಲ್ಲ. ನನಗೆ ಯಾವಾಗ ಯಾವುದು ಬರಬೇಕೋ ಅದು ಬರುತ್ತದೆ. ಆ ಆತ್ಮವಿಶ್ವಾಸ ನನಗಿದೆ. ಸಧ್ಯದಲ್ಲೇ ನಾನು ನಿಮ್ಮನ್ನು ಭೇಟಿ ಮಾಡುತ್ತೇನೆ ಎಂದು ತಿಳಿಸಿದರು.

ಶೇ17ರಷ್ಟು ಎಸ್‌ಸಿ ಮೀಸಲಾತಿಯಲ್ಲಿ 6:6:5ರಂತೆ ವರ್ಗೀಕರಣ | ರಾಜ್ಯಪಾಲರು ಮಸೂದೆಗೆ ಅಂಕಿತ

ಮೀಸಲಾತಿ ವಿಂಗಡಣೆ ಸಂಪುಟದಲ್ಲಿ ತೀರ್ಮಾನ: ಮುನಿಯಪ್ಪ

ಬೆಂಗಳೂರು: ಮಾ.5ರಂದು ನಡೆಯುವ ಸಂಪುಟ ಸಭೆಯಲ್ಲಿ ಒಳಮೀಸಲಾತಿಯೊಂದಿಗೆ ನೇಮಕ ಆದೇಶ ಹೊರಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 35-40 ವರ್ಷದ ಹೋರಾಟ ಇದಾಗಿದೆ. ಸರಕಾರ ಸುಪ್ರೀಂಕೋರ್ಟ್ ತೀರ್ಮಾನದಿಂದಾಗಿ ಒಳಮೀಸಲಾತಿ ಕಲ್ಪಿಸಲು ಮುಂದಾಗಿದೆ. ಒಳಮೀಸಲಾತಿ ವರದಿ ಬಂದ ಬಳಿಕ ಎಸ್‌ಸಿ, ಎಸ್‌ಟಿ ವಿಭಾಗದ ನಾಯಕರು ಅಧ್ಯಯನ ಮಾಡಿ ಸಮ್ಮತಕ್ಕೆ ಬಂದಿದ್ದೆವು. ಶೇ17ರಷ್ಟು ಎಸ್‌ಸಿ ಮೀಸಲಾತಿಯಲ್ಲಿ 6:6:5 ರಂತೆ ವರ್ಗೀಕರಣ ಮಾಡಲು ತೀರ್ಮಾನ ಆಯಿತು. ಈ ಸಂಬಂಧ ರಾಜ್ಯಪಾಲರು ಮಸೂದೆಗೆ ಅಂಕಿತ ಹಾಕಿದ್ದಾರೆ. ಫೆ.26ರ ಸಚಿವ ಸಂಪುಟ ಸಭೆಯಲ್ಲಿ ಧಾರವಾಡದಲ್ಲಿ ಜನರಲ್ ಅಭ್ಯರ್ಥಿಗಳು ನೇಮಕಾತಿ ಮಾಡುವಂತೆ ಹೋರಾಟ ಮಾಡಿರುವ ಬಗ್ಗೆ ಚರ್ಚಿಸಲಾಯಿತು. ಈ ಸಂಬಂಧ ಸಿಎಂ ಸಿದ್ದರಾಮಯ್ಯ ಎಸ್‌ಸಿ, ಎಸ್‌ಟಿ ಸಭೆ ನಡೆಸಿದರು. ನೇಮಕಾತಿ ಆರಂಭಿಸುವಂತೆ ಆ ಸಭೆಯಲ್ಲಿ ತೀರ್ಮಾನಿಸಲಾಯಿತು. ಆಗ ನಾವು ಒಳಮೀಸಲಾತಿ ಅಳವಡಿಸಿ ನೇಮಕಾತಿ ಮಾಡಿವಂತೆ ಬೇಡಿಕೆ ಇಟ್ಟಿದ್ದೆವು ಎಂದರು.

ಸುದ್ದಿಗೋಷ್ಠಿಯಲ್ಲಿ ಸಚಿವ ಕೆ.ಎಚ್.ಮುನಿಯಪ್ಪ ಮಾತನಾಡಿದರು.

ಗೊಂದಲ ನಿವಾರಿಸುವ ಭರವಸೆ

ಸಚಿವ ಆರ್.ಬಿ. ತಿಮ್ಮಾಪುರ ಮಾತನಾಡಿ, ಪ್ರಣಾಳಿಕೆಯಲ್ಲಿ ಒಳಮೀಸಲಾತಿ ಕೊಡುವುದಾಗಿ ಭರವಸೆ ನೀಡಿದ್ದೆವು. ಅದರಂತೆ ಕಾನೂನು ರಚಿಸಿ ವಿಧಾನಸಭೆಯಲ್ಲಿ ಸರ್ವಾನುಮತದಿಂದ ಅಂಗೀಕಾರ ಆಯಿತು. ಮೊನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ ನೇಮಕಾತಿ ಆರಂಭಿಸುವ ಬಗ್ಗೆ ತೀರ್ಮಾನ ಆಯಿತು. ಆದರೆ, ನೇಮಕಾತಿ ಆದೇಶದಲ್ಲಿ ಒಳಮೀಸಲಾತಿ ಅಂಶ ಚಇದ್ದಿಲ್ಲ. ಈ ಬಗ್ಗೆ ಗೊಂದಲ ನಿವಾರಣೆ ಬಗ್ಗೆ ಚರ್ಚಿಸಿ ತೀರ್ಮಾನಿಸೋಣ ಎಂದು ಸಿಎಂ ಭರವಸೆ ನೀಡಿದ್ದಾರೆ. ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಆಗಲಿದೆ ಎಂಬ ಭರವಸೆ ಇದೆ. ಸಮುದಾಯದವರು ಗಲಾಟೆ ಮಾಡುವುದು, ಗೊಂದಲ ಸೃಷ್ಟಿಸುವುದು ಬೇಡ. ಸರಕಾರ ಸಮುದಾಯದ ಪರವಾಗಿ ತೀರ್ಮಾನ ಕೈಗೊಳ್ಳಲಿದೆ ಎಂದರು.

ಸಂಪುಟ ಸಭೆಯಲ್ಲಿ ಕೋರ್ಟ್ ಆದೇಶಕ್ಕೆ ಒಳಪಟ್ಟು ಒಳಮೀಸಲಾತಿಯೊಂದಿಗೆ ನೇಮಕಾತಿ ಮಾಡಲು ಒತ್ತಾಯಿಸಿದ್ದೆವು. ಆದರೆ, ಕಾರಣಾಂತರದಿಂದ ಅದು ಆಗಲಿಲ್ಲ. ಒಳಮೀಸಲಾತಿ ಬಿಟ್ಟು ನೇಮಕಾತಿ ಮಾಡುವ ಸಂಬಂಧ ಆದೇಶ ಹೊರಡಿಸಲಾಗಿದೆ. ಈ ಆದೇಶದಿಂದ ನಮಗೆ ಆಘಾತವಾಗಿದೆ. ಸರಕಾರ ತೆಗೆದುಕೊಂಡ ತೀರ್ಮಾನವನ್ನು ಉಲ್ಟಾವಾಗುವ ತೀರ್ಮಾನ ಆಯಿತಲ್ಲ ಎಂಬ ಬಗ್ಗೆ ನಮಗೆ ಬೇಸರ ಇದೆ ಎಂದು ವಿಷಾದಿಸಿದರು.

ನೇಮಕಾತಿ ಪ್ರಕ್ರಿಯೆ ನಡೆಯಲಿ ಎಂದು ಕೋರ್ಟ್ ಹೇಳಿತ್ತು. ಅಲೆಮಾರಿ ಸಮುದಾಯಕ್ಕೆ ಶೇ1ರಷ್ಟು ಮೀಸಲಾತಿ ಸಂಬಂಧ ಆಮೇಲೆ ತೀರ್ಮಾನ ಕೈಗೊಳ್ಳಲಾಗುವುದು ಎಂದಿತ್ತು. ಈ ಸಂಬಂಧ ಎಜಿಯವರನ್ನು ಭೇಟಿ ಮಾಡಿದ್ದೇವೆ. ಒಳಮೀಸಲಾತಿ ಅನುಷ್ಠಾನಕ್ಕೆ ಯಾವುದೇ ತಕರಾರಿಲ್ಲ ಎಂದಿದ್ದಾರೆ.

> ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು ಪರಿಶಿಷ್ಟ ಜಾತಿಗಳಿಗೆ ಶೇ.2 ಹಾಗೂ ಪರಿಶಿಷ್ಟ ಪಂಗಡಗಳಿಗೆ ಶೇ.4 ಹುದ್ದೆಗಳನ್ನು ಪ್ರತ್ಯೇಕವಾಗಿ ಪರಿಗಣಿಸುವ ಕುರಿತು ಸ್ಪಷ್ಟ ನಿರ್ದೇಶನ ನೀಡಬೇಕು. ಒಳ ಮೀಸಲಾತಿ ನ್ಯಾಯವನ್ನು ಕಾರ್ಯರೂಪಕ್ಕೆ ತರಲು ಸರಕಾರ ತಕ್ಷಣ ಕ್ರಮ ವಹಿಸಬೇಕೆಂಬ ಹಕ್ಕೋತ್ತಾಯ ಮಂಡಿಸಲಾಗಿದೆ.
> -ಕೆ.ಎಚ್. ಮುನಿಯಪ್ಪ, ಸಚಿವ

> ಫೆ.26 ನಡೆದ ಸಂಪುಟ ಸಭೆಯಲ್ಲಿ ನೇಮಕಾತಿ ಮಾಡಲು ತೀರ್ಮಾನ ಮಾಡಲಾಗಿದೆ. ಆದರೆ, ನೇಮಕಾತಿ ಆದೇಶ ದುರದೃಷ್ಟಕರವಾಗಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ನೀವೇ ಭರವಸೆ ನೀಡಿದ್ದೀರಿ. ಶಾಸನಬದ್ಧವಾಗಿ ಒಳಮೀಸಲಾತಿ ಅನುಷ್ಠಾನ ಆಗಿದೆ. ಈಗ ದಿಢೀರ್ ಶೇ56ಕ್ಕೆ ಮೀಸಲಾತಿ ಮಾಡಲು ಆಗಲ್ಲ ಎಂದಿದ್ದಾರೆ. ಈಗ ನಮಗೆ ಅನ್ಯಾಯವಾಗಿದೆ. ನಮಗೆ ನ್ಯಾಯ ಸಿಗಬೇಕು.
> – ಎಚ್. ಆಂಜನೇಯ, ಮಾಜಿ ಸಚಿವ

ಮುಂದಿನ ಸಂಪುಟ ಸಭೆಯಲ್ಲಿ ಆದೇಶ ಪರಿಷ್ಕರಣೆ ಮಾಡಿ ತೀರ್ಮಾನಿಸುವುದಾಗಿ ಸಿಎಂ ಭರವಸೆ ನೀಡಿದ್ದಾರೆ. ಈಗ ಮಾ.5ರಂದು ನಡೆಯುವ ಸಂಪುಟ ಸಭೆಯಲ್ಲಿ ಈ ವಿಚಾರದ ಬಗ್ಗೆ ಚರ್ಚಿಸಿ ತೀರ್ಮಾನಿಸಲು ನಿರ್ಧರಿಸಲಾಗಿದೆ. ಶೇ 15ರಷ್ಟು ಮೀಸಲಾತಿಯೊಳಗೆ ವರ್ಗೀಕರಣ ಮಾಡಿ ಒಳಮೀಸಲಾತಿ ಕೊಡಲು ನಿರ್ಧರಿಸಲಾಗುವುದು. ಅದಕ್ಕನುಗುಣವಾಗಿ ಯಾವ ಪ್ರಮಾಣದಲ್ಲಿ ವರ್ಗೀಕರಣ ಪರಿಷ್ಕರಣೆ ಮಾಡಲಾಗುವುದು ಎಂಬ ಬಗ್ಗೆ ಸಚಿವ ಸಂಪುಟ ತೀರ್ಮಾನಿಸಲಿದೆ ಎಂದರು.

ಕೇಸ್ ರದ್ಧತಿಗೆ ಸಲ್ಲಿಸಿದ್ದ ಅರ್ಜಿ ಹಿಂದಕ್ಕೆ | ಮಾ.6ಕ್ಕೆ ಜಾಮೀನು ಅರ್ಜಿ ವಿಚಾರಣೆ

ಮುತ್ಯಾ ವಿರುದ್ಧದ ಪೋಕ್ಸೊ ಕೇಸ್‌ಗೆ ಟ್ವಿಸ್ಟ್

ಯಾದಗಿರಿ: ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದು ಮಾಡಲು ಕಲಬುರಗಿ ಹೈಕೋರ್ಟ್ ಪೀಠದಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಮುತ್ಯಾ ಪರ ವಕೀಲರು ಹಿಂಪಡೆದುಕೊಂಡಿದ್ದಾರೆ ಎನ್ನಲಾಗಿದ್ದು, ಮುತ್ಯಾ ಇದೀಗ ಏಕಾಏಕಿ ಯುಟರ್ನ್ ಹೊಡಿದಿರುವ ಕುರಿತು ಭಾರೀ ಕುತೂಹಲ ಮೂಡಿಸಿದೆ.

ಏತನ್ಮಧ್ಯೆ ಮಲ್ಲಿಕಾರ್ಜುನ ಮುತ್ಯಾ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯನ್ನು ಸಹ ಯಾದಗಿರಿ ಜಿಲ್ಲಾ ಮತ್ತು ಪ್ರಧಾನ ಸತ್ರಾ ನ್ಯಾಯಾಲಯ ಮಾರ್ಚ್ 6ಕ್ಕೆ ಮುಂದೂಡಿದೆ. ನಿರೀಕ್ಷಣಾ ಜಾಮೀನು ಅರ್ಜಿಗೆ ಸರಕಾರದ ಪರ ವಕೀಲರಿಂದ ಆಕ್ಷೇಪಣೆ ಹಿನ್ನೆಲೆಯಲ್ಲಿ ಮಾರ್ಚ್ 6ಕ್ಕೆ ವಿಚಾರಣೆಯನ್ನು ಮುಂದೂಡಿದೆ ಎಂದು ತಿಳಿದುಬಂದಿದೆ.

ಸಂತ್ರಸ್ತ ಬಾಲಕಿ ಹೇಳಿಕೆ ದಾಖಲು: ಮಲ್ಲಿಕಾರ್ಜುನ ಮುತ್ಯಾ ವಿರುದ್ಧದ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತ ಬಾಲಕಿ ನೀಡಿದ ಹೇಳಿಕೆಯನ್ನು ಶಹಾಪುರ ಜೆಎಂಸಿ ಕೋರ್ಟ್ ಜಡ್ಜ್ ದಾಖಲಿಸಿಕೊಂಡಿದ್ದಾರೆ. ಬಳಿಕ ಬಾಲಕಿ ಹೇಳಿಕೆಯ ದಾಖಲು ಪ್ರತಿಯನ್ನು ಮುಚ್ಚಿದ ಲಕೋಟೆಯಲ್ಲಿ ತನಿಖಾಧಿಕಾರಿಗೆ ಸಲ್ಲಿಸಲಾಗುತ್ತದೆ. ಹೀಗಾಗಿ ಬಾಲಕಿ ನೀಡಿರುವ ಹೇಳಿಕೆ ಮೇಲೆ ಮಲ್ಲಿಕಾರ್ಜುನ ಮುತ್ಯಾನ ಭವಿಷ್ಯ ನಿರ್ಧಾರ ಆಗಲಿದೆ ಎನ್ನಲಾಗಿದೆ. ಈ ನಡುವೆ ಪ್ರಕರಣದ ವರದಿಯನ್ನು ನೀಡುವಂತೆ ಹೈಕೋರ್ಟ್ ಬಾಲ ನ್ಯಾಯ ಸಮಿತಿಯ ಉಪ ಕಾರ್ಯದರ್ಶಿಗಳು, ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸೇರಿ ಜಿಲ್ಲಾ ಕಾನೂನು ಸೇವಾ ಸಮಿತಿ, ಎಸ್ಪಿ ಯಾದಗಿರಿ ಸೇರಿ 8 ವಿವಿಧ ಇಲಾಖೆಗಳಿಗೆ ಶೀಘ್ರ ವರದಿ ನೀಡಲು ತಿಳಿಸಿದೆ.

ಬಾಲಕಿಯನ್ನು ಗುರುತಿಸಬಹುದಾದ ವಿಡಿಯೊ ಹಂಚಿಕೊಂಡರೆ ಕಾನೂನು ಕ್ರಮ: ಎಸ್‌ಪಿ ಎಚ್ಚರಿಕೆ

ಮಲ್ಲಿಕಾರ್ಜುನ ಮುತ್ಯಾ ವಿರುದ್ಧದ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಕಿಯನ್ನು ಗುರುತಿಸಬಹುದಾದ ಯಾವುದೇ ಮಾಹಿತಿಯನ್ನು ಮತ್ತು ಬಾಲಕಿಯ ಕುಟುಂಬ

ಸದಸ್ಯರನ್ನು ಒಳಗೊಂಡ ಫೋಟೊ ಹಾಗೂ ಸಂಗ್ರಹಿಸಿ ಇಟ್ಟುಕೊಂಡ ವಿಡಿಯೊ ಕ್ಲಿಪಿಂಗ್ ಸಾಮಾಜಿಕ ಜಾಲತಾಣಗಳಲ್ಲಿ ಅಪಲೋಡ್ ಮಾಡುವುದಾಗಲಿ ಮತ್ತು ಬೇರೆಯವರಿಗೆ ಶೇರ್ ಮಾಡಿದರೆ ಅಂತವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಅವರು ತಿಳಿಸಿದ್ದಾರೆ. ಮಹಲ್ ರೋಜಾ ಮಠದ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಬಾಲಕಿಯೊಂದಿಗೆ ಅನುಚಿತ ವರ್ತನೆ ಆರೋಪದಡಿ ಪೋಕ್ಸೋ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳಲಾಗಿದ್ದು, ಸಾರ್ವಜನಿಕರು ಈ ಪ್ರಕರಣದಕ್ಕೆ ಯಾವುದೇ ಫೋಟೊ ಅಥವಾ ವಿಡಿಯೊಗಳನ್ನು ಸಾಮಾಜಿಕ ಜಾಲತಾಣ ವ್ಯಾಟ್ಸಾಪ್, ಪೇಸ್ಬುಕ್, ಇನ್‌ಸ್ಟಾಗ್ರಾಮ್ ಸೇರಿದಂತೆ ಇನ್ನಿತರೆ ಕಡೆಗಳಲ್ಲಿ ಹಂಚಿಕೊಂಡಲ್ಲಿ ಅಂತವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಲಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಕಟಣೆ ತಿಳಿಸಿದ್ದಾರೆ.

ಪ್ರಬುದ್ಧ ಅಕಾಡೆಮಿ ಕಳಪೆ ಕಾಮಗಾರಿ ಹಿನ್ನೆಲೆ ಕ್ರಮ

ಕೆಆರ್‌ಐಡಿಎಲ್ ಇಇ ಅಮಾನತು

ಕಲಬುರಗಿ: ಜಿಲ್ಲೆಯಲ್ಲಿ ಕೆಆರ್‌ಐಡಿಎಲ್ ವತಿಯಿಂದ ಕೈಗೊಳ್ಳಲಾದ ಕಾಮಗಾರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ಕಳಪೆ ಗುಣಮಟ್ಟ

ಕಂಡುಬಂದ ಹಿನ್ನೆಲೆಯಲ್ಲಿ, ಇಲಾಖೆಯ ಕಲಬುರಗಿ ಪ್ರಭಾರಿ ಕಾರ್ಯನಿರ್ವಾಹಕ ಅಭಿಯಂತರ (ಇಇ) ಸೌರಭ ಎಸ್. ಭೀಮನ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಬುದ್ಧ ಅಕಾಡೆಮಿಯ ಉನ್ನತ ಕೋರ್ಸ್‌ಗಳ ಕೋಚಿಂಗ್ ಸೆಂಟರ್ ಕಟ್ಟಡದ ಮೇಲ್ಛಾವಣಿ ಕುಸಿದು ಬಿದ್ದಿರುವುದು ಇಲಾಖೆಯ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ. ಈ ಬಗ್ಗೆ ತೃತೀಯ ಸಂಸ್ಥೆಯಿಂದ ಸಮಗ್ರ ತನಿಖೆ ನಡೆಸಲಾಗಿದ್ದು, ವರದಿಯಲ್ಲಿ ಕಾಮಗಾರಿ ಅತ್ಯಂತ ಕಳಪೆಯಾಗಿರುವುದು ದೃಢಪಟ್ಟಿದೆ. ಈ ವರದಿಯ ಆಧಾರದ ಮೇಲೆಯೇ ಅಭಿಯಂತರರ ವಿರುದ್ಧ ಅಮಾನತು ಶಿಕ್ಷೆ ಜಾರಿಗೊಳಿಸಲಾಗಿದೆ ಎಂದರು. ಅಕಾಡೆಮಿಯಲ್ಲಿನ ತರಬೇತಿ ವ್ಯವಸ್ಥೆಯನ್ನು ಶೀಘ್ರವೇ ಸರಿಪಡಿಸಿ, ಪರಿಣಿತ ತರಬೇತಿದಾರರನ್ನು ನಿಯೋಜಿಸುವುದಾಗಿ ಅವರು ಭರವಸೆ ನೀಡಿದರು.

> ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ರೈತರಿಗೆ 1,200 ಕೋಟಿ ರು. ಅಧಿಕ ಬೆಳೆ ಪರಿಹಾರ ಹಾಗೂ ವಿಮೆ ಕೊಡಿಸಲಾಗಿದೆ. ಆದರೆ, ಹಿಂದಿನ ಬಿಜೆಪಿ ಸರಕಾರ 100 ಕೋಟಿ ರು. ಪರಿಹಾರ ನೀಡಲು ಸಹ ವಿಫಲವಾಗಿತ್ತು.
> –ಪ್ರಿಯಾಂಕ್ ಖರ್ಗೆ, ಸಚಿವ

ವಾರದೊಳಗೆ ಮಧ್ಯಂತರ ಬೆಳೆ ವಿಮೆ: 2025–26ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಹಾನಿಗೆ ಸಂಬಂಧಿಸಿದಂತೆ ಮಧ್ಯಂತರ ಬೆಳೆ ವಿಮೆ ಪರಿಹಾರವು ಒಂದು ವಾರದೊಳಗೆ ಬಿಡುಗಡೆಯಾಗಲಿದೆ. ತೊಗರಿ ಬೆಳೆಯ ಇಳುವರಿ ಪ್ರಮಾಣ ನಿಗದಿ ಪ್ರಕ್ರಿಯೆ ಮುಗಿದ ತಕ್ಷಣ, ಪೂರ್ಣ ಪ್ರಮಾಣದ ವಿಮೆ ಹಣ ರೈತರ ಖಾತೆ ಸೇರಲಿದೆ ಎಂದರು.

ಇರಾನ್ ಉಗ್ರಾವತಾರ

← ಮೊದಲಪುಟದಿಂದ

ಆಸ್ಟ್ರೇಲಿಯಾಕ್ಕೂ ಬಿತ್ತು ಏಟು: ಇರಾನ್ ದುಬೈನಲ್ಲಿರುವ ಅಮೆರಿಕ ಮತ್ತು ಆಸ್ಟ್ರೇಲಿಯಾದ ಸೇನಾನೆಲೆಗಳ ಮೇಲೂ ದಾಳಿ ನಡೆಸಿದೆ. ಆದರೆ ನಿಖರವಾಗಿ ಎಲ್ಲಿ ಏನು ಹಾನಿಯಾಗಿದೆ ಎಂಬ ಬಗ್ಗೆ ಮಾಹಿತಿ ಹೊರಬಿದ್ದಿಲ್ಲ. ದುಬೈನ ಅಲ್‌ಮಿನ್ಹಾದ್‌ನಲ್ಲಿರುವ ಆಸ್ಟ್ರೇಲಿಯಾದ ಸೇನಾನೆಲೆ ಮೇಲೆಯೂ ದಾಳಿಯಾಗಿದೆ. ಸ್ವತಃ ಆಸ್ಟ್ರೇಲಿಯಾದ ರಕ್ಷಣಾ ಸಚಿವ ರಿಚರ್ಡ್ ಮಾರ್ಲೆಸ್ ಇದನ್ನು ಖಾತ್ರಿಪಡಿಸಿದ್ದಾರೆ. ಆಸ್ಟ್ರೇಲಿಯಾದ ಯಾವುದೇ ಸಿಬ್ಬಂದಿಗೆ ಸಮಸ್ಯೆಯಾಗಿಲ್ಲ, ಸುರಕ್ಷಿತವಾಗಿದ್ದಾರೆ ಎಂದು ಹೇಳಿದ್ದಾರೆ.

ಮಧ್ಯಪೂರ್ವ ದೇಶಗಳಲ್ಲಿ ಅಮೆರಿಕ 13 ಸೇನಾ ನೆಲೆಗಳನ್ನು ಹೊಂದಿದೆ. ಇದರಲ್ಲಿ 30ರಿಂದ 40000 ಸಾವಿರ ಸೈನಿಕರು ಇಲ್ಲಿರುತ್ತಾರೆ. ಈ ನೆಲೆಗಳನ್ನು ಗುರಿಯಾಗಿಸಿಕೊಂಡು ಇರಾನ್, ಕತಾರ್, ಬಹ್ರೇನ್, ಜೋರ್ಡಾನ್, ಕುವೈತ್‌ಗಳ ಮೇಲೆ ಇರಾನ್ ಮುಗಿಬಿದ್ದಿದೆ.



ಉಪ ನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂಖ್ಯೆ:ಡಿಡಿಪಿಐ/ವಿಜಯನಗರ/ಟೆಂಡರ್/2025–26/ ದಿನಾಂಕ: 27–02–2026

ಜೆಮ್ ಪೋರ್ಟಲ್ ಟೆಂಡರ್ ಪ್ರಕಟಣೆ

2024–25ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಅನುದಾನದಡಿ ವಿಜಯನಗರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಈ ಕೆಳಗಿನ 5 ಕಾಮಗಾರಿ/ಸೇವೆಗಳಿಗಾಗಿ ಅರ್ಹನೋಂದಾಯಿತ ಗುತ್ತಿಗೆದಾರರಿಂದ/ಅಧಿಕೃತ ಸಂಸ್ಥೆಗಳಿಂದ ಜೆಮ್ (GEM PORTAL) ಪೋರ್ಟಲ್ ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ/ಸೇವೆಯ ಹೆಸರು: 1.ಸರ್ಕಾರಿ ಶಾಲೆಗಳಿಗೆ ಸ್ಮಾರ್ಟ್‌ಕ್ಲಾಸ್ ಸಾಮಗ್ರಿಗಳ ಖರೀದಿ GEM/2026/B/7279746. **ಅಂದಾಜು ಮೊತ್ತ (ಲಕ್ಷಗಳಲ್ಲಿ):** 128.00. **ಬಿಡ್ ಪ್ರಾಂಭದ ದಿನಾಂಕ:** 24/02/2026. **ಬಿಡ್ ಕೊನೆಯ ದಿನಾಂಕ:** 17/03/2026
2.ಸರ್ಕಾರಿ ಶಾಲೆಗಳಿಗೆ ಸ್ಮಾರ್ಟ್‌ಕ್ಲಾಸ್ ಸಾಮಗ್ರಿಗಳ ಖರೀದಿ GEM/2026/B/7282884. **ಅಂದಾಜುಮೊತ್ತ (ಲಕ್ಷಗಳಲ್ಲಿ):** 144.00. **ಬಿಡ್ ಪ್ರಾಂಭದ ದಿನಾಂಕ:** 25/02/2026. **ಬಿಡ್ ಕೊನೆಯ ದಿನಾಂಕ:**18/03/2026
3.ಸರ್ಕಾರಿ ಶಾಲೆಗಳಿಗೆ ಸ್ಮಾರ್ಟ್‌ಕ್ಲಾಸ್ ಸಾಮಗ್ರಿಗಳ ಖರೀದಿ GEM/2026/B/7299541. **ಅಂದಾಜುಮೊತ್ತ (ಲಕ್ಷಗಳಲ್ಲಿ):** 32.00. **ಬಿಡ್ ಪ್ರಾಂಭದ ದಿನಾಂಕ:** 27/02/2026. **ಬಿಡ್ ಕೊನೆಯ ದಿನಾಂಕ:**20/03/2026
4.ಸರ್ಕಾರಿ ಇ.ಸಿ.ಸಿ. ಇಶಾಲೆಗಳಿಗೆ ಪೀಠೋಪಕರಣಗಳ ಪೂರೈಕೆ ಹಾಗೂ ಇತರೆ GEM/2026/B/7280761. **ಅಂದಾಜುಮೊತ್ತ (ಲಕ್ಷಗಳಲ್ಲಿ):** 37.50. **ಬಿಡ್ ಪ್ರಾಂಭದ ದಿನಾಂಕ:** 24/02/2026 **ಬಿಡ್ ಕೊನೆಯ ದಿನಾಂಕ:** 26/03/2026
5.ಸರ್ಕಾರಿ ಇ.ಸಿ.ಸಿ. ಇಶಾಲೆಗಳಿಗೆ ಪೀಠೋಪಕರಣಗಳ ಪೂರೈಕೆ ಹಾಗೂ ಇತರೆ GEM/2026/B/7277402. **ಅಂದಾಜುಮೊತ್ತ (ಲಕ್ಷಗಳಲ್ಲಿ):** 7.50. **ಬಿಡ್ ಪ್ರಾಂಭದ ದಿನಾಂಕ:** 23/02/2026. **ಬಿಡ್ ಕೊನೆಯ ದಿನಾಂಕ:** 25/03/2026
ಸೂಚನೆಗಳು: 1.ಟೆಂಡರ್‌ನಲ್ಲಿ ಭಾಗವಹಿಸಲು ಮಾರಾಟಗಾರರು ಕಡ್ಡಾಯವಾಗಿ GeM Portal (suspicious link removed) ನಲ್ಲಿ ನೋಂದಾಯಿತರಾಗಿರಬೇಕು. 2.ಆಸಕ್ತರು ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ಫಾರಂಗಳನ್ನು (GEM PORTAL) ಪೋರ್ಟಲ್ (https://https://gem.gov.in) ಮೂಲಕ ಪಡೆಯಬಹುದು (Search by Bid Number). 3.ಟೆಂಡರನ್ನು ಕಾರಣ ನೀಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಪ್ರಾಧಿಕಾರ ಹೊಂದಿರುತ್ತದೆ. 4.ಅರ್ಹ ಬಿಡ್‌ದಾರರು 5% ಇ.ಎಂ.ಡಿ ಮೊತ್ತವನ್ನು ಕಾಮಗಾರಿವಾರು ಪ್ರತ್ಯೇಕವಾಗಿ ಬ್ಯಾಂಕ್ ಹುಂಡಿ ಮೂಲಕ ಸಲ್ಲಿಸುವುದು. 5.ಕಛೇರಿಯ ಕೆಲಸದ ಅವಧಿಯಲ್ಲಿ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು.
ಸಹಿ/–ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ವಿಜಯನಗರಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/564

ರಾಜ್ಯ ಬಜೆಟ್‌ಗೆ ಬದ್ಧತೆಯ ಭಾರ

← ಮೊದಲಪುಟದಿಂದ

ಆದರೆ ಆದರೆ ತೆರಿಗೆ ಮತ್ತು ಆದಾಯ ಸ್ವೀಕೃತಿಗಳ ಪ್ರಮಾಣ ಹೆಚ್ಚಾಗುತ್ತಿಲ್ಲ. ಹೀಗಾಗಿ ಸಾಲದ ಮೊರೆ ಹೋಗುವುದು ಅನಿವಾರ್ಯವಾಗಿದೆ. 2026–27ನೇ ಸಾಲಿನ ಬಜೆಟ್ ವರ್ಷದ ಅಂತ್ಯಕ್ಕೆ ಸಾಲದ ಹೊರೆ 8.41 ಲಕ್ಷ ಕೋಟಿ ರು.ಗೆ ಹೆಚ್ಚಾಗಲಿದೆ. 2027–28ರ ಅಂತ್ಯಕ್ಕೆ 9.25 ಲಕ್ಷ ಕೋಟಿ ರು. ಸಾಲದ ಹೊರೆ ಏರಲಿದೆ ಎಂದು ಹೇಳಲಾಗುತ್ತಿದೆ.

ಅಭಿವೃದ್ಧಿಗೆ ಸಿಗುವುದು ಶೇ.35ರಷ್ಟು ಅನುದಾನ ಮಾತ್ರ: ಇನ್ನು ಬದ್ಧತಾ ವೆಚ್ಚ ತೀವ್ರ ಪ್ರಮಾಣದಲ್ಲಿ ಏರಿಕೆಯಾಗಿರುವುದರಿಂದ ಹಾಗೂ ಬಜೆಟ್ ಗಾತ್ರದ ಶೇ.65ರಷ್ಟು ಅನುದಾನ ಬದ್ಧತಾ ವೆಚ್ಚಕ್ಕೆ ಬೇಕಿರುವುದರಿಂದ ಅಭಿವೃದ್ಧಿ ವೆಚ್ಚಕ್ಕೆ ಶೇ.35ರಷ್ಟು ಅನುದಾನ ಸಿಗಲಿದೆ. ಇದರಲ್ಲಿ ಶಿಕ್ಷಣ, ಆರೋಗ್ಯ, ನೀರಾವರಿಗೆ ಆದ್ಯತೆ ನೀಡಬೇಕಾಗಿದೆ. ಇದರೊಂದಿಗೆ ವಿಬಿ ಜಿ ರಾಮ್ ಜಿಗೆ ಶೇ.10ರ ಬದಲು ಶೇ.40ರಷ್ಟು ಅನುದಾನ ಒದಗಿಸಬೇಕಾದ ಅನಿವಾರ್ಯತೆ, ಜಲ ಜೀವನ್ ಮಿಷನ್ 13,000 ಕೋಟಿ ರು. ಬಾಕಿ ನೀಡಬೇಕಿದೆ. ಇದನ್ನು ನಿಭಾಯಿಸುವುದು ದೊಡ್ಡ ಸವಾಲಾಗಿದೆ.

ಇಂಧನ ಸೆಸ್ ಹೆಚ್ಚಿಸಲು ಚಿಂತನೆ?

ಜಿಎಸ್‌ಟಿ ಜಾರಿಯಾದ ಬಳಿಕ ರಾಜ್ಯಗಳಿಗೆ ಆದಾಯ ಹೆಚ್ಚಿಸಿಕೊಳ್ಳಲು ಹೆಚ್ಚು ಮೂಲಗಳಿಲ್ಲ. ಈಗಾಗಲೇ ಇಲಾಖೆಗಳಿಗೆ ನೀಡಿರುವ ರಾಜಸ್ವ ಸಂಗ್ರಹಣೆಯ ಗುರಿ ಹೆಚ್ಚಾಗಿದೆ. ಆದ್ದರಿಂದ ಪುನಃ ಗುರಿಯನ್ನು ಇನ್ನಷ್ಟು ಹೆಚ್ಚಿಸಲು ಸಾಧ್ಯವಿಲ್ಲ. ಆದ್ದರಿಂದ ಹೊಸ ಆದಾಯದ ಮೂಲವಾಗಿ ಪೆಟ್ರೋಲ್, ಡೀಸೆಲ್ ಮೇಲಿನ ಸೆಸ್ ಹೆಚ್ಚಿಸಲು ಸರಕಾರ ತೀರ್ಮಾನಿಸಿದೆ ಎನ್ನಲಾಗಿದೆ. ಸಿದ್ದರಾಮಯ್ಯ ಅವರು ತಮ್ಮ ಬಜೆಟ್‌ನಲ್ಲಿ ಪೆಟ್ರೋಲ್ ಹಾಗೂ ಡಿಸೇಲ್ ಮೇಲೆ ಪ್ರತಿ ಲೀಟರ್‌ಗೆ ಒಂದು ರುಪಾಯಿ ಸೆಸ್ ವಿಧಿಸಲು ಸಾಧ್ಯತೆಯಿದೆ ಎನ್ನಲಾಗಿದೆ. ಕರ್ನಾಟಕದಲ್ಲಿ ಪ್ರಸ್ತುತ ಡೀಸೆಲ್ ಮೇಲಿನ ಮಾರಾಟ ತೆರಿಗೆ 21.77 ರು.ಯಿದ್ದು, ಪೆಟ್ರೊಲ್ ಮೇಲಿನ ಮಾರಾಟ ತೆರಿಗೆ 18 ರುಪಾಯಿದೆ. ಇದೀಗ ಹೆಚ್ಚುವರಿ ಸೆಸ್ ವಿಧಿಸುವುದರಿಂದ ಸಾರ್ವಜನಿಕರಿಗೆ ಮತ್ತಷ್ಟು ಹೊರೆಯಾಗುವುದು ನಿಶ್ಚಿತ ಎನ್ನಲಾಗಿದೆ.

ತಂದೆಯಿಂದ ಎಚ್‌ಡಿಕೆಗೆ ಗೂಢಪಾಠ: ಸಿದ್ದು

← ಮೊದಲಪುಟದಿಂದ

ಪ್ರತಿಪಕ್ಷ ನಾಯಕರ ಆರೋಪ 'ತಾ ಕಳ್ಳ ಪರರ ನಂಬ' ಎಂಬ ಗಾದೆಯಂತಿದೆ. ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆ ಎಂದು ಕಿಡಿಕಾರಿದ್ದಾರೆ.

ಕುಮಾರಸ್ವಾಮಿಯವರಿಗೆ ಈ ಗೂಢಚರ್ಯೆಯ ಪಾಠವನ್ನು ಅವರ ಪೂಜ್ಯ ತಂದೆಯವರೇ ಹೇಳಿಕೊಟ್ಟಿರಬಹುದು. ತನ್ನನ್ನು ಪ್ರಧಾನಿ ಮಾಡಿದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಸೀತಾರಾಮ್ ಕೇಸರಿಯವರ ವಿರುದ್ಧವೇ ಗೂಢಚರ್ಯೆ ಮಾಡಿದ್ದ ಕಾರಣಕ್ಕೆ ಕಾಂಗ್ರೆಸ್ ಪಕ್ಷ ತನ್ನ ಬೆಂಬಲವನ್ನು ಹಿಂದೆಗೆದುಕೊಂಡಿರುವುದು ಇತಿಹಾಸದ ಪುಟಗಳಲ್ಲಿದೆ. ಈ ಅಪನಂಬಿಕೆ ಮತ್ತು ಸಣ್ಣತನಗಳಿಂದಾಗಿ ಕನ್ನಡಿಗರೊಬ್ಬರು ಇನ್ನಷ್ಟು ಕಾಲ ಪ್ರಧಾನಿಯಾಗುವ ಅವಕಾಶ ತಪ್ಪಿಹೋಯಿತು ಎನ್ನುವುದು ವಿಷಾದನೀಯ ವಾಸ್ತವ ಎಂದು ಕಿಡಿಕಾರಿದ್ದಾರೆ.

> ರಾಜಕೀಯ ಗುಪ್ತಚಾರಿಕೆ ಎನ್ನುವ ಪ್ರತ್ಯೇಕ ವಿಭಾಗವಿದೆ. ಅದರ ಮೂಲಕ ಸಿಎಂಗೆ ಮಾಹಿತಿ ಸಹಜವಾಗಿ ನಿತ್ಯ ಹೋಗುತ್ತದೆ. ಫೋನ್ ಟ್ಯಾಪಿಂಗ್ ಮಾಡಿ ಯಾರ‍್ಯಾರು ಎಲ್ಲೆಲ್ಲಿ ಹೋದರು? ಏನು ಮಾಡಿದರು ಎಂದು ತಿಳಿಯಬೇಕಿಲ್ಲ. ಪೊಲಿಟಿಕಲ್ ಇಂಟಲಿಜೆನ್ಸ್ ಮೂಲಕ ಹಿಂದಿನಿಂದಲೂ ಎಲ್ಲ ಸಿಎಂಗಳಿಗೂ ಮಾಹಿತಿ ಹೋಗುತ್ತದೆ.
> – ಡಾ.ಜಿ.ಪರಮೇಶ್ವರ, ಗೃಹ ಸಚಿವ

> ಯಾರಿಗೆ ಸಚಿವರು ಮತ್ತು ಶಾಸಕರ ಮೇಲೆ ನಂಬಿಕೆ ಇರುವುದಿಲ್ಲವೋ ಅಂಥವರು, ಗುಪ್ತಚರ ಇಲ್ಲವೇ ತಮ್ಮದೇ ಆಂತರಿಕ ಮೂಲಗಳಿಂದ ಮಾಹಿತಿ ಕಲೆ ಹಾಕುತ್ತಾರೆ. ಈಗ ಮುಖ್ಯಮಂತ್ರಿಗಳ ಪರಿಸ್ಥಿತಿಯೂ ಅದೇ ಆಗಿರಬಹುದು. ಸರಕಾರ ಉಳಿಸಿಕೊಳ್ಳಲು ಅಥವಾ ಕುರ್ಚಿ ಉಳಿಸಿಕೊಳ್ಳಲು ಗೂಢಚಾರಿಕೆ ಅಥವಾ ಫೋನ್ ಟ್ಯಾಪಿಂಗ್ ಸಿಎಂಗೆ ಅನಿವಾರ್ಯ ಇರಬಹುದು.
> – ಸಿ.ಟಿ. ರವಿ, ವಿಧಾನಪರಿಷತ್ ಸದಸ್ಯ

ಯುದ್ಧಭೂಮಿಯಿಂದ ಮರಳಿದ 500 ಕನ್ನಡಿಗರು

← ಮೊದಲಪುಟದಿಂದ

ಭೋಜೇಗೌಡ: ದುಬೈನಲ್ಲಿ ಶಾಸಕರಾದ ಭೋಜೇಗೌಡ, ಎ.ಟಿ.ಶ್ರೀನಿವಾಸ್ ಸಹ ಸಿಲುಕಿದ್ದರು. ಅವರು ಸುರಕ್ಷಿತವಾಗಿ ವಾಪಸ್ಸಾಗಿದ್ದಾರೆ. ಮಂಗಳವಾರ ಬೆಳಗ್ಗೆ ಅಬುಧಾಬಿಯಿಂದ ಬಂದ ವಿಧಾನ ಪರಿಷತ್ ಸದಸ್ಯ ಬೋಜೇಗೌಡ ಮಾತನಾಡಿ, ನಾನು ದಕ್ಷಿಣ ಆಫ್ರಿಕಾಗೆ ತೆರಳಿದ್ದೆ. ಕಾರಣಾಂತರಗಳಿಂದ ದುಬೈ ಮೂಲಕ ಭಾರತಕ್ಕೆ ವಾಪಸ್ ಬರಬೇಕಿತ್ತು. ಆದರೆ ವಿಮಾನಗಳು ಸ್ಥಗಿತಗೊಂಡವು. ನಮ್ಮ ಬಳಿ ದುಬೈ ವೀಸಾ ಇರಲಿಲ್ಲ. ಬಳಿಕ ವೀಸಾ ಪಡೆದುಕೊಂಡೆ. ಕೇಂದ್ರ ಸಚಿವ ಕುಮಾರಸ್ವಾಮಿಯವರು ಹೋಟೆಲ್ ವ್ಯವಸ್ಥೆ ಮಾಡಿದ್ದರು. ಹೋಟೆಲ್ ಪಕ್ಕದಲ್ಲೇ ಬಾಂಬ್‌ಗಳ ಸುರಿಮಳೆಯಾಗುತ್ತಿತ್ತು.

ನಾವಿದ್ದ ಜಾಗದ ಪಕ್ಕವೇ ಕ್ಷಿಪಣಿ ದಾಳಿ: ನಮ್ಮನ್ನು ಸುರಕ್ಷಿತ ಸ್ಥಳದಲ್ಲಿ ಇರಿಸಿದ್ದರು. ಸೋಮವಾರ ಬೆಳಗ್ಗೆ ಸಚಿವರಾದ ಕೃಷ್ಣಬೈರೇಗೌಡ ಮತ್ತು ಎಚ್.ಕೆ.ಪಾಟೀಲ್‌ರವರಿಗೆ ದೂರವಾಣಿ ಮಾಡಿದ್ದೆ. ಆ ಸಂದರ್ಭದಲ್ಲಿ ನಾವಿದ್ದ ಸ್ಥಳದ ಪಕ್ಕದಲ್ಲೇ ಮೂರು ಮಿಸೈಲ್‌ಗಳು ಬಿದ್ದವು. ಖುಜಾರ್ ಕಲೀಬ್ ಪಕ್ಕದಲ್ಲೇ ಬಾಂಬ್‌ಗಳು ಬಿದ್ದವು. ಯಾವುದೇ ತೊಂದರೆಯಾಗಲಿಲ್ಲ. ಈ ಯುದ್ಧದ ವಾತಾವರಣದಲ್ಲಿ ಇಷ್ಟು ಬೇಗ ನಾವು ವಾಪಸ್ ಬರುತ್ತೇವೆ ಎಂದುಕೊಂಡಿರಲಿಲ್ಲ. ದೇವರ ದಯೆ ಕನ್ನಡಿಗರು ಸೇರಿದಂತೆ ಭಾರತೀಯರೆಲ್ಲರೂ ಸುರಕ್ಷಿತವಾಗಿ ತಾಯ್ನಾಡಿಗೆ ಮರಳಿದ್ದೇವೆ ಎಂದರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
No.EE/MID/VJP/AE-4/4702/TND/2025-26/4532 Date:26.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.
4702 ಪ್ರಧಾನ ಕಾಮಗಾರಿಗಳು ಃ– ಒಟ್ಟು 4 ಕಾಮಗಾರಿಗಳು, ಟೆಂಡರಿಗಿಟ್ಟ ಮೊತ್ತ **ರೂ.2895.27ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು(11) ತಿಂಗಳುಗಳು.**
4702 ಎಸ್.ಸಿ.ಪಿ. ಕಾಮಗಾರಿಗಳು ಃ– ಒಟ್ಟು 3 ಕಾಮಗಾರಿಗಳು, ಟೆಂಡರಿಗಿಟ್ಟ ಮೊತ್ತ **ರೂ.2138.40ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು(11) ತಿಂಗಳುಗಳು.**
ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **02.03.2026** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **11.03.2026** ರ 17–30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ: **07.03.2026** ರಂದು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ: **10.03.2026** ರ 17–30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ(ಫೋನಃ–080–25501216 ಮತ್ತು 080–25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/765/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 006.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಟೆಂಡರ್ ಪ್ರಕಟಣೆ ಸಂಖ್ಯೆ 14/2025–26 ದಿನಾಂಕ: 24.02.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ,ಲೋಕೋಪಯೋಗಿಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು, ಟೆಂಡರ್ ನಮೂನೆ KC-3 & KW-4 ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ), ನಂಜನಗೂಡು ಮತ್ತು ಮೈಸೂರು ತಾಲ್ಲೂಕಿನ ಕಾಮಗಾರಿಯ (KC-3 & KW-4) ಅಂದಾಜು ಮೊತ್ತ ರೂ.(10.00 ಲಕ್ಷ, 180.00 ಲಕ್ಷ ದಿಂದ 301.59 ಲಕ್ಷ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 26.02.2026 ರಿಂದ 07.03.2026 ರವರೆಗೆ, ಟೆಂಡರ್ ತೆರೆಯುವ ದಿ: 09.03.2026 ರ ಸಂಜೆ 5.30 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (KPPP portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://kppp.karnataka.gov.inಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಫೋನ್ ನಂ.0821–2460495) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.
DIPR/DDMYS/1761/KSMCA/996/2025-26

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಚೇರಿ(ಆಡಳಿತ)
ವಿಭಾಗೀಯ ಸರಕು & ಸೇವಾ ತೆರಿಗೆ ಕಚೇರಿ, ಧಾರವಾಡ.
ದೂರವಾಣಿ ಸಂಖ್ಯೆ: 0836–2210172
ಸಂ:ವಾತೆಜಂಆ(ಆ)/ವಿಸಸೇತೆವಿ/ಧಾ/ಭ.ಸಿ&ಸ್ವ.ಸಿ/2025–26/ಬಿ–1186 ದಿನಾಂಕ: 03–03–2026

ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ಸರಕು ಮತ್ತು ಸೇವಾ ತೆರಿಗೆ ಕಚೇರಿ, ಧಾರವಾಡ ವಿಭಾಗದ ಹಾವೇರಿ, ಗದಗ, ಕಾರವಾರ, ಮತ್ತು ಧಾರವಾಡ ಜಿಲ್ಲೆಗಳಲ್ಲಿರುವ ಕಚೇರಿಗಳಿಗೆ 10 ಸ್ವಚ್ಛತಾ ಸಿಬ್ಬಂದಿಗಳು ಮತ್ತು 12 ಭದ್ರತಾ ಸಿಬ್ಬಂದಿಗಳ ಸೇವೆ ಪೂರೈಕೆಗೆ ಟೆಂಡರ್ ಸಂಖ್ಯೆ:**JCCT/A/DGSTO/DWD/S.G&H.K/2025-26/CTD/2025-26/SE0106** ದಿನಾಂಕ: 03–03–2026 ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಾಲತಾಣ **https://eproc.karnataka.gov.in/** ನಲ್ಲಿ ಮಾಹಿತಿ ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18–03–2026 ಸಮಯ ಸಂಜೆ: 17:00 P.M.
ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಚೇರಿ, ಧಾರವಾಡ.
ವಾ.ಸಾ.ಇ/ಧಾರವಾಡ/1306/
ದೇಶಪಾಂಡೆಪಬ್ಲಿಸಿಟಿ/2025–26

ಕಲಬುರಗಿ ಕೋರ್ಟ್‌ಗೆ ಬಾಂಬ್ ಬೆದರಿಕೆ

ಕಲಬುರಗಿ: ನಗರದ ಜಿಲ್ಲಾ ನ್ಯಾಯಾಲಯಕ್ಕೆ ಅಪರಿಚಿತ ವ್ಯಕ್ತಿಯಿಂದ ಬಾಂಬ್ ಬೆದರಿಕೆ ಮೇಲ್ ಬಂದ ಹಿನ್ನೆಲೆ ಮಂಗಳವಾರ ನ್ಯಾಯಾಲಯ ಆವರಣದಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು. ಕಲಬುರಗಿ ಡಿಸ್ಟ್ರಿಕ್ಟ್ ಕೋರ್ಟ್ ಆಫೀಸ್ ಇ–ಮೇಲ್‌ಗೆ ಬಂದ ಸಂದೇಶದಲ್ಲಿ ನ್ಯಾಯಾಲಯದ ಆವರಣದಲ್ಲಿ ಬಾಂಬ್ ಇಟ್ಟಿರುವುದಾಗಿ ಉಲ್ಲೇಖಿಸಲಾಗಿತ್ತು. ಈ ಮಾಹಿತಿ ಲಭ್ಯವಾಗುತ್ತಿದ್ದಂತೆ ಪೊಲೀಸರು ತಕ್ಷಣವೇ ಎಚ್ಚೆತ್ತುಕೊಂಡು ಭದ್ರತಾ ಕ್ರಮಗಳನ್ನು ಕೈಗೊಂಡರು. ನ್ಯಾಯಾಲಯದ ಆವರಣದಲ್ಲಿ ಇದ್ದ ವಕೀಲರು, ಕಕ್ಷಿದಾರರು ಹಾಗೂ ಸಾರ್ವಜನಿಕರನ್ನು ಪೊಲೀಸರು ತಕ್ಷಣವೇ ಹೊರಗೆ ಕಳುಹಿಸಿದರು. ವಕೀಲರೂ ಸಹ ಕಕ್ಷಿದಾರರನ್ನು ಸುರಕ್ಷಿತವಾಗಿ ಹೊರಗೆ ಕಳುಹಿಸಲು ಸಹಕರಿಸಿದರು. ನ್ಯಾಯಾಲಯದ ಕಾರ್ಯಚರಣೆ ಕೆಲಕಾಲ ಸ್ಥಗಿತಗೊಳ್ಳಿತು. ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳವನ್ನು ಕರೆಯಿಸಿ ಪರಿಶೀಲನೆ ನಡೆಸಲಾಗುತ್ತಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಇದು ಹುಸಿ ಬಾಂಬ್ ಬೆದರಿಕೆ ಕರೆ ಇರಬಹುದೆಂದು ಶಂಕಿಸಲಾಗಿದೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮೇಲ್ ಕಳುಹಿಸಿದ ಅಪರಿಚಿತ ವ್ಯಕ್ತಿಯ ಪತ್ತೆಗೆ ಮುಂದಾಗಿದ್ದಾರೆ. ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/81/2025–26 ದಿನಾಂಕ: 02–03–2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದಿಸಲಾದ ಮಾಹಯೋಜನೆಯಂತೆ **"ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂಉಪಯೋಗ ಬದಲಾವಣೆ"** ಮಾಡಲು ಕೋರಿರುತ್ತಾರೆ. ಹಾಗಾಗಿ, ಸದರಿ ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ ಸ.ನಂ.ಗಳ ವಿವರ

ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ
1.	ಶ್ರೀ ಡಿ. ತಂಗದುರೈ @ ದಯಾಳನ್ ತಂಗದುರೈ ಬಿನ್ ಲೇಟ್ ಕೆ ದಯಾಳನ್	23	04–22
2.		32/1	03–05

ಷರಾ:– ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, "ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.
ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/5976/ಅಡ್ವಟೋರ್/2025–26

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕಂಪ್ಲಿ
ಕೊಟ್ಟಾಲ್‌ರಸ್ತೆ, ಕಂಪ್ಲಿ–583132.ಬಳ್ಳಾರಿ (ಜಿಲ್ಲೆ).
Email: apmckampli2023@gmail.com ದೂ:08394-250232
ಕ್ರ.ಸಂ./ಕೃಉಮಾಸ/ಕಂಪ್ಲಿ/ಅಭಿವೃದ್ಧಿ/389/2025–26 ದಿನಾಂಕ:27–02–2026.

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ (2ನೇ ಕರೆ).

ಕಂಪ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 2025–26 ನೇ ಸಾಲಿನ ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿ ಮತ್ತು ಸಮಿತಿ ನಿಧಿಯಿಂದ ಕೈಗೊಂಡು ಕಾರ್ಯಗತಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ–1999 ನಿಯಮಗಳು–2020 **gÀ Standard Tender Document KW-4 (With Latest Amendment)** ರ ನಿಯಮಗಳನ್ವಯ ಸ್ಪರ್ಧಾತ್ಮಕ ಐಟಂವಾರು ಟೆಂಡರ್‌ಗಳನ್ನು **https://kppp.karnataka.gov.in** ರ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ **(Indent No: PMC/2025-26/OW/WORK_INDENT710/CALL-2)**
ಟೆಂಡರ್ ಪ್ರೊಸ್ಸೆಸ್ಸಿಂಗ್ ಫೀ ಹಾಗೂ ಟೆಂಡರ್ ಷರತ್ತು & ನಿಬಂಧನೆಗಳು ಇ–ಪೋರ್ಟಾಲ್‌ನ ನಿಯಮಗಳನ್ವಯ ಇದ್ದು, ಅರ್ಹ ಗುತ್ತಿಗೆದಾರರು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ ಕಚೇರಿ ಸಮಯದಲ್ಲಿ ಕಚೇರಿಯಿಂದ ಅಥವಾ **https://kppp.karnataka.gov.in** ವೆಬ್‌ಸೈಟ್ ನಿಂದ ಪಡೆಯಬಹುದಾಗಿದೆ.
ಕಾಮಗಾರಿಯ ಹೆಸರು: Construction of CC Road And RCC Drain in Main Market of APMC Kampli under Market Development Fund By Agricultural Marketing Board For The Year 2025-26
ಟೆಂಡರ್‌ಗಿಟ್ಟ ಮೊತ್ತ ರೂ: 1,17,29,990–51 + ಜಿ.ಎಸ್.ಟಿ. **ಇ.ಎಂ.ಡಿ ಮೊತ್ತ:** 2,00,00–00. **ಅವಧಿ:** 175–ದಿನಗಳು (ಮಳೆಗಾಲ ಹೊರತುಪಡಿಸಿ)
ವೇಳಾಪಟ್ಟಿ: 01.ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: **Date:12.03.2026, 11-00 Am.** 02.ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **Date:16.03.2026, 4-00 pm.** 03.ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **Date:17.03.2026 4-30 pm.** 04.ಆರ್ಥಿಕ ಬಿಡ್ ತೆರೆಯುವ ದಿನಾಂಕ: **Date:30.03.2026 11-00 am.**
ಸಹಿ/– ಕಾರ್ಯದರ್ಶಿ (ಪ್ರ) ಕೃ.ಉ.ಮಾ.ಸ., ಕಂಪ್ಲಿ.
ಸಹಿ/– ಅಧ್ಯಕ್ಷರು, ಕೃ.ಉ.ಮಾ.ಸ., ಕಂಪ್ಲಿ.
ಡಿಐಪಿಆರ್/ಬಳ್ಳಾರಿ/1074/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.
ಸಂಖ್ಯೆ: ಕಾಇಂ/ಸನೀ/ಸ.ಇಂ–1/ಟೆಂಡರ್ ಪ್ರಕಟಣೆ ಸಂ.37/2025–26/715 ದಿನಾಂಕ: 03.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರು ಲೆಕ್ಕ ಶೀರ್ಷಿಕೆ 4702 ಕೆರೆಗಳ ಆಧುನೀಕರಣ, ಏತ ನೀರಾವರಿ ಮತ್ತು **Depositary works** ಕಾಮಗಾರಿಗಳ ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1, 2 & 4 ರ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.
ಕಾಮಗಾರಿಯ ಹೆಸರು :– ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮಾಗಡಿ ತಾಲ್ಲೂಕುಗಳಲ್ಲಿ ಹಲಸೂರು ಕೆರೆಯ ಅಭಿವೃದ್ಧಿ ಕಾಮಗಾರಿ, ಸೂಲಿಬೆಲೆ ಮತ್ತು ನಂದಗುಡಿ ಹೋಬಳಿಗಳ 59 ಕೆರೆಗಳಿಗೆ ಹೆಚ್.ಎನ್ ವ್ಯಾಲಿ ಯೋಜನೆಯಿಂದ (ಹೆಚ್ಚುವರಿ ವಿಸ್ತರಣೆ ಮೂಲಕ) ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ತುಂಬಿಸುವ ಕಾಮಗಾರಿಯ ಡಿ.ಪಿ.ಆರ್ ತಯಾರಿಸಲು ಕನ್ಸಲ್ಟೆನ್ಸಿ ಸರ್ವಿಸ್‌ನ ಕಾಮಗಾರಿ, **Hiring consultants for Concurrent Monitoring and Third party evaluation for the work of Additional development and beautification work of Gourammana Lake, Hiring consultants for Concurrent Monitoring and Third party evaluation for the work of Improvement of Kudur Lake.** ಕಾಮಗಾರಿಗಳನ್ನೊಳಗೊಂಡಂತೆ **ಒಟ್ಟು 4 ಕಾಮಗಾರಿಗಳು.**
ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.4.19 (ಕನಿಷ್ಠ)** & **ರೂ.749.46 (ಗರಿಷ್ಠ)** ಇಎಂಡಿ: **ರೂ.10,500.00 (ಕನಿಷ್ಠ)** & **ರೂ.11,24,200.00 (ಗರಿಷ್ಠ).**
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 2 ರಿಂದ 11 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)
(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **03.03.2026 ಸಂಜೆ 16.30** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **13.03.2026 ಸಂಜೆ 15.00** ಗಂಟೆಯವರೆಗೆ. (3) ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : **09.03.2026 ಬೆಳಗ್ಗೆ 11.30** ಗಂಟೆಗೆ, (4) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **13.03.2026 ಸಂಜೆ 16.30** ಗಂಟೆಯವರೆಗೆ, (5) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **16.03.2026 ಬೆಳಗ್ಗೆ 11.30** ಗಂಟೆಗೆ, (6) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**
ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 1, 2 & 4 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ
ವಾಸಾಸಂಇ/ವಾ.ಪ್ರ/5972/ಶಿರಡಿ ಸಾಯಿ/2025–26

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಸಮಾಚಾರ ಸಣ್ಣದಲ್ಲ

ಪ್ರೇಮ ವೈಫಲ್ಯ: ಒಮಾನ್‌ನಲ್ಲಿ ಆತ್ಮಹತ್ಯೆ

ಮಂಗಳೂರು: ಪ್ರೇಮ ವೈಫಲ್ಯ ಹಿನ್ನೆಲೆ ವಿದೇಶದಲ್ಲಿದ್ದ ಮಂಗಳೂರು ಜಿಲ್ಲೆಯ ಯುವಕ ಪುನೀತ್ ಪೂಜಾರಿ (32) ಆತ್ಮಹತ್ಯೆ ಶರಣಾಗಿದ್ದಾನೆ. ಮಂಗಳೂರಿನ ಸೋಮೇಶ್ವರದ ಪುನೀತ್ ಕೆಲಸದ ನಿಮಿತ್ ಒಮನ್ ದೇಶದಲ್ಲಿದ್ದನು. ಒಂದೂವರೆ ತಿಂಗಳ ಹಿಂದೆಯಷ್ಟೇ ಊರಿಗೆ ಬಂದು ಹೋಗಿದ್ದ ಪುನೀತ್ ಪೂಜಾರಿ , ಒಮನ್‌ನಲ್ಲಿ ಕೆಲಸ ಮಾಡಿಕೊಂಡಿದ್ದನು. ಕಳೆದ ಕೆಲವು ದಿನಗಳಿಂದ ಯುವತಿ ಫೋನ್ ಕಾಲ್‌ಗೆ ಪ್ರತಿಕ್ರಿಯೆ ನೀಡಿರಲಿಲ್ಲ, ಮೆಸೇಜ್ ಸಹ ಕಳುಹಿಸುತ್ತಿರಲಿಲ್ಲ. ಕಳೆದ ಒಂದೂವರೆ ವರ್ಷಗಳಿಂದ ಪುನೀತ್ ಪೂಜಾರಿ ಒಮನ್ ದೇಶದಲ್ಲಿ ಲಿಫ್ಟ್ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದನು. ಪುನೀತ್ ಪೂಜಾರಿ ಒಂದೂವರೆ ತಿಂಗಳ ಹಿಂದೆಯಷ್ಟೇ ಊರಿಗೆ ಬಂದು ಹಿಂದಿರುಗಿದ್ದನು. ಪ್ರೇಮ ವೈಫಲ್ಯದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಳೆದ ನಾಲ್ಕು ವರ್ಷಗಳಿಂದ ಉರ್ವಾ ನಿವಾಸಿ ಯುವತಿಯನ್ನು ಪ್ರೀತಿಸುತ್ತಿದ್ದನು. ಸೋಶಿಯಲ್ ಮೀಡಿಯಾ ಖಾತೆಗಳಲ್ಲಿಯೂ ಯುವತಿ ಜತೆಗಿನ ಫೋಟೊಗಳನ್ನು ಹಂಚಿಕೊಂಡಿದ್ದನು.

ನಿಧಾನ ಚಲಿಸಿ ಎಂದಿದ್ದಕ್ಕೆ ಕಾರು ಗುದ್ದಿಸಿ ಹತ್ಯೆ

ಹಾಸನ: ನಿಧಾನವಾಗಿ ಕಾರು ಓಡಿಸುವಂತೆ ತಿಳಿ ಹೇಳಿದ ಯುವಕನಿಗೆ ಗುದ್ದಿಸಿ ಹತ್ಯೆ ಮಾಡಿದ ಘಟನೆ ಹೊಳೆನರಸೀಪುರ ತಾಲೂಕಿನ ಸೂರನಹಳ್ಳಿ ಗ್ರಾಮದಲ್ಲಿ ನಡೆದಿದೆ. ಹತ್ಯೆಯಾದ ಯುವಕನನ್ನು

ಮನು (27) ಎಂದು ಗುರುತಿಸಲಾಗಿದೆ. ನಡುರಾತ್ರಿ 12 ಗಂಟೆ ಸಮಯದಲ್ಲಿ ಮನು, ಅಭಿಷೇಕ್, ರಾಕೇಶ್ ಹಾಗೂ ಕುಶಾಲ್ ರಸ್ತೆ ಪಕ್ಕದಲ್ಲಿ ನಿಂತು ಮಾತನಾಡುತ್ತಿದ್ದರು. ಈ ವೇಳೆ ಕೆಎ-01-ಎಂಎಫ್-2883 ನಂಬರ್‌ನ ಕಾರಿನಲ್ಲಿ ಅತಿ ವೇಗವಾಗಿ ಅಪರಿಚಿತ ವ್ಯಕ್ತಿ ಬಂದಿದ್ದಾನೆ. ಇದನ್ನು ಕಂಡ ಯುವಕರ ತಂಡ, ಕಾರು ಚಾಲಕನಿಗೆ ನಿಧಾನವಾಗಿ ಹೋಗು ಎಂದು ಹೇಳಿದ್ದರು. ಇದರಿಂದ ಕೋಪಗೊಂಡ ಕಾರು ಚಾಲಕ ಸ್ವಲ್ಪ ದೂರ ಹೋಗಿ ತಿರುಗಿಸಿಕೊಂಡು ಬಂದು, ಮಾತನಾಡುತ್ತ ನಿಂತಿದ್ದವರಿಗೆ ಡಿಕ್ಕಿ ಹೊಡೆಸಿದ್ದಾನೆ. ಬಳಿಕ ಅಲ್ಲಿಂದ ಪರಾರಿಯಾಗಿದ್ದಾನೆ. ಡಿಕ್ಕಿ ರಭಸಕ್ಕೆ ಮನು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ತುಂಟಾಪುರ, ರಾಯಚೂರು**

ಸಮಸ್ಯೆಯೇನು..? : ತುಂಟಾಪುರದಲ್ಲಿ ವೇಗದೂತ ದರ ಬಸ್‌ಗಳನ್ನು ನಿಲ್ಲಿಸುವ ಬಗ್ಗೆ.

- **ಪರಿಹಾರ:** ಸುಮಾರು 5-6 ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಾಯಚೂರು ತಾಲೂಕಿನ ತುಂಟಾಪುರ ಕ್ರಾಸ್‌ನಲ್ಲಿ ವೇಗದೂತ ದರ ಬಸ್‌ಗಳನ್ನು ನಿಲ್ಲಿಸುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ, ಪ್ರಯಾಣಿಕರಿಗೆ ನಿಗದಿತ ವೇಳೆಗೆ ಗಮ್ಯ ಸ್ಥಳ ತಲುಪುವಲ್ಲಿ ಸಮಸ್ಯೆ ಆಗುತ್ತಿದೆ. ಎಲ್ಲ ವೇಗದೂತ ದರ ಬಸ್‌ಗಳನ್ನು ನಿಲ್ಲಿಸುವಂತೆ ಶಿವಲಿಂಗ ಎನ್ನುವವರು ಸರಕಾರದ ಗಮನಕ್ಕೆ ತಂದಿದ್ದರು. ಸದ್ಯ ಸಾರಿಗೆ ಇಲಾಖೆ ತುಂಟಾಪುರ ಕ್ರಾಸ್‌ನಲ್ಲಿ ಎಲ್ಲ ಬಸ್‌ಗಳು ನಿಲುಗಡೆ ಆಗುವಂತೆ ಆದೇಶ ಹೊರಡಿಸಿದೆ.

ದಿನ ವಿಶೇಷ

04 ಮಾರ್ಚ್ 2026 ಬುಧವಾರ

» ಸೂರ್ಯೋದಯ	:	06-36
» ಸೂರ್ಯಾಸ್ತ	:	06-30
» ತಿಥಿ	:	ಪ್ರತಿಪದಾ
» ನಕ್ಷತ್ರ	:	ಪೂರ್ವಾ
» ಸಂವತ್ಸರ	:	ವಿಶ್ವಾವಸು
» ಆಯನ	:	ಉತ್ತರಾಯಣ
» ಋತು	:	ಶಿಶಿರ
» ಮಾಸ	:	ಫಾಲ್ಗುಣ
» ಪಕ್ಷ	:	ಶುಕ್ಲ ಪಕ್ಷ

ಡಿಸಿಎಂ ಡಿ.ಕೆ.ಶಿವಕುಮಾರ್ ಕುರಿತು ಸಿಎಂ ಹೇಳಿಕೆ | ನಿರುದ್ಯೋಗಿ ಪ್ರತಿಪಕ್ಷ ನಾಯಕರಿಂದ ಸಂಬಂಧಕ್ಕೆ ಹುಳಿ ಹಿಂಡುವ ಯತ್ನ
ಇದೊಂದು ಅತೃಪ್ತ ಆತ್ಮಗಳ ಹತಾಶೆಯ ಹೇಳಿಕೆ | ಪ್ರತಿಪಕ್ಷಗಳ ಫೋನ್ ಟ್ಯಾಪ್ ಆರೋಪಕ್ಕೆ ಸಿಎಂ ಸಿದ್ದರಾಮಯ್ಯ ಕಿಡಿ

ಹಾಲು-ಜೇನಿನ ಸಂಬಂಧಕ್ಕೆ ಹುಳಿ ಹಿಂಡಲು ಸಾಧ್ಯವಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನನ್ನ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಹಾಲು-ಜೇನಿನ ಸಂಬಂಧಕ್ಕೆ ಹುಳಿ ಹಿಂಡುವ ಪ್ರತಿಪಕ್ಷಗಳ ಕುತಂತ್ರ ಎಂದಿಗೂ ಫಲಿಸಲ್ಲ. ಅವರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು, ನಮ್ಮ ಸಂಬಂಧದ ಮೇಲೆ ಯಾವುದೇ ಧಕ್ಕೆಯಾಗಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಆಪ್ತರ ಮೇಲೆ ಕಣ್ಣಿಡಲು ಫೋನ್ ಕದ್ದಾಲಿಕೆ ನಡೆಯುತ್ತಿದೆ ಎನ್ನುವ ಪ್ರತಿಪಕ್ಷ ಆರ್.ಅಶೋಕ್ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಸಿದ್ದರಾಮಯ್ಯ, ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಈ ಬಗ್ಗೆ ಸುದೀರ್ಘ ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, ಪ್ರತಿಪಕ್ಷ ನಾಯಕರ ಆರೋಪ 'ತಾ ಕಳ್ಳ ಇತರರ ನಂಬ'' ಎಂಬ ಗಾದೆಯಂತಿದೆ. ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆ ಎಂದು ಕಿಡಿಕಾರಿದ್ದಾರೆ.

ಈ ಬಾರಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ನಂತರ ಈ ನಿರುದ್ಯೋಗಿ ಪ್ರತಿಪಕ್ಷದ ನಾಯಕರು ನನ್ನ ಮತ್ತು ಡಿ.ಕೆ. ಶಿವಕುಮಾರ್ ನಡುವಿನ ಸಂಬಂಧಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಲೇ ಇದ್ದಾರೆ. ಇದರಿಂದ ಅವರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು ನಮ್ಮ ಹಾಲು-ಜೇನಿನಂತಹ ಸಂಬಂಧದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ ಎನ್ನುವುದು ಇಬ್ಬರಿಗೂ ತಿಳಿದಿರಲಿ. ಆರೋಪ ಮಾಡಿರುವ ಒಬ್ಬರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು, ಇನ್ನೊಬ್ಬರು ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವರಾಗಿದ್ದವರು. ಅವರ ಕಾಲದಲ್ಲಿ ಕೂಡಾ ಗುಪ್ತಚರ ವಿಭಾಗ ಮುಖ್ಯಮಂತ್ರಿಯವರ ಬಳಿಯೇ ಇತ್ತು. ಅವರ ಹೇಳಿಕೆಗಳನ್ನು ಗಮನಿಸಿದರೆ ಇವರಿಬ್ಬರೂ ತಮ್ಮ ಅನುಭವದ ಬಲದಿಂದಲೇ ಈ ಆರೋಪ ಮಾಡುತ್ತಿರುವಂತೆ ಕಾಣಿಸುತ್ತಿದೆ ಎಂದು ವ್ಯಂಗ್ಯವಾಡಿದ್ದಾರೆ.



ನಮ್ಮದು ಆಂತರಿಕ ಪ್ರಜಾಪ್ರಭುತ್ವ ಪಕ್ಷ: ಕಾಂಗ್ರೆಸ್ ಆಂತರಿಕ ಪ್ರಜಾಪ್ರಭುತ್ವವಿರುವ ಪಕ್ಷ. ಕಾಂಗ್ರೆಸ್ ಎನ್ನುವುದು ಪ್ರಧಾನಿ ಎದುರು ಬಾಯಿ ಬಿಡಲಾಗದೆ ಕೈಕಾಲು ನಡುಗುವಂತಹ ಸ್ಥಿತಿಯಿರುವ ಬಿಜೆಪಿಯೂ ಅಲ್ಲ, ಏಕ ಕುಟುಂಬದ ಅಧಿಪತ್ಯವಿರುವ ಜೆಡಿಎಸ್ ಕೂಡಾ ಅಲ್ಲ. ನಮ್ಮ ಶಾಸಕರಲ್ಲಿ ಯಾರೂ ಕೂಡಾ ನನ್ನ ಅಥವಾ ಡಿ.ಕೆ.ಶಿವಕುಮಾರ್ ಬೆಂಬಲಿಗರಲ್ಲ, ಎಲ್ಲರೂ ಕಾಂಗ್ರೆಸ್ ಪಕ್ಷದ ಬೆಂಬಲಿಗರು. ಪಕ್ಷದ ಶಿಸ್ತಿನ ಚೌಕಟ್ಟಿನೊಳಗೆ ವೈಯಕ್ತಿಕವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ, ಜತೆಯಲ್ಲಿ ಊಟ-ತಿಂಡಿ ಮಾಡುವ ಎಲ್ಲ ಸ್ವಾತಂತ್ರ್ಯಗಳು ಅವರಿಗೆ ಇದೆ. ಆದರೆ ಯಾವ ಶಾಸಕರು ಏನನ್ನೇ ಹೇಳಿದರೂ ಅಂತಿಮವಾಗಿ ಅವರನ್ನೂ ಸೇರಿದಂತೆ ನಾನು ಮತ್ತು ಶಿವಕುಮಾರ್ ನಮ್ಮ ಪಕ್ಷದ ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು. ಇದನ್ನು ನಾವಿಬ್ಬರೂ ಒಂದಲ್ಲ ನೂರು ಬಾರಿ ಹೇಳಿದ್ದೇವೆ. ಇದೇ ಅಂತಿಮ ಸತ್ಯ.

ಸುಳ್ಳು ಸುದ್ದಿಗಳನ್ನು ಹರಡಿ ನಮ್ಮಿಬ್ಬರ ಸಂಬಂಧವನ್ನು ಕೆಡಿಸಿ ಡಿ.ಕೆ.ಶಿವಕುಮಾರ್ ಅವರನ್ನು ಒಲಿಸಿಕೊಳ್ಳುವ ದುರಾಲೋಚನೆ ಏನಾದರೂ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಇದ್ದರೆ, ಅವರ ಹಗಲು ಕನಸುಗಳಿಗೆ ಶುಭ ಹಾರೈಸುತ್ತೇನೆ. ಶಿವಕುಮಾರ್ ಒಬ್ಬ ಕಟ್ಟಾ ಕಾಂಗ್ರೆಸಿಗ, ಸುಳ್ಳು ಕೇಸ್‌ಗಳನ್ನು ಹಾಕಿ, ಜೈಲಿಗೆ ಕಳಿಸಿ ಅವರನ್ನು ಮಣಿಸುವ ಎಲ್ಲ ಪ್ರಯತ್ನಗಳನ್ನು ಬಿಜೆಪಿ ಮಾಡಿಯಾಗಿದೆ. ಇದಕ್ಕೆಲ್ಲ ಮಣಿಯದೆ ಅವರು ಪಕ್ಷಕ್ಕೆ ನಿಷ್ಠರಾಗಿ ಉಳಿದವರು ಎನ್ನುವುದು ಈ ಕುತಂತ್ರಿ ನಾಯಕರಿಗೆ ತಿಳಿದಿರಲಿ ಎಂದಿದ್ದಾರೆ.

ಅಧಿಕಾರವನ್ನು ದುರ್ಬಳಕೆ ಮಾಡಿ ಸರಕಾರಿ ಯಂತ್ರಗಳ ಮೂಲಕವೇ ಪ್ರತಿಪಕ್ಷದ ನಾಯಕರನ್ನು ಮಾತ್ರವಲ್ಲ, ಸ್ವಪಕ್ಷದಲ್ಲಿ ತಮ್ಮ ನಾಯಕತ್ವಕ್ಕೆ ಪೈಪೋಟಿ ನೀಡಬಲ್ಲ ನಾಯಕರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಪ್ರಯತ್ನವನ್ನು ಪ್ರಧಾನಿ ನರೇಂದ್ರ ಮೋದಿಯವರು ತಾವು ಅಧಿಕಾರಕ್ಕೆ ಬಂದ ದಿನದಿಂದಲೇ ಮಾಡುತ್ತಿದ್ದಾರೆ ಎನ್ನುವುದು ಜಗಜ್ಜಾಹೀರಾಗಿರುವ ಸತ್ಯ. ಹಾಡಹಗಲೇ ಪೊಲೀಸ್, ಸಿಬಿಐ, ಇಡಿ, ಐಟಿ ಇಲಾಖೆಗಳ ದುರ್ಬಳಕೆಯಾಗುತ್ತಿರುವ ಬಗ್ಗೆ ಇಡೀ ದೇಶದ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಇಂತಹವರು ತಮ್ಮ ರಾಜಕೀಯ ವಿರೋಧಿಗಳ ಫೋನ್ ಗಳನ್ನು ಕದ್ದು ಆಲಿಸದೆ ಬಿಡುತ್ತಾರೆಯೇ? ಆದರೆ ಇಂತಹ ಬೆದರಿಕೆಗಳಿಗೆ ನಾನಾಗಲಿ, ನನ್ನ ಪಕ್ಷದ ಯಾವ ನಾಯಕರಾಗಲಿ ಜಗ್ಗುವವರಲ್ಲ, ಬಗ್ಗುವವರೂ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

> ಕುಮಾರಸ್ವಾಮಿ, ಅಶೋಕ್ ತಮ್ಮ ಅಮೂಲ್ಯ ಕ್ಷಣಗಳನ್ನು ಈ ರೀತಿ ಕುಟಿಲ ರಾಜಕೀಯದಲ್ಲಿ ವ್ಯರ್ಥಮಾಡುವ ಬದಲಿಗೆ ರಚನಾತ್ಮಕ ಪ್ರತಿಪಕ್ಷದ ರೀತಿಯಲ್ಲಿ ಕೆಲಸ ಮಾಡಿ ರಾಜ್ಯಕ್ಕೆ ಒಳ್ಳೆಯದನ್ನು ಮಾಡಲಿ. ರಾಜ್ಯದ ಪ್ರಜ್ಞಾವಂತ ಮತದಾರರು ಐದು ವರ್ಷಗಳ ಕಾಲ ಸರಕಾರ ನಡೆಸಲು ನಮಗೆ ಜನಾದೇಶ ನೀಡಿದ್ದಾರೆ. ಪ್ರತಿಪಕ್ಷಗಳ ಎಲ್ಲ ಕುತಂತ್ರ-ಕುಚೇಷ್ಟೆಗಳ ನಡುವೆಯೂ ಈ ಅವಧಿಯನ್ನು ಕಾಂಗ್ರೆಸ್ ಪಕ್ಷ ಪೂರ್ಣಗೊಳಿಸಲಿದೆ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯೇ ಇರುತ್ತಾರೆ.
>
> - ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜಕೀಯ ದುರ್ಬುದ್ಧಿ ಯಾವ ಪಕ್ಷದ್ದು ಎನ್ನುವುದು ಗೊತ್ತಿದೆ

ಕರ್ನಾಟಕದ ಇತ್ತೀಚಿನ ರಾಜಕೀಯ ಇತಿಹಾಸದ ಪುಟಗಳ ಮೇಲೆ ಒಮ್ಮೆ ಕಣ್ಣಾಡಿಸಿದರೆ ಈ ಫೋನ್ ಕದ್ದಾಲಿಕೆ, ಗೂಢಚರ್ಯೆಗಳೆಲ್ಲ ಯಾವ ಪಕ್ಷದ ದುಷ್ಕೃತ್ಯಗಳು ಎನ್ನುವುದು ಅರಿವಾಗುತ್ತದೆ. ಈ ದುರ್ಬುದ್ಧಿಯ ಕಾರಣದಿಂದಾಗಿಯೇ ರಾಜ್ಯ ರಾಜಕೀಯದಲ್ಲಿ ಆಪರೇಷನ್ ಕಮಲ, ರೆಸಾರ್ಟ್ ರಾಜಕಾರಣ, ವಚನಭಂಗದಂತಹ ಅನಿಷ್ಟಗಳು ಕಾಣಿಸಿಕೊಂಡಿರುವುದು. 2004ರಿಂದ 2013 ವರೆಗಿನ ಒಂಬತ್ತು ವರ್ಷಗಳ ಅವಧಿಯಲ್ಲಿ ರಾಜ್ಯ ಐದು ಮುಖ್ಯಮಂತ್ರಿಗಳನ್ನು, 2018ರಿಂದ 2023ರ 5 ವರ್ಷಗಳ ಅವಧಿಯಲ್ಲಿ ಮೂರು ಮುಖ್ಯಮಂತ್ರಿಗಳನ್ನು ರಾಜ್ಯ ಕಾಣುವಂತಾಗಲು ಇವರೊಳಗಿನ ಪರಸ್ಪರ ಅಪನಂಬಿಕೆ, ದ್ವೇಷ, ಅಸೂಯೆ, ಬೆನ್ನಿಗೆ ಚೂರಿ ಹಾಕುವ ಕುತಂತ್ರಗಳೇ ಕಾರಣ. 2018ರಲ್ಲಿ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮಿಗಳ ಫೋನನ್ನೆ ಕದ್ದಾಲಿಸಿದ್ದಾರೆ ಎಂದು ಈಗಿನ ಅವರ ರಾಜಕೀಯ ಸಂಗಾತಿ ಬಿ.ವೈ ವಿಜಯೇಂದ್ರ ಅವರೇ ಆರೋಪ ಮಾಡಿದ್ದರು. ಇಂತಹ ದುರ್ಬುದ್ದಿಗಾಗಿಯೇ ರಾಜ್ಯದ ಜನತೆ ಈ ಎರಡೂ ಪಕ್ಷಗಳನ್ನು ತಿರಸ್ಕರಿಸಿರುವುದು ಎನ್ನುವುದು ನೆನಪಿರಲಿ. ಕುಮಾರಸ್ವಾಮಿಯವರಿಗೆ ಈ ಗೂಢಚರ್ಯೆಯ ಪಾಠವನ್ನು ಅವರ ಪೂಜ್ಯ ತಂದೆಯವರೇ ಹೇಳಿಕೊಟ್ಟಿರಬಹುದು. ತನ್ನನ್ನು ಪ್ರಧಾನಿ ಮಾಡಿದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಸೀತಾರಾಂ ಕೇಸರಿಯವರ ವಿರುದ್ಧವೇ ಗೂಢಚರ್ಯೆ ಮಾಡಿದ್ದ ಕಾರಣಕ್ಕೆ ಕಾಂಗ್ರೆಸ್ ಪಕ್ಷ ತನ್ನ ಬೆಂಬಲವನ್ನು ಹಿಂದೆಗೆದುಕೊಂಡಿರುವುದು ಇತಿಹಾಸದ ಪುಟಗಳಲ್ಲಿದೆ. ಈ ಅಪನಂಬಿಕೆ ಮತ್ತು ಸಣ್ಣತನಗಳಿಂದಾಗಿ ಕನ್ನಡಿಗರೊಬ್ಬರು ಇನ್ನಷ್ಟು ಕಾಲ ಪ್ರಧಾನಿಯಾಗುವ ಅವಕಾಶ ತಪ್ಪಿಹೋಯಿತು ಎನ್ನುವುದು ವಿಷಾದನೀಯ ವಾಸ್ತವ ಎಂದು ಸಿಎಂ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಸಿದ್ದರಾಮಯ್ಯ ಮಾತು ನಿಜ:ಡಿ.ಕೆ.ಶಿವಕುಮಾರ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರ ಮಾತು ನಿಜ. ನಮ್ಮಿಬ್ಬರದ್ದು ಹಾಲು ಜೇನಿನ ಸಂಬಂಧ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದರು. ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ

ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಅನುಭವದ ಮಾತು ಹೇಳಿದ್ದಾರೆ. ನನ್ನನ್ನು ಅವರು ಹತ್ತಿರದಿಂದ ನೋಡಿ ದ್ದಾರೆ. ನಮ್ಮಿಬ್ಬರು ಹಾಲುಜೇನಿನ ಸಂಬಂಧವೇ ಖಂಡಿತ. ನನಗೆ ಒಳ್ಳೆಯದಾಗಬೇಕಿದರೆ ಎಲ್ಲರು ಸುಮ್ಮನಿರಿ ಎಂದು ಶಾಸಕರಿಗೆ ಡಿಸಿಎಂ ಡಿಕೆಶಿ ಮನವಿ ಮಾಡಿದರು.

ಫೋನ್‌ಟ್ಯಾಪಿಂಗ್ ಆರೋಪ ಪ್ರತಿಕ್ರಿಯಿಸಿ, ಮುಖ್ಯಮಂತ್ರಿಗಳಿದ್ದಾರೆ, ಗೃಹ ಸಚಿವರಿದ್ದಾರೆ. ನನ್ನ ಬೆಂಗಾವಲಿಗೆ ಪೊಲೀಸರು ಇದ್ದಾರೆ. ನಾನು ಹಿಂದೇ ಏನೋ ಕೇಳಿದ್ದೆ, ಸ್ವಾಮಿಗಳದ್ದು ಏನೋ ಅಂತ. ಆಗ ನಾನು ಸರಕಾರದ ಭಾಗವಾಗಿರಲಿಲ್ಲ ಎಂದು ಪರೋಕ್ಷವಾಗಿ ಸಮ್ಮಿಶ್ರ ಸರಕಾರದ ಅವಧಿಯಲ್ಲಿ ನಡೆದ ಫೋನ್ ಟ್ಯಾಪಿಂಗ್ ಪ್ರಕರಣದ ಬಗ್ಗೆ ಉಲ್ಲೇಖಿಸಿದರು. ನಾನು ಇವತ್ತಿನವರೆಗೂ ಮುಖ್ಯಮಂತ್ರಿ ಸ್ಥಾನದ ವಿಚಾರವಾಗಿ ಮಾತನಾಡಿಲ್ಲ. ನಾನುಂಟು, ಮುಖ್ಯಮಂತ್ರಿಗಳುಂಟು. ಮುಖ್ಯಮಂತ್ರಿ ಸ್ಥಾನ ಬದಲಾವಣೆಯ ಬಗ್ಗೆ ನಾನು ಮಾತೇ ಆಡಿಲ್ಲ. ನಾನೊಬ್ಬ ಪಕ್ಷದ ಅಧ್ಯಕ್ಷನಾಗಿದ್ದೇನೆ. ಕುರ್ಚಿಯಲ್ಲಿ ಕುಳಿತು ಆಸ್ಥಾನಕ್ಕೆ ಪಾಯಿಂಟ್ ಔಟ್ ಮಾಡಬಾರದು. ಪಕ್ಷಕ್ಕೆ ಅನ್ಯಾಯ ಮಾಡ್ತಿದ್ದೀಯ ಅಂತ ಹೇಳಬಾರದು. ಸರಿಯಾಗ್ತಿದ್ಯೋ ಏನೋ ಗೊತ್ತಿಲ್ಲ. ನಾವು ತ್ಯಾಗ ಮಾಡಬೇಕು ಎಂದರು.

ಯಾರ ಫೋನ್‌ಗಳು ಟ್ಯಾಪ್ ಆಗಿಲ್ಲ: ಆರೋಪ ನಿರಾಕರಣೆ

ಬೆಂಗಳೂರು: ರಾಜಕೀಯ ಗುಪ್ತಚರ ಎನ್ನುವ ಪ್ರತ್ಯೇಕ ವಿಭಾಗವಿದ್ದು, ಅದರ ಮೂಲಕ ಮುಖ್ಯಮಂತ್ರಿಗಳಿಗೆ ಸಹಜವಾಗಿ

ನಿತ್ಯ ಮಾಹಿತಿ ರವಾನೆಯಾಗುತ್ತದೆ. ಹೀಗಿರುವಾಗ ಪ್ರತ್ಯೇಕ ಫೋನ್ ಟ್ಯಾಪ್ ಏಕೆ ಮಾಡಿಸುತ್ತಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ಫೋನ್ ಟ್ಯಾಪ್ ಆರೋಪಕ್ಕೆ ಪ್ರತಿಕ್ರಿಯಿಸಿ, ಸರಕಾರ ನಡೆಸೋದು ನಮಗೆ ಹೆಚ್ಚಿನ ಮಾಹಿತಿಯಿರುತ್ತದೆ. ಗೂಢಚಾರಿಕೆ, ಫೋನ್‌ಟ್ಯಾಪ್ ಮಾಡಿಸಲಾಗುತ್ತಿದೆ ಎಂದು ಪ್ರತಿಪಕ್ಷದವರಿಗೆ ಯಾರು ಹೇಳಿದ್ದು? ಇಂತಹ ಬೆಳವಣಿಗೆ ಯಾವುದೂ ನಡೆಯುತ್ತಿಲ್ಲ. ನಮ್ಮ ಗಮನಕ್ಕೆ ಅಧಿಕೃತವಾಗಿ ಆ ರೀತಿಯದ್ದು ಯಾವುದೂ ಇಲ್ಲ. ಇಂತಹ ಯಾವುದೇ ವಿಷಯ ಮುಖ್ಯಮಂತ್ರಿಗಳ ಗಮನದಲ್ಲಿಯೂ ಇಲ್ಲ ಎಂದು ಸ್ಪಷ್ಟಪಡಿಸಿದರು. ಪೊಲಿಟಿಕಲ್ ಇಂಟಲಿಜೆನ್ಸ್ ಅನ್ನೋ ಪ್ರತ್ಯೇಕ ವಿಭಾಗವೇ ಇದೆ. ಅದರ ಮೂಲಕ ಸಿಎಂಗೆ ಮಾಹಿತಿ ಸಹಜವಾಗಿ ನಿತ್ಯ ಹೋಗುತ್ತದೆ. ಫೋನ್ ಟ್ಯಾಪಿಂಗ್ ಮಾಡಿ ಯಾರ್ಯಾರು ಎಲ್ಲೆಲ್ಲಿ ಹೋದರು? ಏನು ಮಾಡಿದರು ಎಂದು ತಿಳಿಯಬೇಕಿಲ್ಲ. ಪೊಲಿಟಿಕಲ್ ಇಂಟಲಿಜೆನ್ಸ್ ಮೂಲಕ ಹಿಂದಿನಿಂದಲೂ ಎಲ್ಲ ಸಿಎಂಗಳಿಗೂ ಮಾಹಿತಿ ಹೋಗುತ್ತದೆ. ನಿರ್ದಿಷ್ಟವಾಗಿ ಯಾವ ಮಾಹಿತಿ ಬೇಕು ಅನ್ನೋದು ಸಿಎಂ ವಿವೇಚನೆಗೆ ಬಿಟ್ಟಿದ್ದು ಎಂದರು.

> ಖಮೇನಿ ಪರ ಪ್ರತಿಭಟನೆ ನಡೆಸಿರುವುದು ನಿಯಮ ಬಾಹಿರ. ನ್ಯಾಯಾಲಯ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡಲು ಸೂಚನೆ ನೀಡಿದೆ. ಭಾನುವಾರ ಪ್ರತಿಭಟನೆ ಮಾಡಿದವರ ವಿರುದ್ಧ ಕ್ರಮದ ಬಗ್ಗೆ ಚರ್ಚೆ ಮಾಡುತ್ತೇನೆ. ಹ್ಯಾರೀಸ್ ಇರಲಿ, ಯಾರೇ ಇರಲಿ ನಿಯಮಾನುಸಾರ ಪ್ರತಿಭಟನೆ ಮಾಡಬೇಕು. ತಪ್ಪಾಗಿದ್ದರೆ ಪರಿಶೀಲಿಸಿ ಕ್ರಮ ತಗೆದುಕೊಳ್ಳುತ್ತೇವೆ.
>
> -ಡಾ.ಜಿ.ಪರಮೇಶ್ವರ, ಗೃಹ ಸಚಿವ

ಮಕ್ಕಳ ಕಳ್ಳಿ ವದಂತಿ ವಿಡಿಯೊ ಕುಟುಂಬ ಸೇರಿದ ಅಸ್ವಸ್ಥ ಮಹಿಳೆ

ಕಲಬುರಗಿ: ರಾಜ್ಯಾದ್ಯಂತ ಹರಡಿರುವ 'ಮಕ್ಕಳ ಕಳ್ಳಿಯರು' ಎಂಬ ವದಂತಿಯು ಅಮಾಯಕ ಮಹಿಳೆಯೊಬ್ಬರ ಮೇಲೆ ಅಮಾನವೀಯ ಹಲ್ಲೆಗೆ ಕಾರಣವಾಗಿದ್ದು, ಅದೇ ವಿಡಿಯೊ ಈಗ ಎರಡು ವರ್ಷಗಳಿಂದ ದೂರವಾಗಿದ್ದ ತಾಯಿ-ಮಗನನ್ನು ಒಂದು ಮಾಡಿದ ಅಪರೂಪದ ಘಟನೆಗೆ ಸಾಕ್ಷಿಯಾ ಗಿದೆ.

ನಗರದ ಸಿದ್ದೇಶ್ವರ ಕಾಲೋನಿ ಬಳಿ ಇತ್ತೀಚೆಗೆ ಮಾನಸಿಕ ಅಸ್ವಸ್ಥ ಮಹಿಳೆಯೊಬ್ಬರನ್ನು 'ಮಕ್ಕಳ ಕಳ್ಳಿ' ಎಂದು ಶಂಕಿಸಿದ ಸಾರ್ವಜನಿಕರು ಅವರ ಮೇಲೆ ಹಲ್ಲೆ ನಡೆಸಿದ್ದರು. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ವಿವಿ ಠಾಣೆ ಪೊಲೀಸರು, ಮಹಿಳೆಯನ್ನು ರಕ್ಷಿಸಿ ಸುರಕ್ಷತೆಗಾಗಿ ವೃದ್ಧಾಶ್ರಮಕ್ಕೆ ದಾಖಲಿಸಿದ್ದರು.

ವೈರಲ್ ವಿಡಿಯೊ ತಂದ ಭಾಗ್ಯ : ಘಟನೆಯ ಸಂದರ್ಭದಲ್ಲಿ ಸ್ಥಳೀಯರು ಚಿತ್ರೀಕರಿಸಿದ್ದ ಹಲ್ಲೆಯ ವಿಡಿಯೊ ಇನ್ ಸ್ಟಾಗ್ರಾಮ್‌ನಲ್ಲಿ ವೈರಲ್ ಆಗಿತ್ತು. ವಿಡಿಯೊ ವೀಕ್ಷಿಸಿದ ಸೇಡಂ ತಾಲೂಕಿನ ಮಳಖೇಡ ನಿವಾಸಿ ರಾಚಯ್ಯ, ವಿಡಿಯೋದಲ್ಲಿದ್ದ ಮಹಿಳೆ ತನ್ನ ತಾಯಿ ಬಸಮ್ಮ ಸ್ಥಾವರಮಠ ಎಂದು ಗುರುತಿಸಿದ್ದಾರೆ.

2 ವರ್ಷಗಳ ಹಿಂದೆ ನಾಪತ್ತೆ

ಮಾನಸಿಕ ಅಸ್ವಸ್ಥತೆಯಿಂದ ಕಳೆದ 2 ವರ್ಷಗಳ ಹಿಂದೆ ಬಸಮ್ಮ ಮನೆಯಿಂದ ನಾಪತ್ತೆಯಾಗಿದ್ದರು. ಮಗ ರಾಚಯ್ಯ ಹಲವೆಡೆ ಹುಡುಕಾಟ ನಡೆಸಿದರೂ ಸುಳಿವು ಸಿಕ್ಕಿರಲಿಲ್ಲ. ಹಲ್ಲೆ ವಿಡಿಯೊ ಮಗನಿಗೆ ತಾಯಿಯ ಪತ್ತೆಗೆ ಸಹಕಾರಿ ಆಗಿದೆ. ವಿಡಿಯೊ ನೋಡಿ ವಿವಿ ಠಾಣೆಗೆ ಧಾವಿಸಿದ ರಾಚಯ್ಯ, ಅಗತ್ಯ ದಾಖಲೆ ಸಲ್ಲಿಸಿ ವೃದ್ಧಾಶ್ರಮದಲ್ಲಿದ್ದ ತಾಯಿಯನ್ನು ಮನೆಗೆ ಕರೆದುಕೊಂಡು ಹೋಗಿದ್ದಾರೆ.

ಗ್ರಹಣದ ಹಿನ್ನೆಲೆ ಮಂಗಳವಾರ ಮಧ್ಯಾಹ್ನ 1.40ಕ್ಕೆ ಐತಿಹಾಸಿಕ ಕುರುಗೋಡು ದೊಡ್ಡ ಬಸವೇಶ್ವರ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ರಥದ ವೈಭೋಗವನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು.

ಸರಕಾರಿ ಕ್ಷೌರದ ಅಂಗಡಿ ತೆರೆದವರ ವಿರುದ್ಧ ಕ್ರಮ ಕೈಗೊಳ್ಳಿ

ಗದಗ: ಜಿಲ್ಲೆಯ ಮುಂಡರಗಿ ತಾಲೂಕಿನ ಶಿಂಗಟಾಲೂರುನಲ್ಲಿ ಸರಕಾರಿ ಸಲೂನ್

ತೆರೆದು, ಅಸ್ಪೃಶ್ಯತೆ ಜೀವಂತವಾಗಿಡುವ ಕೆಲಸ ಮಾಡಿದ ಅಲ್ಲಿನ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಹಾಗೂ ತಹ ಸೀಲ್ದಾರ್ ವಿರುದ್ಧ ಜಿಲ್ಲಾಡಳಿತ ಕಾನೂನು ಕ್ರಮ ಜರುಗಿಸಬೇಕು ಎಂದು ಸಾಹಿತಿ ಬಸವರಾಜ ಸೂಳಿಭಾವಿ ಆಗ್ರಹಿಸಿದರು.

ಮೇಲ್ನೋಟಕ್ಕೆ ಇದು ಕ್ರಾಂತಿಕಾರಕ ಅನ್ನಿಸಿದರೂ ಆಳದಲ್ಲಿ ಅಸ್ಪೃಶ್ಯತೆ ಜೀವಂತ ಇಡುವ ಯತ್ನವಾಗಿದೆ ಎಂದು ಆರೋಪಿಸಿದರು. ಹಡಪದ ಸಮಾಜದವರು ಪರಿಶಿಷ್ಟರಿಗೆ ಕ್ಷೌರ ಮಾಡುತ್ತಿರಲಿಲ್ಲ. ಸಮಸ್ಯೆ ಹಲವು ವರ್ಷಗಳಿಂದ ಇತ್ತು. ಬಗೆಹರಿಸಲು ಅಧಿಕಾರಿಗಳು ಬೇರೆ ಊರಿನಿಂದ ಒಬ್ಬರನ್ನು ಕರೆತಂದು ಸಲೂನ್ ತೆರೆದಿದ್ದಾರೆ. ಅದಕ್ಕ ಅಭಿನಂದನೆ. ಆದರೆ, ಅಸ್ಪೃಶ್ಯತೆ ಆಚರಿಸಿದ ಜನರ ವಿರುದ್ಧ ಜಿಲ್ಲಾಡಳಿತದ ಕ್ರಮವೇನು? ಎಂದು ಪ್ರಶ್ನಿಸಿದರು. ಅಸ್ಪೃಶ್ಯತೆ ಆಚರಣೆ ಮಾಡುವ ಜನರಿಗೆ ಕಾನೂನಾತ್ಮಕ ರಕ್ಷಣೆ ಕೊಟ್ಟಿರುವ ಅಧಿಕಾರಿಗಳ ಮೇಲೆ ಜಿಲ್ಲಾಡಳಿತ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಅವರ ಮೇಲೆ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಸಮಿತಿ ಸಭೆಗಳು ನಡೆಯುತ್ತವೆ. ಆದರೆ, ಈ ಸಭೆಗಳಲ್ಲಿ ಯಾರೇ ಒಬ್ಬ ಜನಪ್ರತಿನಿಧಿಯೂ ಈವರೆಗೆ ಭಾಗವಹಿಸಿಲ್ಲ. ಸಭೆಯಲ್ಲಿ ಪಾಲ್ಗೊಳ್ಳದೇ ಅಸ್ಪೃಶ್ಯತೆಯನ್ನು ಜೀವಂತಿಕೆ ಇಟ್ಟಿರುವ ಶಾಸಕರ ವಿರುದ್ಧವೂ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಖಮೇನಿ ಸಾವಿಗೆ ಪ್ರತಿಭಟನೆ ಸಲ್ಲ

ಚಿಕ್ಕಮಗಳೂರು: ಪಹಲ್ಗಾಮ್ ದಾಳಿಯಾದಾಗ ಸುಮ್ಮನಿದ್ದವರು ಖಮೇನಿ ಹತ್ಯೆಗೆ ಪ್ರತಿಭಟಿಸುತ್ತಿದ್ದಾರೆ ಎಂದು ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಈ ವೇಳೆ, ಇರಾನ್



ಪರಮೋಚ್ಚ ನಾಯಕ ಖಮೇನಿ ಓರ್ವ ರಾಕ್ಷಸ. ಮಹಿಳೆಯರ ಮೇಲೆ ಅತ್ಯಂತ ದೌರ್ಜನ್ಯ ಎಸಗಿದವರ ಪರ ಪ್ರತಿಭಟನೆ ಮಾಡುವವರಿಗೆ ಮಾನ ಮರ್ಯಾದೆ ಇದೆಯಾ? ಎಂದು ಪ್ರಶ್ನಿಸಿದರು. ಇದೇ ವೇಳೆ, ಬೆಂಗಳೂರು ಮತ್ತು ಶಿವಮೊಗ್ಗದಲ್ಲಿ ಶಿಯಾ ಮುಸ್ಲಿಮರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿರುವುದನ್ನು ಅವರು ಖಂಡಿಸಿದ್ದಾರೆ. ಮುಸ್ಲಿಂ ರಾಷ್ಟ್ರಗಳನ್ನು ನೆಮ್ಮದಿಯಿಂದ ಇರಲು ಬಿಡದ ಈ ವ್ಯಕ್ತಿ ಭಾರತದ ಪಾಲಿಗೂ ವಿರೋಧಿ ಆಗಿದ್ದರು. ಕಾಶ್ಮೀರಕ್ಕೆ ಸಂಬಂಧಿಸಿದ ವಿಧಿ 370 ರದ್ದುಪಡಿಸಿದಾಗ ಅದನ್ನು ಬಲವಾಗಿ ವಿರೋಧಿಸಿದ್ದರು. ಇಂತಹ ವ್ಯಕ್ತಿ ಸತ್ತಾಗ ನಮ್ಮ ದೇಶದಲ್ಲಿ ಪ್ರತಿಭಟನೆ ನಡೆಸುವ ಅಗತ್ಯವೇನಿದೆ? ಅವರಿಗೂ ಇಲ್ಲಿನವರಿಗೂ ಏನು ಸಂಬಂಧ ಎಂದು ಅವರು ಪ್ರಶ್ನಿಸಿದ್ದಾರೆ. ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಜನರ ಹೆಣ ಬಿದ್ದಾಗ ಅಥವಾ ದೇಶದ ಜನ ಸತ್ತಾಗ ಮೌನವಾಗಿದ್ದವರು. ಈಗ ಎಲ್ಲಿಯೋ ಸತ್ತ ಕ್ರೂರಿಗಾಗಿ ನಮ್ಮ ದೇಶದ ಅನ್ನ ತಿಂದು ಪ್ರತಿಭಟಿಸುರುವುದು ಎಷ್ಟು ಸರಿ ಎಂದರು.

ಕಲಬುರಗಿ ಜಿಲ್ಲೆಗೆ ಚತುಷ್ಪಥ ರಸ್ತೆ ಭಾಗ್ಯವಿಲ್ಲದ ವಿಪರ್ಯಾಸ | ಜಿಲ್ಲೆಗೆ ಬೇಕಿದೆ ಅಭಿವೃದ್ಧಿಯ ಕಾಯಕಲ್ಪ | ರಾಜ್ಯ ಬಜೆಟ್ ಮೇಲೆ ನಿರೀಕ್ಷೆ

ಶೂನ್ಯ ಚತುಷ್ಪಥದ ಕಲಬುರಗಿಗೆ ಸಿಗುವುದೇ ವೇಗ?

ದೇವಿಂದ್ರ ಜಾಡಿ ಕಲಬುರಗಿ

ರಾಜ್ಯದ 2ನೇ ಅತಿದೊಡ್ಡ ಜಿಲ್ಲೆ, ಕಲ್ಯಾಣ ಕರ್ನಾಟಕದ ಆಡಳಿತ ಕೇಂದ್ರ ಮತ್ತು ವಿಭಾಗೀಯ ಕೇಂದ್ರ ಎಂಬ ಹತ್ತಾರು ಹಣೆಪಟ್ಟಿಗಳಿರುವ ಕಲಬುರಗಿ ಜಿಲ್ಲೆಗೆ ಇಂದು ಒಂದೇ ಒಂದು ಸಮರ್ಪಕ 'ಚತುಷ್ಪಥ ರಸ್ತೆ' ಇಲ್ಲದಿರುವುದು ವಿಪರ್ಯಾಸ. ರಾಜ್ಯದ ಇತರೆ ನಗರಗಳು ಎಕ್ಸ್‌ಪ್ರೆಸ್ ಹೈವೇಗಳ ಮೂಲಕ ಸಮೃದ್ಧಿಯತ್ತ ಓಡುತ್ತಿದ್ದರೆ, ಕಲಬುರಗಿ ಮಾತ್ರ ದ್ವಿಪಥದ ಇಕ್ಕಟ್ಟಾದ ರಸ್ತೆಗಳಲ್ಲಿ ಸಿಲುಕಿ ಒದ್ದಾಡುತ್ತಿದೆ. ಕಲಬುರಗಿಯಿಂದ ರಾಜಧಾನಿ ಬೆಂಗಳೂರಿಗೆ ತಲುಪಲು 12 ರಿಂದ 15 ಗಂಟೆ ಬೇಕು. ಇದು ಕೇವಲ ಪ್ರಯಾಣದ ಸಮಯವಲ್ಲ, ಜಿಲ್ಲೆಯ ಆರ್ಥಿಕ ಪ್ರಗತಿಯ ಹಿನ್ನಡೆ. ಇಕ್ಕಟ್ಟಾದ ರಸ್ತೆಗಳಿಂದಾಗಿ ಕೈಗಾರಿಕಾ ಹೂಡಿಕೆದಾರರು ಜಿಲ್ಲೆಯತ್ತ ಮುಖ ಮಾಡುತ್ತಿಲ್ಲ. ಕೃಷಿ ಉತ್ಪನ್ನಗಳ ಸಾಗಾಟ ವಿಳಂಬವಾಗುತ್ತಿದೆ. ವೈದ್ಯಕೀಯ ತುರ್ತು ಸಂದರ್ಭಗಳಲ್ಲಿ ನೆರೆಯ ಹೈದರಾಬಾದ್ ಅಥವಾ ಸೋಲಾಪುರಕ್ಕೆ ಹೋಗಬೇಕೆಂದರೂ ಸುಗಮ ರಸ್ತೆಗಳಿಲ್ಲದೆ ರೋಗಿಗಳು ಪ್ರಾಣ ಸಂಕಟ ಅನುಭವಿಸುವಂತಾಗಿದೆ.

ಜಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ?: ರಾಜ್ಯದಲ್ಲಿ ಸುಮಾರು 2,000 ಕಿ.ಮೀ. ನಾಲ್ಕು ಪಥದ

ಹೆದ್ದಾರಿಗಳಿವೆ. ನೆರೆಯ ಬಳ್ಳಾರಿ, ರಾಯಚೂರು ಜಿಲ್ಲೆಗಳು ಈ ಸೌಲಭ್ಯ ಪಡೆದುಕೊಂಡಿವೆ. ಆದರೆ, ಕಲಬುರಗಿ ಜಿಲ್ಲೆಯ ಸಚಿವರು ಮತ್ತು ಶಾಸಕರು ತಮ್ಮದೇ ಸರಕಾರದ ಮೇಲೆ ಒತ್ತಡ ಹೇರುವಲ್ಲಿ ವಿಫಲರಾಗಿದ್ದಾರೆಯೇ? ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಬಲವಾಗಿ ಕೇಳಿಬರುತ್ತಿದೆ. ಕೇಂದ್ರ ಮತ್ತು ರಾಜ್ಯದ ನಡುವಿನ ಸಮನ್ವಯದ ಕೊರತೆಯಿಂದಾಗಿ ರಾಷ್ಟ್ರೀಯ ಹೆದ್ದಾರಿ 50 ಮತ್ತು 150ರ ವಿಸ್ತರಣೆ ಯೋಜನೆಗಳು ಕಡತದಲ್ಲೇ ಧೂಳು ಹಿಡಿಯುತ್ತಿವೆ.

ಬಜೆಟ್ ಮೇಲೆ ನೆಟ್ಟಿದೆ ಜನರ ಚಿತ್ತ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಲಿರುವ ಮುಂಬರುವ ಬಜೆಟ್ ಜಿಲ್ಲೆಯ ಪಾಲಿಗೆ ನಿರ್ಣಾಯಕವಾಗಿದೆ. ಈ ಬಾರಿಯೂ ಚತುಷ್ಪಥ ಯೋಜನೆಗಳಿಗೆ ಸ್ಪಷ್ಟ ಅನುದಾನ ಸಿಗದಿದ್ದರೆ, ಕಲ್ಯಾಣ ಕರ್ನಾಟಕ ಎಂಬ ಘೋಷಣೆ ಕೇವಲ ಕಾಗದದ ಮೇಲೆ ಉಳಿಯಲಿದೆ. ಸರಕಾರ ಈ ಕೂಡಲೇ ಎಚ್ಚೆತ್ತುಕೊಂಡು ಹುಮನಾಬಾದ್-ಬಳ್ಳಾರಿ ಮತ್ತು ಕಲಬುರಗಿ-ಹೈದರಾಬಾದ್ ಮಾರ್ಗಗಳನ್ನು ಆದ್ಯತೆಯ ಮೇರೆಗೆ ಅಭಿವೃದ್ಧಿಪಡಿಸಬೇಕಿದೆ.

ಎಷ್ಟು ಚತುಷ್ಪಥ ರಸ್ತೆಗಳಿವೆ?

- ಬೆಂಗಳೂರು: 11 (ರಾಜ್ಯದಲ್ಲೇ ಅತಿ ಹೆಚ್ಚು)
- ಹುಬ್ಬಳ್ಳಿ: 5, ರಾಯಚೂರು 5
- ಮಂಗಳೂರು, ಬೆಳಗಾವಿ, ವಿಜಯಪುರ, ಶಿವಮೊಗ್ಗ ತಲಾ 4
- ಬಳ್ಳಾರಿ, ಹೊಸಪೇಟೆ ತಲಾ 3
- ದಾವಣಗೆರೆ 2, ಕೊಪ್ಪಳ 2
- ಕಲಬುರಗಿ 00 (ಶೂನ್ಯ ಭಾಗ್ಯ!)

> ಕಲ್ಯಾಣ ಕರ್ನಾಟಕದ ವಿಭಾಗೀಯ ಕೇಂದ್ರಕ್ಕೆ ಸಮರ್ಪಕ ರಸ್ತೆಯೇ ಇಲ್ಲದಿದ್ದರೆ ಹೊಸ ಕಾರ್ಖಾನೆಗಳು ಹೇಗೆ ಬರುತ್ತವೆ? ನಮ್ಮ ಜನಪ್ರತಿನಿಧಿಗಳು ಕೇವಲ ಭರವಸೆ ನೀಡುತ್ತಾ ಕಾಲಹರಣ ಮಾಡುತ್ತಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಅನುದಾನ ಘೋಷಣೆಯಾಗದಿದ್ದರೆ ಮುಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ಹೋರಾಟ ಮಾಡುವುದು ಅನಿವಾರ್ಯತೆ ಸೃಷ್ಟಿಯಾಗಲಿದೆ.
>
> -ಮುತ್ತಣ್ಣ ನಡಗೇರಿ, ಹೋರಾಟಗಾರ

ಎಲ್ಲೆಡೆ ವೇಗ, ಇಲ್ಲಿ ಮಾತ್ರ ನಿಧಾನ!

ಉತ್ತರ ಪ್ರದೇಶ 13 ಎಕ್ಸ್‌ಪ್ರೆಸ್‌ವೇ ಹಾಗೂ 12,000 ಕಿ.ಮೀ ಚತುಷ್ಪಥ ರಸ್ತೆಯೊಂದಿಗೆ ಅಗ್ರಸ್ಥಾನದಲ್ಲಿದೆ. ಬಿಹಾರ, ಬಂಗಾಳ, ಮಧ್ಯ ಪ್ರದೇಶ ಹಾಗೂ ನೆರೆಯ ತೆಲಂಗಾಣ, ಆಂಧ್ರ ರಾಜ್ಯಗಳು ಹೆದ್ದಾರಿ ಜಾಲ ವಿಸ್ತರಣೆಯಲ್ಲಿ ಕ್ರಾಂತಿ ಮಾಡುತ್ತಿವೆ. ಆದರೆ, ಕಲ್ಯಾಣ ಕರ್ನಾಟಕದ ಕಲಬುರಗಿಯಲ್ಲಿ ಮಾತ್ರ ಶೂನ್ಯ ಚತುಸ್ಪತ ರಸ್ತೆ ಇಲ್ಲದೇ, ಅಭಿವೃದ್ಧಿಯಲ್ಲಿ ಹಿನ್ನಡೆ ಅನುಭವಿಸುತ್ತಿದೆ.

ಜಿಲ್ಲೆಗೆ ಬೇಡಿಕೆ ಇರುವ ರಸ್ತೆ ಯೋಜನೆಗಳು

- ಜೇವರ್ಗಿ-ಬಳ್ಳಾರಿ (ಎಸ್‌ಎಚ್-150ಎ): ಈ ಮಾರ್ಗ ಚತುಷ್ಪಥಗೊಳ್ಳಬೇಕು.
- ಹುಮನಾಬಾದ್-ಜೇವರ್ಗಿ (ಎನ್ ಎಚ್-50): 210 ಕಿ.ಮೀ ವಿಸ್ತರಣೆ ಅಗತ್ಯ.
- ಕಲಬುರಗಿ-ಯಾದಗಿರಿ (ಎನ್ ಎಚ್-150): ತುರ್ತು ಚತುಷ್ಪಥ ನಿರ್ಮಾಣ ಬೇಕಿದೆ.
- ಅಂತರರಾಜ್ಯ ಸಂಪರ್ಕ: ಕಲಬುರಗಿ-ಸೇಡಂ-ಹೈದರಾಬಾದ್ ಮಾರ್ಗ ವಾಣಿಜ್ಯ ದೃಷ್ಟಿಯಿಂದ ನಾಲ್ಕು ಪಥವಾಗಲಿ.
- ಲಾತೂರು-ಕಲಬುರಗಿ-ಕೋಡಂಗಲ್ ವಿಸ್ತರಣೆ ಹಾಗೂ ನಗರಕ್ಕೆ ಎರಡನೇ ವಲಯ ರಸ್ತೆ.

ಸಂಪಾದಕೀಯ

ಕಿರೀಟಕ್ಕೆ ಸೇರಿತು ಮತ್ತೊಂದು ಗರಿ

ಉತ್ತರ ಕನ್ನಡ ಜಿಲ್ಲೆಯ ಕೈಗಾ ಅಣುವಿದ್ಯುತ್ ಸ್ಥಾವರದಲ್ಲಿನ 5 ಮತ್ತು 6ನೇ ಘಟಕಗಳ ನಿರ್ಮಾಣಕಾರ್ಯಕ್ಕೆ ಚಾಲನೆ ನೀಡಿರುವುದು ಗೊತ್ತಿರುವ ಸಂಗತಿಯೇ. ಸ್ಥಾವರದಲ್ಲಿ ಸ್ವದೇಶಿ ರಿಯಾಕ್ಟರ್ ನಿಯೋಜನೆಗೆ ಇಡಲಾಗಿರುವ ಮಹತ್ವದ ಹೆಜ್ಜೆಯಿದು ಎಂಬುದು ಗಮನಿಸಬೇಕಾದ ಸಂಗತಿ. ಹಾಗೆ ನೋಡಿದರೆ, ಸ್ವಾತಂತ್ರ್ಯ ನಂತರದ ಕಾಲಘಟ್ಟದಿಂದಲೂ ಸ್ವಾವಲಂಬನೆಯ ಮಂತ್ರವನ್ನು ಜಪಿಸುತ್ತಲೇ ಬಂದಿದ್ದ ಭಾರತಕ್ಕೆ ಈ ನಿಟ್ಟಿನಲ್ಲಿ ಒಂದಿಷ್ಟು ಏರುಗತಿ ದಕ್ಕಿದ್ದು ಕಳೆದ ಒಂದೆರಡು ದಶಕಗಳಿಂದ ಎನ್ನಬೇಕು. ಅದರಲ್ಲೂ ನಿರ್ದಿಷ್ಟವಾಗಿ 'ಮೇಕ್ ಇನ್ ಇಂಡಿಯಾ' ಮತ್ತು 'ಆತ್ಮನಿರ್ಭರ ಭಾರತ' ಎಂಬ ಪರಿಕಲ್ಪನೆಗಳು ಮುನ್ನೆಲೆಗೆ ಬಂದ ಮೇಲಂತೂ ಈ ಬಾಬತ್ತಿನಲ್ಲಿ ಮತ್ತಷ್ಟು ಉತ್ಸಾಹ ಗರಿಗೆದರಿದೆ. ಪ್ರಸ್ತುತ ಕೈಗಾದಲ್ಲಿ ನಿಯೋಜಿಸಲು ಉದ್ದೇಶಿಸಲಾಗಿರುವ 700 ಮೆಗಾವ್ಯಾಟ್ ಸಾಮರ್ಥ್ಯದ ಬೃಹತ್ ರಿಯಾಕ್ಟರ್‌ಗಳನ್ನು ಸಂಪೂರ್ಣವಾಗಿ ದೇಶೀಯ ತಂತ್ರಜ್ಞಾನದಲ್ಲಿ ಅಭಿವೃದ್ಧಿಪಡಿಸಲಾಗಿರುವುದು ಇದಕ್ಕೆ ಪುಷ್ಟಿ ನೀಡುವಂತಿದೆ. ಈಗಾಗಲೇ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಭಾರತವು ಮೆರೆಯುತ್ತಿರುವ ಸಾಧನೆಗಳು ಹಾಗೂ ತೋರುತ್ತಿರುವ ಸ್ವಾವಲಂಬನೆಯ ಛಾಪುಗಳು, ಒಂದಿಡೀ ವಿಶ್ವವೇ ನಮ್ಮತ್ತ ತಿರುಗಿನೋಡುವಂತೆ ಮಾಡಿವೆ. ಹೀಗೆ ಒಂದೊಂದು ಕ್ಷೇತ್ರದಲ್ಲೂ ಪಾರಮ್ಯವನ್ನು ಸಾಧಿಸುತ್ತ ಹೋದಲ್ಲಿ ಭಾರತವು 'ವಿಶ್ವಗುರು' ಎನಿಸಿಕೊಳ್ಳುವುದರಲ್ಲಿ ಅನುಮಾನವಿಲ್ಲ. ಸಾಕಷ್ಟು ವರ್ಷಗಳ ಹಿಂದೆ, 'ಭಾರತವು ಹಾವಾಡಿಗರ ದೇಶ, ಅಲ್ಲಿ ಕಣ್ಣುಹಾಯಿಸಿದಲ್ಲೆಲ್ಲಾ ಕಾಣಬರುವುದು ಜೋಪಡಿಗಳೇ' ಎಂಬ ಗ್ರಹಿಕೆಯು ವಿಶ್ವದ ಕೆಲವು ಬಲಾಢ್ಯ ರಾಷ್ಟ್ರಗಳಲ್ಲಿ ಮನೆಮಾಡಿದ್ದಿದೆ ಮತ್ತು ಇಂಥ ಗ್ರಹಿಕೆಯ ಕಾರಣದಿಂದಾಗಿಯೇ ವಿಶ್ವ ಭೂಪಟದಲ್ಲಿ ಸ್ಪಷ್ಟವಾಗಿ ತನ್ನ ಛಾಪನ್ನು ಒತ್ತಲಾಗದ ಅಸಹಾಯಕತೆಯಲ್ಲಿ ಭಾರತ ತೊಳಲಾಡಿದ್ದೂ ಇದೆ. ಆದರೀಗ ಚಕ್ರ ತಿರುಗಿದೆ, ಭಾರತ ಪ್ರಕಾಶಿಸುತ್ತಿದೆ ಎಂಬುದಕ್ಕೆ ಮೇಲೆ ಉಲ್ಲೇಖಿಸಿರುವ ನಿದರ್ಶನಗಳೇ ಸಾಕ್ಷಿಯಾಗಬಲ್ಲವು. ಮುಂಬರುವ ದಿನಗಳಲ್ಲೂ ಭಾರತದ ಸ್ವಾವಲಂಬನೆಯ ಕಿರೀಟಕ್ಕೆ ಇಂಥ ಹೊಸ ಹೊಸ ಗರಿಗಳು ಸೇರುತ್ತಾ ಹೋಗಲಿ ಎಂಬುದು ಸಹೃದಯಿಗಳ ಆಶಯ ಮತ್ತು ನಿರೀಕ್ಷೆ...

ಸೊಂಪಾದಕೀಯ

ಬೈಗುಳವೋ ಬೌಗುಳವೋ?

'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು' ಅನ್ನೋ ಮಾತು ಎಲ್ಲರಿಗೂ ಗೊತ್ತು. ಮಾತು ಅನ್ನೋದು ಅದೆಷ್ಟು ಮನೆ, ಮನಸ್ಸುಗಳನ್ನು ಕೆಡಿಸಿದ್ದರೂ ಜನ ಮಾತಾಡುವ ಮುನ್ನ ಎಚ್ಚರಿಕೆ ವಹಿಸೋ ಪ್ರಜ್ಞೆ ಇನ್ನೂ ನಮ್ಮ ಸಮಾಜದಲ್ಲಿ ಕಾಣುತ್ತಿಲ್ಲ. ಅದರಲ್ಲೂ ರಾಜಕೀಯ ವಲಯದಲ್ಲಿ ವಿವಿಧ ಪಕ್ಷಗಳ ನಾಯಕರ ಅರಚಾಟ, ಕೆಸರೆರಚಾಟ ನೋಡಿದರೆ ಮಾತಿನ ಮೇಲೇ ಜುಗುಪ್ಸೆ ಬರೋದು ಖಂಡಿತ. ಇತ್ತೀಚೆಗಂತೂ ಈ ಬೆಳವಣಿಗೆ ತೀರಾ ಅಸಹ್ಯ ಮಟ್ಟಕ್ಕೆ ಹೋಗುತ್ತಿದೆ. ಇನ್ನೊಬ್ಬರ ಬಗ್ಗೆ ಮಾತಾಡುವಾಗ ಹೆಚ್ಚು ಕಮ್ಮಿ ಮಾತಾಡಿದ್ರೆ, ಅವರು ಮಾನನಷ್ಟ ಮೊಕದ್ದಮೆ ಹಾಕಬಹುದು ಅನ್ನೋ ಭಯ ಕೂಡಾ ಇತ್ತೀಚೆಗೆ ಇದ್ದಂತಿಲ್ಲ. ಯಾಕಂದ್ರೆ, ಇಲ್ಲಿ ಇನ್ನೊಬ್ಬರಿಂದ ಬೈಗುಳ ಕೇಳಿದವನು ಕೂಡ ಮತ್ತೊಬ್ಬರ ಮೇಲೆ ಮಾತುಗಳ ಬಾಣ ಪ್ರಯೋಗ ಮಾಡಿದವನೇ. ಹಾಗಾಗಿ ಅವನು ಕೇಸು ಹಾಕುವ ಮಟ್ಟಕ್ಕೆ ಹೋಗಲಾರ ಅನ್ನೋ ಭಂಡ ನಂಬಿಕೆ. ಆದರೆ ಸಾರ್ವಜನಿಕ ವೇದಿಕೆಗಳಲ್ಲಿ ಸೋ ಕಾಲ್ಡ್ ದೊಡ್ಡ ನಾಯಕರು ಇನ್ನೊಂದು ಪಕ್ಷದವರ ಬಗ್ಗೆ ತೀರಾ ಕೀಳು ಪದಗಳನ್ನು ಬಳಸುತ್ತಿರೋದು ಮಾತ್ರ ನಾಗರಿಕ ಸಮಾಜಕ್ಕೆ ಸವಾಲು ಹಾಕುವಂತಿದೆ. ಮಗ್ಗದಲ್ಲಿ ನೇಕಾರರು ಬಟ್ಟೆ ನೇಯುವುದು ಕಷ್ಟದ ಕೆಲಸ ಅಂತ ಎಲ್ಲರಿಗೂ ಗೊತ್ತು. ಆದರೆ ನಮ್ಮ ನೇತಾರರಿಗೆ ಬೈಗುಳಗಳ ಮೂಲಕ ಕಗ್ಗವನ್ನೇ ಸೃಷ್ಟಿ ಮಾಡೋದು ಮಾತ್ರ ತೀರಾ ಸುಲಭ ಆಗಿಬಿಟ್ಟಿದೆ. ಒಂದು ಲೆಕ್ಕದಲ್ಲಿ ಇವರು ಸಭ್ಯತೆಯ ಎಲ್ಲೆ ಮೀರಿ ಮಾತಾಡೋದು ನೋಡಿದ್ರೆ, ಇನ್ನೊಬ್ಬರ ಬಗ್ಗೆ ಇವರು ಆಡೋ ಬೈಗುಳದ ಮಾತುಗಳು ನಿಜಕ್ಕೂ 'ಬೈಗುಳ'ಗಳೋ ಇಲ್ಲ 'ಬೌ'ಗುಳಗಳೋ ಅನ್ನೋ ಅನುಮಾನ ಮೂಡುತ್ತದೆ. ಹಾಗಂತ ಯಾವುದೋ ಪಕ್ಷದ ತಳಮಟ್ಟದ ಕಾರ್ಯಕರ್ತ ಈ ಮಾತುಗಳನ್ನು ಆಡುತ್ತಿಲ್ಲ. ಬದಲಾಗಿ ಶಾಸಕ, ರಾಜ್ಯ ಮಂತ್ರಿ, ಕೇಂದ್ರ ಮಂತ್ರಿ ಸ್ಥಾನದಲ್ಲಿರುವ ದೊಡ್ಡವರು ಅನ್ನಿಸಿಕೊಂಡವರೇ ಈ ರೀತಿ ಓಪನ್ ಆಗಿ ಸಾರ್ವಜನಿಕರ ಮುಂದೆ ತಮ್ಮ ನಾಲಿಗೆ ಹರಿಬಿಡುತ್ತಿರೋದು ನೋಡಿದ್ರೆ, ಮಾತು ಕೇವಲ ಅವರ ಮನೆಯನ್ನಷ್ಟೇ ಅಲ್ಲ, ರಾಜಕಾರಣಿಗಳ ಅಖಾಡಗಳಾದ ಮೇಲ್ಮನೆ, ಕೆಳಮನೆಗಳನ್ನೂ ಕೆಡಿಸುತ್ತದೆ ಅನ್ನಿಸಿದರೆ ತಪ್ಪಿಲ್ಲ....

ಸಂಪಾದಕರ ಸದ್ಯಶೋಧನೆ

ಹರ್ಮುಜ್ ಜಲಸಂಧಿಗೆ ಮಹತ್ವವೇಕೆ?

ಕಳೆದ ಒಂದು ವಾರದಿಂದ ಹರ್ಮುಜ್ ಜಲಸಂಧಿ (Strait of Hormuz) ಸುದ್ದಿಯಲ್ಲಿದೆ. ಮಧ್ಯಪ್ರಾಚ್ಯ ದೇಶಗಳ ನಡುವೆ ಸಂಘರ್ಷವುಂಟಾದಾಗಲೆಲ್ಲ ಹರ್ಮುಜ್ ಮುನ್ನೆಲೆಗೆ ಬರುವುದನ್ನು ಗಮನಿಸಿರಬಹುದು. ಇದಕ್ಕೆ ಕಾರಣಗಳೇನು ಎಂಬುದನ್ನು ಗಮನಿಸೋಣ. ಇದು ಕೇವಲ ಒಂದು ಜಲಮಾರ್ಗವಲ್ಲ, ಜತೆಗೆ ಜಾಗತಿಕ ಆರ್ಥಿಕತೆಯ 'ನಾಡಿಮಿಡಿತ'. ಪರ್ಷಿಯನ್ ಕೊಲ್ಲಿ ಮತ್ತು ಓಮಾನ್ ಕೊಲ್ಲಿಯನ್ನು ಸಂಪರ್ಕಿಸುವ ಈ ಕಿರಿದಾದ ಸಮುದ್ರಮಾರ್ಗವು ವಿಶ್ವದ ಅತ್ಯಂತ ಆಯಕಟ್ಟಿನ ಜಲಮಾರ್ಗಗಳಲ್ಲಿ ಒಂದು. ಹರ್ಮುಜ್ ಜಲಸಂಧಿಗಿರುವ ಮಹತ್ವವೆಂದರೆ ಅದು ಜಾಗತಿಕ ತೈಲ ಪೂರೈಕೆಯ ಮಹಾದ್ವಾರ. ವಿಶ್ವದಲ್ಲಿ ಪ್ರತಿದಿನ ಬಳಕೆಯಾಗುವ ಒಟ್ಟು ತೈಲದ ಸುಮಾರು ಶೇ.20ರಿಂದ ಶೇ.30ರಷ್ಟು ಈ ಜಲಸಂಧಿಯ ಮೂಲಕವೇ ಸಾಗುತ್ತದೆ. ಸೌದಿ ಅರೇಬಿಯಾ, ಇರಾನ್, ಯುಎಇ, ಕುವೈತ್ ಮತ್ತು ಇರಾಕ್‌ನಂಥ ಪ್ರಮುಖ ತೈಲ ಉತ್ಪಾದಕ ರಾಷ್ಟ್ರಗಳು ತಮ್ಮ ಕಚ್ಚಾತೈಲವನ್ನು ಜಗತ್ತಿಗೆ ತಲುಪಿಸಲು ಈ ಮಾರ್ಗವನ್ನೇ ಅವಲಂಬಿಸಿವೆ. ಕತಾರ್ ವಿಶ್ವದ ಅತಿದೊಡ್ಡ ಎಲ್‌ಎನ್‌ಜಿ ರಫ್ತುದಾರರಲ್ಲಿ ಒಂದಾಗಿದ್ದು, ಅದರ ಬಹುತೇಕ ರಫ್ತು ಈ ಮಾರ್ಗದಲ್ಲೇ ನಡೆಯುತ್ತದೆ. ಈ ಜಲಸಂಧಿಯು ಕಿರಿದಾದ ಪ್ರದೇಶವಾಗಿದ್ದು, ಇದರ ಅತ್ಯಂತ ಕಿರಿದಾದ ಭಾಗವು ಕೇವಲ 33 ಕಿಲೋಮೀಟರ್ ಅಗಲವಿದೆ. ಇಲ್ಲಿ ಹಡಗುಗಳು ಸಂಚರಿಸಲು ಇರುವ ಲೇನ್‌ಗಳು ಕೇವಲ 3 ಕಿಲೋಮೀಟರ್ ಅಗಲವಾಗಿವೆ. ಇದರ ಉತ್ತರ ಭಾಗದಲ್ಲಿ ಇರಾನ್ ಮತ್ತು ದಕ್ಷಿಣ ಭಾಗದಲ್ಲಿ ಓಮಾನ್ ಹಾಗೂ ಯುಎಇ ದೇಶಗಳಿವೆ. ಇಷ್ಟು ಕಿರಿದಾದ ಮಾರ್ಗವಾಗಿರುವುದರಿಂದ, ಯಾವುದೇ ಸಣ್ಣ ಸಂಘರ್ಷ ಉಂಟಾದರೂ ಇಡೀ ಸಂಚಾರ ವ್ಯವಸ್ಥೆ ಸ್ಥಗಿತಗೊಳ್ಳುವ ಅಪಾಯವಿರುತ್ತದೆ. ಹರ್ಮುಜ್ ಜಲಸಂಧಿಯಲ್ಲಿ ಸಂಚಾರ ವ್ಯತ್ಯಯವಾದರೆ ಅದರ ನೇರ ಪರಿಣಾಮ ಪ್ರತಿಯೊಬ್ಬ ಸಾಮಾನ್ಯ ನಾಗರಿಕನ ಮೇಲೂ ಆಗುತ್ತದೆ ಎಂಬುದು ಗಮನಾರ್ಹ. ಈ ಮಾರ್ಗದಲ್ಲಿ ಅಡಚಣೆಯುಂಟಾದರೆ ಕಚ್ಚಾ ತೈಲದ ಬೆಲೆಗಳು ಗಗನಕ್ಕೇರುತ್ತವೆ. ಇದು ಸಾರಿಗೆ ವೆಚ್ಚವನ್ನು ಹೆಚ್ಚಿಸಿ, ಆಹಾರ ಪದಾರ್ಥಗಳಿಂದ ಹಿಡಿದು ಪ್ರತಿಯೊಂದು ವಸ್ತುವಿನ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಏಷ್ಯಾದ ರಾಷ್ಟ್ರಗಳಾದ ಚೀನಾ, ಜಪಾನ್, ಭಾರತ ಮತ್ತು ದಕ್ಷಿಣ ಕೊರಿಯಾಗಳು ತಮ್ಮ ಇಂಧನ ಅಗತ್ಯತೆಗಾಗಿ ಈ ಮಾರ್ಗದ ಮೇಲೆ ಅತಿಯಾಗಿ ಅವಲಂಬಿತವಾಗಿವೆ. ಭಾರತಕ್ಕೆ ಹರ್ಮುಜ್ ಜಲಸಂಧಿಯು ಅತಿ ಮುಖ್ಯವಾದ 'ಜೀವನಾಡಿ' ಆಗಿದೆ. ಭಾರತವು ತನ್ನ ಕಚ್ಚಾ ತೈಲದ ಸುಮಾರು ಶೇ.60ರಿಂದ ಶೇ.70ರಷ್ಟು ಭಾಗವನ್ನು ಪಶ್ಚಿಮ ಏಷ್ಯಾದ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಈ ಪೈಕಿ ಬಹುಪಾಲು ಹರ್ಮುಜ್ ಜಲಸಂಧಿಯ ಮೂಲಕವೇ ಬರುತ್ತದೆ. ಅಡುಗೆ ಅನಿಲ ಮತ್ತು ಕೈಗಾರಿಕಾ ಅನಿಲದ ಪೂರೈಕೆಯೂ ಇದೇ ಮಾರ್ಗವನ್ನು ಅವಲಂಬಿಸಿದೆ. ಇಲ್ಲಿನ ಯಾವುದೇ ಅಸ್ಥಿರತೆಯು ಭಾರತದ ಇಂಧನ ಭದ್ರತೆಗೆ ದೊಡ್ಡ ಸವಾಲಾಗುತ್ತದೆ. ಹರ್ಮುಜ್ ಜಲಸಂಧಿಯು ಯಾವಾಗಲೂ ಭೌಗೋಳಿಕ ರಾಜಕೀಯದ (Geopolitics) ಕೇಂದ್ರವಾಗಿದೆ. ಇರಾನ್ ಮತ್ತು ಅಮೆರಿಕದ ನಡುವಿನ ಉದ್ವಿಗ್ನತೆಯ ಸಮಯದಲ್ಲಿ, ಇರಾನ್ ಈ ಜಲಸಂಧಿಯನ್ನು ಮುಚ್ಚುವ ಬೆದರಿಕೆಯನ್ನು ಹಲವು ಬಾರಿ ಹಾಕಿದೆ. ಇದು ಅಂತಾರಾಷ್ಟ್ರೀಯ ಸಮುದಾಯಕ್ಕೆ ದೊಡ್ಡ ಆತಂಕದ ವಿಷಯ. ಈ ಜಲಮಾರ್ಗವನ್ನು ಸುರಕ್ಷಿತವಾಗಿಡಲು ಅಮೆರಿಕ ಸೇರಿದಂತೆ ಹಲವು ದೇಶಗಳ ನೌಕಾಪಡೆಗಳು ಇಲ್ಲಿ ನಿರಂತರ ಗಸ್ತು ತಿರುಗುತ್ತವೆ. ಇದನ್ನು ಮುಕ್ತವಾಗಿರಿಸುವುದು ಜಾಗತಿಕ ಹಿತಾಸಕ್ತಿಯಾಗಿದೆ. ಹರ್ಮುಜ್ ಜಲಸಂಧಿಗೆ ಸಮನಾದ ಸುಲಭವಾದ ಪರ್ಯಾಯ ಮಾರ್ಗಗಳು ಸದ್ಯಕ್ಕೆ ಲಭ್ಯವಿಲ್ಲ. ಸೌದಿ ಅರೇಬಿಯಾ ಮತ್ತು ಯುಎಇ ಕೆಲವು ಪೈಪ್‌ಲೈನ್‌ಗಳನ್ನು ನಿರ್ಮಿಸಿದ್ದರೂ, ಅವು ಹರ್ಮುಜ್ ಮೂಲಕ ಸಾಗುವ ಬೃಹತ್ ಪ್ರಮಾಣದ ತೈಲವನ್ನು ಸಾಗಿಸುವ ಸಾಮರ್ಥ್ಯ ಹೊಂದಿಲ್ಲ. ಆದ್ದರಿಂದ, ಸಮುದ್ರಮಾರ್ಗವೇ ಅನಿವಾರ್ಯವಾಗಿದೆ. ಹರ್ಮುಜ್ ಜಲಸಂಧಿಯು ಜಗತ್ತಿನ ಇಂಧನ ಹಸಿವನ್ನು ನೀಗಿಸುವ ಅತ್ಯಂತ ನಿರ್ಣಾಯಕ ಕೊಂಡಿಯಾಗಿದೆ. ಇಲ್ಲಿನ ಶಾಂತಿ ಮತ್ತು ಮುಕ್ತ ಸಂಚಾರವು ಗಲ್ಫ್ ರಾಷ್ಟ್ರಗಳಿಗೆ ಮಾತ್ರವಲ್ಲದೇ, ಇಡೀ ಜಗತ್ತಿನ ಆರ್ಥಿಕ ಸ್ಥಿರತೆಗೆ ಅತ್ಯಗತ್ಯ. ಇದು ವಿಶ್ವದ ಅತ್ಯಂತ ಪ್ರಭಾವಶಾಲಿ 'ಚೋಕ್ ಪಾಯಿಂಟ್' ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

ಹಾಗಾದರೆ ದಿಲ್ಲಿ ಅಬಕಾರಿ ನೀತಿ ಹಗರಣ ನಡೆದೇ ಇಲ್ಲವೇ?

ಅಬಕಾರಿ ಹಗರಣ ನಡೆದೇ ಇಲ್ಲ, ಲಿಕ್ಕರ್ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಅಂಶಗಳು ಹೊಸ ಅಬಕಾರಿ ನೀತಿಯಲ್ಲಿ ಇಲ್ಲ ಎನ್ನುವುದು ಕೇಜ್ರಿವಾಲ್ ವಾದವಾದರೆ, ಹಳೆ ಅಬಕಾರಿ ನೀತಿಯನ್ನು ಮರುಸ್ಥಾಪನೆ ಮಾಡಿದ್ದೇಕೆ? ಹೊಸ ನೀತಿಯನ್ನೇ ಮುಂದುವರಿಸಬಹುದಿತ್ತಲ್ಲಾ ಎಂಬ ಪ್ರಶ್ನೆಗಳಿಗೆ ಅವರು ಸಮರ್ಥನೀಯ ಉತ್ತರ ನೀಡಿಯೇ ಇಲ್ಲ. ರದ್ದಾದ ಅಬಕಾರಿ ನೀತಿಯ ಬಗ್ಗೆ ಮನೀಷ್ ಸಿಸೋಡಿಯಾ ಬಳಿ ಕೇಳಿದ್ದಾಗ, ಅದೊಂದು ಅದ್ಭುತವಾದ ಮಾದರಿ ಅಬಕಾರಿ ನೀತಿ ಎಂದೇನೂ ಅವರು ಬೆನ್ನು ತಟ್ಟಿಕೊಳ್ಳಲಿಲ್ಲ.

ಜನಪಥ
ರಾಘವಶರ್ಮ ನಿಡ್ಲೆ
vveditoped@gmail.com

ದೆಹಲಿ ಅಬಕಾರಿ ನೀತಿ ಹಗರಣ ಸಾಮಾನ್ಯ ಪ್ರಕರಣವೇನಾಗಿರಲಿಲ್ಲ. ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ದಿಲ್ಲಿ ಚುನಾವಣೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ (ಆಪ್) ವಿರುದ್ಧ ಮುಗಿಬೀಳಲು ಇದೇ ಹಗರಣವನ್ನು ಬ್ರಹ್ಮಾಸ್ತ್ರವನ್ನಾಗಿ ಪ್ರಯೋಗಿಸಿದ್ದವು. ಆಮ್ ಆದ್ಮಿ ಪಕ್ಷವು ದಿಲ್ಲಿ ನಿವಾಸಿಗರ ವಿಶ್ವಾಸ ಕಳೆದುಕೊಳ್ಳಲು ಮತ್ತು ಅಧಿಕಾರ ಕಳೆದುಕೊಳ್ಳಲು ಕಾರಣವಾಗಿದ್ದು ಕೂಡ ಇದೇ ಲಿಕ್ಕರ್ ಸ್ಕ್ಯಾಮ್. ಮದ್ಯ (ಲಿಕ್ಕರ್) ಮಾರಾಟ ಸಂಸ್ಥೆಗಳಿಂದ ಸುಮಾರು 100 ಕೋಟಿ ರುಪಾಯಿಗಿಂತಲೂ ಹೆಚ್ಚು ಕಿಕ್ ಬ್ಯಾಕ್ (ಲಂಚ) ಪಡೆದಿದ್ದಾರೆ ಎಂಬ ಆರೋಪದಡಿಯಲ್ಲಿ ಆಮ್ ಆದ್ಮಿ ಪಕ್ಷದ ನಾಯಕ, ದಿಲ್ಲಿ ಮಾಜಿ ಸಿಎಂ ಅರವಿಂದ ಕೇಜ್ರಿವಾಲ್, ಡಿಸಿಎಂ ಮನೀಷ್ ಸಿಸೋಡಿಯಾ, ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್, ತೆಲಂಗಾಣ ಬಿಆರ್‌ಎಸ್ ಪಕ್ಷದ ಮಾಜಿ ನಾಯಕಿ, ಮಾಜಿ ಸಿಎಂ ಕೆ. ಚಂದ್ರಶೇಖರ ರಾವ್ ಪುತ್ರಿ ಕೆ. ಕವಿತಾ ಸೇರಿ ಅನೇಕರು ಬಂಧನಕ್ಕೊಳಗಾಗಿ, ಮಾನಸಿಕ ಸಂಕಟ ಅನುಭವಿಸಿದ ಪ್ರಕರಣವಿದು. ಆಮ್ ಆದ್ಮಿ ಪಕ್ಷದ ಬಗ್ಗೆ ದೆಹಲಿ ಮಾತ್ರವಲ್ಲ, ದೇಶಾದ್ಯಂತ ಜನಾಭಿಪ್ರಾಯ ಬದಲಿಸಲು ಬಿಜೆಪಿಗಂತೂ ಈ ಹಗರಣ ವರದಾನವಾಗಿತ್ತು.

ಕೇಜ್ರಿವಾಲ್ ನೇತೃತ್ವದ 'ಆಪ್' ಸರಕಾರವು ಹಳೆಯ ಅಬಕಾರಿ ನೀತಿಯನ್ನು ರದ್ದುಗೊಳಿಸಿ ಹೊಸ ಅಬಕಾರಿ ನೀತಿಯನ್ನು ಜಾರಿ ಮಾಡಿದ್ದರಿಂದ ಲಿಕ್ಕರ್ ಪರವಾನಗಿದಾರರಿಗೆ ಅನುಕೂಲವಾಗಿ, ರಾಜಧಾನಿಯ ಹಲವೆಡೆ ಮದ್ಯದ ಅಂಗಡಿಗಳು ಎಲ್ಲೆಂದರಲ್ಲಿ ತೆರೆದುಕೊಂಡವು. ಆದರೆ, ಯಾವಾಗ ಹಗರಣದ ಆರೋಪಗಳು ಗಂಭೀರ ಸ್ವರೂಪ ಪಡೆದುಕೊಂಡು, ಸಿಬಿಐ-ಇ.ಡಿ. ತನಿಖಾ ಸಂಸ್ಥೆಗಳ ಪ್ರವೇಶವಾಯ್ತೋ ಆಗ ಹೊಸ ಅಬಕಾರಿ ನೀತಿಯನ್ನು ರದ್ದುಗೊಳಿಸಿದ ಕೇಜ್ರಿವಾಲ್ ಸರಕಾರ, ಹಳೆಯ ಅಬಕಾರಿ ನೀತಿಯನ್ನು ಮರು ಅನುಷ್ಠಾನಗೊಳಿಸಿತು. ಆದರೆ, ಇ.ಡಿ.-ಸಿಬಿಐ ಸಂಸ್ಥೆಗಳ ತನಿಖೆ ಮುಂದುವರಿದು, ಸಿಸೋಡಿಯಾ (ಸುಮಾರು ಒಂದೂವರೆ ವರ್ಷ) ನಂತರ ಕೇಜ್ರಿವಾಲ್ (5 ತಿಂಗಳು), ಸಂಜಯ್ ಸಿಂಗ್ ತಿಹಾರ್ ಜೈಲಿನಲ್ಲಿ ಹಲವು ತಿಂಗಳುಗಳನ್ನು ಕಳೆಯಬೇಕಾಯಿತು. ಸದ್ಯದ ಮಟ್ಟಿಗಂತೂ ಅವರೆಲ್ಲರೂ (ಆಪ್ ಮುಖಂಡರು) ಆರೋಪ ಮುಕ್ತರಾಗಿದ್ದಾರೆ ಮತ್ತು ಮೈಗಂಟಿದ್ದ ಭ್ರಷ್ಟಾಚಾರದ ಮಸಿಯನ್ನು ನ್ಯಾಯಾಲಯವೇ ಅಳಿಸಿರುವುದರಿಂದ ಮೈಕೊಡವಿಕೊಂಡು ಬಿಜೆಪಿ-ಕಾಂಗ್ರೆಸ್ ಪಕ್ಷಗಳನ್ನು ಎದುರಿಸಲು ಸಜ್ಜಾಗಿ ನಿಂತಿದ್ದಾರೆ.

''ಅಬಕಾರಿ ಹಗರಣ ನಡೆದೇ ಇಲ್ಲ. ಲಿಕ್ಕರ್ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಅಂಶಗಳು ಹೊಸ ಅಬಕಾರಿ ನೀತಿಯಲ್ಲಿ ಇಲ್ಲ'' ಎನ್ನುವುದು ಕೇಜ್ರಿವಾಲ್ ವಾದವಾದರೆ, ''ಹಳೆ ಅಬಕಾರಿ ನೀತಿಯನ್ನು ಮರುಸ್ಥಾಪನೆ ಮಾಡಿದ್ದೇಕೆ? ಹೊಸ ಅಬಕಾರಿ ನೀತಿಯನ್ನೇ ಮುಂದುವರಿಸಬಹುದಿತ್ತಲ್ಲಾ?'' ಎಂಬ ಪ್ರಶ್ನೆಗೆ ಅವರು ಸಮರ್ಥನೀಯ ಉತ್ತರ ನೀಡಿಯೇ ಇಲ್ಲ. ರದ್ದಾದ ಅಬಕಾರಿ ನೀತಿಯ ಬಗ್ಗೆ ಮನೀಷ್ ಸಿಸೋಡಿಯಾ ಬಳಿ ಕೇಳಿದ್ದಾಗ, ''ಅದೊಂದು ಅದ್ಭುತವಾದ ಮಾದರಿ ಅಬಕಾರಿ ನೀತಿ'' ಎಂದೇನೂ ಅವರು ಬೆನ್ನು ತಟ್ಟಿಕೊಳ್ಳಲಿಲ್ಲ. ದೆಹಲಿಯ ರೌಸ್ ಅವೆನ್ಯೂ ನ್ಯಾಯಾಧೀಶರು ಕೂಡ ''ಅಬಕಾರಿ ಹಗರಣ ನಡೆದಿಲ್ಲ. ಎಲ್ಲವೂ ಶುಭ್ರವಾಗಿದೆ'' ಎಂದೂ ಹೇಳಿಲ್ಲ. ಬದಲಿಗೆ, ''ಸಿಬಿಐ ಮಾಡಿದ ಆರೋಪಗಳಿಗೆ ಶಕ್ತಿ ತುಂಬುವ ಸಾಕ್ಷ್ಯಗಳಿಲ್ಲ ಮತ್ತು ಕೋರ್ಟ್ ಮುಂದೆ ಪ್ರಸ್ತುತಪಡಿಸಲಾದ ಸಾಕ್ಷ್ಯಗಳನ್ನು ದೃಢೀಕರಿಸಲು ಅಗತ್ಯ ದಾಖಲೆಗಳನ್ನೂ ಒದಗಿಸಿಲ್ಲ. ಹೀಗಾಗಿ, ಏಕಪಕ್ಷೀಯವಾಗಿ ಮತ್ತು ರಾಜಕೀಯ ಚತುರತೆಯಿಂದ ಮಾಡಲಾದ ಆರೋಪಗಳನ್ನು ಒಪ್ಪಲು ಸಾಧ್ಯವಿಲ್ಲ'' ಎಂದು ನ್ಯಾ. ಜಿತೇಂದ್ರ ಸಿಂಗ್ ಅವರು ಸಿಬಿಐ ತನಿಖಾ ಪ್ರಕ್ರಿಯೆಯನ್ನೇ ಕಟು ವಾಕ್ಯಗಳಲ್ಲಿ ಪ್ರಶ್ನಿಸಿದ್ದಾರೆ. ಅಬಕಾರಿ ಇಲಾಖೆಯ ಅಧಿಕಾರಿಯನ್ನು ಮುಖ್ಯ ಆರೋಪಿ (ನಂ.1) ಮಾಡಿದ್ದನ್ನೂ ಪ್ರಶ್ನಿಸಿರುವ ನ್ಯಾಯಾಧೀಶರು, ತನಿಖಾಧಿಕಾರಿಗಳ ಮೇಲೆಯೇ ತನಿಖೆ ನಡೆಸಬೇಕು ಎಂಬ ಅಪರೂಪದ ಸೂಚನೆಯನ್ನೂ ತೀರ್ಪಿನಲ್ಲಿ ಪ್ರಕಟಿಸಿರುವುದಿರಂದ ಸಿಬಿಐ ವಿಪರೀತ ಮುಖಭಂಗವನ್ನು ಅನುಭವಿಸಿದೆ.

'ಅಬಕಾರಿ ಹಗರಣದ ಬಗ್ಗೆ ಬಿಜೆಪಿ-ಕಾಂಗ್ರೆಸ್ ನಾಯಕರ ಅಬ್ಬರ', 'ಕೇಜ್ರಿವಾಲ್ ಮಾಸ್ಟರ್ ಮೈಂಡ್', 'ಸಂಜಯ್ ಸಿಂಗ್ ಕಿಂಗ್‌ಪಿನ್' ಎಂಬ ವಿಧವಿಧದ ಶೀರ್ಷಿಕೆಗಳೊಂದಿಗೆ ಶಂಕಿತ ಹಗರಣದ ವರದಿ ಮಾಡಿದ್ದ ಮಾಧ್ಯಮಗಳೂ ಕೋರ್ಟ್ ತೀರ್ಪನ್ನು ನೋಡಿ ಬೆಚ್ಚಿಬಿದ್ದಿವೆ. ಸಿಬಿಐ ತನಿಖಾಧಿಕಾರಿಗಳ ವಿಶ್ವಾಸಾರ್ಹತೆ ಮತ್ತೊಮ್ಮೆ ಪಾತಾಳಕ್ಕಿಳಿದಿದೆ. ''ಪ್ರಕರಣದಲ್ಲಿ ಕೇವಲ ಒಬ್ಬ ಅಪ್ರೂವರ್‌ನ (ದಿನೇಶ್ ಅರೋರಾ) ಹೇಳಿಕೆಗಳನ್ನಾಧರಿಸಿ ಆರೋಪಿಗಳನ್ನು ಅಪರಾಧಿಗಳು ಎಂದು ಗುರುತಿಸಲು ಸಾಧ್ಯವಿಲ್ಲ'' ಎಂದ ನ್ಯಾಯಾಧೀಶರು, ತಮ್ಮ 598 ಪುಟಗಳ ತೀರ್ಪಿನಲ್ಲಿ ಸಿಬಿಐ ಕಾರ್ಯವಿಧಾನದ ಲೋಪಗಳು, ಸಾಂವಿಧಾನಿಕ ತತ್ವಗಳ ಉಲ್ಲಂಘನೆ ಮತ್ತು 'ಬೀಸು ಹೇಳಿಕೆ' ಸಾಕ್ಷ್ಯಗಳ ಮೇಲಿನ ಅವಲಂಬನೆಯನ್ನು ಖಂಡಿಸಿದ್ದಾರೆ. ''ಸಿಬಿಐ ತನಿಖೆ ವಸ್ತುನಿಷ್ಠವೂ ಅಲ್ಲ, ನಿಷ್ಪಕ್ಷಪಾತವಾಗಿಯೂ ಇಲ್ಲ'' ಎಂಬ ನ್ಯಾಯಾಧೀಶರ ಅಭಿಪ್ರಾಯವು ತನಿಖಾಧಿಕಾರಿಗಳ ಉದ್ದೇಶಗಳನ್ನೇ ಪ್ರಶ್ನೆ ಮಾಡುವಂತಿದೆ.

ದಕ್ಷಿಣ ಭಾರತದ ಲಿಕ್ಕರ್ ಕಂಪನಿಗಳು (ಸಿಬಿಐ ಈ ಕಂಪನಿಗಳನ್ನು ಸೌತ್ ಗ್ರೂಪ್ ಎಂದು ಹೆಸರಿಸಿತ್ತು) 100 ಕೋಟಿ ರುಪಾಯಿ ಲಂಚವನ್ನು ಆಮ್ ಆದ್ಮಿ ಪಕ್ಷಕ್ಕೆ 'ಮುಂಗಡ ಹಣ'ವಾಗಿ ನೀಡಿದ್ದವು ಎನ್ನುವುದು ಸಿಬಿಐ ಆರೋಪ. ಆದರೆ, ಈ ಆರೋಪವೇ ಸ್ವೀಕಾರಾರ್ಹ ಪುರಾವೆಗಳಿಲ್ಲದ ಊಹಾತ್ಮಕ ಕಲ್ಪನೆ ಎಂದು ಅಭಿಪ್ರಾಯಪಟ್ಟ ನ್ಯಾಯಾಲಯ, ಅಪ್ರೂವರ್ ದಿನೇಶ್ ಅರೋರಾ ಹೇಳಿಕೆಯನ್ನಷ್ಟೇ ಆಧರಿಸಿ ಮುಂಗಡ ಹಣದ ಆರೋಪವನ್ನು ಮಾಡಲಾಗಿದೆ. ಮೇಲಾಗಿ ದಿನೇಶ್ ಅರೋರಾ ಆರೋಪಿಗಳ ಹೆಸರನ್ನು ನೇರವಾಗಿ ಎಲ್ಲೂ ಹೆಸರಿಸಿಲ್ಲ ಮತ್ತು ಹಣ ಪಡೆದಿರುವ ಅಥವಾ ವ್ಯವಹಾರ ನಡೆದಿರುವ ಸಾಕ್ಷ್ಯಗಳನ್ನೂ ಒದಗಿಸಲಾಗಿಲ್ಲ. 'ಹೇಳಿಕೆಗಳಲ್ಲಿನ ಅಸಂಗತತೆ' ಮತ್ತು 'ದೃಢೀಕರಣದ ಕೊರತೆ'ಯಿಂದಾಗಿ, ಇಲ್ಲಿ ಪಿತೂರಿ ನಡೆದಿದೆ ಎಂದು ತೀರ್ಮಾನಿಸಲು ಸಾಧ್ಯವೇ ಇಲ್ಲ. ಹವಾಲಾ ವಹಿವಾಟಿನ ಕುರಿತಾದ ಆರೋಪಗಳಲ್ಲಿ ಸ್ಪಷ್ಟತೆ ಕಾಣುವುದಿಲ್ಲ ಎಂದು ನ್ಯಾಯಾಧೀಶರು ಹೇಳಿರುವುದು ಈ ಪ್ರಕರಣದಲ್ಲಿನ ಸಿಬಿಐ ತನಿಖಾ ಸಾಮರ್ಥ್ಯವನ್ನೇ ಬೊಟ್ಟು ಮಾಡುವಂತಿದೆ.

ರಾಜಕಾರಣಿಗಳ ಹಾಗೂ ವಿಪಕ್ಷ ಮುಖಂಡರ ಸದ್ದಡಗಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪ ಮಾಡುತ್ತಿದ್ದ ವಿಪಕ್ಷಗಳಿಗೆ ಈ ತೀರ್ಪು ರಾಜಕೀಯ ಅಸ್ತ್ರವಾಗಿ ಸಿಕ್ಕಿದೆ. ಈ ತೀರ್ಪಿನಿಂದ ಬಿಜೆಪಿ ಇಕ್ಕಟ್ಟಿಗೆ ಸಿಲುಕಿರುವುದು ಸುಳ್ಳೇನಲ್ಲ. ರಾಜಕೀಯ ಪುನರುಜ್ಜೀವನ ಬಯಸುತ್ತಿರುವ ಕಾಂಗ್ರೆಸ್‌ಗೆ ಕೇಜ್ರಿವಾಲ್ ಪುನರಾಗಮನ ಹಿತವೆನಿಸಿಲ್ಲ. ಈಗ ಸಿಬಿಐ ಹೈಕೋರ್ಟ್ ಮೆಟ್ಟಿಲೇರಿದ್ದರೂ, ಅಲ್ಲಿ ತೀರ್ಪು ಬರುವ ತನಕ ಕೇಜ್ರಿವಾಲ್ ಮತ್ತು ತಂಡ ಆರೋಪ ಮುಕ್ತವಾಗಿರಲಿದೆ. ''ನನ್ನದು ಉದಾತ್ತ ಪ್ರಾಮಾಣಿಕತೆ'' ಎಂದು ಕಣ್ಣೀರು ಸುರಿಸಿದ ಕೇಜ್ರಿವಾಲ್‌ಗೆ ರಾಜಕೀಯ ಮರುಜನ್ಮ ಸಿಕ್ಕಿದೆ. ದಿಲ್ಲಿ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಅವರು 2ನೇ ಇನ್ನಿಂಗ್ಸ್ ಆರಂಭಿಸಲು ಹೊಸ ವೇದಿಕೆ ನಿರ್ಮಾಣವಾಗಲಿದೆ. ಲಿಕ್ಕರ್ ಹಗರಣ ತೆಲಂಗಾಣಕ್ಕೂ ವ್ಯಾಪಿಸಿ ಬಿಆರ್‌ಎಸ್ ಪಕ್ಷದಲ್ಲಿದ್ದ ಕೆ. ಕವಿತಾ ಕೂಡ ಬಂಧನಕ್ಕೀಡಾಗಿದ್ದರು. ಅವರೂ ಕಳಂಕ ಮುಕ್ತರಾಗಿದ್ದು, ತೆಲಂಗಾಣ ರಾಜಕಾರಣದಲ್ಲಿ ಅವರು ಎರಡನೇ ಹೊಸ ಇನ್ನಿಂಗ್ಸ್ ಆರಂಭಿಸಲು ಬಲ ಬಂದಂತಾಗಿದೆ.

ಹಾಗೆ ನೋಡಿದರೆ, ದಿಲ್ಲಿ ಅಬಕಾರಿ ನೀತಿಯಿಂದಾಗಿ ಹಗರಣ ನಡೆದಿದೆ ಎಂದು ಮೊದಲು ಆರೋಪ ಮಾಡಿದ್ದೇ ಕಾಂಗ್ರೆಸ್. 2022ರಲ್ಲಿ ಅಂದಿನ ದಿಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅನಿಲ್ ಚೌಧುರಿ ಅವರು ಆಗಿನ ದಿಲ್ಲಿ ಲೆಫ್ಟಿನಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ಪತ್ರ ಬರೆದು, ಹಗರಣದ ಬಗ್ಗೆ ವಿವರಣೆ ನೀಡಿ, 'ಈ ಬಗ್ಗೆ ಸೂಕ್ತ ತನಿಖೆಗೆ ಶಿಫಾರಸು ಮಾಡಬೇಕು' ಎಂದು ಒತ್ತಾಯಿಸಿದ್ದರು. ಮುಖ್ಯ ಕಾರ್ಯದರ್ಶಿ ನರೇಶ್ ಕುಮಾರ್ ಅವರೂ ಸಕ್ಸೇನಾ ಅವರಿಗೆ ಹಗರಣ ನಡೆದಿರುವ ಸಾಧ್ಯತೆ ಬಗ್ಗೆ ವರದಿ ನೀಡಿದ್ದರು. ಈ ದೂರುಗಳ ಆಧಾರದ ಮೇಲೆ ಅವರು ಸಿಬಿಐಗೆ ಶಿಫಾರಸು ಮಾಡಿದ್ದರಿಂದ 2022ರ ಜುಲೈ 20ರಂದು ಸಿಬಿಐ ಪ್ರಕರಣ ದಾಖಲು ಮಾಡಿಕೊಂಡು ತನಿಖೆಯನ್ನು ಆರಂಭಿಸಿತು. ಅಬಕಾರಿ ನೀತಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಪರಿಷ್ಕರಿಸಿದ ಪರಿಣಾಮ 'ಆಪ್' ಪಕ್ಷದ ನಾಯಕರು ಮದ್ಯ ತಯಾರಕರಿಂದ ಲಂಚ ಪಡೆದಿದ್ದರು ಎಂದು ಸಿಬಿಐ ಗಂಭೀರ ಆರೋಪ ಮಾಡಿತು ಹಾಗೂ ನಂತರದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ.) ಕೂಡ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿತ್ತು.

2021ರಲ್ಲಿ ಕೇಜ್ರಿವಾಲರು ದಕ್ಷಿಣದ ಲಿಕ್ಕರ್ ಉದ್ಯಮಿ ಮಾಗುಂಟ ಶ್ರೀನಿವಾಸುಲು ರೆಡ್ಡಿ ಅವರೊಂದಿಗೆ ಮಾತನಾಡುತ್ತಾ, ''ನಿಮ್ಮ ಉದ್ಯಮವನ್ನು ದೆಹಲಿಗೆ ವಿಸ್ತರಿಸಿ, ರಾಜಕೀಯಕ್ಕೆ ಫಂಡಿಂಗ್ ಮಾಡಿ'' ಎಂದು ಕೇಳಿಕೊಂಡಿದ್ದರಂತೆ. ಇದನ್ನು ತನಿಖಾಧಿಕಾರಿಗಳಿಗೆ ಹೇಳಿದ್ದು ಶ್ರೀನಿವಾಸುಲು ರೆಡ್ಡಿ. ಆದರೆ ಆ ಹೇಳಿಕೆಯೊಂದನ್ನೇ ಆಧರಿಸಿ 'ಕೇಜ್ರಿವಾಲ್ ಹಗರಣದ ಮಾಸ್ಟರ್ ಮೈಂಡ್' ಎಂದು ಸಿಬಿಐ ಆರೋಪಿಸಿದ್ದು ನ್ಯಾಯಾಧೀಶರನ್ನು ತೃಪ್ತಿಪಡಿಸಲಿಲ್ಲ. ಇದು ಕಾನೂನುಬಾಹಿರ ಕೃತ್ಯವನ್ನು ಸಾಬೀತುಪಡಿಸುವುದಿಲ್ಲ ಮತ್ತು ಅವ್ಯವಹಾರಕ್ಕೆ ಇದು ದಾರಿ ಮಾಡಿತು ಎಂದು ನೇರವಾಗಿ ಒಪ್ಪಲೂ ಆಗುವುದಿಲ್ಲ ಎಂಬುದು ನ್ಯಾಯಾಧೀಶರ ನಿಲುವು. ರೆಡ್ಡಿ ಅವರ ಮಗ, ರಾಘವ್ ಮಾಗುಂಟ ಹೇಳಿಕೆಯನ್ನೂ ನ್ಯಾಯಾಲಯ ತಿರಸ್ಕರಿಸಿತು. ''ರೆಡ್ಡಿ-ಕೇಜ್ರಿವಾಲ್ ಸಭೆಯನ್ನು ರಾಘವ ಮಾಗುಂಟ ನೋಡಿದ್ದೇನೆ ಎಂದು ಹೇಳಿಲ್ಲ. ಹಾಗಾಗಿ ಅದೂ ದೃಢೀಕೃತ ಸಾಕ್ಷ್ಯವಾಗಲಿಲ್ಲ. ಮಾಗುಂಟ ಶ್ರೀನಿವಾಸುಲು ರೆಡ್ಡಿ ಜತೆ ಕೇಜ್ರಿವಾಲ್ ಮಾತುಕತೆ ಮಾಡಿದ್ದಾಗ 10-12 ಮಂದಿ ಹಾಜರಿದ್ದರು ಎನ್ನಲಾಗಿತ್ತಾದರೂ, ಅವರ್‍ಯಾರನ್ನೂ ಸಿಬಿಐ ವಿಚಾರಣೆಗೆ ಒಳಪಡಿಸದಿರುವುದು ಅಚ್ಚರಿಗೆ ಕಾರಣವಾಯಿತು. ಬಹುಶಃ ಅವರನ್ನು ವಿಚಾರಣೆ ಮಾಡಿದ್ದರೆ ನೇರ ಸಾಕ್ಷ್ಯಗಳು ಸಿಗುತ್ತಿದ್ದವೋ ಏನೋ...'' ಎಂದು ನ್ಯಾಯಾಧೀಶರೇ ಹೇಳಿದ್ದಾರೆ.

ಕೆಳ ನ್ಯಾಯಾಲಯವು 23 ಮಂದಿಯನ್ನು ಆರೋಪ ಮುಕ್ತಗೊಳಿಸಿದ ಮಾತ್ರಕ್ಕೆ ಪ್ರಕರಣ ಪೂರ್ಣ ಮುಗಿದೇಬಿಟ್ಟಿತು ಎಂದೇನಲ್ಲ. ಸಿಬಿಐ, ಹೈಕೋರ್ಟ್ ಮೆಟ್ಟಿಲೇರಿರುವುದರಿಂದ ಮತ್ತೊಂದು ಸುತ್ತಿನ ಕಾನೂನು ಹೋರಾಟ ನಿಶ್ಚಿತ. ಆರೋಪಿಗಳ ಅಪರಾಧಿತ್ವವನ್ನು ಎತ್ತಿತೋರಿಸುವ ಅಂಶಗಳನ್ನೇ ನ್ಯಾಯಾಧೀಶರು ನಿರ್ಲಕ್ಷಿಸಿದ್ದಾರೆ ಎಂಬ ಗಂಭೀರ ಆರೋಪ ಮಾಡಿರುವ ಸಿಬಿಐ, ''ನ್ಯಾಯಾಧೀಶರು ಹಗರಣದಲ್ಲಿನ ಪಿತೂರಿಯ ಆಧಾರವನ್ನು ಸಂಪೂರ್ಣವಾಗಿ ಕಡೆಗಣಿಸಿ, ಸಣ್ಣಸಣ್ಣ ಲೋಪಗಳ ವಿವರವಾದ ಮೌಲ್ಯಮಾಪನ ಮಾಡಿದ್ದಾರೆ. ಆದರೂ ಅವು ಪ್ರಾಸಿಕ್ಯೂಷನ್ ಪ್ರಕರಣದ ಭಾಗವಾಗಿರಲಿಲ್ಲ. ಹಗರಣದಲ್ಲಿ ಆರೋಪಿಗಳ ವೈಯಕ್ತಿಕ ಪಾತ್ರಗಳ ಬಗ್ಗೆ ತಮ್ಮದೇ ಆದ ತಿಳಿವಳಿಕೆಯೊಂದಿಗೆ ವಿಭಿನ್ನ ದೃಷ್ಟಿಕೋನದಿಂದ ನೋಡಿರುವುದು ಸರಿಯಲ್ಲ. ನ್ಯಾಯಾಧೀಶರಿಗೆ ಈ ಪ್ರಕರಣದ ಮೂಲಭೂತ ತಿಳಿವಳಿಕೆ ಹಾಗೂ ಸಿಬಿಐ ಆರೋಪಗಳ ಬಗ್ಗೆ ಈ ಹಂತದಲ್ಲಿ ಅಳವಡಿಸಬೇಕಾಗಿದ್ದ ಕಾನೂನಿನ ಬಗ್ಗೆ ಅರಿವು ಇದ್ದಂತಿಲ್ಲ'' ಎಂದು ತನ್ನ ಮೇಲ್ಮನವಿಯಲ್ಲಿ ಅದು ಅಸಮಾಧಾನವನ್ನು ಹೊರಹಾಕಿದೆ. ಒಂದುವೇಳೆ, ಹೈಕೋರ್ಟ್‌ನಲ್ಲಿ ವಿಭಾಗೀಯ ಪೀಠವು ಈ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡರೆ, ಅಲ್ಲಿನ ನ್ಯಾಯಾಧೀಶರು ಪ್ರಕರಣವನ್ನು ಇದೇ ರೀತಿ ವಿಶ್ಲೇಷಿಸುತ್ತಾರೆ ಎಂದು ಈಗ ಹೇಳಲಾಗದು. ಈ ಹಿಂದೆ ಪ್ರಕರಣದ ಆರೋಪಿಗಳಿಗೆ ಜಾಮೀನು ತಿರಸ್ಕಾರ ಮಾಡಿದ್ದ ಸಂದರ್ಭದಲ್ಲಿ ''ಮೇಲ್ನೋಟಕ್ಕೆ ಅವ್ಯವಹಾರ ಕಾಣುತ್ತಿದೆ'' ಎಂದು ಹೈಕೋರ್ಟ್ ವಿಭಾಗೀಯ ಪೀಠ ಅಭಿಪ್ರಾಯ ನೀಡಿದ್ದನ್ನು ಕೂಡ ಇಲ್ಲಿ ನೆನಪಿಸಿಕೊಳ್ಳಬಹುದು. ದಿಲ್ಲಿ ಮದ್ಯ ನೀತಿಯಿಂದ ಹಗರಣ ನಡೆದಿಲ್ಲ ಎಂದು ಕೆಳ ನ್ಯಾಯಾಲಯವೇನೂ ಹೇಳಿಲ್ಲ, ಆದರೆ, ಆರೋಪಗಳನ್ನು ದೃಢೀಕರಿಸುವಂಥ ಸಾಕ್ಷ್ಯ ಒದಗಿಸಲು ಸಿಬಿಐಗೆ ಸಾಧ್ಯವಾಗಿಲ್ಲ. ಹಾಗಾಗಿ, ದಿಲ್ಲಿ ಹೈಕೋರ್ಟ್‌ನಲ್ಲಿ ನಡೆಯುವ ಮತ್ತೊಂದು ಸುತ್ತಿನ ಕಾನೂನು ಹೋರಾಟದ ಮೂಲಕವಾದರೂ ಸಿಬಿಐ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವುದೇ? ಇದಕ್ಕೆ ಕಾಲವೇ ಉತ್ತರಿಸಲಿದೆ.

ಸ್ಮಾರ್ಟ್‌ಫೋನ್ ಬಳಕೆಯ ನಿಯಂತ್ರಣ ಕಾರ್ಯಸಾಧ್ಯವೇ?

ಯಕ್ಷಪ್ರಶ್ನೆ
ರಮಾನಂದ ಶರ್ಮಾ
vveditoped@gmail.com

ಹದಿನಾರು ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಸ್ಮಾರ್ಟ್‌ಫೋನ್/ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧಿಸಲು/ನಿಯಂತ್ರಿಸಲು ಚಿಂತನೆ ನಡೆಸಿರುವ ರಾಜ್ಯ ಸರಕಾರವು ಇದಕ್ಕೆ ಪೂರಕವಾಗಿ 'ಮೊಬೈಲ್ ಬಿಡಿ, ಪುಸ್ತಕ ಹಿಡಿ' ಎಂಬ ಅಭಿಯಾನವನ್ನು ರೂಪಿಸುತ್ತಿದೆಯಂತೆ. ಆಂಧ್ರ ಮತ್ತು ಗೋವಾ ರಾಜ್ಯಗಳು ಕೂಡ ಈ ನಿಟ್ಟಿನಲ್ಲಿ ಆಲೋಚಿಸುತ್ತಿವೆಯಂತೆ. ಈ ವಿಚಾರಧಾರೆಯು ಇನ್ನಿತರ ರಾಜ್ಯಗಳಿಗೂ ಸಮೂಹ ಸನ್ನಿಯಂತೆ ಹಬ್ಬಿದರೆ ಅಚ್ಚರಿಯೇನಿಲ್ಲ.

ಆಸ್ಟ್ರೇಲಿಯಾ, ಸ್ಪೇನ್, ಮಲೇಷ್ಯಾ, ಫ್ರಾನ್ಸ್ ಮತ್ತು ನಾರ್ವೆ ದೇಶಗಳಲ್ಲಿ ಇತ್ತೀಚೆಗೆ ಇಂಥ ನಿಯಂತ್ರಣ ಜಾರಿಗೆ ಬಂದಿದೆ; ಆದರೆ ಅವು ನಿಷೇಧ/ನಿಯಂತ್ರಣವನ್ನು ಯಾವ ರೀತಿಯಲ್ಲಿ ಜಾರಿಗೊಳಿಸಿವೆ ಎಂಬುದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯಿಲ್ಲ. ಅಮೆರಿಕ, ಡೆನ್ಮಾರ್ಕ್ ಮತ್ತು ಗ್ರೀಸ್ ದೇಶಗಳಲ್ಲೂ ಇಂಥ ಚಿಂತನೆ ನಡೆದಿದೆಯಂತೆ. ಚೀನಾದಲ್ಲಿ ಮಕ್ಕಳಿಗೆ ಮೊಬೈಲ್ ನೀಡಲು ಪೋಷಕರ ಅನುಮತಿ ಕಡ್ಡಾಯವಾದರೆ, ಇಂಗ್ಲೆಂಡ್‌ನಲ್ಲಿ ಸ್ವಯಂಪ್ರೇರಿತ ನಿಷೇಧವನ್ನು ಹೇರಲಾಗಿದೆಯಂತೆ. ಒಟ್ಟಾರೆಯಾಗಿ ಹೇಳುವುದಾದರೆ, ಈ ನಿಷೇಧ ಮತ್ತು ನಿಯಂತ್ರಣಗಳ ಅನುಷ್ಠಾನದ ಪರಿ ಹಾಗೂ ಅದರ ಫಲಶ್ರುತಿಗಳನ್ನು ಕುತೂಹಲದಿಂದ ನಿರೀಕ್ಷಿಸಲಾಗುತ್ತಿದ್ದು, ಒಂದೊಮ್ಮೆ ಅವು ಪರಿಣಾಮಕಾರಿಯಾಗಿ ಕಂಡುಬಂದರೆ ಇದೊಂದು ಜಾಗತಿಕ ಅಭಿಯಾನವಾಗಬಹುದು.

ಒಂದು ಆವಿಷ್ಕಾರ/ಉತ್ಪನ್ನವು ಹೊಸದಾಗಿ ಅನಾವರಣಗೊಂಡು ಬಳಕೆದಾರರ ಮೆಚ್ಚುಗೆಯನ್ನು ಪಡೆಯುವಲ್ಲಿ ಯಶಸ್ವಿಯಾದರೆ, ಅದು ಕಾಲಕ್ರಮೇಣ ಬಳಕೆದಾರನ ಸಂಗಾತಿಯಾಗುತ್ತದೆ. ಅದರಲ್ಲೂ ಅದು ಬಳಕೆದಾರರ ದಿನನಿತ್ಯದ ಬದುಕಿಗೆ ಆಸರೆಯಾಗಿ ಜತೆಗೆ ಮನರಂಜನೆಯನ್ನೂ ನೀಡುತ್ತಿದ್ದರೆ, ತ್ವರಿತವಾಗಿ ಅದರ ಬಳಕೆಯು ಹವ್ಯಾಸವಾಗಿ, ಕೊನೆಗೊಮ್ಮೆ ಅರೆಕ್ಷಣವೂ ಬಿಟ್ಟಿರಲಾರದ ಸಂಗಾತಿಯಾಗಿ ಮಾರ್ಪಡುತ್ತದೆ. ಟ್ರಾನ್ಸಿಸ್ಟರ್, ಪಾಕೆಟ್ ರೇಡಿಯೋ, ಗ್ರಾಮಾಫೋನ್, 'ಟು-ಇನ್-ಒನ್' ಟೇಪ್ ರೆಕಾರ್ಡರ್, ವಿಸಿಆರ್ ಮುಂತಾದ ಸಾಧನಗಳು ಕಳೆದ 5 ದಶಕಗಳಲ್ಲಿ ಮಾಡಿದ ಹಾವಳಿಯು ಇನ್ನೂ ನೆನಪಿನಾಳದಲ್ಲಿದೆ. ಈ ಸಾಲಿಗೆ ಇತ್ತೀಚಿನ ಸೇರ್ಪಡೆ ಮೊಬೈಲ್ ಫೋನ್, ಇನ್ನೂ ಸ್ಪಷ್ಟವಾಗಿ ಹೇಳುವುದಿದ್ದರೆ ಸ್ಮಾರ್ಟ್‌ಫೋನ್. ಇವು ಸಾಮಾಜಿಕ ಜಾಲತಾಣಗಳ ವಾಹಕಗಳು. ರೈತ ಮಕ್ಕಳು ನೇಗಿಲತುದಿಗೆ ಟ್ರಾನ್ಸಿಸ್ಟರ್ ಅನ್ನು ನೇತುಹಾಕಿಕೊಂಡು ಹೊಲವನ್ನು ಉಳುತ್ತಿರಲಿಲ್ಲವೇ? ವಿದ್ಯಾರ್ಥಿಗಳು ತರಗತಿಯ ಕೊನೆಯ ಬೆಂಚಿನಲ್ಲಿ ಕುಳಿತು ಕ್ರಿಕೆಟ್ ಕಾಮೆಂಟರಿಯನ್ನು ಕೇಳುತ್ತಿರಲಿಲ್ಲವೇ? ಆಕಾಶವಾಣಿಯವರು 'ಶುಭರಾತ್ರಿ' ಹೇಳಿ ಮನೆಗೆ ತೆರಳುವ ತಡರಾತ್ರಿಯವರೆಗೆ ರೇಡಿಯೋಗೇ ಅಂಟಿಕೊಂಡಿರುತ್ತಿದ್ದ ಮಹಾನುಭಾವರನ್ನು ನೀವು ನೋಡಿಲ್ಲವೇ? ಅಷ್ಟೇಕೆ, ಟಿವಿ ಧಾರಾವಾಹಿಗಳು ಮಹಿಳೆಯರ ಬದುಕಿನ ವೈಖರಿಯನ್ನೇ ಬದಲಿಸಿದ, 'ಮೂವಿ-ಮ್ಯೂಸಿಕ್-ಕ್ರೀಡಾ' ಚಾನೆಲ್‌ಗಳು ವಿದ್ಯಾರ್ಥಿಗಳ ಮತ್ತು ಯುವಜನರ ಬದುಕಿನ ಅಮೂಲ್ಯ ಸಮಯವನ್ನೇ ಕೊಳ್ಳೆ ಹೊಡೆದ ನಿದರ್ಶನಗಳನ್ನು ಬಿಡಿಸಿ ಹೇಳಬೇಕಾಗಿಲ್ಲ. ಆದರೆ, ಈ ಸ್ಮಾರ್ಟ್‌ಫೋನ್‌ಗಳು ಅಥವಾ ಸಾಮಾಜಿಕ ಜಾಲತಾಣಗಳ ವೀಕ್ಷಣೆಯು ಸೃಷ್ಟಿಸಿರುವಷ್ಟು ಸಮಸ್ಯೆಯನ್ನು, ಉಂಟುಮಾಡಿರುವ ಕೌಟುಂಬಿಕ ಕ್ಷೋಭೆ, ರಾದ್ಧಾಂತ ಮತ್ತು ಸಾಮಾಜಿಕ ವ್ಯಾಕುಲತೆಯನ್ನು ಮೇಲೆ ವಿವರಿಸಲಾಗಿರುವ ಮಿಕ್ಕಾವ ಸಾಧನ-ಸಂದರ್ಭಗಳೂ ಸೃಷ್ಟಿಸಿರಲಿಲ್ಲ ಎಂಬುದಂತೂ ನಿಜ.

ಯಾವುದೇ ಆವಿಷ್ಕಾರ ಅಥವಾ ಸಾಧನವನ್ನು ಅವಶ್ಯಕತೆಗೆ ಅನುಗುಣವಾಗಿ ಒಂದು ಮಿತಿಯಲ್ಲಿ ಹಾಗೂ ಸದುದ್ದೇಶಕ್ಕೆ ಬಳಸಿದರೆ ಸಮಸ್ಯೆಯೇನೂ ಇರುವುದಿಲ್ಲ. ಇಂಥ ಆವಿಷ್ಕಾರ ಅಥವಾ ಸಾಧನಗಳನ್ನು ಅನಾವರಣಗೊಳಿಸುವಾಗ ಅದರ ಹಿಂದೆ ಒಂದು ಘನ ಉದ್ದೇಶ ಇರುತ್ತದೆ. ಆದರೆ, ಸದುದ್ದೇಶಗಳು ಮೂಲೆಗುಂಪಾಗಿ ದುರುದ್ದೇಶಗಳು ಮುನ್ನೆಲೆಗೆ ಬಂದು ಆಟವಾಡಲು ಶುರುಹಚ್ಚಿಕೊಂಡಾಗ, ಅವಾಂತರಗಳು ಸಂಭವಿಸುತ್ತವೆ. ಈಗ ನಡೆದಿರುವುದೂ ಅದೇ! ಬೇಸಿಕ್ ಮೊಬೈಲ್ ಫೋನುಗಳು ದಾಂಗುಡಿಯಿಟ್ಟಾಗ 'ತ್ವರಿತ ಸಂಪರ್ಕ' ಎಂಬುದು ಅದರ ಮೂಲ ಉದ್ದೇಶವಾಗಿತ್ತು. ಕಾಲಕ್ರಮೇಣ ಅದರ ಮೂಲಕ ಸಂದೇಶವನ್ನು ಕಳಿಸುವುದು, ಫೋಟೋಗಳನ್ನು ಕ್ಲಿಕ್ಕಿಸುವುದು ಮತ್ತು ಇನ್ನೊಬ್ಬರಿಗೆ ರವಾನಿಸುವುದು ಶುರುವಾದವು. ಸ್ಮಾರ್ಟ್‌ಫೋನ್‌ಗಳ ಆಗಮನವಾಗುತ್ತಿದ್ದಂತೆ ಬಳಕೆಯ ವ್ಯಾಪ್ತಿಯೂ ವಿಸ್ತರಿಸಿಕೊಂಡು ಧಾರಾವಾಹಿಗಳು, ಸುದ್ದಿಗಳನ್ನು ವೀಕ್ಷಿಸುವ ಪರಿಪಾಠ ಈ ಫೋನುಗಳೆಡೆಗೆ ತಿರುಗಿಕೊಂಡಿತು. ಸಾಲದೆಂಬಂತೆ, ಚಲನಚಿತ್ರ, ಚಿತ್ರಗೀತೆ,

ಭಾಷಣಗಳ ವೀಕ್ಷಣೆ, ಸಂಗೀತವನ್ನು ಆಲಿಸುವಿಕೆ, ವಿಭಿನ್ನ ಅಂತರ್ಜಾಲ ವೇದಿಕೆಗಳಲ್ಲಿ ಮಾಹಿತಿಗಳನ್ನು ತಡಕಾಡುವಿಕೆ ಮುಂತಾದ ಅಭ್ಯಾಸಗಳು ಶುರುವಾದವು. ಒಟ್ಟಿನಲ್ಲಿ, ಅಂಗೈಯಲ್ಲೇ ಜಗತ್ತನ್ನು ತುಂಬಿಸಿಬಿಡುವ ಆಧುನಿಕ ಸರ್ವಜ್ಞ ಎಂಬ ಅಭಿದಾನವನ್ನು ಪಡೆದುಕೊಂಡುಬಿಟ್ಟಿತು ಸ್ಮಾರ್ಟ್‌ಫೋನು. ಹೀಗೆ ನಿತ್ಯಬದುಕಿಗೆ ಬೆರಳ ತುದಿಯಲ್ಲಿನ ಕೈಪಿಡಿಯಾಗಿರುವ ಸ್ಮಾರ್ಟ್‌ಫೋನುಗಳು ವಿದ್ಯಾರ್ಥಿಗಳ ಕಿಸೆಯನ್ನೇ ಸೇರಿರುವುದರಲ್ಲಿ ಅಚ್ಚರಿಯೇನಿಲ್ಲ!

ಅದರಲ್ಲೂ ನಿರ್ದಿಷ್ಟವಾಗಿ ಕೋವಿಡ್ ಮಹಾಮಾರಿ ಅಪ್ಪಳಿಸಿದ ಸಂದರ್ಭದಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕಾದ ಅನಿವಾರ್ಯತೆಯಲ್ಲಿ 'ತರಗತಿಯ ನಿಯತ ಪಾಠ'ವು ದುಸ್ತರವಾದಾಗ ಮತ್ತು ಅದಕ್ಕೆ ಪರಿಹಾರೋಪಾಯ ಎಂಬಂತೆ 'ಆನ್‌ಲೈನ್ ಪಾಠ'ದ ವ್ಯವಸ್ಥೆ ಮುನ್ನೆಲೆಗೆ ಬಂದಾಗ, ಬಡವ-ಬಲ್ಲಿದ ಎನ್ನದೆ ಪ್ರತಿಯೊಬ್ಬ ವಿದ್ಯಾರ್ಥಿಯ ಕೈಯಲ್ಲೂ ಸ್ಮಾರ್ಟ್‌ಫೋನ್ ವಿಜೃಂಭಿಸುವಂತಾಯಿತು. ಆದರೆ, ಒಂದು ಘನ ಉದ್ದೇಶಕ್ಕಾಗಿ ಜಾರಿಗೆ ತಂದ ವ್ಯವಸ್ಥೆಯೊಂದು, ವಿದ್ಯಾರ್ಥಿಗಳು ತಮ್ಮ 'ಪ್ರಧಾನ ಚಟುವಟಿಕೆ'ಗಳನ್ನೇ ಕೈಬಿಟ್ಟು, ಮೊಬೈಲ್‌ನಲ್ಲೇ ಮುಳುಗಿಬಿಡುವಂಥ ಪರಿಸ್ಥಿತಿಯನ್ನು ಹುಟ್ಟುಹಾಕಿದ್ದು ವಿಪರ್ಯಾಸ! ಹೀಗೆ ಸ್ಮಾರ್ಟ್‌ಫೋನ್‌ಗಳ ದಾಸರಾಗಿರುವ ಮಕ್ಕಳ ಪಾಲಕರು/ಪೋಷಕರು ಈಗ ನಿದ್ರೆಗೆಡುವಂತಾಗಿದೆ. ಕಾರಣ, ತಮ್ಮ ಮಕ್ಕಳ ವಿದ್ಯಾಭ್ಯಾಸ ಹಾಗೂ ಭವಿಷ್ಯದ ಬಗ್ಗೆ ಅವರು ಚಿಂತಾಕ್ರಾಂತರಾಗುವಂತಾಗಿದೆ. ಕೆಲವೇ ವರ್ಷಗಳ ಹಿಂದೆ, ''ನಮ್ಮ ಮಕ್ಕಳು ಬರೀ ಕ್ರಿಕೆಟ್ ಆಡುತ್ತಾರೆ, ಟಿವಿ ನೋಡುತ್ತಾರೆ, ಹೊರಗಡೆ ಸುತ್ತಾಡುತ್ತಾರೆಯೇ ಹೊರತು ಪಠ್ಯಪುಸ್ತಕದ ಓದಿನ ಕಡೆಗೆ ಅವರಿಗೆ ಗಮನವಿಲ್ಲ, ಶ್ರದ್ಧೆಯೂ ಇಲ್ಲ'' ಎನ್ನುತ್ತಿದ್ದ ಪೋಷಕರು ಈಗ, ''ನಮ್ಮ ಮಕ್ಕಳು ಮೊಬೈಲ್ ಫೋನಿನ ಗುಂಗಿನಿಂದ ಹೊರಗೇ ಬರುತ್ತಿಲ್ಲ'' ಎಂದು ಅವರವರ ಬಳಿ ಅಳಲನ್ನು ತೋಡಿಕೊಳ್ಳುವುದು ಸಾಮಾನ್ಯವಾಗಿಬಿಟ್ಟಿದೆ. ಇದು ಒಬ್ಬಿಬ್ಬರ ಅಳಲು ಅಲ್ಲ, ಬದಲಿಗೆ ಮನೆಮನೆಯ ಕಥೆ! ಶಾಲಾ ಮಕ್ಕಳ 'ಸ್ಮಾರ್ಟ್‌ಫೋನ್ ಅಡಿಕ್ಷನ್' ಅದೆಷ್ಟು ತೀವ್ರವಾಗಿದೆಯೆಂದರೆ, ಹೆತ್ತವರು ಮೊಬೈಲ್ ಫೋನನ್ನು ಕೊಡಿಸಿಲ್ಲ ಎಂಬ ಕಾರಣಕ್ಕೆ ಜೀವಕ್ಕೇ ಅಪಾಯ ಉಂಟುಮಾಡಿಕೊಳ್ಳುವವರೆಗೂ ತಲುಪಿದ ಮಕ್ಕಳಿದ್ದಾರೆ. ಇದು ನಿಜಕ್ಕೂ ದುರಂತವೇ ಸರಿ.

ಮಕ್ಕಳ ಹೆಚ್ಚುವರಿ ಶಿಕ್ಷಣ/ಟ್ಯೂಷನ್ ಸೇರಿದಂತೆ ವಿವಿಧ ಬಾಬತ್ತುಗಳಿಗೆ ಮತ್ತು ಕಾರ್ಯಕ್ಷೇತ್ರದ ವಿಭಿನ್ನ ಅವಶ್ಯಕತೆಗಳಿಗೆ ತಂತ್ರಜ್ಞಾನದ ಅವಲಂಬನೆಯೇ ಮುಖ್ಯವಾಗಿರುವ ಇಂದಿನ ದೈನಂದಿನ ಬದುಕಿನಲ್ಲಿ ಸ್ಮಾರ್ಟ್‌ಫೋನಿನ ಅನಿವಾರ್ಯತೆ ಪ್ರಶ್ನಾತೀತ. ಆದರೆ, ಮಕ್ಕಳು ಸ್ಮಾರ್ಟ್‌ಫೋನಿನಲ್ಲೇ ಮುಳುಗಿಹೋಗಿ, ಮಿತಿಮೀರಿ ಸ್ಕ್ರೀನ್‌ಟೈಮ್ ಅನ್ನು ಬಳಕೆ ಮಾಡುವುದು ಅವರ ಕಲಿಕಾ ಆಸಕ್ತಿಗೆ ಮತ್ತು ಏಕಾಗ್ರತೆಗೆ ಧಕ್ಕೆಯುಂಟುಮಾಡುತ್ತದೆ. ತನ್ಮೂಲಕ ಅವರ ಶೈಕ್ಷಣಿಕ ಪ್ರಗತಿಗೆ ಮಾರಕವಾಗುತ್ತದೆ. ಹೀಗಾಗಿ, ಮಕ್ಕಳ ಶೈಕ್ಷಣಿಕ ಬದುಕು, ಭವಿಷ್ಯ, ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರಕಾರವು ಕೊಂಚ ವಿಳಂಬವಾದರೂ ಶ್ಲಾಘನೀಯ ಕ್ರಮವನ್ನು ಕೈಗೊಳ್ಳುತ್ತಿದೆ ಎಂಬ ಅಭಿಪ್ರಾಯ ಕೇಳಿಬರುತ್ತಿದೆ.

ಬಹುತೇಕ ಶಾಲಾ ಕಾಲೇಜುಗಳಲ್ಲಿ ಮೊಬೈಲ್ ಬಳಕೆಗೆ ನಿರ್ಬಂಧವಿದ್ದರೂ, ಅದೊಂದು ರೀತಿಯಲ್ಲಿ ಕಪ್ಪೆಯನ್ನು ಹಿಡಿದು ಕೊಳಗಕ್ಕೆ ತುಂಬಿ ದಂತಾಗಿದ್ದು ಪರಿಣಾಮ ಕಾರಿಯಾಗಿಲ್ಲ ಎನ್ನುತ್ತಾರೆ ಹಲವರು. ಸ್ಮಾರ್ಟ್‌ಫೋನುಗಳನ್ನು 'ಶೈಕ್ಷಣಿಕ ಉದ್ದೇಶಕ್ಕಾಗಿ' ತೆರೆದು ನೋಡುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದ್ದರೆ, ಸಾಮಾಜಿಕ ಜಾಲತಾಣಗಳನ್ನು ಜಾಲಾಡಲು ಬಳಸುವವರ ಸಂಖ್ಯೆಯೇ ಹೆಚ್ಚಿರುವಂತಿದೆ. ವರದಿಯೊಂದರ ಪ್ರಕಾರ ಭಾರತದಲ್ಲಿ 16 ವರ್ಷದೊಳಗಿನ ವಿದ್ಯಾರ್ಥಿಗಳು ದಿನಾಲೂ ಸರಾಸರಿ 4 ಗಂಟೆಗಿಂತ ಹೆಚ್ಚು ಕಾಲ ಸ್ಮಾರ್ಟ್‌ಫೋನ್ ವೀಕ್ಷಣೆಯಲ್ಲಿ ಮುಳುಗಿರುತ್ತಾರಂತೆ; ಈ ವೀಕ್ಷಣೆಯಲ್ಲಿ ವಿಡಿಯೋ, ರೀಲ್ಸ್, ಗೇಮಿಂಗ್, ಸಿನಿಮಾಗಳು ಮತ್ತು ಕ್ರೀಡಾ ವಿಡಿಯೋಗಳು ಇರುತ್ತವೆಯಂತೆ. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಯನದ ಪ್ರಕಾರ, 10ರ ವಯೋಮಾನದ ಮಕ್ಕಳಲ್ಲಿ ಶೇ.37.08ರಷ್ಟು ಮಂದಿ ಫೇಸ್‌ಬುಕ್ ಖಾತೆಯನ್ನೂ, ಶೇ.24.30ರಷ್ಟು ಮಕ್ಕಳು ಇನ್‌ಸ್ಟಾಗ್ರಾಂ ಖಾತೆಯನ್ನೂ ಹೊಂದಿದ್ದಾರಂತೆ! ಗಾಬರಿಗೊಳಿಸುವ ಈ ಅಂಕಿ-ಅಂಶಗಳೇ ಸರಕಾರವು ಮಕ್ಕಳ ಮೊಬೈಲ್ ಬಳಕೆಗೆ ಅಂಕುಶ ಹಾಕುವ ನಿಟ್ಟಿನಲ್ಲಿ ಪ್ರೇರೇಪಿಸಿರಬೇಕು ಎನ್ನಲಾಗುತ್ತದೆ.

16 ವರ್ಷದೊಳಗಿನ ಮಕ್ಕಳು ಸ್ಮಾರ್ಟ್‌ಫೋನ್ ಬಳಸುವುದನ್ನು ಸರಕಾರವು ನಿಷೇಧಿಸುತ್ತದೆಯೋ ಅಥವಾ ನಿಯಂತ್ರಿಸುತ್ತದೆಯೋ ಎಂಬ ವಿಚಾರದಲ್ಲಿ ಗೊಂದಲವಿದೆ. ಮಕ್ಕಳ ಓದಿಗೆ ಇರುವ ಅಡ್ಡಿಯನ್ನು ತಪ್ಪಿಸಲು, ಅವರ ಗಮನವು 'ಬೇರೆಡೆಗೆ' ತಿರುಗದಂತೆ ಮಾಡಲು ಇಂಥ ಯಾವುದಾದರೊಂದು ಕ್ರಮದ ಅಗತ್ಯವಿದೆ ಎಂಬುದೇನೋ ಖರೆ. 'ಸೈಬರ್ ಬುಲ್ಲಿಯಿಂಗ್' ಅನ್ನು ಪರಿಶೀಲಿಸಲು, ಅಪರಿಚಿತ ವ್ಯಕ್ತಿಗಳ ಸಂಪರ್ಕವನ್ನು ತಡೆಯಲು, ಸೈಬರ್ ಅಪರಾಧಗಳನ್ನು ತಪ್ಪಿಸಲು, ವ್ಯಸನಗಳಿಂದ ದೂರವಿರಿಸಲು, ಮಕ್ಕಳ ವಯೋಸಹಜ ಶಿಸ್ತನ್ನು ಕಾಪಾಡಲು, ತಡರಾತ್ರಿಯವರೆಗಿನ ಸ್ಮಾರ್ಟ್‌ಫೋನ್ ವೀಕ್ಷಣೆಯಿಂದ ಮಕ್ಕಳಲ್ಲಿ ಉಂಟಾಗುತ್ತಿರುವ ನಿದ್ರಾಹೀನತೆಯನ್ನು ತಪ್ಪಿಸಲು ಇಂಥ ನಿಯಂತ್ರಣ ಅಥವಾ ನಿಷೇಧದ ಅಗತ್ಯವಿದೆ ಎನ್ನಲಾಗುತ್ತದೆ. ಅಷ್ಟೇಕೆ, ಮಕ್ಕಳು ಸಾಮಾಜಿಕ ವ್ಯವಸ್ಥೆಯಲ್ಲಿ ಜನರೊಂದಿಗಿನ ನೇರಭೇಟಿ ಮತ್ತು ಸಂಭಾಷಣೆಗೆ ಒಡ್ಡಿಕೊಳ್ಳುವ ಪರಿಪಾಠವೇ ಕುಸಿಯುತ್ತಿದ್ದು, ಇದನ್ನು ತಪ್ಪಿಸಲು ಮಕ್ಕಳ ಸ್ಮಾರ್ಟ್‌ಫೋನ್ ಬಳಕೆಯನ್ನು ನಿಷೇಧಿಸುವುದು/ನಿಯಂತ್ರಿಸುವುದು ಅವಶ್ಯ ಎನ್ನುತ್ತಾರೆ ಬಲ್ಲವರು. ಆದರೆ, 'ಹೀಗೆ ನಿಷೇಧಿಸಿದರೆ ತುರ್ತು ಸಂದರ್ಭದಲ್ಲಿ ಮಕ್ಕಳ ಜತೆಗಿನ ಸಂವಹನ ದುಸ್ತರವಾಗುತ್ತದೆ ಮತ್ತು ಅವರ ಆನ್‌ಲೈನ್ ಅಧ್ಯಯನಕ್ಕೆ ಅಡಚಣೆಯಾಗುತ್ತದೆ' ಎಂಬ ಕಾರಣವನ್ನೂ ನೀಡುವವರಿದ್ದಾರೆ. ಜತೆಗೆ, ಸ್ಮಾರ್ಟ್‌ಫೋನ್‌ನಲ್ಲಿ ಗೂಗಲ್ ಮೂಲಕ ಹರಿದುಬರುವ 'ಜ್ಞಾನಗಂಗೆ'ಯನ್ನು ನಿಲ್ಲಿಸುವುದು ಸರಿಯಲ್ಲ ಎಂಬ ಅಭಿಪ್ರಾಯವೂ ಇದೆ.

ನಮ್ಮ ದೇಶದಲ್ಲಿ ಹೆಂಡ-ಸಾರಾಯಿ, ಗುಟ್ಕಾ, ಬೀಡಿ-ಸಿಗರೇಟು ಮುಂತಾದವುಗಳ ಸೇವನೆ, ಪ್ಲಾಸ್ಟಿಕ್, ವರದಕ್ಷಿಣೆ, ಲಂಚ ಮುಂತಾದ ಅಪಸವ್ಯಗಳಿಗೆ ಹೇರಲಾದ ನಿರ್ಬಂಧ/ನಿಷೇಧ ಮತ್ತು ತರುವಾಯದಲ್ಲಿ ಅದಕ್ಕೆ ಒದಗಿರುವ ಸ್ಥಿತಿಯನ್ನು ನೋಡಿದವರು, 'ಸ್ಮಾರ್ಟ್‌ಫೋನ್ ನಿಷೇಧ/ನಿಯಂತ್ರಣ'ವೂ ಅದೇ ಹಾದಿಯನ್ನು ಹಿಡಿಯಬಹುದು ಎಂದು ಸಂದೇಹಿಸುತ್ತಾರೆ. ಅದಕ್ಕೂ ಮಿಗಿಲಾಗಿ, ಮೂಲಭೂತ ಹಕ್ಕುಗಳ ರಕ್ಷಕರು, 'ಇಂಥ ನಿಷೇಧದಿಂದ ನಮ್ಮ ಹಕ್ಕಿಗೆ ಚ್ಯುತಿಯಾಗುತ್ತದೆ' ಎಂದು ಹೇಳಿ ಕೋರ್ಟ್ ಮೆಟ್ಟಿಲು ಹತ್ತುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಇದರ ಬದಲಿಗೆ 'ನಿಯಂತ್ರಿತ ಬಳಕೆ'ಯನ್ನು ಕೆಲವರು ಪ್ರತಿಪಾದಿಸುತ್ತಾರೆ. 'ಮಕ್ಕಳಿಗೆಂದೇ ವಿನ್ಯಾಸಗೊಳಿಸಿದ ಸ್ಮಾರ್ಟ್‌ಫೋನ್‌ಗಳು ಬರಲಿ, ಮಕ್ಕಳಿಗೆ ಅಪಾಯಕಾರಿ ಆಗಬಹುದಾದ ಕಂಟೆಂಟ್ ಅವುಗಳಲ್ಲಿದ್ದರೆ ಅವನ್ನು ತೆಗೆಯಲಿ, ತರಗತಿಯು ನಡೆಯುವ ಸಮಯದಲ್ಲಿ ಮೊಬೈಲ್ ಬಳಕೆಯನ್ನು ನಿಷೇಧಿಸಲಿ' ಹೀಗೆ ಬಗೆಬಗೆಯ ಅಭಿಪ್ರಾಯಗಳು ಹೊರಹೊಮ್ಮುತ್ತಿವೆ ಸಮಾಜದ ವಿವಿಧ ಜನರಿಂದ.

ಹಾಗೆಯೇ, ಕೇವಲ ಒಂದು ಆದೇಶದ ಮೂಲಕವೇ ಮಕ್ಕಳ ಸ್ಮಾರ್ಟ್‌ಫೋನ್ ಬಳಕೆಯ ಮೇಲೆ ನಿಷೇಧ/ನಿಯಂತ್ರಣವನ್ನು ಹೇರಲಾಗದು; ಅದಕ್ಕೂ ಮುಂಚೆ ಸರಕಾರವು ಶಿಕ್ಷಕರು, ಶಿಕ್ಷಣ ತಜ್ಞರು, ಪೋಷಕರು, ಮನೋವಿಜ್ಞಾನಿಗಳು, ವೈದ್ಯರು, ಬುದ್ಧಿಜೀವಿಗಳು, ಪತ್ರಕರ್ತರನ್ನು ಒಳಗೊಂಡ ತಂಡದೊಡನೆ ವಿಸ್ತೃತ ಚಿಂತನೆಯನ್ನು ಮಾಡಬೇಕಾಗುತ್ತದೆ ಹಾಗೂ ಸ್ಮಾರ್ಟ್‌ಫೋನ್ ತಯಾರಕ ಕಂಪನಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಈ ಕಂಪನಿಗಳು ಯಾವುದಾದರೊಂದು ಕಾನೂನಿನ ಅಡಿಯಲ್ಲಿ ಇಂಥ ಕ್ರಮವನ್ನು ವಿರೋಧಿಸಬಹುದು. ದೂರಸಂಪರ್ಕ ಇಲಾಖೆಯು ಕೇಂದ್ರ ಸರಕಾರದ ಸುಪರ್ದಿಯಲ್ಲಿ ಇರುವುದರಿಂದ, ರಾಜ್ಯ ಸರಕಾರವು ಮಕ್ಕಳ ಮೊಬೈಲ್ ಫೋನ್ ಬಳಕೆಯನ್ನು ನಿಷೇಧಿಸುವ/ನಿಯಂತ್ರಿಸುವ ಕಾನೂನನ್ನು ಮಾಡಬಹುದೇ? ಎಂಬ ಜಿಜ್ಞಾಸೆಯೂ ಇಲ್ಲಿ ತಲೆದೋರುತ್ತದೆ.

ಈ ಮಹತ್ವದ ಹೆಜ್ಜೆಯ ಸಾಧ್ಯಾಸಾಧ್ಯತೆಗಳೇನೇ ಇರಲಿ, ಅನುಭವ ಮತ್ತು ಪ್ರಚಲಿತ ಚಿಂತನೆಯ ಆಧಾರದ ಮೇಲೆ ಹೇಳುವುದಾದರೆ, ಇಂಥ ನಿಷೇಧ/ನಿಯಂತ್ರಣಗಳು ಕೇವಲ ಕಾನೂನಿನಿಂದ ಮತ್ತು ಸರಕಾರಿ ಆದೇಶಗಳಿಂದ ಕೈಗೂಡುವುದು ಕೊಂಚ ಕಷ್ಟವೇ. ಹೀಗಾಗಿ, ಇಂಥ ಕ್ರಮದ ಜತೆಜತೆಗೆ, ತಮ್ಮ ಮಕ್ಕಳ ಮೊಬೈಲ್ ಬಳಕೆಯ ವಿಷಯದಲ್ಲಿ ಪೋಷಕರು ಕೂಡ ಒಂದಿಷ್ಟು ಕಟ್ಟುಪಾಡುಗಳನ್ನು ವಿಧಿಸುವುದು, ಸಮಸ್ಯೆಯನ್ನು ಅವರಿಗೆ ಮನವರಿಕೆ ಮಾಡಿಕೊಡುವುದು ಪೂರಕ ಕ್ರಮವಾಗಬಲ್ಲದು ಎನ್ನಲಾಗುತ್ತಿದೆ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಭಾರತಿ ಎಸ್., (ಇಮೇಲ್ ಮೂಲಕ)**
ಭಟ್ರೇ, ಒಬ್ಬ ಮನುಷ್ಯನಿಗೆ ಶಾಂತಿ ಯಾವಾಗ ಸಿಗುತ್ತೆ?
– **ವಾಟ್ಸಾಪ್ ಗ್ರೂಪ್‌ನಿಂದ 'ಲೆಫ್ಟ್' ಆದಾಗ!**

- **ಸಿದ್ದೇಶ್, ಅರಸೀಕೆರೆ**
ಭಟ್ರೇ, ಡಾಕ್ಟರ್‌ಗಳು ಯಾಕೆ ಬಿಳಿ ಕೋಟು ಹಾಕಿಕೊಳ್ಳುತ್ತಾರೆ?
– **ಯಾಕಂದ್ರೆ ಬಿಲ್ ನೋಡಿದ ಮೇಲೆ ರೋಗಿಯ ಕಣ್ಣು ಮಂಜಾಗಿ ಅವರಿಗೆ ಬೇರೆ ಯಾವ ಬಣ್ಣವೂ ಕಾಣಿಸಬಾರದು ಅಂತ!**

- **ಸುಂದರೇಶ, ಚಿಕ್ಕಮಗಳೂರು**
ಭಟ್ರೇ, ಇತಿಹಾಸದ ಪುಸ್ತಕಗಳು ಯಾಕೆ ಇಷ್ಟೊಂದು ದಪ್ಪ ಇರುತ್ತವೆ?
– **ಯಾಕಂದ್ರೆ ಮನುಷ್ಯ ಹಳೆಯ ತಪ್ಪುಗಳನ್ನೇ ಮತ್ತೆ ಮತ್ತೆ ಮಾಡ್ತಾ ಇರ್ತಾನೆ, ಅವನ್ನೆಲ್ಲ ಬರೆಯಬೇಕಲ್ಲ!?**

- **ನಾಗರಾಜ ಶರ್ಮ, ಸಿದ್ದಾಪುರ**
ಭಟ್ರೇ, ಸಾಲ ಕೊಟ್ಟವನಿಗೂ, ಸಾಲಗಾರನಿಗೂ ಇರುವ ವ್ಯತ್ಯಾಸವೇನು?
– **ಸಾಲ ಕೊಟ್ಟವನಿಗೆ ನಿದ್ದೆ ಬರಲ್ಲ, ಸಾಲಗಾರನಿಗೆ ಫೋನ್ ಎತ್ತೋಕೆ ಪುರುಸೊತ್ತಿರಲ್ಲ!**

- **ಶಶಿಧರ ಸುಂಕಸಾಳ, ಗದಗ**
ಭಟ್ರೇ, ಜಿಮ್‌ಗೆ ಸೇರಿದ ಮೊದಲ ದಿನವೇ ಎಲ್ಲರೂ ಯಾಕೆ ಫೋಟೋ ತೆಗಿತಾರೆ?
– **ಆಮೇಲೆ ಹೋಗಲ್ಲ ಅಂತ ಅವರಿಗೂ ಒಳಗೊಳಗೇ ಗೊತ್ತಿರುತ್ತೆ, ಒಂದು ನೆನಪು ಬೇಕಲ್ಲ!?**

- **ವಿದ್ಯಾ ಭಟ್, (ಇಮೇಲ್ ಮೂಲಕ)**
ಭಟ್ರೇ, ಜೀವನದಲ್ಲಿ ಅತಿ ವೇಗವಾಗಿ ಓಡುವುದು ಯಾವುದು?
– **ಭಾನುವಾರ ಕಳೆದು ಸೋಮವಾರ ಬರುವುದು ಮತ್ತು ಸಂಬಳ ಬಂದು ಖಾಲಿಯಾಗುವುದು!**

- **ರಾಜೀವ ಕೆ., ಗುಬ್ಬಿ**
ಭಟ್ರೇ, ಪ್ರಪಂಚದಲ್ಲಿ ಅತಿ ವೇಗವಾಗಿ ಹರಡುವ ವಸ್ತು ಯಾವುದು?
– **ಬೆಂಕಿ ಅಲ್ಲ, ಬೆಳಕಲ್ಲ... ಅದು ಪಕ್ಕದ ಮನೆಯವರಿಗೆ ಗೊತ್ತಾದ ನಿಮ್ಮ ಮನೆಯ 'ರಹಸ್ಯ'!**

- **ರವಿ ಬಿಳಿಗಿರಿ, ಬೆಂಗಳೂರು**
ಭಟ್ರೇ, ಮೊಬೈಲ್ ಫೋನ್ ಮತ್ತು ಹೆಂಡತಿ ನಡುವಿನ ಸಾಮ್ಯತೆ?
– **ಎರಡನ್ನೂ ಅರ್ಥಮಾಡಿಕೊಳ್ಳುವುದು ಕಷ್ಟ, ಆದರೆ ಎರಡೂ ಇಲ್ಲದೆ ಒಂದು ನಿಮಿಷ ಇರೋದು ಅದಕ್ಕಿಂತ ಕಷ್ಟ!**

ಯುದ್ಧ: ಜಗತ್ತು ಮನೆಯೊಂದು ಮೂರು ಬಾಗಿಲು!



ಯುದ್ಧಕಾಂಡ
ರವೀ ಸಜಂಗದ್ದೆ
vveditoped@gmail.com

ಮಧ್ಯಪ್ರಾಚ್ಯ ವಲಯವು ಅಕ್ಷರಶಃ ರಣರಂಗವಾಗಿದೆ, ಮರುಭೂಮಿಯು ರುದ್ರಭೂಮಿಯಾಗಿಬಿಟ್ಟಿದೆ. ಜಗದ ತೈಲಭಂಡಾರ ಮತ್ತು ಖನಿಜ ಸಂಪತ್ತನ್ನು ತನ್ನದಾಗಿಸಿಕೊಳ್ಳುವ ಅಮೆರಿಕದ ದುರಾಸೆಗೆ ಹೆಣಗಳು ಬೀಳುತ್ತಿವೆ. ಆಸ್ತಿ–ಪಾಸ್ತಿ, ಸಂಪನ್ಮೂಲಗಳು ಅಪಾರ ಪ್ರಮಾಣದಲ್ಲಿ ನಷ್ಟವಾಗುತ್ತಿವೆ. ಕೇವಲ 2–3 ರಾಷ್ಟ್ರಗಳ ನಡುವಿನ ಕಿತ್ತಾಟದಲ್ಲಿ ಇಡೀ ಜಗತ್ತೇ ಬಡವಾಗುತ್ತಿದೆ. ಅಮೆರಿಕ ಸೇರಿದಂತೆ ಚೀನಾ, ರಷ್ಯಾ ಮುಂತಾದ ಬಲಿಷ್ಠ ರಾಷ್ಟ್ರಗಳು ತಂತಮ್ಮ ವ್ಯಾವಹಾರಿಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ತಮ್ಮ ಅನುಕೂಲಕ್ಕೆ ಆಗುವವರ ಪರ ವಹಿಸಿ, ಉರಿಯುವ ಬೆಂಕಿಗೆ ಮತ್ತಷ್ಟು 'ತೈಲ' ಸುರಿಯುವ ಕೆಲಸದಲ್ಲಿ ತೆರೆಮರೆಯಲ್ಲೇ ತೊಡಗಿಸಿಕೊಂಡಿವೆ. ಒಟ್ಟಾರೆ ಇವರಿಗೆಲ್ಲ ಬೇಕಿರುವುದು ವ್ಯವಹಾರ–ಆರ್ಥಿಕ ನಿಯಂತ್ರಣ ಹಾಗೂ ಇತರರ ಮನೆಗೆ ಬಿದ್ದ ಬೆಂಕಿಯಲ್ಲಿ ಚಳಿ ಕಾಯಿಸಿಕೊಳ್ಳುವ ತುಚ್ಛ ಹಪಾಹಪಿ! ಅಮೆರಿಕ ಬೆಂಬಲಿತ ಇಸ್ರೇಲ್ ಮತ್ತು ಚೀನಾ–ರಷ್ಯಾ ಬೆಂಬಲಿತ ಇರಾನ್ ನಡುವಿನ ಈ ಕದನವು ಜಗದಗಲ ಅಲ್ಲೋಲಕಲ್ಲೋಲವನ್ನೇ ಸೃಷ್ಟಿಸಿದೆ.

ಮೊನ್ನೆ ಶನಿವಾರ ಹಾಡಹಗಲೇ ನಡೆಸಿದ ದಾಳಿಗಳಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಖಮೇನಿ ಮತ್ತು ಇರಾನ್ ಸರಕಾರದ ಅಗ್ರಗಣ್ಯ 40 ನಾಯಕರನ್ನು ಅಮೆರಿಕ–ಇಸ್ರೇಲ್ ಹೊಡೆದುರುಳಿಸಿವೆ. ಇರಾನ್ ಒಳಗಿನವರು ಕೈಜೋಡಿಸದೆ ಈ ರೀತಿಯ ನಿಖರ ದಾಳಿ ಅಸಾಧ್ಯ. 'ಇಂಥ ದಿನ–ಸಮಯ–ಜಾಗದಲ್ಲಿ ಇಂತಿಂಥವರು ಸೇರುತ್ತಾರೆ' ಎಂಬ ಕರಾರುವಾಕ್ಕಾದ ಮಾಹಿತಿಯನ್ನು ಇಸ್ರೇಲ್‌ನ 'ಮೊಸಾದ್' ಮತ್ತು ಅಮೆರಿಕದ 'ಸಿಐಎ' ಗುಪ್ತಚರ ಸಂಸ್ಥೆಗಳಿಗೆ ಇರಾನ್‌ನ ಒಳಗಿನವರು ನೀಡಿದ್ದಾರೆ. ಹೀಗೆ ಸಿಕ್ಕಿದ ಗೌಪ್ಯ ಮಾಹಿತಿ ಮತ್ತು ಅದನ್ನು ಆಧರಿಸಿ ಅಮೆರಿಕ–ಇಸ್ರೇಲ್ ಮಾಡಿದ ದಾಳಿ ಅದೆಷ್ಟು ನಿಖರವಾಗಿತ್ತೆಂದರೆ, ಒಂದೇ ಏಟಿಗೆ ಇರಾನ್‌ನ ಅಗ್ರಗಣ್ಯ ನಾಯಕರೆಲ್ಲರೂ ಹತರಾಗಿದ್ದಾರೆ, ಇರಾನಿನ ಇಡೀ ಮಂತ್ರಿಮಂಡಲ ಖಾಲಿಯಾಗಿದೆ. ದೇಶವೊಂದರ ನಾಯಕರು ಹಾಗೂ ಅಧಿಕಾರದಲ್ಲಿರುವವರ ಚಲನವಲನ ಮತ್ತಿತರ ವಿವರಗಳು ಸಾಮಾನ್ಯರಿಗೆ ಗೊತ್ತಾಗುವುದು ಸಾಧ್ಯವೇ ಇಲ್ಲ; ಅದೇನಿದ್ದರೂ ಆ ಮುಖಂಡರಿಗೆ ನಿಕಟವಾಗಿದ್ದವರಿಗೆ ಮತ್ತು ಸುರಕ್ಷತಾ ಸಿಬ್ಬಂದಿಗಳಿಗಷ್ಟೇ ಗೊತ್ತಿರುತ್ತದೆ; ಅಂಥವರದೇ ಕರಾಮತ್ತು ಇದು ಎನ್ನುತ್ತಾರೆ ಬಲ್ಲವರು. ಈ ಭದ್ರತಾ ವೈಫಲ್ಯದ ಕುರಿತು ಇರಾನ್ ಮಾತನಾಡಿಲ್ಲ, ಬಹುಶಃ ಆಡುವುದೂ ಇಲ್ಲ! ತನ್ನ ಪರಮೋಚ್ಚ ನಾಯಕರ ದಂಡನ್ನು ರಕ್ಷಿಸುವಲ್ಲಿ ಇರಾನ್ ಸಂಪೂರ್ಣ ವಿಫಲವಾಗಿದ್ದು ಜಗಜ್ಜಾಹೀರಾಗಿದೆ. 'ಮೊಸಾದ್' ತಂಡದ ಸಾಮರ್ಥ್ಯದ ಬಗ್ಗೆ ಅಚ್ಚರಿಪಡುವವರು, ಇರಾನ್ ದೇಶದೊಳಗೆ ನಡೆದ ದೇಶದ್ರೋಹಿ ಸಂಚಿನ ಕುರಿತೂ ವಿಷಾದಿಸಬೇಕು. ಮನೆಯೊಳಗಿದ್ದವರೇ ಹೊರಗಿನ ಆಮಿಷಕ್ಕೆ ಕೈಚಾಚಿ ಶತ್ರುಗಳಿಗೆ 'ಮಾಹಿತಿದಾರ'ರಾದ ಕಥೆಯಿದು.

ಯುದ್ಧವೆಂಬುದು ಅದರಲ್ಲಿ ನೇರವಾಗಿ ಭಾಗಿಯಾದ ದೇಶಗಳ ಮೇಲೆ ಪರಿಣಾಮವನ್ನು ಬೀರುವುದರ ಜತೆಗೆ, ಇಡೀ ಪ್ರಪಂಚವನ್ನೂ ಮಾರಕವಾಗಿ ಬಾಧಿಸುತ್ತದೆ. 'ವಿಶ್ವದ ಎರಡನೇ ಅತಿ ಸುರಕ್ಷಿತ ನಗರ' ಎಂದು ಕರೆಸಿಕೊಂಡಿರುವ ದುಬೈ ಕೂಡ ಈ ಯುದ್ಧದ ಪರಿಣಾಮವಾಗಿ ದಾಳಿಗೊಳಗಾಗಿ ಹಲವರ ನಿದ್ರೆಗೆಡಿಸಿದೆ. ಜಗತ್ತಿನ ಭಾರಿ ಶ್ರೀಮಂತರೆಲ್ಲಾ ನಿರಾಳವಾಗಿ ಹೂಡಿಕೆ ಮಾಡುತ್ತಿದ್ದ ದುಬೈ ಮೇಲೆ

ಇರಾನಿನ ಕ್ಷಿಪಣಿ ಬಿದ್ದ ಪರಿಣಾಮ ಅಲ್ಲಿ ವ್ಯವಹಾರ ಸಾಮ್ರಾಜ್ಯಕ್ಕೆ ಮತ್ತು ಪ್ರವಾಸೋದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಅಲ್ಲಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಸುರಕ್ಷತೆಯ ದೃಷ್ಟಿಯಿಂದ ಬಂದ್ ಮಾಡಲಾಗಿದೆ, ಗಣನೀಯ ಸಂಖ್ಯೆಯ ವಿಮಾನಗಳು ರದ್ದಾಗಿವೆ. ಒಟ್ಟಾರೆ ಹೇಳುವುದಾದರೆ, ಜಗತ್ತಿನ ಸಂಪರ್ಕಕೊಂಡಿಯಂತಿದ್ದ ದುಬೈ ವಿಮಾನ ನಿಲ್ದಾಣದಲ್ಲೀಗ ಸ್ಮಶಾನಮೌನ.

ದುಬೈ ಸೇರಿದಂತೆ ದೋಹಾ, ರಿಯಾಧ್, ಅಬುದಾಭಿ ನಗರಗಳನ್ನು ಗುರಿಯಾಗಿಸಿ ಇರಾನಿನ ಡ್ರೋಣ್‌ಗಳು ಮಾಡಿದ ದಾಳಿಯಿಂದಾಗಿ ಕೊಲ್ಲಿ ರಾಷ್ಟ್ರಗಳಲ್ಲಿ ಭಯಾನಕತೆ ಮೂಡಿದೆ, ಅನಿಶ್ಚಿತತೆ–ಅಸ್ಥಿರತೆಗಳು ಸ್ಥಾಯಿಯಾಗಿವೆ. ಈ ಅಸ್ಥಿರತೆಯು ಕೇವಲ ಮಧ್ಯಪ್ರಾಚ್ಯ ದೇಶಗಳ ನಡುವಿನ ಸಂಘರ್ಷವಾಗಿ ಉಳಿದಿಲ್ಲ; ಅದು ಜಾಗತಿಕ ರಾಜತಾಂತ್ರಿಕತೆ ಮತ್ತು ಒಂದಿಷ್ಟು ಪಲ್ಲಟಗಳನ್ನು ಒಳಗೊಂಡ ಹೊಸ ಆಯಾಮಗಳ ಮುನ್ನುಡಿಯಂತೆ ಭಾಸವಾಗುತ್ತಿದೆ. ಅಫ್ಘಾನಿಸ್ತಾನದಿಂದ ಮೊದಲ್ಗೊಂಡು ಲಿಬಿಯಾದವರೆಗೆ ಮತ್ತು ಇತ್ತೀಚಿನ ವೆನಿಜುವೆಲಾ ಪ್ರಹಸನದವರೆಗೆ 'ಆಡಳಿತದ ಬದಲಾವಣೆ' ಹೆಸರಿನಲ್ಲಿ ಅಮೆರಿಕ ನಡೆಸಿದ ಎಲ್ಲಾ ಪ್ರಯೋಗಗಳು ವಿಫಲವಾಗಿರುವ ಇತಿಹಾಸಕ್ಕೆ ಜಗತ್ತು ಸಾಕ್ಷಿಯಾಗಿದೆ. ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಪಾಶ್ಚಾತ್ಯ ದೇಶಗಳು ನಡೆಸಿದ ಹಸ್ತಕ್ಷೇಪಗಳು, ಆಕ್ರಮಣಗಳು ಅಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವ ಬದಲಿಗೆ ಅಂಥ ದೇಶಗಳನ್ನು 'ವಿಫಲ ಮತ್ತು ಅರಾಜಕತೆಯ ರಾಷ್ಟ್ರಗಳಾಗಿ' ಮಾಡಿರುವ ದಾಖಲೆಗಳಿವೆ. ಲಿಬಿಯಾ, ಸಿರಿಯಾ ಮತ್ತು ಅಫ್ಘಾನಿಸ್ತಾನಗಳ ಇಂದಿನ ದುಸ್ಥಿತಿಯೇ ಇದಕ್ಕೆ ಜ್ವಲಂತ ಸಾಕ್ಷಿ. ಇರಾನಿನಲ್ಲಿ ತನ್ನಿಷ್ಟದ, ತನ್ನಾಜ್ಞೆಯನ್ನು ಪಾಲಿಸುವ ಸರಕಾರ ಅಧಿಕಾರಕ್ಕೆ ಬರಬೇಕು ಎಂಬುದು ಅಮೆರಿಕದ ಮಹದಾಸೆ. ಆದರೆ ಈ ವಿಚಾರದಲ್ಲಿ ಕಾಲಾನುಕಾಲಕ್ಕೆ ನಡೆಯುವ ತಿಕ್ಕಾಟಗಳು ಇಡೀ ಏಷ್ಯಾ ವಲಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿವೆ.

ಭಾರತದ ದೃಷ್ಟಿಯಿಂದ ಈ ಯುದ್ಧವನ್ನು ನೋಡುವುದಾದರೆ, ದೇಶದ ಇಂಧನ ಭದ್ರತೆಗೆ ಮತ್ತು ನಮ್ಮ ಆಯಕಟ್ಟಿನ ಅಂತಾರಾಷ್ಟ್ರೀಯ 'ಸಮರ–ಸನ್ನದ್ಧ' ಪ್ರದೇಶಗಳಲ್ಲಿ ಒಂದಾದ ಚಾಬಹಾರ್ ಬಂದರು ಪ್ರದೇಶದ ಭವಿಷ್ಯದ ಯೋಜನೆಗಳಿಗೆ ಒಂದಷ್ಟು ಹೊಡೆತ ಬೀಳಲಿರುವುದು ದಿಟ. ಹೀಗಾಗಿ, ಈಗಿನ ಯುದ್ಧೋನ್ಮಾದದ ಸಂದರ್ಭವನ್ನು ಭಾರತವು ತನ್ನ ಸುರಕ್ಷತೆ, ಸಾರ್ವಭೌಮತೆ ಮತ್ತು ವ್ಯಾವಹಾರಿಕ ದೃಷ್ಟಿಯಿಂದ ಅಳೆದು ತೂಗಿ, ಸಮರ್ಪಕವಾದ ಮತ್ತು ದೃಢವಾದ ನಿರ್ಧಾರವನ್ನು ಕೈಗೊಳ್ಳಬೇಕಿದೆ. ಈ ಸಂಕೀರ್ಣ ಪರಿಸ್ಥಿತಿಯಲ್ಲಿ ಭಾರತವು ತನ್ನ ಪಾರಂಪರಿಕ 'ತಟಸ್ಥ ನೀತಿ'ಯನ್ನು ಮುಂದು ವರಿಸಿಕೊಂಡು ಹೋಗುವುದರ ಜತೆಗೆ, 'ಸಮರೋನ್ಮಾದಿ' ರಾಷ್ಟ್ರಗಳನ್ನು ವಿಶ್ವಶಾಂತಿಗಾಗಿ ಆಗ್ರಹಿಸಬೇಕಾದ ಹೊಣೆಗಾರಿಕೆಯನ್ನೂ ಮೆರೆಯಬೇಕಿದೆ. ಈ ಯುದ್ಧದಿಂದಾಗಿ ಭಾರತದ ಮೇಲಾಗಬಹುದಾದ ಪರಿಣಾಮಗಳಿವು:

ಭಾರತವು ತನ್ನ ಕಚ್ಚಾತೈಲದ ಅಗತ್ಯದ ಶೇ.80ಕ್ಕಿಂತ ಹೆಚ್ಚು ಪಾಲನ್ನು ಪಶ್ಚಿಮ ಏಷ್ಯಾ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧವು ದೀರ್ಘಾವಧಿವರೆಗೆ ಮುಂದುವರಿದರೆ, ತೈಲ ಮತ್ತು ಇಲೆಕ್ಟ್ರಾನಿಕ್ ವಸ್ತುಗಳ ಬೆಲೆಯೇರಿಕೆ ನಿಶ್ಚಿತ. ಇರಾನ್ ಸಂಘರ್ಷದಿಂದಾಗಿ ಒಂದು ಬ್ಯಾರೆಲ್ ಕಚ್ಚಾತೈಲದ ಬೆಲೆ 100 ಡಾಲರ್ ಆಗುವ ಅಪಾಯವಿದ್ದು, ಇದು ದೇಶಕ್ಕೆ ಆರ್ಥಿಕ ಹೊಡೆತ ನೀಡಲಿದೆ.

ಇರಾನ್ ಸಮುದ್ರದ ಗಡಿಯಲ್ಲಿ ಮತ್ತು ಸಮುದ್ರದ ಮೂಲಕ ತೈಲ ಹಾಗೂ ವಾಣಿಜ್ಯೋತ್ಪನ್ನಗಳ ಸಾಗಣೆಗೆ ಅಡ್ಡಿಯಾದರೆ, ಭಾರತದ ರಫ್ತುವಲಯವು ಕುಸಿತವನ್ನು ಕಾಣಬಹುದು. ಇರಾನ್ ದೇಶವು 'ಹಾರ್ಮುಜ್' ಜಲಸಂಧಿಯನ್ನು ಮುಚ್ಚಿದರೆ ಭಾರತಕ್ಕೆ ತೊಂದರೆಯಾಗಲಿದೆ.

ಇಸ್ರೇಲ್ ಮತ್ತು ಇರಾನ್ ಜತೆಗಿನ ಭಾರತದ ವ್ಯವಹಾರಗಳ ಮೇಲೂ ವ್ಯತಿರಿಕ್ತ ಪರಿಣಾಮವಾಗಬಹುದು. ಇಸ್ರೇಲ್ ಜತೆಗಿನ ರಕ್ಷಣಾ ಸಾಮಗ್ರಿಗಳ ವ್ಯವಹಾರ ಒಪ್ಪಂದ ಮತ್ತು ಇರಾನ್ ಜತೆಗಿನ ಐತಿಹಾಸಿಕ ವ್ಯಾಪಾರ ಒಪ್ಪಂದ, ತೈಲ ಖರೀದಿ ಇತ್ಯಾದಿಗಳನ್ನು ಅತ್ಯಂತ ಜಾಣತನದಿಂದ ನಡೆಸಿಕೊಂಡು ಹೋಗಬೇಕಿದೆ. 'ಹಾವೂ ಸಾಯಬಾರದು, ಕೋಲೂ ಮುರಿಯಬಾರದು' ಎಂಬ ತಂತ್ರವನ್ನು ಅಳವಡಿಸಿಕೊಂಡು ಹೆಜ್ಜೆಯಿಡಬೇಕಾದ ಅನಿವಾರ್ಯತೆಯಿದೆ.

ಭಾರತದ ಅಂದಾಜು ಒಂದು ಕೋಟಿ ಜನರು ವಿವಿಧ ಕೊಲ್ಲಿ ರಾಷ್ಟ್ರಗಳಲ್ಲಿ ನೆಲೆಸಿದ್ದು, ಅವರ ಸುರಕ್ಷತೆಯ ನೆಲೆಯಲ್ಲಿ ಈ ಸಂಘರ್ಷವು ಆತಂಕವನ್ನು ಸೃಷ್ಟಿಸಿದೆ. ಸಂಘರ್ಷವು ದೀರ್ಘಾವಧಿವರೆಗೆ ಮುಂದುವರಿದರೆ, ಅವರನ್ನು ಭಾರತಕ್ಕೆ ಕರೆತರುವ ಜವಾಬ್ದಾರಿಯ ಜತೆಗೆ ಅವರಿಗೆ ಸೂಕ್ತ ಉದ್ಯೋಗ/ಸೂರು ಕಲ್ಪಿಸುವ ಸವಾಲೂ ದೇಶದ ಮುಂದಿದೆ. ಅಲ್ಲಿಂದ ಭಾರತಕ್ಕೆ ಮರಳುವವರ ಆದಾಯ ಮತ್ತು ಹೂಡಿಕೆಯ ಮೇಲೂ ಈ ಸಂಘರ್ಷವು ವ್ಯತಿರಿಕ್ತ ಪರಿಣಾಮವನ್ನು ಬೀರಲಿದೆ.

ಬಂಗಾರ ಮತ್ತು ಬೆಳ್ಳಿ ಇನ್ನೂ ದುಬಾರಿಯಾಗಿ, ಗ್ರಾಹಕರ ಜೇಬಿಗೆ ಕತ್ತರಿ ಬೀಳಲಿದೆ. ಜತೆಗೆ, ದೇಶದ ಷೇರುಮಾರುಕಟ್ಟೆಯಲ್ಲಿನ ಹೂಡಿಕೆ ಮತ್ತು ವಿದೇಶಿ ಬಂಡವಾಳದ ಒಳಹರಿವು ಕಡಿಮೆಯಾಗಲಿದೆ. ಈ ಒತ್ತಡದಿಂದಾಗಿ ಷೇರುಮಾರುಕಟ್ಟೆ ಕುಸಿದು ದೇಶೀಯ ಹೂಡಿಕೆದಾರರು ನಷ್ಟವನ್ನು ಅನುಭವಿಸಬಹುದು. ಈ ಬೆಳವಣಿಗೆಯಿಂದಾಗಿ ಜಿಡಿಪಿ ಮೇಲೂ ನಕಾರಾತ್ಮಕ ಪರಿಣಾಮವಾಗಬಹುದು.

ಕಚ್ಚಾತೈಲ ಮತ್ತಿತರ ಆಮದು ಸರಕುಗಳ ಬೆಲೆಹೆಚ್ಚಾದರೆ, ಭಾರತವು ಈ ಬಾಬತ್ತಿಗೆ ಹೆಚ್ಚಿನ ಮೊತ್ತವನ್ನು ಡಾಲರ್ ರೂಪದಲ್ಲಿ ಪಾವತಿಸಬೇಕಾಗುತ್ತದೆ. ಹಾಗಾದಾಗ ನಮ್ಮ 'ವಿದೇಶಿ ವಿನಿಮಯ ಮೀಸಲು' ಕರಗಿ ಡಾಲರ್ ಎದುರು ಭಾರತೀಯ ರೂಪಾಯಿಯ ಮೌಲ್ಯ ಕುಸಿಯುತ್ತದೆ. ಹಾಗೆ ರೂಪಾಯಿ ಅಪಮೌಲ್ಯಗೊಂಡರೆ, ಆಮದಾಗುವ ಪ್ರತಿಯೊಂದು ವಸ್ತುವೂ ದುಬಾರಿಯಾಗುತ್ತದೆ.

ಒಟ್ಟಾರೆ ಹೇಳುವುದಾದರೆ, ಈ ಸಂಘರ್ಷವು ತಣ್ಣಗಾಗದಿದ್ದರೆ ಅದರ ಬಿಸಿ ಭಾರತದ ಆರ್ಥಿಕತೆಯನ್ನು ಬಹುವಾಗಿ ಕಾಡಲಿದೆ, ಜಾಗತಿಕ ಆರ್ಥಿಕ ವ್ಯವಸ್ಥೆಯೂ ಧಕ್ಕೆಗೊಳ್ಳಲಿದೆ. ಜಗತ್ತಿನ ಯಾವುದೇ ರಾಷ್ಟ್ರದ ಮೇಲೂ ಎರಗಲು ತನಗೆ ಹಕ್ಕಿದೆ ಎಂಬಂತೆ ವರ್ತಿಸುವ ಯಾವುದೇ ರಾಷ್ಟ್ರವು ಜಾಗತಿಕ ಸಮುದಾಯದ ಪಾಲಿಗೆ ಅಪಾಯಕಾರಿ ಮತ್ತು ಜಗತ್ತಿನ ವಿನಾಶಕ್ಕೆ ಮುನ್ನುಡಿಯಾಗುತ್ತದೆ. 'ಯುದ್ಧದಲ್ಲಿ ಗೆದ್ದವನು ಸೋತಂತೆ, ಸೋತವನು ಸತ್ತಂತೆ' ಎಂಬ ಮಾತಿದೆ. ಮಧ್ಯಪ್ರಾಚ್ಯದಲ್ಲಿ ಪ್ರಸ್ತುತ ಭುಗಿಲೆದ್ದಿರುವ ಈ ಯುದ್ಧೋನ್ಮಾದವು ಪ್ರಪಂಚಕ್ಕೆ ತಂದೊಡ್ಡುವ ಲುಕ್ಸಾನು ಕಲ್ಪನೆಗೂ ಮೀರಿದ್ದು. ಸದ್ಯಕ್ಕೆ ಭಾರತ ಸುರಕ್ಷಿತವಾಗಿದ್ದರೂ, ಈ ಸಂಘರ್ಷದ ಅಡ್ಡಪರಿಣಾಮಗಳು ನಮ್ಮ ಮೇಲೂ ಆಗಲಿವೆ; ಹಾಗಾಗಿ ಈ ಸಮರೋನ್ಮಾದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಭಾರತವೂ ಯತ್ನಿಸಲಿ.

ಮಧ್ಯಪ್ರಾಚ್ಯದ ಬೆಂಕಿಯ ಕೆನ್ನಾಲಿಗೆ ನಮ್ಮ ಮನೆಯ ಬಾಗಿಲು ಸೋಕದಂತೆ ನೋಡಿಕೊಳ್ಳಬೇಕಾಗಿದೆ. ಮುಂದಿನ ಕಠಿಣ ದಿನಗಳನ್ನು ಎದುರಿಸಲು, ದೇಶದ ಹಿತ ಕಾಯಲು ಎಲ್ಲಾ ರೀತಿಯ ತ್ಯಾಗಕ್ಕೆ ಸಿದ್ಧರಾಗೋಣ...

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಚಿಂತನೆ

ವಿದ್ಯಾಶಂಕರ ಶರ್ಮ, ಸಿದ್ದಾಪುರ

ಸೃಷ್ಟಿಯ ಅದ್ಭುತ ಕೊಡುಗೆ

ಸೃಷ್ಟಿಕರ್ತನ ಲೀಲಾವಳಿಯ ಪ್ರತಿರೂಪವಾದ ಪ್ರಕೃತಿಯು ಎಂದಿಗೂ ನವನವೀನ. ನಮ್ಮಲ್ಲಿ ಎಂಥ ಏಕತಾನತೆಯೇ ಇರಲಿ, ಸುಂದರ ಹೂವು, ಮರ, ಹಕ್ಕಿಗಳ ಚಿಲಿಪಿಲಿ, ಹೊಳೆ, ನದಿ, ಸಮುದ್ರಗಳಿಂದ ನಮ್ಮೊಳಗೆ ಉತ್ಸಾಹವು ಮೂಡುತ್ತದೆ. ಸಹಜವಾಗಿ ನಳನಳಿಸುವ ನಿಸರ್ಗವು ನಮ್ಮ ನೆಮ್ಮದಿ ಮತ್ತು ನಗುವಿಗೂ ಕಾರಣವಾಗುತ್ತದೆ. ಬದುಕಿನ ರೀತಿಯನ್ನು ತಿಳಿಹೇಳಲು ಭಗವಂತನು ನಿಸರ್ಗವನ್ನು ಸೃಷ್ಟಿಸಿದನೇನೋ ಎಂಬಂತೆ ಪ್ರಕೃತಿ ಮತ್ತು ಮಾನವ ಬದುಕಿನ ನಡುವೆ ಹೋಲಿಕೆಯಿದೆ. ವಿಶಾಲವಾದ ಸಾಗರ ಇಡೀ ಪ್ರಪಂಚದ ರೂಪವಾದರೆ, ಅದರ ನೀರು ಬದುಕಿನ ಹೋರಾಟದ ನೀಲಿನಕ್ಷೆಯಂತೆ ಭಾಸವಾಗುತ್ತದೆ. ಉಬ್ಬರ–ಇಳಿತಗಳು ಬದುಕಿನ ಏರಿಳಿತಗಳನ್ನು ಮಾರ್ಮಿಕವಾಗಿ ತೋರಿಸುತ್ತವೆ. ತೀರದ ಮರಳ ಮೇಲೆ ಕುಳಿತು ಸಮುದ್ರದೆಡೆಗೆ ದೃಷ್ಟಿ ಬೀರಿದಾಗ ಮನಸ್ಸಿನ ಒಳಪದರಗಳು ತಾವೇ ತಾವಾಗಿ ಬಿಚ್ಚಿಕೊಳ್ಳುತ್ತವೆ. ದಡಕ್ಕೆ ಬಡಿಯುವ ಅಲೆಯ ಭೋರ್ಗರೆತ, ನೊರೆಯ ಚಿಮ್ಮುವಿಕೆ ಮತ್ತೆ ಹಿಂದೆ ಸರಿಯುವ ನೀರು ಎಲ್ಲವೂ ಒಂದು ಲಯದಲ್ಲಿ ಜರುಗುವ ಅನುಭವವೇ ರೋಚಕ. ತೀರಕ್ಕೆ ಅಪ್ಪಳಿಸಿದ ಅಲೆಗಳು ತಮ್ಮ ಹೊಟ್ಟೆಯಲ್ಲಿರುವ ವಸ್ತುಗಳನ್ನು ಹೊರದೂಡುವುದನ್ನು ನಾವು ಕಾಣಬಹುದು. ತನ್ನೆಡೆಗೆ ಎಸೆದ ಮಲಿನವನ್ನೇ ಅದು ಹೊರಹಾಕುವುದರ ಮೂಲಕ ನಮಗೆ ಸಂದೇಶವೊಂದನ್ನು ನೀಡುತ್ತದೆ. ಅದೆಂದರೆ– ನಮ್ಮ ಮನದಲ್ಲಿನ ರಾಗ–ದ್ವೇಷಗಳನ್ನು ಹೊರದೂಡಿ ನಾವು ಶುದ್ಧಗೊಳ್ಳಬೇಕು ಎಂಬುದು.ಅಲೆಗಳ ಜತೆ ಬರುವ ನೊರೆಯಲ್ಲಿ ಬಹು ಗಹನವಾದ ಪಾರಮಾರ್ಥಿಕ ತಿಳಿವು ಅಡಗಿದೆ. ನೊರೆಯಾಗಿ ಕಾಣುತ್ತಿರುವುದು ನೀರೇ ಆದರೂ ನಾವು ಅದನ್ನು ನೀರಿಗಿಂತ ಬೇರೆ ಎಂಬಂಥ ಭಾವದಿಂದ ನೋಡುತ್ತೇವೆ; ನಮ್ಮ ನಿಜಸ್ವರೂಪವು ಆತ್ಮಚೈತನ್ಯವೇ ಆದರೂ ದೇಹವೇ ನಾವೆಂದು ಅಂದುಕೊಂಡಿದ್ದೇವೆ. ನಮಗೂ, ಎಲ್ಲೆಡೆ ತುಂಬಿರುವ ಪರಮಾತ್ಮನ ಸ್ವರೂಪಕ್ಕೂ ಸ್ವಲ್ಪವೂ ಭೇದವಿಲ್ಲ ಎಂಬುದನ್ನು ನೊರೆ ಮತ್ತು ನೀರಿನ ನಡುವಿನ ಅಭೇದದಿಂದ ಅರಿಯಬೇಕಿದೆ. ಅಲೆಗಳೂ ನಿಜದಲ್ಲಿ ನೀರೇ ಎಂಬ ಸತ್ಯದಂತೆ ಆತ್ಮಸ್ವರೂಪವೇ ನಾವು ಎಂಬ ಸತ್ಯವು ನಮ್ಮ ಅನುಭವಕ್ಕೆ ಬರಬೇಕಾಗಿದೆ.ಸಮುದ್ರದ ನಡುವಿನ ಬಂಡೆ, ಅಲೆಗಳ ಬಡಿತ ಒಂದು ಅನೂಹ್ಯವಾದ ನೋಟವನ್ನು ನಮಗೆ ಉಣಬಡಿಸುತ್ತವೆ. ಬಂಡೆಗಳಿಗೆ ಬಡಿದ ನೀರು ಮೇಲೆ ಚಿಮ್ಮುವ ಪರಿ, ಬದುಕಿನ ಹೊಡೆತಗಳನ್ನು ಎದುರಿಸಿ ನಿಂತ ಮನುಜನ ಮೇಲೆ ನಿಯಾಮಕನು ತನ್ನ ಆಶೀರ್ವಾದವನ್ನು ಮಾಡಿದಂತಿದೆ. ಎದ್ದೆದ್ದು ಬರುವ ಅಲೆಗಳು ನಮ್ಮೆಡೆಗೆ ಬರುವ ಸತತ ಸವಾಲು, ಪರೀಕ್ಷೆ, ಅಡೆತಡೆಗಳ ಪ್ರತಿರೂಪವಾಗಿವೆ. ಅಲೆಯು ಇಳಿದು ನೀರು ಬಂಡೆಯ ಸುತ್ತ ಹರಿಯುವ ದೃಶ್ಯವನ್ನು, ಒಂದು ಬಿರುಗಾಳಿಯ ನಂತರ ಪ್ರಶಾಂತವಾದ ಮನದ ಕೊಳಕ್ಕೆ ಹೋಲಿಸಬಹುದು. ನೀರಿನಿಂದ ತೊಯ್ದ ಬಂಡೆಯು, ಬದುಕಿನ ಹೊಡೆತಗಳನ್ನು ತನ್ನೊಳಗೆ ಇರಿಸಿಕೊಂಡು ಮೇಲೆ ಶಾಂತತೆಯನ್ನು ತೋರುವಂಥ ಮನಸ್ಥಿತಿಯನ್ನು ಸಾರುತ್ತದೆ.

ಸಮುದ್ರದ ಇಳಿತವಿದ್ದಾಗ ತೀರದಿಂದ ದೂರಕ್ಕೆ ಅಲೆಗಳು ಸರಿಯುವುದನ್ನು ಗಮನಿಸಬಹುದು. ಇಲ್ಲಿಯವರೆಗೂ ನೀರಿನಲ್ಲಿ ಮುಳುಗಿದ್ದ ಬಂಡೆಗಳು ಆಗ ಕಾಣುವುವು. ಒಂದು ದೊಡ್ಡ ಹೋರಾಟದ ನಂತರದ ಖಾಲಿತನದ ಭಾವವನ್ನು, ಹೀಗೆ ಹಿಂದೆ ಸರಿದ ಕಡಲು ನಮ್ಮಲ್ಲಿ ಮೂಡಿಸುವುದು. ನೀರಿನಡಿ ಗಟ್ಟಿಯಾಗಿ ನಿಂತಿರುವ ಬಂಡೆಗಳು ತಮ್ಮ ಇರುವಿಕೆಯನ್ನು ತೋರುವ ಮೂಲಕ, ಕಷ್ಟದ ಸಾಗರದಲ್ಲಿ ಮುಳುಗಿದ್ದರೂ ಅಲುಗಾಡದ ಧೀಮಂತರನ್ನು ನೆನಪಿಸುತ್ತವೆ. ಅಂದರೆ ಸಾಗರದ ಪ್ರತಿ ಅಂಶವೂ ಬದುಕೆಂಬ ಬಟ್ಟೆಯನ್ನು ನಮ್ಮೆದುರು ಹರಡಿಟ್ಟಂತೆ ತೋರುವುದು. ಏಕೆಂದರೆ ಭಗವಂತನೆಂಬ ಕಲಾಕಾರನ ರಚನೆಯಲ್ಲಿ ಯಾವುದೂ ಸುಮ್ಮನೆ ಮಾಡಿರುವ ಸಂಗತಿಯಿಲ್ಲ; ಅದನ್ನು ಗುರುತಿಸುವ ಸೂಕ್ಷ್ಮತೆ ನಮ್ಮಲ್ಲಿರಬೇಕಷ್ಟೇ.ಸಮುದ್ರದೆಡೆಗೆ ಕಣ್ಣು ಹಾಯಿಸಿದಾಗ ಕೊನೆಯನ್ನು ಕಾಣದೆ ದಂಗುಬಡಿಯುತ್ತೇವೆ. ಅದರ ಆದಿ ಮತ್ತು ಅಂತ್ಯವನ್ನು ಕಾಣಲಾರೆವು. ಅಂತೆಯೇ ಜಗದ ಆದಿ–ಅಂತ್ಯವೂ ನಮ್ಮ ತಿಳಿವಳಿಕೆಗೆ ನಿಲುಕದ ವ್ಯವಸ್ಥೆಯಾಗಿದೆ. ಜೀವನೋಪಾಯಕ್ಕೆಂದು ಸಮುದ್ರದಲ್ಲಿ ಚಲಿಸುವ ಮೀನುಗಾರರು, ಅನಿಶ್ಚಿತತೆಯ ನಡುವೆ ಸಾಗುವ ನಮ್ಮ ಬಾಳಬಂಡಿಗೆ ಉಪಮೆಯಾಗಿ ಕಾಣುತ್ತಾರೆ. ಹೀಗೆ ಕಡಲು ನಮ್ಮ ಬದುಕಿನ ಜತೆಗೆ ತನ್ನ ಸಾಮ್ಯತೆಯನ್ನು ಮೆರೆಯುತ್ತದೆ.

(ಲೇಖಕರು ಹವ್ಯಾಸಿ ಬರಹಗಾರರು)

ಸಮಸ್ಯೆಗಳ ಸೂತ್ರಧಾರ: ಇದು ಆರೋಪವೇ ಅಥವಾ ಇತಿಹಾಸದ ವಿಕೃತ ವಾಚನವೇ?

ವಿಶ್ಲೇಷಣೆ
ಕೆ.ವಿ.ಚಂದ್ರಮೌಳಿ
vveditoped@gmail.com

ಮೋಹನ್ ವಿಶ್ವ ಅವರ 'ವೀಕೆಂಡ್ ವಿತ್ ಮೋಹನ್' ಅಂಕಣದಲ್ಲಿ (ಫೆ.28) 'ಸಮಸ್ಯೆಗಳ ಸೂತ್ರಧಾರ ನೆಹರು' ಎಂಬ ಶೀರ್ಷಿಕೆಯಡಿ ಪ್ರಕಟವಾಗಿರುವ ಲೇಖನವು, ಭಾರತದ ಸ್ವಾತಂತ್ರ್ಯೋತ್ತರ ಇತಿಹಾಸವನ್ನು ಒಬ್ಬ ವ್ಯಕ್ತಿಯ ಮೇಲೆ ಸಂಪೂರ್ಣವಾಗಿ ಹೊರೆಹಾಕುವ ಅಪಾಯಕಾರಿ ಪ್ರವೃತ್ತಿಯನ್ನು ಪ್ರತಿಬಿಂಬಿಸುತ್ತದೆ. ಜವಾಹರಲಾಲ್ ನೆಹರು ಅವರನ್ನು ಭಾರತದ ಬಹುತೇಕ ಎಲ್ಲಾ ಸಮಸ್ಯೆಗಳ ಮೂಲವೆಂದು ಚಿತ್ರಿಸುವ ಈ ನಿಲುವು, ಇತಿಹಾಸವನ್ನು ಗಂಭೀರವಾಗಿ ಅಧ್ಯಯನ ಮಾಡುವ ಪ್ರಯತ್ನಕ್ಕಿಂತ ರಾಜಕೀಯ ಭಾವೋದ್ವೇಗ ಮತ್ತು ಸರಳೀಕೃತ ನಿರ್ಣಯಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ವಾಸ್ತವದಲ್ಲಿ, ರಾಷ್ಟ್ರ ನಿರ್ಮಾಣವೆಂಬುದು ಒಬ್ಬ ವ್ಯಕ್ತಿಯ ಏಕಾಂಗ ನಿರ್ಧಾರಗಳ ಫಲವಲ್ಲ; ಅದು ಕಾಲಘಟ್ಟದ ಸವಾಲುಗಳು, ವಸಾಹತುಶಾಹಿ ಪರಂಪರೆ, ಜಾಗತಿಕ ರಾಜಕೀಯ ಪರಿಸ್ಥಿತಿಗಳು ಮತ್ತು ಸಮೂಹ ನಾಯಕತ್ವದ ಸಂಕೀರ್ಣ ಪ್ರಕ್ರಿಯೆಯ ಫಲ. 1947ರಲ್ಲಿ ಭಾರತ ಎದುರಿಸಿದ ವಿಭಜನೆಯ ದುಃಖ, ಶರಣಾರ್ಥಿಗಳ ಭಾರಿ ಸಂಕಷ್ಟ ಮತ್ತು ಖಾಲಿಯಾದ ಖಜಾನೆ– ಇವೆಲ್ಲವೂ ಬ್ರಿಟಿಷ್ ಆಡಳಿತದ ಪರಂಪರೆಯಾಗಿದ್ದವು. ಇವುಗಳನ್ನು ಒಬ್ಬ ವ್ಯಕ್ತಿಯ ಸೂತ್ರಧಾರಿತ್ವಕ್ಕೆ ಕುಗ್ಗಿಸುವುದು ಇತಿಹಾಸದ ಸ್ಪಷ್ಟ ವಿಕೃತಿಯೇ ಆಗಿದೆ.

ನೆಹರು ಅಧಿಕಾರಾಸಕ್ತ ನಾಯಕರೇ?



ಮೊದಲನೆಯದಾಗಿ, ಜವಾಹರಲಾಲ್ ನೆಹರು ಅವರು ಅಧಿಕಾರಾಸಕ್ತ ಮತ್ತು ಸ್ವಾರ್ಥಪರ ನಾಯಕ ಎಂಬ ಆರೋಪವನ್ನು ಇತಿಹಾಸದ ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸಬೇಕಾಗುತ್ತದೆ. ನೆಹರು ಅವರು 1920ರಿಂದ 1947ರ ವರೆಗೆ ನಡೆದ ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಸುಮಾರು ಒಂಬತ್ತು ವರ್ಷಗಳ ಕಾಲ ಬ್ರಿಟಿಷ್ ಆಡಳಿತದ ಕಾರಾಗೃಹಗಳಲ್ಲಿ ಕಾಲ ಕಳೆಯಬೇಕಾಯಿತು ಎಂಬುದು Selected Works of Jawaharlal Nehru (Vol. 1–15)ನಲ್ಲಿ ಸ್ಪಷ್ಟವಾಗಿ ದಾಖಲಾಗಿದೆ. ವಿಶೇಷವಾಗಿ 1930ರ ಉಪ್ಪಿನ ಸತ್ಯಾಗ್ರಹ, 1942ರ 'ಭಾರತ ಬಿಟ್ಟು ತೊಲಗಿ' ಚಳವಳಿ ಸಂದರ್ಭಗಳಲ್ಲಿ ಅವರು ದೀರ್ಘಕಾಲದ ಸೆರೆವಾಸ ಅನುಭವಿಸಿದರು. ಅಧಿಕಾರವೇ ಜೀವನದ ಗುರಿಯಾಗಿದ್ದ ವ್ಯಕ್ತಿಯೊಬ್ಬನು ತನ್ನ ಯೌವನದ ಅತ್ಯಮೂಲ್ಯ ವರ್ಷಗಳನ್ನು ಪುನಃಪುನಃ ಜೈಲಿನಲ್ಲಿ ಕಳೆಯುವುದಿಲ್ಲ ಎಂಬುದು ಸಾಮಾನ್ಯ ತಾರ್ಕಿಕ ಸತ್ಯ.

ಸ್ವಾತಂತ್ರ್ಯ ನಂತರವೂ ನೆಹರು ನಿರಂಕುಶ ಅಧಿಕಾರವನ್ನು ತಮ್ಮ ಕೈಯಲ್ಲಿ ಕೇಂದ್ರೀಕರಿಸಲಿಲ್ಲ. ಸಂವಿಧಾನ ಸಭೆಯ ಚರ್ಚೆಗಳು ಮತ್ತು ನಂತರದ ಲೋಕಸಭೆಯ ಚರ್ಚೆಗಳನ್ನು (1952–1964) ಪರಿಶೀಲಿಸಿದರೆ, ಅವರು ಸಂವಿಧಾನಾತ್ಮಕ ಮಿತಿಗಳನ್ನು ಗೌರವಿಸಿ ಸಂಸತ್ತಿನ ಪ್ರಶ್ನೆಗಳಿಗೆ ಉತ್ತರಿಸುವ ಹಾಗೂ ವಿರೋಧ ಪಕ್ಷದ ಟೀಕೆಯನ್ನು ಸ್ವೀಕರಿಸುವ ಮೂಲಕ ಪ್ರಜಾಸತ್ತಾತ್ಮಕ ... ಸುಪ್ರೀಂ ಕೋರ್ಟ್ ನೀಡಿದ ತೀರ್ಪುಗಳನ್ನು ಟೀಕಿಸಿದ ಸಂದರ್ಭಗಳಿದ್ದರೂ, ಅವುಗಳನ್ನು ಮೀರಿ ಹಸ್ತಕ್ಷೇಪ ಮಾಡಿದ ಉದಾಹರಣೆಗಳು ಇಲ್ಲ. ವಿರೋಧ ಪಕ್ಷಗಳ ತೀವ್ರ ಟೀಕೆಗಳನ್ನು ಸಹಿಸಿಕೊಂಡು, ಸಂಸತ್ತಿನಲ್ಲಿ ಮುಕ್ತ ಚರ್ಚೆಗೆ ಅವಕಾಶ ನೀಡಿರುವುದು ಅವರ ಆಡಳಿತ ಶೈಲಿಯ ಮುಖ್ಯ ಲಕ್ಷಣವಾಗಿತ್ತು.

ಇದಲ್ಲದೆ, 1950ರ ದಶಕದಲ್ಲಿ ದೇಶದ ಆಡಳಿತ ವ್ಯವಸ್ಥೆ ಇನ್ನೂ ಶೈಶವ ಸ್ಥಿತಿಯಲ್ಲಿದ್ದರೂ, ನೆಹರು ತುರ್ತು ಅಧಿಕಾರಗಳನ್ನು ದುರುಪಯೋಗಪಡಿಸಿಕೊಳ್ಳದೆ, ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಲವರ್ಧನೆಗೆ ಒತ್ತುನೀಡಿದರು ಎಂಬುದನ್ನು ಸಂಸತ್ ದಾಖಲೆಗಳು ಸ್ಪಷ್ಟಪಡಿಸುತ್ತವೆ. ಈ ಎಲ್ಲಾ ಇತಿಹಾಸಾತ್ಮಕ ಮತ್ತು ದಾಖಲೆ ಆಧಾರಿತ ಸಾಕ್ಷ್ಯಗಳು, 'ನೆಹರು ಅಧಿಕಾರಾಸಕ್ತ ನಾಯಕರಲ್ಲ, ಬದಲಾಗಿ ಸಂವಿಧಾನಾತ್ಮಕ ಪ್ರಜಾಸತ್ತೆಯ ಮೌಲ್ಯಗಳಿಗೆ ಬದ್ಧರಾಗಿದ್ದ ನಾಯಕ' ಎಂಬುದನ್ನು ನಿರ್ವಿವಾದವಾಗಿ ಸ್ಥಾಪಿಸುತ್ತವೆ.

ಅಂಬೇಡ್ಕರ್‌ರನ್ನು ಅಂಚಿಗೆ ತಳ್ಳಿದರು ಎಂಬ ಆರೋಪ

ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಜವಾಹರಲಾಲ್ ನೆಹರು ಉದ್ದೇಶಪೂರ್ವಕವಾಗಿ ಅಂಚಿಗೆ ತಳ್ಳಿದರು/ಮೂಲೆಗುಂಪಾಗಿಸಿದರು ಎಂಬ ಆರೋಪವು ರಾಜಕೀಯ ಪ್ರಚಾರಕ್ಕೆ ಅನುಕೂಲವಾದರೂ, ಇತಿಹಾಸಾತ್ಮಕವಾಗಿ ತಥ್ಯಾಧಾರವಿಲ್ಲ. 1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಅಂಬೇಡ್ಕರ್ ಸೋತದ್ದು ಮಹಾರಾಷ್ಟ್ರದ ಸ್ಥಳೀಯ ರಾಜಕೀಯ ಸಮೀಕರಣಗಳು, ಕಾಂಗ್ರೆಸ್–ವಿರೋಧಿ ಮೈತ್ರಿಗಳು ಮತ್ತು ಸಾಮಾಜಿಕ ಸಂಘರ್ಷಗಳ ಪರಿಣಾಮವಾಗಿತ್ತು; ಅದನ್ನು ನೆಹರು ಅವರ ವೈಯಕ್ತಿಕ ಷಡ್ಯಂತ್ರವೆಂದು ನಿರೂಪಿಸುವುದು ದಾಖಲೆಗಳ ವಿಕೃತಿ. ಮಹತ್ವದ ಸಂಗತಿಯೆಂದರೆ, ಇದೇ ನೆಹರು ಅವರು ಸ್ವಾತಂತ್ರ್ಯ ನಂತರ ಅಂಬೇಡ್ಕರ್ ಅವರನ್ನು ಕೇಂದ್ರ ಸರಕಾರಕ್ಕೆ ಆಹ್ವಾನಿಸಿ, ಭಾರತದ ಮೊದಲ ಕಾನೂನು ಸಚಿವರಾಗಿ ನೇಮಿಸಿದರು ಹಾಗೂ ಸಂವಿಧಾನ ರಚನೆಯ ಸಂಪೂರ್ಣ ಹೊಣೆಗಾರಿಕೆಯನ್ನು ಅವರಿಗೆ ಒಪ್ಪಿಸಿದರು.

ಸಂವಿಧಾನ ಸಭೆಯ ಚರ್ಚೆಗಳನ್ನು (1948–49) ಪರಿಶೀಲಿಸಿದರೆ, ಅಂಬೇಡ್ಕರ್ ಸ್ವತಃ ಹಲವಾರು ಸಂದರ್ಭಗಳಲ್ಲಿ ಜವಾಹರಲಾಲ್ ನೆಹರು ಅವರ ಸಹಕಾರ, ರಾಜಕೀಯ ಬೆಂಬಲ ಮತ್ತು ಸಂವಿಧಾನಾತ್ಮಕ ಸ್ವಾತಂತ್ರ್ಯವನ್ನು ಮುಕ್ತವಾಗಿ ಒಪ್ಪಿಕೊಂಡಿರುವುದು ಸ್ಪಷ್ಟವಾಗುತ್ತದೆ. ಸಂವಿಧಾನದ ಮೂಲಭೂತ ಹಕ್ಕುಗಳು, ಧರ್ಮನಿರಪೇಕ್ಷತೆ, ಸಾಮಾಜಿಕ ನ್ಯಾಯ ಮತ್ತು ಸಂಸತ್ತಿನ ಪ್ರಾಬಲ್ಯ ಕುರಿತ ಕಲ್ಪನೆಗಳಲ್ಲಿ ಅಂಬೇಡ್ಕರ್ ಅವರಿಗೆ ಸಂಪೂರ್ಣ ಬೌದ್ಧಿಕ ಸ್ವಾತಂತ್ರ್ಯ ನೀಡಲಾಗಿತ್ತು. ಅಂಬೇಡ್ಕರ್ ಅವರ ಅಭಿಪ್ರಾಯಗಳನ್ನು ನೆಹರು ಒಪ್ಪದ ಸಂದರ್ಭಗಳಿದ್ದರೂ, ಅದು ಪ್ರಜಾಸತ್ತಾತ್ಮಕ ಚರ್ಚೆಯ ಭಾಗವಾಗಿತ್ತೇ ಹೊರತು ವೈಯಕ್ತಿಕ ದ್ವೇಷ ಅಥವಾ ಮೂಲೆಗುಂಪಾಗಿಸುವಿಕೆ ಆಗಿರಲಿಲ್ಲ.

ಹೀಗಾಗಿ, ಅಂಬೇಡ್ಕರ್ ಅವರನ್ನು ನೆಹರು ಉದ್ದೇಶಪೂರ್ವಕವಾಗಿ ಅಂಚಿಗೆ ತಳ್ಳಿದರು ಎಂಬ ವಾದವು ಇತಿಹಾಸದ ದಾಖಲೆಗಳಿಗೆ ವಿರುದ್ಧವಾಗಿದೆ. ವಾಸ್ತವದಲ್ಲಿ, ಈ ಇಬ್ಬರೂ ನಾಯಕರ ಸಂಬಂಧವು ವಿರೋಧದ ನೆಲೆಗಟ್ಟನ್ನು ಹೊಂದಿರಲಿಲ್ಲ; ಅದು ಪರಸ್ಪರ ಗೌರವ, ತಾತ್ವಿಕ ಭಿನ್ನಾಭಿಪ್ರಾಯಗಳು ಮತ್ತು ಸಂವಿಧಾನಾತ್ಮಕ ಸಹಕಾರದ ಸಂಕೀರ್ಣ ಸಂಬಂಧವಾಗಿತ್ತು. ದಾಖಲೆಗಳು ಇರುವ ಸ್ಥಳದಲ್ಲಿ ಆರೋಪಗಳು ನಿಲ್ಲಬೇಕಾದ್ದೇ ಇತಿಹಾಸದ ಪ್ರಾಮಾಣಿಕತೆ.

ಭದ್ರತಾ ಮಂಡಳಿಯ ಸ್ಥಾನವನ್ನು ಕೈಬಿಟ್ಟರೇ?

ಭಾರತಕ್ಕೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವ ಸಿಗಬೇಕಿತ್ತು, ಆದರೆ ಜವಾಹರಲಾಲ್ ನೆಹರು ಅದನ್ನು ಕೈಬಿಟ್ಟರು ಎಂಬ ವಾದವು ರಾಜಕೀಯವಾಗಿ ಆಕರ್ಷಕವಾಗಿದ್ದರೂ, ಇತಿಹಾಸಾತ್ಮಕವಾಗಿ ಅತ್ಯಂತ ದುರ್ಬಲವಾಗಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಮತ್ತು ವಿಶ್ವಸಂಸ್ಥೆಯ ಆರ್ಕೈವ್‌ಗಳನ್ನು ಪರಿಶೀಲಿಸಿದಾಗ, ಭಾರತಕ್ಕೆ ಶಾಶ್ವತ ಸದಸ್ಯತ್ವ ನೀಡುವ ಕುರಿತು ಯಾವುದೇ ಅಧಿಕೃತ ಲಿಖಿತ ಆಫರ್ ಅಥವಾ ಪ್ರಸ್ತಾವನೆ ಇದ್ದುದಕ್ಕೆ ಸಾಕ್ಷ್ಯ ಸಿಗುವುದಿಲ್ಲ. ಇತಿಹಾಸಕಾರರಾದ ರಾಮಚಂದ್ರ ಗುಹಾ, ಶಶಿ ತರೂರ್ ಸೇರಿದಂತೆ ಅನೇಕರು ಈ ವಾದವನ್ನು post-facto political myth ಎಂದು ಗುರುತಿಸಿದ್ದಾರೆ.

1950ರ ದಶಕದ ಶೀತಲ ಸಮರದ ತೀವ್ರ ಪರಿಸ್ಥಿತಿಯಲ್ಲಿ, ಶಾಶ್ವತ ಸದಸ್ಯತ್ವವನ್ನು ಸ್ವೀಕರಿಸುವುದಾದರೆ ಅಮೆರಿಕ ಅಥವಾ ಸೋವಿಯತ್ ಒಕ್ಕೂಟದ ಪಾಳಯಗಳ ಪೈಕಿ ಒಂದಕ್ಕೆ ಸ್ಪಷ್ಟವಾಗಿ ಬದ್ಧರಾಗಬೇಕಾಗುತ್ತಿತ್ತು. ಆದರೆ ಜವಾಹರಲಾಲ್ ನೆಹರು ಆಯ್ದುಕೊಂಡ ಅಲಿಪ್ತ ನೀತಿಯು ಭಾರತವನ್ನು ಮಹಾಶಕ್ತಿಗಳ ಪೈಪೋಟಿಯಿಂದ ದೂರವಿಟ್ಟು, ಸ್ವತಂತ್ರ ವಿದೇಶಾಂಗ ಗುರುತನ್ನು ನೀಡಿತು. ಈ ನೀತಿಯ ಫಲವಾಗಿಯೇ ಭಾರತವು ಏಷ್ಯಾ–ಆಫ್ರಿಕಾ ರಾಷ್ಟ್ರಗಳ ವಿಶ್ವಾಸಾರ್ಹ ನಾಯಕನಾಗಿ ಹೊರಹೊಮ್ಮಿತು.

ಇಂದಿಗೂ ಭಾರತವು ಜಾಗತಿಕ ವೇದಿಕೆಯಲ್ಲಿ ಸ್ವತಂತ್ರ ಧ್ವನಿಯಾಗಿ ಮಾತನಾಡಲು ಸಾಧ್ಯವಾಗಿರುವುದು– ಶೀತಲ ಸಮರದ ಕಾಲದಲ್ಲೇ ಯಾವುದಾದರೂ ಶಕ್ತಿಶಾಲಿ ಪಾಳಯದ ಅಂಗಸಂಸ್ಥೆಯಾಗುವುದನ್ನು ನೆಹರು ತಳ್ಳಿಹಾಕಿದ ನಿರ್ಧಾರದ ಪರಿಣಾಮವಾಗಿಯೇ. ಹೀಗಾಗಿ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸ್ಥಾನವನ್ನು ಕೈಬಿಟ್ಟರು ಎಂಬ ಆರೋಪವು ದಾಖಲೆಗಳಿಲ್ಲದ ರಾಜಕೀಯ ಕಲ್ಪನೆ ಮಾತ್ರ; ವಾಸ್ತವದಲ್ಲಿ ಅದು ಭಾರತಕ್ಕೆ ದೀರ್ಘಕಾಲೀನ ರಾಜತಾಂತ್ರಿಕ ಸ್ವಾತಂತ್ರ್ಯ ನೀಡಿದ ತಂತ್ರಾತ್ಮಕ ಆಯ್ಕೆಯಾಗಿತ್ತು.

ವೈಯಕ್ತಿಕ ವೈಫಲ್ಯವೇ, ಇತಿಹಾಸಾತ್ಮಕ ಸಂಕೀರ್ಣತೆಯೇ?

1962ರ ಭಾರತ–ಚೀನಾ ಯುದ್ಧವನ್ನು ಜವಾಹರಲಾಲ್ ನೆಹರು ಅವರ ಸಂಪೂರ್ಣ ವೈಯಕ್ತಿಕ ವೈಫಲ್ಯವೆಂದು ಚಿತ್ರಿಸುವುದು ಇತಿಹಾಸದ ಅಪೂರ್ಣ ಹಾಗೂ ಏಕಮುಖ ಓದು. ಈ ಸಂಘರ್ಷಕ್ಕೆ ಕಾರಣಗಳಾಗಿ ಇತಿಹಾಸಕಾರರು ಹಲವಾರು ಆಳವಾದ ಅಂಶಗಳನ್ನು ಸೂಚಿಸುತ್ತಾರೆ: ಬ್ರಿಟಿಷ್ ಆಡಳಿತದಿಂದ ಭಾರತಕ್ಕೆ ಬಿಟ್ಟುಕೊಡಲ್ಪಟ್ಟ ಅಸ್ಪಷ್ಟ ಗಡಿ ರೇಖೆಗಳು (ವಿಶೇಷವಾಗಿ ಮ್ಯಾಕ್‌ಮಹೋನ್ ರೇಖೆಯ ಕುರಿತು ಚೀನಾದ ವಿರೋಧ), 1950ರಲ್ಲಿ ಚೀನಾದಿಂದ ಟಿಬೆಟ್ ವಿಲೀನ, ಹಾಗೂ ಶೀತಲ ಸಮರದ ಸಂದರ್ಭದಲ್ಲಿ ಏಷ್ಯಾದಲ್ಲಿ ಬದಲಾಗುತ್ತಿದ್ದ ಅಂತಾರಾಷ್ಟ್ರೀಯ ರಾಜಕೀಯ ಸಮೀಕರಣಗಳು. ಈ ಅಂಶಗಳು ಯುದ್ಧವನ್ನು ಕೇವಲ ವ್ಯಕ್ತಿಕೇಂದ್ರಿತ ನಿರ್ಧಾರಗಳ ಫಲವೆಂದು ಕಾಣುವುದನ್ನು ನಿರಾಕರಿಸುತ್ತವೆ.

ಮುಖ್ಯವಾಗಿ, ಯುದ್ಧದ ನಂತರ ಲೋಕಸಭೆಯಲ್ಲಿ ನಡೆದ ಚರ್ಚೆಗಳ ವೇಳೆ (1962) ಜವಾಹರಲಾಲ್ ನೆಹರು ಸೋಲಿನ ಹೊಣೆಗಾರಿಕೆಯನ್ನು ಸ್ವತಃ ಒಪ್ಪಿಕೊಂಡಿದ್ದಾರೆ ಎಂಬುದು ಸಂಸತ್ ದಾಖಲೆಗಳಲ್ಲಿ ಸ್ಪಷ್ಟವಾಗಿದೆ. ಅವರು ಯಾವುದೇ ಕಾರಣಗಳನ್ನು ಮುಂದಿಟ್ಟು ತಪ್ಪಿಸಿಕೊಳ್ಳುವ ಪ್ರಯತ್ನ ಮಾಡದೆ, ರಾಷ್ಟ್ರದ ಮುಂದೆ ನೈತಿಕ ಹೊಣೆಗಾರಿಕೆಯನ್ನು ಸ್ವೀಕರಿಸಿದರು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಈ ರೀತಿಯ ಹೊಣೆಗಾರಿಕೆ ಸ್ವೀಕಾರವು ನಾಯಕತ್ವದ ದೌರ್ಬಲ್ಯವಲ್ಲ; ಅದು ರಾಜಕೀಯ ನೈತಿಕತೆ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ಪ್ರತಿಬಿಂಬ. ಅಲ್ಲದೆ, ಯುದ್ಧೋತ್ತರ ಅವಧಿಯಲ್ಲಿ ಸೇನಾ ಸುಧಾರಣೆ, ರಕ್ಷಣಾ ಸಾಮರ್ಥ್ಯದ ವಿಸ್ತರಣೆ ಮತ್ತು ತಂತ್ರಾತ್ಮಕ ಮರುಚಿಂತನೆಗೆ ನೆಹರು ಸರಕಾರ ಮುಂದಾದುದು ದಾಖಲೆಗಳಲ್ಲಿ ಕಾಣುತ್ತದೆ. ಹೀಗಾಗಿ, 1962ರ ಯುದ್ಧವನ್ನು ಕೇವಲ ನೆಹರು ವೈಫಲ್ಯವೆಂದು ಸೀಮಿತಗೊಳಿಸುವುದು ಇತಿಹಾಸದ ಸಂಕೀರ್ಣತೆಯನ್ನು ನಿರ್ಲಕ್ಷಿಸುವ ಸರಳೀಕರಣವಾಗಿದ್ದು, ವಾಸ್ತವವನ್ನು ಅದು ಪ್ರತಿಬಿಂಬಿಸುವುದಿಲ್ಲ.

ಅಕ್ಸೈ ಚಿನ್ ಕುರಿತು ವಿಕೃತ ಉಲ್ಲೇಖ

ಅಕ್ಸೈ ಚಿನ್ ಕುರಿತು ಜವಾಹರಲಾಲ್ ನೆಹರು ಹೇಳಿದ 'ಅಲ್ಲಿ ಹುಲ್ಲು ಕಡ್ಡಿಯೂ ಬೆಳೆಯುವುದಿಲ್ಲ' ಎಂಬ ವಾಕ್ಯವನ್ನು 'ಸಾರ್ವಭೌಮತ್ವವನ್ನು ತ್ಯಜಿಸುವುದರ' ಸಂಕೇತವೆಂದು ಚಿತ್ರಿಸುವುದು ಉದ್ದೇಶಪೂರ್ವಕ ವಿಕೃತಿ. ನೆಹರು ಅವರ ಈ ಹೇಳಿಕೆ 1959–60ರ ಅವಧಿಯಲ್ಲಿ ನಡೆದ ಭಾರತೀಯ ಸಂಸದೀಯ ಚರ್ಚೆಗಳ ಸನ್ನಿವೇಶದಲ್ಲಿ ಬಂದಿದೆ ಎಂಬುದು ಸಂಸತ್ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಆ ಸಂದರ್ಭದಲ್ಲಿ ನೆಹರು ಆ ಪ್ರದೇಶದ ಜನವಸತಿ ಕೊರತೆ, ಕಠಿಣ ಭೌಗೋಳಿಕ ಪರಿಸ್ಥಿತಿ ಮತ್ತು ಆರ್ಥಿಕ ಬಳಕೆಯ ಮಿತಿಗಳು ಕುರಿತು ಮಾತನಾಡುತ್ತಿದ್ದರು; ಸಾರ್ವಭೌಮತ್ವ ಅಥವಾ ಭೌಗೋಳಿಕ ಹಕ್ಕುಗಳನ್ನು ತ್ಯಜಿಸುವ ಉದ್ದೇಶ ಅಲ್ಲಿ ಇರಲಿಲ್ಲ.

ವಾಸ್ತವವಾಗಿ, ಅದೇ ಸಂಸತ್ ಚರ್ಚೆಗಳಲ್ಲಿ ನೆಹರು ಅವರು, 'ಅಕ್ಸೈ ಚಿನ್ ಪ್ರದೇಶವು ಭಾರತದ ಅವಿಭಾಜ್ಯ ಭಾಗ' ಎಂಬುದಾಗಿ ಸ್ಪಷ್ಟವಾಗಿ ಘೋಷಿಸಿದ್ದಾರೆ. ಲೋಕಸಭೆಯ ಚರ್ಚೆಗಳಲ್ಲಿ (1959, 1960) ಅವರು ಚೀನಾದ ಆಕ್ರಮಣವನ್ನು ವಿರೋಧಿಸಿ, ಅಕ್ಸೈ ಚಿನ್ ಮೇಲೆ ಭಾರತದ ಐತಿಹಾಸಿಕ ಮತ್ತು ಕಾನೂನು ಹಕ್ಕುಗಳನ್ನು ಪುನಃ ಪುನಃ ಪ್ರತಿಪಾದಿಸಿದ್ದಾರೆ. ಆದರೆ ಒಂದೇ ಹೇಳಿಕೆಯನ್ನು ಸಂದರ್ಭದಿಂದ ಕಿತ್ತುಕೊಂಡು, ಅದನ್ನು ದೇಶಭಕ್ತಿಯ ಕೊರತೆಯೆಂಬಂತೆ ಬಿಂಬಿಸುವುದು ಇತಿಹಾಸದ ನೈತಿಕತೆಗೆ ವಿರುದ್ಧವಾದುದು. ದಾಖಲೆಗಳ ಸಮಗ್ರ ಓದು ಹೇಳುವುದೇನೆಂದರೆ, ಅಕ್ಸೈ ಚಿನ್ ಕುರಿತು ನೆಹರು ಅವರ ನಿಲುವು ಸಾರ್ವಭೌಮತೆಯ ತ್ಯಜಿಸುವಿಕೆಯಲ್ಲ, ಬದಲಾಗಿ ಅದು ರಾಜತಾಂತ್ರಿಕವಾಗಿ ಸಂಕೀರ್ಣವಾದ ಪರಿಸ್ಥಿತಿಯಲ್ಲಿ ಭಾರತದ ಹಕ್ಕುಗಳನ್ನು ಕಾಪಾಡುವ ಪ್ರಯತ್ನವಾಗಿತ್ತು.

ಸೈನ್ಯ ಮತ್ತು ಅಭಿವೃದ್ಧಿ: ನೆಹರು ದೃಷ್ಟಿಕೋನ

ಭಾರತೀಯ ಸೈನ್ಯವನ್ನು ನೆಹರು ಉದ್ದೇಶಪೂರ್ವಕವಾಗಿ ದುರ್ಬಲಗೊಳಿಸಿದರು ಎಂಬ ಆರೋಪಕ್ಕೆ ಇತಿಹಾಸಾತ್ಮಕವಾಗಿಯೂ, ದಾಖಲೆಗಳ ಮಟ್ಟದಲ್ಲಿಯೂ ಯಾವುದೇ ದೃಢ ಬೆಂಬಲವಿಲ್ಲ. ವಾಸ್ತವವಾಗಿ, ನೆಹರು ಅವರ ರಾಷ್ಟ್ರ ನಿರ್ಮಾಣದ ದೃಷ್ಟಿಕೋನವು ಕೇವಲ ತಕ್ಷಣದ ಯುದ್ಧ ಸಿದ್ಧತೆಯಾಗಿರಲಿಲ್ಲ; ದೀರ್ಘಕಾಲೀನ ವೈಜ್ಞಾನಿಕ, ತಾಂತ್ರಿಕ ಮತ್ತು ರಕ್ಷಣಾತ್ಮಕ ಸ್ವಾವಲಂಬನೆಯ ಮೇಲೆ ಅದು ಆಧಾರಿತವಾಗಿತ್ತು. ಈ ದೃಷ್ಟಿಕೋನದ ಫಲವಾಗಿಯೇ 1948ರಲ್ಲಿ 'ಭಾರತದ ಪರಮಾಣು ಶಕ್ತಿ ಆಯೋಗ'ದ ಸ್ಥಾಪನೆಯಾಯಿತು. ಇದು ಅಣುಶಕ್ತಿ ಕ್ಷೇತ್ರದಲ್ಲಿ ಭಾರತವನ್ನು ಸ್ವತಂತ್ರ ದಿಕ್ಕಿನಲ್ಲಿ ನಿಲ್ಲಿಸುವ ಮೂಲಭೂತ ಹೆಜ್ಜೆಯಾಗಿತ್ತು.

ಅದೇ ರೀತಿ, 1958ರಲ್ಲಿ ಸ್ಥಾಪಿತವಾದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಭಾರತದ ಸ್ವದೇಶಿ ರಕ್ಷಣಾ ತಂತ್ರಜ್ಞಾನ ಅಭಿವೃದ್ಧಿಗೆ ಅಡಿಪಾಯವಾಯಿತು. ಇಂದು ಕ್ಷಿಪಣಿ ವ್ಯವಸ್ಥೆಗಳು, ರಾಡಾರ್‌ಗಳು, ಇಲೆಕ್ಟ್ರಾನಿಕ್ ಯುದ್ಧ ತಂತ್ರಜ್ಞಾನಗಳು– ಇವೆಲ್ಲವೂ ನೆಹರು ಅವರ ಅಧಿಕಾರಾವಧಿಯಲ್ಲಿ ಹೊಮ್ಮಿದ ಕಾರ್ಯನೀತಿ–ನಿರ್ಧಾರಗಳ ಫಲಶ್ರುತಿಗಳೇ. ಜತೆಗೆ, 1951ರಿಂದ ಆರಂಭವಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಂಥ ಅಸ್ತಿತ್ವಗಳು ಕೇವಲ ಶಿಕ್ಷಣ ಸಂಸ್ಥೆಗಳಲ್ಲ; ಅವು ರಕ್ಷಣಾ ವಲಯ, ಅಂತರಿಕ್ಷ ಮತ್ತು ಭಾರಿ ಕೈಗಾರಿಕಾ ಕ್ಷೇತ್ರಗಳಿಗೆ ಮಾನವ ಸಂಪನ್ಮೂಲ ಒದಗಿಸಿದ ತಾಂತ್ರಿಕ ಶಕ್ತಿಕೇಂದ್ರಗಳಾಗಿವೆ.

ಸಾರ್ವಜನಿಕ ವಲಯದ ಭಾರಿ ಕೈಗಾರಿಕೆಗಳು, ಅಂದರೆ ಉಕ್ಕು ಕಾರ್ಖಾನೆಗಳು, ಯಂತ್ರೋಪಕರಣ ಘಟಕಗಳು, ವಿದ್ಯುತ್ ಮತ್ತು ಎಂಜಿನಿಯರಿಂಗ್ ಸಂಸ್ಥೆಗಳು ಇವೆಲ್ಲವೂ ನೆಹರು ಕಾಲದ ನೀತಿಗಳ ಫಲಶ್ರುತಿಗಳೇ. ಸಂಸತ್ ಚರ್ಚೆಗಳು ಮತ್ತು ಯೋಜನಾ ಆಯೋಗದ ದಾಖಲೆಗಳು (1950–60ರ ದಶಕ) ಸ್ಪಷ್ಟಪಡಿಸುವುದೇನೆಂದರೆ, ಸೈನಿಕ ಶಕ್ತಿಯು ಕೇವಲ ಶಸ್ತ್ರಾಸ್ತ್ರ ಖರೀದಿಯಿಂದ ಬರುತ್ತದೆ ಎಂಬ ಸಂಕುಚಿತ ಕಲ್ಪನೆಯನ್ನು ನೆಹರು ತಳ್ಳಿಹಾಕಿದ್ದರು. ಬದಲಾಗಿ, 'ಸ್ವದೇಶಿ ಕೈಗಾರಿಕೆ + ವಿಜ್ಞಾನ + ಶಿಕ್ಷಣ = ದೀರ್ಘಕಾಲೀನ ರಾಷ್ಟ್ರೀಯ ಭದ್ರತೆ' ಎಂಬ ಸಮಗ್ರ ಸಮೀಕರಣವನ್ನು ಅವರು ಮುಂದಿಟ್ಟರು.

ಹೀಗಾಗಿ, ಭಾರತೀಯ ಸೈನ್ಯವನ್ನು ನೆಹರು ದುರ್ಬಲಗೊಳಿಸಿದರು ಎಂಬ ಆರೋಪವು ತಕ್ಷಣದ ಯುದ್ಧ ಮನೋಭಾವದಿಂದ ಇತಿಹಾಸವನ್ನು ಓದಿದ ಪರಿಣಾಮ ಮಾತ್ರವಷ್ಟೇ. ದಾಖಲೆಗಳ ಸಮಗ್ರ ಅಧ್ಯಯನವು ಹೇಳುವುದೇನೆಂದರೆ, ನೆಹರು ಸೈನ್ಯವನ್ನು ನಿರ್ಲಕ್ಷಿಸಲಿಲ್ಲ; ಬದಲಾಗಿ, ಇಂದಿನ ಭಾರತದ ತಾಂತ್ರಿಕ ಮತ್ತು ರಕ್ಷಣಾ ಸಾಮರ್ಥ್ಯಕ್ಕೆ ಅಗತ್ಯವಾದ ಸಂಸ್ಥಾತ್ಮಕ ಬುನಾದಿಯನ್ನು ರೂಪಿಸಿದರು. ಇಂದು ಭಾರತವು ಸ್ವದೇಶಿ ರಕ್ಷಣಾ ಉತ್ಪಾದನೆಯ ದಾರಿಯಲ್ಲಿ ಸಾಗುತ್ತಿರುವುದೇ ಹೌದಾದಲ್ಲಿ, ಅದರ ತಳಹದಿಯನ್ನು ನೆಹರು ಯುಗದಲ್ಲಿಯೇ ಹಾಕಲಾಗಿದೆ– ಇದು ರಾಜಕೀಯ ಅಭಿಪ್ರಾಯವಲ್ಲ, ಇತಿಹಾಸದ ದಾಖಲೆ.

ಅಂತಿಮವಾಗಿ ಸ್ಪಷ್ಟವಾಗಿ ಹೇಳುವುದಾದರೆ, ಜವಾಹರಲಾಲ್ ನೆಹರು ವಿಮರ್ಶೆಗೆ ಮೀರಿ ನಿಲ್ಲುವ ನಾಯಕರಲ್ಲ. ಅವರ ನಿರ್ಧಾರಗಳು, ಆದ್ಯತೆಗಳು ಮತ್ತು ರಾಜಕೀಯ ಆಯ್ಕೆಗಳು– ಎಲ್ಲವೂ ಚರ್ಚೆಗೆ ತೆರೆದ ವಿಷಯಗಳೇ. 1962ರ ಯುದ್ಧವಾಗಲಿ, ಆರ್ಥಿಕ ನೀತಿಗಳ ಆಯ್ಕೆಯಾಗಲಿ, ವಿದೇಶಾಂಗ ತಂತ್ರವಾಗಲಿ– ಇವುಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದು ಇತಿಹಾಸಕಾರರ ಕರ್ತವ್ಯ. ಆದರೆ ಆ ವಿಮರ್ಶೆಯು ದಾಖಲೆಗಳ ಆಧಾರದಲ್ಲಿ ನಡೆಯಬೇಕೇ ಹೊರತು, ನಂತರದ ರಾಜಕೀಯ ಅಗತ್ಯಗಳಿಗೆ ತಕ್ಕಂತೆ ನಿರ್ಮಿಸಲಾದ ಆರೋಪಗಳ ಮೇಲೆ ಅಲ್ಲ. 'ಸಮಸ್ಯೆಗಳ ಸೂತ್ರಧಾರ' ಎಂಬ ಹಣೆಪಟ್ಟಿಯನ್ನು ನೆಹರುರ ಮೇಲೆ ಅಂಟಿಸುವುದು ಇತಿಹಾಸಕ್ಕೆ ಮಾಡಿದ ಗಂಭೀರ ಅನ್ಯಾಯವಾಗುತ್ತದೆ. ಸಂವಿಧಾನ ಸಭಾ ಚರ್ಚೆಗಳು, ಸಂಸತ್ ದಾಖಲೆಗಳು, ನೆಹರು ಅವರ ಭಾಷಣಗಳು, ಪತ್ರಗಳು ಮತ್ತು ಸಮಕಾಲೀನ ನಾಯಕರ ಸಾಕ್ಷ್ಯಗಳು ಇವೆಲ್ಲವೂ ಇಂಥ ಹಣೆಪಟ್ಟಿಗೆ ಹೊರತಾದ ವಿಭಿನ್ನ ದಿಕ್ಕನ್ನೇ ಏಕಪ್ರಕಾರವಾಗಿ ತೋರುತ್ತವೆ. ನೆಹರು ಅವರು ಭಾರತಕ್ಕೆ ಸಂವಿಧಾನಾತ್ಮಕ ಪ್ರಜಾಸತ್ತಾತ್ಮಕ ವ್ಯವಸ್ಥೆ, ಸ್ವತಂತ್ರ ನ್ಯಾಯಾಂಗ, ಸಂಸತ್ತಿನ ಪ್ರಾಬಲ್ಯ, ವೈಜ್ಞಾನಿಕ ಮನೋಭಾವ ಮತ್ತು ಸಂಸ್ಥಾತ್ಮಕ ರಾಷ್ಟ್ರನಿರ್ಮಾಣ ಎಂಬ ದೃಢ ಅಡಿಪಾಯವನ್ನು ಹಾಕಿದರು. ಈ ಅಡಿಪಾಯವಿಲ್ಲದೆ ಇಂದಿನ ಭಾರತವನ್ನು ಕಲ್ಪಿಸಿಕೊಳ್ಳುವುದೇ ಅಸಾಧ್ಯ.

ಇತಿಹಾಸದ ಸಂಕೀರ್ಣತೆಯನ್ನು ಸರಳ ಆರೋಪಗಳಿಗೆ ಕುಗ್ಗಿಸುವುದು ಸುಲಭ; ಆದರೆ ಅದು ಬೌದ್ಧಿಕ ಪ್ರಾಮಾಣಿಕತೆಯಲ್ಲ. ನೆಹರು ಅವರ ತಪ್ಪುಗಳನ್ನು ಒಪ್ಪಿಕೊಂಡರೂ, ಅವರ ಸಾಧನೆಗಳು ಮತ್ತು ದೃಷ್ಟಿಕೋನವನ್ನು ನಿರಾಕರಿಸಲಾಗದು. ಅವರು ಸಮಸ್ಯೆಗಳ ಮೂಲಕಾರಣರಾಗಿರಲಿಲ್ಲ; ಬದಲಾಗಿ, ವಸಾಹತುಶಾಹಿಯ ಅವಶೇಷಗಳಿಂದ ಹೊರಬಂದ ದೇಶವನ್ನು ಆಧುನಿಕ ರಾಷ್ಟ್ರವಾಗಿಸುವ ಪ್ರಯತ್ನದಲ್ಲಿ ಅನಿವಾರ್ಯ ಸವಾಲುಗಳನ್ನು ಎದುರಿಸಿದ ನಾಯಕ. ಆದ್ದರಿಂದ, ಇತಿಹಾಸವನ್ನು ವಿಮರ್ಶಿಸೋಣ, ಖಂಡಿತ. ಆದರೆ ಅದು ದಾಖಲೆಗಳ ಬೆಳಕಿನಲ್ಲಿ, ಸಂದರ್ಭಗಳ ಅರಿವಿನೊಂದಿಗೆ ಮತ್ತು ರಾಜಕೀಯ ದ್ವೇಷದ ನೆರಳಿಲ್ಲದೆ ಆಗಬೇಕು. ನೆಹರು ಅವರನ್ನು ದೇವರಂತೆ ಪೂಜಿಸುವುದೂ ತಪ್ಪು, ದೋಷಾರೋಪದ ಪ್ರತೀಕವಾಗಿ ಚಿತ್ರಿಸುವುದೂ ತಪ್ಪು. ಅವರು ಇತಿಹಾಸದ ವ್ಯಕ್ತಿ; ಅವರಲ್ಲಿ ಮಿತಿಗಳೂ ಇದ್ದವು, ಜತೆಗೆ ಮಹತ್ವದ ಕೊಡುಗೆಗಳೂ ಅವರಿಂದ ಹೊಮ್ಮಿದವು. ನೆಹರು ಅವರು ಆಧುನಿಕ ಭಾರತದ ನಿರ್ಮಾತೃ ಎಂಬುದನ್ನು ಮರೆಯದಿರೋಣ...

(ಲೇಖಕರು ಬಾಯ್ಲರ್ ಕಾರ್ಯಾಚರಣೆಗಳ ನಿವೃತ್ತ ಉಪನಿರ್ದೇಶಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:48

ಸಮಾಚಾರ ಸಣ್ಣದಲ್ಲ

ಗಲ್ಫ್ ಸಂತ್ರಸ್ತರನ್ನು ಕರೆ ತರಲು 10 ವಿಮಾನ ರೆಡಿ

ದೆಹಲಿ: ಇರಾನ್-ಇಸ್ರೇಲ್ ಯುದ್ಧದಿಂದಾಗಿ ಮಧ್ಯಪ್ರಾಚ್ಯದಲ್ಲಿ ಸಿಲುಕಿರುವ ಭಾರತೀಯರನ್ನು ವಾಪಸ್ ಕರೆತರಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ. ಇಂಡಿಗೋ ಏರ್‌ಲೈನ್ಸ್‌ನ 10 ವಿಶೇಷ ವಿಮಾನಗಳು ಮಂಗಳವಾರ ಜೆಡ್ಡಾಗೆ ತೆರಳಿ ಭಾರತೀಯರನ್ನು ಕರೆತರಲು ಉದ್ದೇಶಿಸಿವೆ ಎಂದು ಸಚಿವಾಲಯ ತಿಳಿಸಿದೆ. ಜೆಡ್ಡಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಯೊಂದಿಗೆ ಇಂಡಿಗೋ ಸಂಪರ್ಕದಲ್ಲಿದೆ.ಯಾವ ವಾಯುಮಾರ್ಗದ ಮೂಲಕ ಕಾರ್ಯಾಚರಣೆ ನಡೆಸಬಹುದು ಎಂಬ ಬಗ್ಗೆ ಸಮಾಲೋಚನೆ ನಡೆಸಲಾಗುತ್ತಿದೆ. ಅಲ್ಲಿ ಸಿಲುಕಿರುವ ಪ್ರಯಾಣಿಕರ ಸುರಕ್ಷಿತ ವಾಪಸಾತಿಗೆ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ. ಅಗತ್ಯವಿದ್ದಲ್ಲಿ ಹೆಚ್ಚುವರಿ ವಿಮಾನಗಳನ್ನು ಕಳುಹಿಸಲಾಗುವುದು. ವಿದೇಶಿ ವಿಮಾನಯಾನ ಸಂಸ್ಥೆಗಳು ಮತ್ತು ಭಾರತೀಯ ದೂತಾವಾಸ ಕಚೇರಿಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ ಎಂದು ಕೇಂದ್ರ ಸರಕಾರ ತಿಳಿಸಿದೆ. ಪ್ರಯಾಣಿಕರು ವಿಮಾನ ನಿಲ್ದಾಣಕ್ಕೆ ಹೊರಡುವ ಮೊದಲು ತಮ್ಮ ವಿಮಾನಗಳ ಸ್ಥಿತಿಯನ್ನು ಸಂಬಂಧಿತ ವಿಮಾನಯಾನ ಸಂಸ್ಥೆಗಳ ಅಧಿಕೃತ ಮೂಲಗಳಿಂದ ಪರಿಶೀಲಿಸಿಕೊಳ್ಳುವಂತೆ ಸಲಹೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ರಾಷ್ಟ್ರಗೀತೆ ಹಾಡಲೊಲ್ಲದ ಇರಾನ್ ಮಹಿಳಾ ತಂಡ

ಕ್ವೀನ್ಸ್‌ಲ್ಯಾಂಡ್: ಇರಾನ್ ಸರ್ವೋಚ್ಚ ನಾಯಕ ಖಮೇನಿ ಹತ್ಯೆ ಬಳಿಕವೂ ಇರಾನ್ ಮಹಿಳೆಯರು ಇಸ್ಲಾಮಿಕ್ ಆಡಳಿತದ ವಿರುದ್ಧ ಪ್ರತಿಭಟನೆಯನ್ನು ಮುಂದುವರಿಸಿದ್ದಾರೆ.ಆಸ್ಟ್ರೇಲಿಯಾದ ಗೋಲ್ಡ್‌ಕೋಸ್ಟ್‌ನಲ್ಲಿ ರಾಷ್ಟ್ರೀಯ ಮಹಿಳಾ ಫುಟ್‌ಬಾಲ್ ತಂಡ ಮೌನ ಪ್ರತಿಭಟನೆ ನಡೆಸಿದೆ. ಏಷ್ಯಾ ಕಪ್ ಭಾಗವಾಗಿ ಮಂಗಳವಾರ ಇರಾನ್ ಮತ್ತು ದಕ್ಷಿಣ ಕೊರಿಯಾ ನಡುವಿನ ಪಂದ್ಯ ನಿಗದಿಯಾಗಿತ್ತು. ಈ ಪಂದ್ಯ ಆರಂಭಕ್ಕೂ ಮುನ್ನ ರಾಷ್ಟ್ರಗೀತೆಯನ್ನು ನುಡಿಸಲಾಯಿತು. ಸಾಧಾರಣವಾಗಿ ರಾಷ್ಟ್ರಗೀತೆಯನ್ನು ಮೊಳಗಿಸಿದಾಗ ತಂಡದ ಸದಸ್ಯರು ಬಾಯಿಯಲ್ಲಿ ಸಾಲನ್ನು ಹೇಳುತ್ತಾರೆ. ಆದರೆ ಇರಾನ್ ಮಹಿಳೆಯರು ಯಾವುದೇ ಸಾಲನ್ನು ಹೇಳುವ ಪ್ರಯತ್ನ ಮಾಡಲಿಲ್ಲ. ಕೆಲ ಆಟಗಾರ್ತಿಯರು ಬೇರೆ ಸದಸ್ಯರನ್ನು ನೋಡುತ್ತಿದ್ದರು. ಆಟಗಾರ್ತಿಯರು ಮಾತ್ರವಲ್ಲ ಮುಖ್ಯ ತರಬೇತುದಾರ ಮಾರ್ಜಿಯೆ ಜಾಫಾರಿ ಮತ್ತು ಸಹಾಯಕ ಸಿಬ್ಬಂದಿ ಕೂಡ ಮೌನವಾಗಿದ್ದರು. ರಾಷ್ಟ್ರಗೀತೆಯನ್ನು ನುಡಿಸುತ್ತಿದ್ದಾಗ ಕೋಚ್ ಜಾಫಾರಿ ನಗುತ್ತಿದ್ದರು. ಈ ಸನ್ನೆ ತಂಡದ ನಿರ್ಧಾರಕ್ಕೆ ಬೆಂಬಲ ನೀಡಿದ ಸಂಕೇತವೆಂದು ಅರ್ಥೈಸಲಾಗುತ್ತಿದೆ. ಆಟಗಾರ್ತಿಯರು ಮಾತ್ರವಲ್ಲ ಇರಾನ್ ತಂಡವನ್ನು ಬೆಂಬಲಕ್ಕೆ ಬಂದಿದ್ದ ಅಭಿಮಾನಿಗಳು ಹಾಲಿ ಆಡಳಿತವನ್ನು ವಿರೋಧಿಸಲು 1979ರ ಇಸ್ಲಾಮಿಕ್ ಕ್ರಾಂತಿಗೂ ಮೊದಲು ಬಳಕೆಯಲ್ಲಿದ್ದ ಸಿಂಹ ಮತ್ತು ಸೂರ್ಯ ಚಿತ್ರವನ್ನು ಹೊಂದಿರುವ ಕೆಂಪು, ಬಿಳಿ ಮತ್ತು ಹಸಿರು ಧ್ವಜವನ್ನು ಬೀಸುತ್ತಿದ್ದರು. ಇರಾನ್‌ನ ಮಹಿಳಾ ಚಳುವಳಿಯನ್ನು ಬೆಂಬಲಿಸಲು ಸಂಕೇತಿಕವಾಗಿ ಈ ಧ್ವಜವನ್ನು ಪ್ರದರ್ಶಿಸಲಾಗುತ್ತದೆ.

ಕೇವಲ 25 ಸೀಟು ಕೈಗೆ ಡಿಎಂಕೆ ಆಫರ್

ಚೆನ್ನೈ: ತಮಿಳುನಾಡು ಚುನಾವಣೆಗೆ ಮುನ್ನ ಅಧಿಕಾರರೂಡ ಡಿಎಂಕೆ ಮತ್ತು ಕಾಂಗ್ರೆಸ್ ನಡುವಿನ ಸೀಟು ಹಂಚಿಕೆ ಮಾತುಕತೆಗಳು ಸ್ಥಗಿತಗೊಂಡಿದೆ. ಡಿಎಂಕೆ 25 ಸ್ಥಾನಗಳು ಮತ್ತು ರಾಜ್ಯಸಭಾ ಸ್ಥಾನವನ್ನು ಮುಂದಿಟ್ಟಿದೆ. ಈ ಆಯ್ಕೆ ಬಿಟ್ಟು ಕಾಂಗ್ರೆಸ್‌ಗೆ ಬೇರೆ ಆಯ್ಕೆ ಇಲ್ಲ ಎಂದು ಡಿಎಂಕೆ ಸ್ಪಷ್ಟವಾಗಿ ಹೇಳಿದೆ. ಕಾಂಗ್ರೆಸ್ 41 ವಿಧಾನಸಭಾ ಸ್ಥಾನಗಳು ಮತ್ತು ಎರಡು ರಾಜ್ಯಸಭಾ ಸ್ಥಾನಗಳಿಗೆ ಬೇಡಿಕೆ ಇಟ್ಟಿತ್ತು. ಆದರೆ ಡಿಎಂಕೆ ಸಂಘಟನಾ ಕಾರ್ಯದರ್ಶಿ ಮತ್ತು ಸೀಟು ಹಂಚಿಕೆ ಸಮಿತಿ ಸದಸ್ಯ ಆರ್ ಎಸ್ ಭಾರತಿ ಅವರು ಕಾಂಗ್ರೆಸ್ ಪ್ರತಿನಿಧಿಗಳೊಂದಿಗಿನ ಮಾತುಕತೆಯ ಸಮಯದಲ್ಲಿ ಪಕ್ಷದ ನಿರ್ಧಾರವನ್ನು ಸ್ಪಷ್ಟಪಡಿಸಿದ್ದಾರೆ. ಈ ನಿರ್ಧಾರ ಒಪ್ಪಿಕೊಳ್ಳಲು ಡಿಎಂಕೆ ಕಾಂಗ್ರೆಸ್‌ಗೆ ಮಾ.3ರವರೆಗೆ ಡೆಡ್‌ಲೈನ್ ನೀಡಿದೆ. ಅವರು ಅದನ್ನು ಸ್ವೀಕರಿಸಬೇಕು ಅಥವಾ ತಿರಸ್ಕರಿಸಬೇಕು. ಇದರ ಹೊರತಾಗಿ ಅವರಿಗೆ ಯಾವುದೇ ಆಯ್ಕೆ ಇಲ್ಲ. ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಎಂದು ಭಾರತಿ ಹೇಳಿದ್ದಾರೆ..ಈ ನಡುವೆ ಮೈತ್ರಿಕೂಟದಲ್ಲಿ ಯಾವುದೇ ಗೊಂದಲ ಅಥವಾ ಬಿಕ್ಕಟ್ಟು ಇಲ್ಲ ಎಂದು ಟಿಎನ್‌ಸಿಸಿ ಅಧ್ಯಕ್ಷ ಕೆ. ಸೆಲ್ವಪೆರುಂಥಗೈ ಹೇಳಿಕೆ ನೀಡಿದ್ದಾರೆ. ಪ್ರತಿ ಚುನಾವಣೆಯಲ್ಲೂ ಮಾತುಕತೆಗಳು ನಡೆಯುತ್ತವೆ. ಪ್ರತಿಯೊಂದು ಪಕ್ಷವೂ ಹೆಚ್ಚಿನ ಸ್ಥಾನಗಳನ್ನು ಕೇಳುತ್ತದೆ ಮತ್ತು ಅಂತಿಮವಾಗಿ ಒಂದು ಇತ್ಯರ್ಥಕ್ಕೆ ಬರುತ್ತದೆ ಎಂದು ಅವರು ಹೇಳಿದರು.

ರಾಜ್ಯಸಭೆಗೆ ಬಿಜೆಪಿ ಪಟ್ಟಿ ಘೋಷಣೆ

ದೆಹಲಿ: ಮಾರ್ಚ್16 ರಂದು ನಡೆಯಲಿರುವ ರಾಜ್ಯಸಭಾ ಚುನಾವಣೆಗೆ ಬಿಜೆಪಿ ಮಂಗಳವಾರ 9 ಅಭ್ಯರ್ಥಿಗಳನ್ನ ಘೋಷಿಸಿದ್ದು, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವಿನ್ ಬಿಹಾರದಿಂದ ಸ್ಪರ್ಧಿಸಲಿದ್ದಾರೆ. ಬಿಹಾರದಿಂದ ನಿತಿನ್ ನವಿನ್ ಮತ್ತು ಶಿವೇಶ್ ಕುಮಾರ್, ಅಸ್ಸಾಂ ನಿಂದ ತೇರಶ್ ಗೋವಲ್ಲ ಮತ್ತು ಜೋಗೆನ್ ಮೋಹನ್ ಹಾಗೂ ಛತ್ತೀಸ್‌ಗಢದಿಂದ ಲಕ್ಷ್ಮಿ ವರ್ಮಾ ಅವರನ್ನು ಅಭ್ಯರ್ಥಿಯಾಗಿ ಹೆಸರಿಸಿದೆ. ಹರಿಯಾಣದಿಂದ ಸಂಜಯ್ ಭಾಟಿಯಾ, ಒಡಿಶಾದಿಂದ ಸುಜೀತ್ ಕುಮಾರ್ ಜೊತೆಗೆ ಬಿಜೆಪಿ ರಾಜ್ಯ ಘಟಕದ ಮುಖ್ಯಸ್ಥ ಮನಮೋಹನ್ ಸಮಲ್ ಹಾಗೂ ಪಶ್ಚಿಮ ಬಂಗಾಳದಿಂದ ರಾಹುಲ್ ಸಿನ್ಹಾ ಅವರನ್ನು ಆಯ್ಕೆ ಮಾಡಿದೆ.

ವಿರಾಮ
ಪ್ರತಿ ಭಾನುವಾರ

ಟ್ರಾಫಿಕ್ ಕ್ಯಾಮೆರಾ ಹ್ಯಾಕ್ ಮಾಡಿ ಅಮೆರಿಕಕ್ಕೆ ರವಾನಿಸಿದ್ದ ಮೊಸಾದ್

ವರ್ಷಗಟ್ಟಲೆ ಖಮೇನಿ ಚಲನವಲನದ ಮೇಲೆ ಕಣ್ಣಿಟ್ಟಿದ್ದ ಇಸ್ರೇಲ್ ಪಡೆ

ಖಮೇನಿ ಹತ್ಯೆ: ಇಸ್ರೇಲ್ ರಣತಂತ್ರ ಬಹಿರಂಗ

ಹಮಾಸ್ ಉಗ್ರರ ಹತ್ಯೆಗೆ ಬಳಸಿದ್ದ ತಂತ್ರವನ್ನೇ ಬಳಸಿ 40 ನಾಯಕರ ಹತ್ಯೆ

ಟೆಹರಾನ್/ಟೆಲ್‌ಅವಿವ್: ಅಮೆರಿಕ ಹಾಗೂ ಇಸ್ರೇಲ್ ಸೇನೆಗಳು ಇರಾನ್ ಮೇಲಿನ ಸೇನಾ ಕಾರ್ಯಾಚರಣೆಯನ್ನ ತೀವ್ರಗೊಳಿಸಿದ್ದು, ಹಲವು ತಾಣಗಳನ್ನು ಗುರಿಯಾಗಿಸಿ ಬಾಂಬ್ ಹಾಗೂ ಕ್ಷಿಪಣಿ ದಾಳಿ ನಡೆಸಿವೆ. ಇರಾನ್ ಕೂಡ ಪ್ರತೀಕಾರದ ದಾಳಿ ಮುಂದುವರಿಸಿದ್ದು ಅಮೆರಿಕ ಜತೆ ಯಾವುದೇ ಕಾರಣಕ್ಕೂ ಸಂಧಾನ ಇಲ್ಲ ಎಂದು ಸ್ಪಷ್ಟಪಡಿಸಿದೆ. ಈ ನಡುವೆ ಮೈತ್ರಿ ಪಡೆ ಮೊದಲ ದಿನದ ಯುದ್ಧದಲ್ಲಿಯೇ ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ, ರಕ್ಷಣಾ ಸಚಿವ ಮತ್ತು ಸೇನಾ ಕಮಾಂಡರ್ ಸೇರಿದಂತೆ 40ಕ್ಕೂ ಹೆಚ್ಚು ಪ್ರಮುಖ ನಾಯಕರನ್ನು ಹತ್ಯೆ ಮಾಡಿದ್ದು ಹೇಗೆ ಎನ್ನುವ ಬೆಚ್ಚಿ ಬೀಳಿಸುವ ರಹಸ್ಯ ಈಗ ಬಹಿರಂಗವಾಗಿದೆ.

ಖಮೇನಿ ಹತ್ಯೆಗೆ ದೀರ್ಘ ಕಾಲದಿಂದ ಯೋಜನೆ ರೂಪಿಸಿದ್ದ ಇಸ್ರೇಲ್‌ನ ಗುಪ್ತಚರ ಸಂಸ್ಥೆ ಮೊಸಾದ್, ವರ್ಷಾನುಗಟ್ಟಲೆ ಖಮೇನಿಯ ಪ್ರತಿ ಹೆಜ್ಜೆಯನ್ನೂ ಹಿಂಬಾಲಿಸುತ್ತಿತ್ತು. ಟೆಹರಾನ್‌ನ ಎಲ್ಲಾ ಟ್ರಾಫಿಕ್ ಕ್ಯಾಮೆರಾಗಳನ್ನು ಮತ್ತು ಮೊಬೈಲ್ ನೆಟ್‌ವರ್ಕ್‌ಗಳನ್ನು ಇಸ್ರೇಲ್ ಹ್ಯಾಕ್ ಮಾಡಿತ್ತು. ಯುದ್ಧ ಆರಂಭವಾಗುತ್ತಿದ್ದಂತೆ ಇಸ್ರೇಲ್ ತನ್ನಲ್ಲಿರುವ ಮಾಹಿತಿಯನ್ನು ಅಮೆರಿಕ ಪಡೆಗಳ ಜತೆ ಹಂಚಿಕೊಂಡಿತ್ತು. ಇದರಿಂದ ಕರಾರುವಕ್ಕಾಗಿ ದಾಳಿ ನಡೆಸಿ ಎಲ್ಲ ನಾಯಕರನ್ನು ಒಂದೇ ಬಾರಿಗೆ ಹತ್ಯೆ ಮಾಡಲು ಸಾಧ್ಯವಾಯಿತು ಎನ್ನಲಾಗಿದೆ.ಟೆಹರಾನ್‌ನ ಎಲ್ಲಾ ಟ್ರಾಫಿಕ್ ಕ್ಯಾಮೆರಾಗಳನ್ನು ಹ್ಯಾಕ್ ಮಾಡಿದ್ದ ಇಸ್ರೇಲ್, ಆ ದೃಶ್ಯಗಳನ್ನು ಎನ್‌ಕ್ರಿಪ್ಟ್ ಮಾಡಿ ಸರ್ವರ್‌ಗಳಿಗೆ ರವಾನಿಸುತ್ತಿತ್ತು. ಈ ಮೂಲಕ ಅಮೆರಿಕನ್ ಪಡೆಗಳಿಗೆ ಖಮೇನಿ ಇರುವ ನಿಖರ ಸ್ಥಳಗಳನ್ನ ಗುರುತಿಸಲು ಅವಕಾಶ ಮಾಡಿಕೊಟ್ಟಿತು. ಇದಲ್ಲದೆ ಖಮೇನಿ ಮತ್ತು ಅವರ ಭದ್ರತಾ ವಿವರಗಳನ್ನು ಮೇಲ್ವಿಚಾರಣೆ ಮಾಡಲು ಮೊಬೈಲ್ ನೆಟ್‌ವರ್ಕ್ ಪ್ರವೇಶಿಸಿ, ನಿರಂತರವಾಗಿ ಟ್ರ್ಯಾಕ್ ಮಾಡುತ್ತಿತ್ತು. ಈ ಮೂಲಕ ಮೊಸಾದ್ (ಇಸ್ರೇಲ್‌ನ ಗುಪ್ತಚರ ಸಂಸ್ಥೆ) ಖಮೇನಿಯ ಪ್ರತಿದಿನದ ಕಾರ್ಯ ಚಟುವಟಿಕೆಗಳನ್ನು ಚೆನ್ನಾಗಿ ತಿಳಿದುಕೊಂಡಿತ್ತು. ಈ ಬಗ್ಗೆ ಅಮೆರಿಕಕ್ಕೆ ಮಾಹಿತಿ ನೀಡುತ್ತಿದ್ದದ್ದು, ನಿಖರ ದಾಳಿಯಲ್ಲಿ ಖಮೇನಿ ಹತ್ಯೆಗೈಯಲು ಕಾರಣವಾಯಿತು.

ರಾತ್ರಿ ಬದಲು ಬೆಳಗ್ಗೆ ದಾಳಿ ?: ಅಮೆರಿಕದ ಕೇಂದ್ರೀಯ ಗುಪ್ತಚರ ಸಂಸ್ಥೆ ಸಿಐಎ ಕೂಡ ಹಲವು ತಿಂಗಳುಗಳಿಂದ ಖಮೇನಿಯನ್ನು ಟ್ರ್ಯಾಕ್ ಮಾಡಿತ್ತು. ಶನಿವಾರ (ಫೆ.28) ಬೆಳಗ್ಗೆ ಖಮೇನಿ ಪ್ರಮುಖರೊಂದಿಗೆ ಸಭೆ ಸೇರುತ್ತಾರೆ ಎಂಬುದನ್ನು ತಿಳಿದಿದ್ದ ಸಿಐಎ, ಇಸ್ರೇಲ್‌ಗೆ ಮಾಹಿತಿ ರವಾನೆ ಮಾಡಿತ್ತು. ಇದರ ಬೆನ್ನಲ್ಲೇ ಅಲರ್ಟ್ ಆದ ಇಸ್ರೇಲ್, ಅಮೆರಿಕ ಸಮಯ ನಿಗದಿಪಡಿಸಿ ಇರಾನ್ ಮೇಲೆ ಜಂಟಿಯಾಗಿ ವಾಯುದಾಳಿ ನಡೆಸಿದವು. ಇಸ್ರೇಲ್‌ನ ಜೆಟ್ ವಿಮಾನವು ಖಮೇನಿ ಮನೆಯ ಕಾಂಪೌಂಡ್ ಮೇಲೆ 30 ಬಾಂಬ್‌ಗಳ ಪ್ರಬಲ ದಾಳಿ ನಡೆಸಿತು. ಯುದ್ಧ ವಿಮಾನವು ಭಾರತೀಯ ಕಾಲಮಾನ ಬೆಳಗ್ಗೆ 9:30 ಕ್ಕೆ ಹೊರಟಿತ್ತು. ಅದು ಇಸ್ರೇಲ್‌ನಿಂದ ಹೊರಟ 2 ಗಂಟೆ 20 ನಿಮಿಷಕ್ಕೆ (ಮಧ್ಯಾಹ್ನ 12:10 ಗಂಟೆಗೆ) ಖಮೇನಿ ಕಾಂಪೌಂಡ್ ಅನ್ನು ಧ್ವಂಸಗೊಳಿಸಿತು. ಈ ವೇಳೆ ಸಭೆಯಲ್ಲಿದ್ದ ಇರಾನ್ ಪ್ರಮುಖ ನಾಯಕರು ಜಂಟಿ ಕಾರ್ಯಾಚರಣೆಯಲ್ಲಿ ಹತರಾಗಿದ್ದಾರೆ.

ಮೊದಲ ದಿನ ಇರಾನ್‌ನ ಕ್ಷಿಪಣಿ ವ್ಯವಸ್ಥೆಗಳ ಮೇಲೆ ಭಾರೀ ಪ್ರಮಾಣದಲ್ಲಿ ಬಾಂಬ್ ದಾಳಿ ದೇಶದ 131 ನಗರಗಳು ದಾಳಿಗೆ ಗುರಿಯಾಗಿವೆ. ಇರಾನ್‌ನ ಅಣ್ವಸ್ತ್ರ ನೆಲೆಯೂ ಬಾಂಬ್ ದಾಳಿಗೆ ತುತ್ತಾಗಿದೆ ಎನ್ನಲಾಗಿದೆ.

ಇಸ್ರೇಲ್ ಪ್ರಧಾನಿ ಸಮರ್ಥನೆ?: ಈ ನಡುವೆ ಪ್ರತಿಕ್ರಿಯೆ ನೀಡಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್ ಮೇಲಿನ ದಾಳಿಗಳನ್ನು ಸಮರ್ಥಿಸಿಕೊಂಡಿದ್ದಾರೆ. ಇರಾನ್ 47 ವರ್ಷಗಳಿಂದ ಅಮೆರಿಕದ ಸಾವಿನ ಘೋಷಣೆ ಕೂಗುತ್ತಿದೆ. 2 ಬಾರಿ ಟ್ರಂಪ್ ಹತ್ಯೆಗೆ ಪ್ರಯತ್ನಿಸಿದ್ದರು. ಅಲ್ಲದೇ ನಮ್ಮ ರಾಯಭಾರ ಕಚೇರಿಗಳ ಮೇಲೂ ಬಾಂಬ್ ದಾಳಿ ನಡೆಸಿದ್ದರು. ಅನೇಕ ನಾಗರಿಕರನ್ನು ಕೊಂದಿದ್ದು, ವಿಶ್ವಾದ್ಯಂತ ಭಯೋತ್ಪಾದನೆಯ ಜಾಲವನ್ನು ಹರಡಿದರು. ಹಾಗಾಗಿ ಇರಾನ್ ನಾಶಮಾಡಲು ಅಮೆರಿಕ ಮತ್ತು ಇಸ್ರೇಲ್ ಬದ್ಧವಾಗಿವೆ ಎಂದು ಹೇಳಿದ್ದಾರೆ.

ಖಮೇನಿ ಹತ್ಯೆಗೆ ಭಾರತ ಮೌನ: ಸೋನಿಯಾ ಗರಂ

ದೆಹಲಿ: ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯ ಬಗ್ಗೆ ಕೇಂದ್ರ ಸರಕಾರದ ಮೌನವನ್ನು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ತೀವ್ರವಾಗಿ ಖಂಡಿಸಿದ್ದಾರೆ.ಈ ಸಂದರ್ಭದಲ್ಲಿ ಕೇಂದ್ರ ಸರಕಾರ ಮೌನವಾಗಿರುವುದು ತಟಸ್ಥವಲ್ಲ, ಬದಲಾಗಿ ಪಲಾಯನ ಎಂದು ಟಾಂಗ್ ಕೊಟ್ಟಿದ್ದಾರೆ.

ಇರಾನ್ ಭಾರತದ ಸಹಾಯಕ್ಕೆ ಬಂದ ಹಲವಾರು ಸಂದರ್ಭಗಳನ್ನು ನೆನಪಿಸಿರುವ ಸೋನಿಯಾ, ಖಮೇನಿಯವರ ಸಾವಿನ ಬಗ್ಗೆ ಯಾವುದೇ ಹೇಳಿಕೆ ನೀಡದೆ, ಮಧ್ಯಪ್ರಾಚ್ಯ ಪ್ರದೇಶದಲ್ಲಿ ಸಂಯಮ ಮತ್ತು ಉದ್ವಿಗ್ನತೆಯನ್ನು ಕಡಿಮೆ ಮಾಡಲು ಕರೆ ನೀಡಿರುವ ಕೇಂದ್ರದ ಕ್ರಮವನ್ನು ಪ್ರಶ್ನಿಸಿದ್ದಾರೆ. ಮಾರ್ಚ್ 1ರಂದು, ಇರಾನ್ ತನ್ನ ಸರ್ವೋಚ್ಚ ನಾಯಕ ಖಮೇನಿ, ಅಮೆರಿಕ- ಇಸ್ರೇಲ್ ದಾಳಿಯಲ್ಲಿ ಹತರಾಗಿರುವುದನ್ನು ಖಚಿತಪಡಿಸಿತ್ತು. ಸಂಧಾನ ಮಾತುಕತೆಗಳ ಮಧ್ಯೆ, ಹಾಲಿ ರಾಷ್ಟ್ರದ ಮುಖ್ಯಸ್ಥರ ಹತ್ಯೆಯು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಗಂಭೀರ ಬಿರುಕು ಮೂಡಿಸುತ್ತದೆ. ಇದನ್ನು ಖಂಡಿಸದೇ ಇರುವುದು ನಮ್ಮ ವಿದೇಶಾಂಗ ನೀತಿಯ ನಿರ್ದೇಶನ ಮತ್ತು ವಿಶ್ವಾಸಾರ್ಹತೆಗೆ ಗಂಭೀರ ಅವಮಾನ ಮಾಡಿದಂತೆ ಎಂದು ಸೋನಿಯಾ ಕೇಂದ್ರದ ವಿರುದ್ಧ ಗುಡುಗಿದ್ದಾರೆ.

ಹೆಣಗಳ ರಾಶಿ ಜೆಸಿಬಿಯಿಂದ ಗುಂಡಿ ತೆಗೆದು ಸಾಮೂಹಿಕ ಅಂತ್ಯಕ್ರಿಯೆ

176 ಮಕ್ಕಳ ಸಾವು: ಸಾಮೂಹಿಕ ದಫನ

ಟೆಹರಾನ್: ಅಮೆರಿಕ-ಇಸ್ರೇಲ್ ದಾಳಿಯ ಮೊದಲ ದಿನವೇ 176 ಮಕ್ಕಳು ಸೇರಿ 750ಕ್ಕೂ ಹೆಚ್ಚು ಮೃತಪಟ್ಟಿದ್ದಾರೆ. ದುಃಖತಪ್ತ ಬಂಧುಗಳು ತಮ್ಮ ಮಕ್ಕಳ ಅಂತ್ಯಕ್ರಿಯೆನ್ನು ಸಾಮೂಹಿಕವಾಗಿ ನೆರವೇರಿಸಿದ್ದಾರೆ.

ದಫನ ಭೂಮಿಯಲ್ಲಿ ಜೆಸಿಬಿಯಿಂದ ನೂರಾರು ಗುಂಡಿಗಳನ್ನು ತೆಗೆದು ಅದರಲ್ಲಿ ಮಕ್ಕಳ ದೇಹಗಳನ್ನು ಹೂಳುವ ಡ್ರೋನ್ ದೃಶ್ಯಗಳನ್ನು ಇರಾನ್ ಹಂಚಿಕೊಂಡಿದೆ. ಗುಂಡಿ ಮುಂದೆ ಮೃತದೇಹ ಇಟ್ಟುಕೊಂಡು ಕುಟುಂಬಸ್ಥರು ಕಣ್ಣೀರಿಟ್ಟಿದ್ದಾರೆ. ಬಳಿಕ ಸಾಮೂಹಿಕ ಅಂತ್ಯಕ್ರಿಯೆ ನಡೆಸಿದ್ದಾರೆ. ದಕ್ಷಿಣ ಇರಾನ್‌ನ ಮಿನಾಬ್ ಪಟ್ಟಣದ ಶಜರೆಹ್ ತಯೆಬೆಹ್ ಬಾಲಕಿಯರ ಪ್ರಾಥಮಿಕ ಶಾಲೆ ಮೇಲೆ ಫೆ.28ರಂದು ದಾಳಿ ನಡೆಸಲಾಗಿತ್ತು. ಶೈಕ್ಷಣಿಕ ಸಂಸ್ಥೆ, ಆಸ್ಪತ್ರೆಗಳು, ಹೆಚ್ಚಿನ ಜನರು ಓಡಾಟವಿರುವ ಸ್ಥಳಗಳ ಮೇಲೆ ಉದ್ದೇಶಪೂರ್ವಕವಾಗಿ ದಾಳಿ ನಡೆಸಿದ್ದಾರೆ ಎಂದು ಇರಾನ್ ಶೈಕ್ಷಣಿಕ ಸಂಸ್ಥೆ ಅಥವಾ ಆಸ್ಪತ್ರೆ ಅಥವಾ ಯಾವುದೇ ಇತರ ನಾಗರಿಕ ರಚನೆಯ ಮೇಲೆ ಉದ್ದೇಶಪೂರ್ವಕವಾಗಿ ದಾಳಿ ಮಾಡುವುದು ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಅಡಿಯಲ್ಲಿ ಯುದ್ಧಾಪರಾಧವಾಗಿದೆ ಎಂದು ಇರಾನ್ ಖಂಡಿಸಿದೆ.

ಎರಡೂ ಕಡೆ ಅಪಾರ ಪ್ರಮಾಣದ ಸಾವು ನೋವು ಸಂಭವಿಸಿದೆ. ಇರಾನ್‌ನಲ್ಲೇ 750ಕ್ಕೂ ಅಧಿಕ ಸಾವು ಸಂಭವಿಸಿದೆ ಎಂದು ಅಮೆರಿಕ ಮೂಲದ ಮಾನವ ಹಕ್ಕುಗಳ ಕಾರ್ಯಕರ್ತರ ಸುದ್ದಿ ಸಂಸ್ಥೆ ಮಾಹಿತಿ ನೀಡಿದೆ. ಸೋಮವಾರ ಮಧ್ಯಾಹ್ನದ ಹೊತ್ತಿಗೆ ಇರಾನ್‌ನಲ್ಲಿ 176 ಮಕ್ಕಳು ಸೇರಿ ಕನಿಷ್ಠ 742 ನಾಗರಿಕರು ಸಾವಿಗೀಡಾಗಿದ್ದಾರೆ. 900ಕ್ಕೂ ಹೆಚ್ಚು ನಾಗರಿಕರು ಗಾಯಗೊಂಡಿದ್ದಾರೆ. ಕಳೆದ 24 ಗಂಟೆಗಳಲ್ಲೇ ಕನಿಷ್ಠ 85 ಜನ ಸಾವನ್ನಪ್ಪಿದ್ದಾರೆ ಎಂದು ಏಕಿಅಫೆಅ ಅಂಕಿ ಅಂಶ ಬಿಡುಗಡೆ ಮಾಡಿದೆ.

ಯುದ್ಧದ ನಡುವೆಯೇ ಇರಾನ್‌ನಲ್ಲಿ ಭೂಕಂಪ

ಟೆಹರಾನ್: ಅಮೆರಿಕ-ಇಸ್ರೇಲ್ ಹಾಗೂ ಗಲ್ಫ್ ರಾಷ್ಟ್ರಗಳ ವಿರುದ್ಧ ಯುದ್ಧ ಸಾರಿರುವ ಇರಾನ್‌ನಲ್ಲಿ ಮಂಗಳವಾರ ಭೂಕಂಪ ಸಂಭವಿಸಿದೆ. ಭೂಕಂಪದ ಕೇಂದ್ರ ಬಿಂದು ಇರಾನ್‌ನ ಗೆರಾಶ್‌ನಲ್ಲಿ 4.3 ತೀವ್ರತೆಯ ಭೂಕಂಪವಾಗಿದೆ. ಸುಮಾರು 10 ಕಿ.ಮೀ ಆಳದಲ್ಲಿ ಭೂಕಂಪ ಉಂಟಾಗಿದೆ.

ಇದು ನೈಸರ್ಗಿಕವಾಗಿ ನಡೆದಿರುವ ಭೂಕಂಪವೋ ಅಥವಾ ಇರಾನ್ ತನ್ನ ಬತ್ತಳಿಕೆಯಲ್ಲಿ ಈಗಾಗಲೇ ಅಣ್ವಸ್ತ್ರ ಇದೆ ಎಂದು ನೀಡಿರುವ ಸೂಚನೆಯೋ ಎನ್ನುವುದು ಇನ್ನಷ್ಟೇ ಗೊತ್ತಾಗಬೇಕಿದೆ. ಈ ಬೆಳವಣಿಗೆಯ ಮೇಲೆ ಅಮೆರಿಕ ಇನ್ನಷ್ಟು ಮಾಹಿತಿ ಕಲೆಹಾಕಲು ಮುಂದಾಗಿದೆ.

ಆದರೆ ಇಂಡೋನೇಷ್ಯಾದ ಇಂಡೋನೇಷ್ಯಾದ ಸುಮಾತ್ರ ದ್ವೀಪದಲ್ಲೂ 6.1 ತೀವ್ರತೆಯ ಪ್ರಬಲ ಭೂಕಂಪನ ಆಗಿರುವುದು ನೈಸರ್ಗಿಕ ಪ್ರಕ್ರಿಯೆ ಎಂದು ಭಾವಿಸಲಾಗಿದೆ. ಸುಮಾತ್ರಾ ದ್ವೀಪದಲ್ಲಿ ಮಂಗಳವಾರ ಬೆಳಿಗ್ಗೆ 6.1 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ ಎಂದು ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆ ತಿಳಿಸಿದೆ. ಇದುವರೆಗೂ ಯಾವುದೇ ಸಾವುನೋವಿನ ಬಗ್ಗೆ ವರದಿಯಾಗಿಲ್ಲ.

ಹಾರ್ಮುಜ್ ಜಲಸಂಧಿ ಬಂದ್: ಪೆಟ್ರೋಲಿಯಂ ಉತ್ಪನ್ನಗಳ ಪೂರೈಕೆ ಶೇ. 86ರಷ್ಟು ಕಡಿತ

ಭಾರತದಲ್ಲಿ ಇಂಧನ ತೈಲಕ್ಕೆ ಹಾಹಾಕಾರ ?

ಟೆಹರಾನ್: ಹಾರ್ಮುಜ್ ಜಲಸಂಧಿಯ ಮೂಲಕ ಜಾಗತಿಕ ತೈಲ ಹರಿವು ಬಹುತೇಕ ಸ್ಥಗಿತಗೊಂಡಿದ್ದು, ಪೂರ್ವ-ಪಶ್ಚಿಮ ಕಚ್ಚಾ ತೈಲ ಸಾಗಾಟ ಶೇ.86ರಷ್ಟು ಕಡಿತಗೊಂಡಿದೆ. ಇದರಿಂದ ಜಾಗತಿಕ ಇಂಧನ ಮಾರುಕಟ್ಟೆಗಳು ಸಂಕಷ್ಟದ ಅಂಚಿನತ್ತ ತಳ್ಳಲ್ಪಟ್ಟಿವೆ. ಕೊಲ್ಲಿ ಕಚ್ಚಾ ತೈಲದ ಮೇಲೆ ಹೆಚ್ಚು ಅವಲಂಬಿತವಾಗಿರುವ ಭಾರತ ಮತ್ತು ಚೀನಾದಲ್ಲಿ ಇಂಧನ ತೈಲ ದರ ಗಗನಕ್ಕೇರುವ ಆತಂಕ ವ್ಯಕ್ತವಾಗಿದೆ.

ಇರಾನ್‌ಗೆ ಸೇರದ ಸುಮಾರು 706 ಟ್ಯಾಂಕರ್‌ಗಳು ಜಲಸಂಧಿಯ ಎರಡೂ ಬದಿಗಳಲ್ಲಿ ನಿಂತುಕೊಂಡಿವೆ. ಇದರಲ್ಲಿ 334 ಕಚ್ಚಾ ತೈಲ ಹಡಗುಗಳು, 109 ಡರ್ಟಿ ಪ್ರೊಡಕ್ಟ್ ಟ್ಯಾಂಕರ್‌ಗಳು ಮತ್ತು 263 ಕ್ಲೀನ್ ಪ್ರೊಡಕ್ಟ್ ಹಡಗುಗಳು ಸೇರಿವೆ. ಇನ್ನೂ 26 ಟ್ಯಾಂಕರ್‌ಗಳು ಗಮ್ಯಸ್ಥಾನಗಳಿಲ್ಲದೆ ಕೊಲ್ಲಿಯೊಳಗೆ ಚಲಿಸುತ್ತಿವೆ. ಓಮನ್ ಕೊಲ್ಲಿಯಲ್ಲಿ ನೂರಾರು ಹಡಗುಗಳು ಲಂಗರು ಹಾಕಿವೆ. ಇದರಿಂದ ಜಾಗತಿಕ ತೈಲ ಪೂರೈಕೆ ವ್ಯತ್ಯಯವಾಗುವ ಸಾಧ್ಯತೆ ದಟ್ಟವಾಗಿವೆ.

ಸೌದಿ ಅರೇಬಿಯಾದ ಅತಿ ದೊಡ್ಡ ತೈಲ ಸಂಸ್ಕರಣಾಗಾರ ರಾಸ್ ತನುರಾ ಮತ್ತು ಮತ್ತು ಕತಾರ್‌ನ ಎಲ್‌ಎನ್‌ಜಿ ಸ್ಥಾವರದ ಮೇಲೆ ದಾಳಿಗಳು ನಡೆದ ನಂತರ, ಇಲ್ಲಿನ ಉತ್ಪಾದನಾ ಘಟಕಗಳು ತಾತ್ಕಾಲಿಕವಾಗಿ ಬಂದ್ ಆಗಿವೆ. ಓಮನ್‌ನ ಸುದ್ದಿ ಸಂಸ್ಥೆ ವರದಿ ಮಾಡಿರುವ ಪ್ರಕಾರ, ದೇಶದ

ಡುಕ್ಮ್ ವಾಣಿಜ್ಯ ಬಂದರಿನಲ್ಲಿರುವ ಇಂಧನ ಟ್ಯಾಂಕ್ ಡ್ರೋನ್ ದಾಳಿಯಲ್ಲಿ ಹಾನಿಗೊಳಗಾಗಿದೆ. ಇದರ ಬೆನ್ನಿಗೇ ಬ್ರೆಂಟ್ ಕಚ್ಚಾ ತೈಲವು ಬ್ಯಾರೆಲ್‌ಗೆ ಸುಮಾರು ಶೇ. 10 ರಷ್ಟು ಏರಿಕೆಯಾಗಿ ಮಂಗಳವಾರ ಸುಮಾರು 80 ಡಾಲರ್‌ಗೆ ತಲುಪಿದೆ. ಏಷ್ಯಾ ಮತ್ತು ಯುರೋಪ್‌ನ ಸಂಸ್ಕರಣಾಗಾರಗಳು ಅಮೆರಿಕ, ಕೊಲ್ಲಿ, ಪಶ್ಚಿಮ ಆಫ್ರಿಕಾ, ಬ್ರೆಜಿಲ್ ಮತ್ತು ರಷ್ಯಾದಿಂದ ಪರ್ಯಾಯ ಬ್ಯಾರೆಲ್‌ಗಳಿಗಾಗಿ ಪರದಾಡುತ್ತಿವೆ. ಕಚ್ಚಾ ತೈಲ ದರ ಬ್ಯಾರಲ್‌ಗೆ 100ರು. ದಾಟುವ ನಿರೀಕ್ಷೆ ಇದೆ. ಮರಿಟೈಮ್ ಅನಾಲಿಟಿಕ್ಸ್ ಸಂಸ್ಥೆ ಪ್ರಕಾರ, ಮಾರ್ಚ್ 1 ರಂದು, 2.8 ಮಿಲಿಯನ್ ಬ್ಯಾರೆಲ್‌ಗಳನ್ನು ಹೊತ್ತ ಮೂರು ಟ್ಯಾಂಕರ್‌ಗಳು ಮಾತ್ರ ಹಾರ್ಮುಜ್ ಅನ್ನು ದಾಟಿದವು. ಇಲ್ಲಿನ ದೈನಂದಿನ ಸರಾಸರಿ ತೈಲ ಸಾಗಾಟ 19.8 ಮಿಲಿಯನ್ ಬ್ಯಾರೆಲ್‌ಗಳಾಗಿದ್ದು ಶೇ.86 ರಷ್ಟು ಕುಸಿತವಾಗಿದೆ.

ರಫ್ತು ಕಡಿತ ಸಂಭವ

ಯುದ್ಧ ಮುಂದುವರಿದರೆ ಎಲ್‌ಪಿಜಿ ರೇಷನಿಂಗ್

ದೆಹಲಿ: ಇಂಧನ ವ್ಯತ್ಯಯ ಮುಂದುವರಿದರೆ ಭಾರತವು ದೇಶೀಯ ಸರಬರಾಜನ್ನು ರಕ್ಷಿಸಲು ಪೆಟ್ರೋಲ್ ಮತ್ತು ಡೀಸೆಲ್ ರಫ್ತುಗಳನ್ನು ಕಡಿತಗೊಳಿಸುವ ಸಾಧ್ಯತೆ ಇದೆ. ಜೊತೆಗೆ ರಷ್ಯಾದಿಂದ ಕಚ್ಚಾ ತೈಲ ಆಮದು ಹೆಚ್ಚಿಸಲು ಕ್ರಮ ಕೈಗೊಳ್ಳಲು ಸಾಧ್ಯತೆ ಇದೆ. ಯುದ್ಧ ದೀರ್ಘ ಕಾಲ ಮುಂದುವರಿದರೆ ಇಂಧನ ತೈಲ ಮತ್ತು ಎಲ್‌ಪಿಜಿ ರೇಷನಿಂಗ್ ಸೇರಿದಂತೆ ಬೇಡಿಕೆ ನಿಯಂತ್ರಣ ಕ್ರಮಗಳನ್ನು ಜಾರಿಗೆ ತರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.ನಾವು ನಿರಂತರವಾಗಿ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುತ್ತಿದ್ದೇವೆ ಮತ್ತು ದೇಶದಲ್ಲಿ ಪ್ರಮುಖ ಪೆಟ್ರೋಲಿಯಂ ಉತ್ಪನ್ನಗಳ ಲಭ್ಯತೆ ಮತ್ತು ಕೈಗೆಟುಕುವ ಬೆಲೆಯನ್ನು ಖಚಿತಪಡಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯ ತಿಳಿಸಿದೆ. ಇಂಧನ ಸಚಿವ ಹರ್ದೀಪ್ ಪುರಿ ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಭಾರತವು ತನ್ನ ಸಂಸ್ಕರಿಸಿದ ಇಂಧನಗಳಲ್ಲಿ ಗಮನಾರ್ಹ ಪಾಲನ್ನು ರಫ್ತು ಮಾಡುತ್ತದೆ. ಅದರ ಪೆಟ್ರೋಲ್‌ನ ಸರಿಸುಮಾರು ಮೂರನೇ ಒಂದು ಭಾಗ ಮತ್ತು ಡೀಸೆಲ್ ಉತ್ಪಾದನೆಯ ಕಾಲು ಭಾಗದಷ್ಟು ರಫ್ತು ಮಾಡುತ್ತದೆ. ಆದರೆ ಭಾರತವು ತನ್ನ ಎಲ್‌ಪಿಜಿ ಬೇಡಿಕೆಯ ಪೈಕಿ ಶೇ. 80ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಇದರಲ್ಲಿ ಹೆಚ್ಚಿನ ಪ್ರಮಾಣವನ್ನು ಗಲ್ಫ್ ಉತ್ಪಾದಕರಿಂದ ಹಾರ್ಮುಜ್ ಜಲಸಂಧಿಯ ಮೂಲಕವೇ ಆಮದು ಮಾಡಿಕೊಳ್ಳಲಾಗುತ್ತದೆ.

ಇದೀಗ ಕೇಂದ್ರ ಸ್ವಾಮ್ಯದ ಸಂಸ್ಕರಣಾ ಕಂಪನಿಗಳಾದ ಇಂಡಿಯನ್ ಆಯಿಲ್, ಎಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಆಯ್ದ ಸೌಲಭ್ಯಗಳಲ್ಲಿ ಎಲ್‌ಪಿಜಿ ಉತ್ಪಾದನೆಯನ್ನು ಹೆಚ್ಚಿಸಲು ಪ್ರಾರಂಭಿಸಿವೆ. ಇರಾನ್ ಸಂಘರ್ಷವು ಹಲವು ವಾರಗಳವರೆಗೆ ಮುಂದುವರಿಯಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ಇದರಿಂದ ಭಾರತವು ದೇಶೀಯ ಇಂಧನ ಭದ್ರತೆಯನ್ನು ಕಾಪಾಡಿಕೊಳ್ಳುವುದರ ಜೊತೆಗೆ ಜಾಗತಿಕ ಮಾರುಕಟ್ಟೆಗೆ ಪ್ರಮುಖ ರಫ್ತುಗಾರನಾಗಿ ತನ್ನ ಪಾತ್ರವನ್ನು ಸಮತೋಲನಗೊಳಿಸಬೇಕಾದ ಪರಿಸ್ಥಿತಿ ಎದುರಾಗಬಹುದು.

ಬಲಿಷ್ಠ ಆರ್ಥಿಕತೆಯ ಭಾರತ ಜಗತ್ತಿಗೆ ದಾರಿದೀಪ: ಮೋದಿ

ದೆಹಲಿ: ಬಲಿಷ್ಠ ಆರ್ಥಿಕತೆ ಹೊಂದಿದ ಭಾರತ ಜಗತ್ತಿಗೆ ದಾರಿದೀಪವಾಗಿ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದರು.ವೆಬಿನಾರ್‌ನಲ್ಲಿ ಮಾತನಾಡಿದ ಅವರು, ಉತ್ಪಾದನೆ, ಲಾಜಿಸ್ಟಿಕ್ಸ್ ಮತ್ತು ಎಂಎಸ್‌ಎಂಇ

ವಲಯ (ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು) ಭಾರತೀಯ ಆರ್ಥಿಕತೆಯ ಪ್ರಮುಖ ಆಧಾರ ಸ್ತಂಭಗಳಾಗಿವೆ. ಈ ವಲಯಗಳನ್ನು ಬಲಪಡಿಸುವುದರಿಂದ ದೇಶದ ಆರ್ಥಿಕ ಬೆಳವಣಿಗೆ ವೇಗಗೊಳ್ಳುತ್ತದೆ. ಇದು ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆ ಎಂದರು. ಜಗತ್ತು ವಿಶ್ವಾಸಾರ್ಹ ಉತ್ಪಾದನಾ ಪಾಲುದಾರರನ್ನು ಹುಡುಕುತ್ತಿದೆ. ಈ ವಿಷಯದಲ್ಲಿ ಭಾರತಕ್ಕೆ ಉತ್ತಮ ಅವಕಾಶವಿದೆ. ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹೂಡಿಕೆಯನ್ನು ಹೆಚ್ಚಿಸಬೇಕು. ಗುಣಮಟ್ಟದ ಮೇಲೆ ಗಮನಹರಿಸಬೇಕು. ನಮ್ಮ ಉತ್ಪನ್ನಗಳ ಗುಣಮಟ್ಟ ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿರಬೇಕು ಎಂದು ಉದ್ಯಮಿಗಳಿಗೆ ಸಲಹೆ ನೀಡಿದರು.ಉತ್ಪನ್ನ ಮಾನದಂಡಗಳನ್ನು ಸುಧಾರಿಸುವುದು ಭಾರತೀಯ ವ್ಯವಹಾರ ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ವಿಸ್ತರಿಸಲು ಸಹಾಯ ಮಾಡುತ್ತದೆ. ಭಾರತವು ತನ್ನ ಬಲಿಷ್ಠ ಆರ್ಥಿಕತೆಯಿಂದ ಜಗತ್ತಿಗೆ ಆಶಾಕಿರಣವಾಗಿದೆ ಎಂದರು.ಮುಕ್ತ ವ್ಯಾಪಾರ ಒಪ್ಪಂದದಿಂದ ಅವಕಾಶಭಾರತವು ಹಲವಾರು ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದೆ. ಇದು ದೇಶೀಯ ಕೈಗಾರಿಕೆಗಳು ಮತ್ತು ರಫ್ತುದಾರರಿಗೆ ವ್ಯಾಪಕ ಅವಕಾಶ ನೀಡುತ್ತದೆ. ಈ ಒಪ್ಪಂದಗಳಿಂದ ದೇಶದ ವ್ಯವಹಾರಕ್ಕೆ ಜಾಗತಿಕ ಮಟ್ಟದ ಮಾರುಕಟ್ಟೆಗಳಿಗೆ ಪ್ರವೇಶ ಸಿಗುತ್ತದೆ ಎಂದರು.

ಟೆಕ್ಸಾಸ್‌ನಲ್ಲಿ ದುಷ್ಕರ್ಮಿಯ ದಾಳಿಗೆ ನಾಲ್ವರು ಬಲಿ

ಭಾರತದ ವಿದ್ಯಾರ್ಥಿನಿ ಗುಂಡಿಗೆ ಬಲಿ

ನ್ಯೂಯಾರ್ಕ್ : ದುಷ್ಕರ್ಮಿಯೊಬ್ಬ ಅಮಾಯಕರ ಮೇಲೆ ಮನಬಂದಂತೆ ಗುಂಡು ಹಾರಿಸಿ ನಾಲ್ವರನ್ನು ಹತ್ಯೆ ಮಾಡಿರುವ ಘಟನೆ ಟೆಕ್ಸಾಸ್‌ನ ಆಸ್ಟಿನ್‌ನಲ್ಲಿ ಭಾನುವಾರ ಬೆಳಗ್ಗೆ ನಡೆದಿದೆ. ಮೃತಪಟ್ಟವರ ಪೈಕಿ ಒಬ್ಬ ವಿದ್ಯಾರ್ಥಿನಿ ಭಾರತೀಯ ಮೂಲದವರಾಗಿದ್ದಾರೆ.

ಗುಂಡಿನ ದಾಳಿಯಲ್ಲಿ ಮೃತಪಟ್ಟ ಭಾರತದ ವಿದ್ಯಾರ್ಥಿನಿಯನ್ನು ಸವಿತಾ ಶಾನ್ ಎಂದು ಗುರುತಿಸಲಾಗಿದೆ. ಈ ಘಟನೆಯಲ್ಲಿ ಇತರೆ 14 ಜನರು ಗಾಯಗೊಂಡಿದ್ದಾರೆ. ಸೆನೆಗಲ್‌ನ ವಲಸೆಗಾರ 53 ವರ್ಷದ ನ್ಡಿಯಾಗಾ ಡಯಾಗ್ನೆ ಎಂಬಾತನಿಗೆ ಭಯೋತ್ಪಾದಕ ಚಟುವಟಿಕೆಗಳ ಸಂಬಂಧವಿರುವ ಮಾಹಿತಿ ಇದ್ದು, ತನಿಖೆ ನಡೆಸುತ್ತಿದ್ದೇವೆ ಎಂದು ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ)ನ ವಕ್ತಾರರು ತಿಳಿಸಿದ್ದಾರೆ.ದಾಳಿಕೋರ ಇರಾನ್ ಧ್ವಜದ ಚಿಹ್ನೆ ಧರಿಸಿದ್ದು ಯುದ್ಧದ ಹಿನ್ನೆಲೆಯಲ್ಲಿ ಈ ಕೃತ್ಯ ನಡೆದಿದೆ ಎಂದು ಶಂಕಿಸಲಾಗಿದೆ. ಭಾನುವಾರ ಬೆಳಗ್ಗೆ ಆರೋಪಿ ಡಯಾಗ್ನೆ ತನ್ನ ಕಾರನ್ನು ಬಿಯರ್ ಗಾರ್ಡನ್‌ನ ಹೊರ ಭಾಗದಲ್ಲಿ ನಿಲ್ಲಿಸಿ, ಜನರ ಮೇಲೆ ಪಿಸ್ತೂಲಿನಿಂದ ಗುಂಡು ಹಾರಿಸಿದ. ನಂತರ ಕಾರಿನಿಂದಿಳಿದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಜನರ ಮೇಲೆ ರೈಫಲ್‌ನಿಂದ ಗುಂಡು ಹಾರಿಸುತ್ತಿದ್ದ. ನಂತರ ಪೊಲೀಸರು ಆತನನ್ನು ಗುಂಡಿಕ್ಕಿ ಹತ್ಯೆ ಮಾಡಿದರು ಎಂದು ಆಸ್ಟಿನ್ ಪೊಲೀಸ್ ಮುಖ್ಯಸ್ಥೆ ಲಿಸಾ ಡೇವಿಸ್ ತಿಳಿಸಿದ್ದಾರೆ.

ಲಿಂಕ್ಡ್‌ಇನ್‌ನಲ್ಲಿ ಸವಿತಾ ಶಾನ್ ಮಾಡಿರುವ ಪೋಸ್ಟ್ ಪ್ರಕಾರ, ಆಕೆ ಟೆಕ್ಸಾಸ್ ವಿಶ್ವವಿದ್ಯಾ ಲಯದಲ್ಲಿ ಅರ್ಥಶಾಸ್ತ್ರ ಮತ್ತು ಮ್ಯಾನೇಜ್‌ಮೆಂಟ್ ಮಾಹಿತಿ ವ್ಯವಸ್ಥೆಗಳಲ್ಲಿ ಬ್ಯಾಚುಲರ್ ಪದವಿ ಪಡೆಯುತ್ತಿದ್ದಾರೆ. ಈ ವರ್ಷ ಪದವಿ ಪಡೆಯುವ ನಿರೀಕ್ಷೆ ಹೊಂದಿದ್ದರು. ಆಸ್ಟಿನ್ ತಮಿಳು ಸಂಗಮ್‌ನಲ್ಲಿ ಸ್ವಯಂಸೇವಕರಾ ಗಿದ್ದರು. ಅಮೆರಿಕ ಮತ್ತು ಇಸ್ರೇಲ್ ಶನಿವಾರ ಇರಾನ್ ಮೇಲೆ ಸೇನಾ ಕಾರ್ಯಾಚರಣೆ ಆರಂಭಿಸಿದ ನಂತರ ಅಮೆರಿಕದಾದ್ಯಂತ ಕಾನೂನು ಜಾರಿ ಸಂಸ್ಥೆಗಳು ಕಟ್ಟೆಚ್ಚರ ವಹಿಸಲಾಗಿದೆ.

ರಾಹುಲ್ - ಪ್ರಿಯಾಂಕಾ ವಿರುದ್ಧ ಬಿಜೆಪಿ ಗಂಭೀರ ಆರೋಪ

ಟಿಕೆಟ್‌ಗೆ 7 ಕೋಟಿ ಹಣ ವಸೂಲಿ?

ದೆಹಲಿ: ಹರಿಯಾಣ ವಿಧಾನಸಭೆ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ಕೋಟ್ಯಂತರ ರೂಪಾಯಿ ಭ್ರಷ್ಟಾಚಾರ ನಡೆದಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ವಾದ್ರಾ, ಅವರು ಕೆ.ಸಿ. ವೇಣುಗೋಪಾಲ್ ಅವರನ್ನು ಮುಂದಿಟ್ಟುಕೊಂಡು ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ವಾಟ್ಸಾಪ್ ಚಾಟ್ಸ್ ಬಹಿರಂಗ: ಹರಿಯಾಣ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯ ಪತಿ ಗೌರವ್ ಕುಮಾರ್ ಅವರು ಬಿಡುಗಡೆ ಮಾಡಿರುವ ವಾಟ್ಸಾಪ್ ಚಾಟ್‌ಗಳನ್ನು ಉಲ್ಲೇಖಿಸಿ ಪತ್ರಿಕಾಗೋಷ್ಠಿಯಲ್ಲಿ ಅವರು ಈ ಆರೋಪ ಮಾಡಿದ್ದಾರೆ. ಹರಿಯಾಣದ ಬಾವಲ್ ವಿಧಾನಸಭಾ ಕ್ಷೇತ್ರದ ಟಿಕೆಟ್ ನೀಡುವ ಭರವಸೆಯ ಮೇಲೆ ಸುಮಾರು 7 ಕೋಟಿ ರೂಪಾಯಿಗೂ ಅಧಿಕ ಹಣದ ವ್ಯವಹಾರ ನಡೆದಿದೆ ಎಂದು ಆರೋಪಿಸಲಾಗಿದೆ. ಹರಿಯಾಣ ಕಾಂಗ್ರೆಸ್ ನಾಯಕಿಯ ಪತಿ ಗೌರವ್ ಕುಮಾರ್ ಅವರು ಬಹಿರಂಗಪಡಿಸಿರುವ ಚಾಟ್‌ಗಳಲ್ಲಿ ಹಣದ ವ್ಯವಹಾರದ ಬಗ್ಗೆ ಸ್ಪಷ್ಟ ಉಲ್ಲೇಖಗಳಿವೆ ಎಂದು ಹೇಳಲಾಗಿದೆ. ರಾಹುಲ್‌ಗೆ ಅತ್ಯಂತ ಆಪ್ತರಾಗಿರುವ ಕೆ.ಸಿ. ವೇಣುಗೋಪಾಲ್ ಮತ್ತು ಪ್ರಿಯಾಂಕಾ ವಾದ್ರಾ ಅವರ ಆಪ್ತ ಸಹಾಯಕ ಸಾದಪ್ ಖಾನ್ ಅವರನ್ನು ಈ ವ್ಯವಹಾರಕ್ಕೆ 'ಫ್ರಂಟ್' ಆಗಿ ಬಳಸಿಕೊಳ್ಳಲಾಗಿದೆ ಎಂದು ಭಂಡಾರಿ ದೂರಿದ್ದಾರೆ.

ಇಡೀ ದೇಶವು ಕಾಂಗ್ರೆಸ್‌ನ ಭ್ರಷ್ಟಾಚಾರದ ಬಗ್ಗೆ ಮಾತನಾ ಡುತ್ತಿದೆ. ಈ ಭ್ರಷ್ಟಾಚಾರದ ಕಿಂಗ್‌ಪಿನ್ ಗಾಂಧಿ-ವಾದ್ರಾ ಕುಟುಂಬವೇ ಆಗಿದೆ. ಸಾಮಾನ್ಯ ಕಾರ್ಯಕರ್ತರಲ್ಲದೆ, ತನ್ನದೇ ಪಕ್ಷದ ಹಿರಿಯ ನಾಯಕರಿಂದಲೂ ಹಣ ವಸೂಲಿ ಮಾಡುವ ಮಟ್ಟಕ್ಕೆ ಕಾಂಗ್ರೆಸ್ ಇಳಿದಿದೆ ಎಂದು ಕಿಡಿಕಾರಿದರು.

ಇದು ಕೇವಲ ಒಬ್ಬ ಕಾರ್ಯಕರ್ತರಿಗೆ ಸಂಬಂಧಿಸಿದ ವಿಷಯವಲ್ಲ, ಇಡೀ ಕಾಂಗ್ರೆಸ್ ವ್ಯವಸ್ಥೆಯೇ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂಬುದಕ್ಕೆ ಸಾಕ್ಷಿ. ಟಿಕೆಟ್ ನೀಡುವುದಕ್ಕಾಗಿ ದೊಡ್ಡ ಮೊತ್ತದ 'ಕಟ್ ಮನಿ' ಪಡೆಯಲಾಗುತ್ತಿದೆ. ಸೋನಿಯಾ, ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿ ಅವರ ಐಷಾರಾಮಿ ಜೀವನಶೈಲಿಗೆ ಹಣ ಹೊಂದಿಸಲು ಈ ರೀತಿಯ ಭ್ರಷ್ಟಾಚಾರ ನಡೆಸಲಾಗುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ಸಮಾಚಾರ ಸಣ್ಣದಲ್ಲ

ಕೇಂದ್ರದ ಮಾಜಿ ಸಚಿವ ಉಣ್ಣಿಕೃಷ್ಣನ್ ನಿಧನ



ತಿರುವನಂತಪುರ: 1980 ಮತ್ತು 1990ರ ದಶಕಗಳಲ್ಲಿ ಭಾರತೀಯ ರಾಜಕೀಯದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿದ್ದ ಕೇಂದ್ರದ ಮಾಜಿ ಸಚಿವ ಕೆ.ಪಿ. ಉಣ್ಣಿಕೃಷ್ಣನ್ ಮಂಗಳವಾರ ಮುಂಜಾನೆ ನಿಧನರಾದರು, ಅವರಿಗೆ 89 ವರ್ಷ ವಯಸ್ಸಾಗಿತ್ತು. ವಯೋಸಹಜ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುತ್ತಿದ್ದ ಅವರು ಕೇರಳದ ಕೋಝಿಕ್ಕೋಡ್‌ನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ವಡಕರ ಲೋಕಸಭಾ ಕ್ಷೇತ್ರದಿಂದ ಸತತ ಆರು ಬಾರಿ ಲೋಕಸಭೆಗೆ ಆಯ್ಕೆಯಾದ ಅವರು, 1989-90ರ ಅವಧಿಯಲ್ಲಿ ವಿ.ಪಿ. ಸಿಂಗ್ ಸಂಪುಟದಲ್ಲಿ ಕೇಂದ್ರ ಸಚಿವರಾಗಿ ಸಾರಿಗೆ ಮತ್ತು ಸಂವಹನ ಖಾತೆಗಳನ್ನು ಅವರು ನಿರ್ವಹಿಸಿದ್ದರು. ಅವರು ಸಚಿವರಾಗಿದ್ದ ಅವಧಿಯಲ್ಲಿ ಕೊಲ್ಲಿ ಯುದ್ಧದ ಸಮಯದಲ್ಲಿ ಭಾರತೀಯರ ಸ್ಥಳಾಂತರಿಸುವಿಕೆಯ ಮೇಲ್ವಿಚಾರಣೆಯನ್ನು ಸಮರ್ಥವಾಗಿ ನಡೆಸಿದ್ದರು. ಪತ್ರಕರ್ತರಾಗಿ ತಮ್ಮ ವೃತ್ತಿಪರ ಜೀವನವನ್ನು ಪ್ರಾರಂಭಿಸಿದ ಉಣ್ಣಿಕೃಷ್ಣನ್, 1971ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಲೋಕಸಭೆಗೆ ಮೊದಲ ಬಾರಿಗೆ ಆಯ್ಕೆಯಾಗಿದ್ದರು.

ಭಾರತಕ್ಕೆ ಇಂಧನ ಪೂರೈಕೆ: ರಷ್ಯಾ

ದೆಹಲಿ: ಕೊಲ್ಲಿಯಲ್ಲಿ ನಡೆಯುತ್ತಿರುವ ಬಿಕ್ಕಟ್ಟಿನಿಂದಾಗಿ ಜಾಗತಿಕ ತೈಲ ಪೂರೈಕೆ ಅಡ್ಡಿಯಾದರೆ ಭಾರತಕ್ಕೆ ಇಂಧನ ಪೂರೈಕೆಯಲ್ಲಿ ಸಹಾಯ ಮಾಡಲು ರಷ್ಯಾ ಸಿದ್ಧವಾಗಿದೆ ಎಂದು ಸೂಚಿಸಿದೆ. ಯಾವುದೇ ಬಿಕ್ಕಟ್ಟಿನಲ್ಲಿ ತನ್ನ ಇಂಧನ ಅಗತ್ಯಗಳನ್ನು ಪೂರೈಸಲು ಸಿದ್ಧವಾಗಿದೆ ಎಂದು ರಷ್ಯಾ ಭಾರತಕ್ಕೆ ಭರವಸೆ ನೀಡಿದೆ. ಮಧ್ಯಪ್ರಾಚ್ಯದಲ್ಲಿ ಯುದ್ಧ ತೀವ್ರಗೊಳ್ಳುತ್ತಿದ್ದಂತೆ, ಕಚ್ಚಾ ತೈಲ ಬೆಲೆಗಳು ಗಗನಕ್ಕೇರುತ್ತಿವೆ. ಈ ಯುದ್ಧವು ದೀರ್ಘಕಾಲದವರೆಗೆ ಮುಂದುವರಿದರೆ, ಪೂರೈಕೆ ಸರಪಳಿಗೆ ಸಂಪೂರ್ಣವಾಗಿ ಅಡ್ಡಿಯಾಗುತ್ತದೆ. ಇದನ್ನು ನಿರೀಕ್ಷಿಸಿದ ರಷ್ಯಾ, ತನ್ನ ಪ್ರಸ್ತುತ ಪೂರೈಕೆಯನ್ನು ಮುಂದುವರಿಸುವುದಲ್ಲದೆ, ಅಗತ್ಯವಿದ್ದರೆ ಅದನ್ನು ಹೆಚ್ಚಿಸುವುದಾಗಿ ಭಾರತಕ್ಕೆ ಭರವಸೆ ನೀಡಿದೆ. ರಷ್ಯಾದ ಈ ನಡೆ ಭಾರತಕ್ಕೆ ಪ್ರಮುಖ ಪರಿಹಾರವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ರಷ್ಯಾ ಭಾರತದ ಅತಿದೊಡ್ಡ ಕಚ್ಚಾ ತೈಲ ಮೂಲವಾಗಿ ಹೊರಹೊಮ್ಮಿದೆ. ಪಾಶ್ಚಿಮಾತ್ಯ ದೇಶಗಳು ರಷ್ಯಾದ ಮೇಲೆ ನಿರ್ಬಂಧಗಳನ್ನು ವಿಧಿಸಿದಾಗ, ರಷ್ಯಾದ ತೈಲವು ಏಷ್ಯಾದ ಮಾರುಕಟ್ಟೆಗಳಿಗೆ, ವಿಶೇಷವಾಗಿ ಭಾರತಕ್ಕೆ ಸ್ಥಳಾಂತರಗೊಂಡಿತು. ರಷ್ಯಾದ ತೈಲದ ಅಗ್ಗದತೆ ಮತ್ತು ಹೊಂದಿಕೊಳ್ಳುವ ಲಾಜಿಸ್ಟಿಕ್ಸ್ ಅನ್ನು ಭಾರತೀಯ ಸಂಸ್ಕರಣಾಗಾರಗಳು ಬಳಸಿಕೊಳ್ಳುತ್ತಿದ್ದವು. ಅವುಗಳ ಖರೀದಿಗಳನ್ನು ಹೆಚ್ಚಿಸಿದವು. ಇದು ಭಾರತವು ತನ್ನ ತೈಲ ಮೂಲಗಳನ್ನು ವೈವಿಧ್ಯಗೊಳಿಸಲು ಸಹಾಯ ಮಾಡಿತಲ್ಲದೆ ಜಾಗತಿಕ ಬೆಲೆಗಳು ಏರುತ್ತಿದ್ದರೂ ತನ್ನ ವೆಚ್ಚವನ್ನು ನಿಯಂತ್ರಿಸಲು ಸಹಾಯ ಮಾಡಿತು.

ಯೂಟ್ಯೂಬ್‌ನಲ್ಲೂ ಮೋದಿ ದಾಖಲೆ



ದೆಹಲಿ: ಪ್ರಧಾನಿ ನರೇಂದ್ರ ಮೋದಿ ಯೂಟ್ಯೂಬ್‌ನಲ್ಲಿ ವಿಶ್ವದಾಖಲೆ ಬರೆದಿದ್ದಾರೆ. ಯೂಟ್ಯೂಬ್‌ನಲ್ಲಿ 3 ಕೋಟಿ ಚಂದದಾರರನ್ನು ಹೊಂದಿದ ವಿಶ್ವದ ಏಕೈಕ ನಾಯಕ ಎಂಬ ಕೀರ್ತಿಗೆ ಅವರು ಪಾತ್ರವಾಗಿದ್ದಾರೆ. ಮೋದಿ ಅವರ ಅಧಿಕೃತ ಯೂಟ್ಯೂಬ್ ಚಾನಲ್ 30 ಮಿಲಿಯನ್ (3 ಕೋಟಿ) ವೀಕ್ಷಕರ ಗಡಿಯನ್ನು ದಾಟಿದ್ದು, ಇತರ ಜಾಗತಿಕ ನಾಯಕರಿಗಿಂತ ಗಮನಾರ್ಹ ಮುನ್ನಡೆಯನ್ನು ತೋರಿಸಿದೆ. ಬ್ರೆಜಿಲ್‌ನ ಮಾಜಿ ಅಧ್ಯಕ್ಷ ಜೈರ್ ಬೋಲ್ಸನಾರೊ ಎರಡನೇ ಸ್ಥಾನದಲ್ಲಿದ್ದರೂ, ಅವರ ಚಂದಾದಾರರ ಸಂಖ್ಯೆ ಮೋದಿ ಅವರಿಗಿಂತ ಬಹಳ ಕಡಿಮೆಯಾಗಿದೆ. ಪ್ರಧಾನಿ ಮೋದಿ ಯೂಟ್ಯೂಬ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಹೋಲಿಸಿದರೆ ಏಳು ಪಟ್ಟು ಹೆಚ್ಚು ಚಂದಾದಾರರನ್ನು ಹೊಂದಿದ್ದಾರೆ. ಇದು ಮೋದಿ ಅವರ ಡಿಜಿಟಲ್ ಪ್ರಭಾವ ಮತ್ತು ಜಾಗತಿಕ ತೊಡಗಿಸುವಿಕೆ ಹೇಗಿದೆ ಎಂಬುದಕ್ಕೆ ನಿರ್ದಶನ ಎನ್ನುತ್ತಾರೆ ತಜ್ಞರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗಿಂತ ಮೂರು ಪಟ್ಟು ಹೆಚ್ಚು ಯೂಟ್ಯೂಬ್ ಚಂದಾದಾರರನ್ನು ಮೋದಿ ಹೊಂದಿದ್ದಾರೆ. ಇದೇ ವೇಳೆ ಆಮ್ ಆದ್ಮಿ ಪಕ್ಷ ಹಾಗೂ ಕಾಂಗ್ರೆಸ್‌ನ ಅಧಿಕೃತ ಚಾನೆಲ್‌ಗಳಿಗಿಂತಲೂ ಮೋದಿ ಅವರ ಚಾನೆಲ್ ಹೆಚ್ಚು ಜನಪ್ರಿಯವಾಗಿದೆ.

ಒಮಾನ್, ಕುವೈತ್ ಜತೆ ಮೋದಿ ಮಾತುಕತೆ

ದೆಹಲಿ: ಪಶ್ಚಿಮ ಏಷ್ಯಾದಲ್ಲಿ ನಿರಂತರವಾಗಿ ಹದಗೆಡುತ್ತಿರುವ ಪರಿಸ್ಥಿತಿ ಭಾರತದ ಕಳವಳಕ್ಕೆ ಕಾರಣವಾಗಿದ್ದು ರಾಜತಾಂತ್ರಿಕ ಚಟುವಟಿಕೆಗಳು ತೀವ್ರಗೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಗಲ್ಫ್ ದೇಶದ ಇಬ್ಬರು ಪ್ರಮುಖ ನಾಯಕರಾದ ಒಮಾನ್‌ನ ಸುಲ್ತಾನ್ ಹೈತಮ್ ಬಿನ್ ತಾರಿಕ್ ಮತ್ತು ಕುವೈತ್‌ನ ಯುವರಾಜ ಸಬಾಹ್ ಅಲ್ ಖಲೀದ್ ಅಲ್ ಹಮೆತ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದರು. ಈ ವೇಳೆ ಪ್ರಧಾನಿ ಆಯಾ ದೇಶಗಳಲ್ಲಿನ ದಾಳಿಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು. ಗಲ್ಫ್ ದೇಶಗಳಲ್ಲಿ ನೆಲೆಸಿರುವ ಭಾರತೀಯ ಸಮುದಾಯದ ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ವಿವರವಾಗಿ ಚರ್ಚಿಸಿದರು.

{ ಸತೀಶ್ ಜಾರಕಿಹೊಳಿ } ಸಚಿವ

ಕಳೆದ 2-3 ವರ್ಷಗಳಲ್ಲಿ ಸರಕಾರ ಏನೂ ಮಾಡಿಲ್ಲ ಎಂಬ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಆರೋಪ ನಿರಾಧಾರ. ನಾವು ಕೆಲಸ ಮಾಡಿದ್ದೇವೋ ಇಲ್ಲವೋ ಎಂಬುದನ್ನು ಜನರೇ ತೀರ್ಮಾನಿಸುತ್ತಾರೆ. ಗುತ್ತಿಗೆದಾರರ ಬಾಕಿ ಬಿಲ್ ಕುರಿತ ಬೇಡಿಕೆಗಳನ್ನು ಸಿಎಂ ಗಮನಕ್ಕೆ ತಂದರೆ ಸಮಸ್ಯೆ ಬಗೆಹರಿದು ಹಣ ಬಿಡುಗಡೆಯಾಗಲಿದೆ.

ಹತ್ತಾರು ಪ್ರಮುಖ ಸೇವೆಗಳು ಸಂಪೂರ್ಣ ಡಿಜಿಟಲೀಕರಣ: ಸಚಿವ ಕೃಷ್ಣ ಬೈರೇಗೌಡ

ಕಂದಾಯ ಸೇವೆಗಳಲ್ಲಿ ಡಿಜಿಟಲ್ ಕ್ರಾಂತಿ

ಬೆಂಗಳೂರು: ಕಂದಾಯ ಇಲಾಖೆಯ ಹತ್ತಾರು ಪ್ರಮುಖ ಸೇವೆಗಳನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸಿ ಜನಸಾಮಾನ್ಯರ ಮನೆಬಾಗಿಲಿಗೆ ತಲುಪಿಸಿರುವುದು ನಮ್ಮ ಸರಕಾರದ ಸಾವಿರ ದಿನಗಳ ಪ್ರಮುಖ ಸಾಧನೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಕಾಸಸೌಧದಲ್ಲಿ ನಡೆದ ಜಿಲ್ಲಾಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಹತ್ತಾರು ವರ್ಷಗಳಿಂದ ಬಾಕಿಯಾಗಿದ್ದ ಕೆಲಸಗಳನ್ನು ಕೇವಲ ಸಾವಿರ ದಿನಗಳಲ್ಲಿ ಪೂರ್ಣಗೊಳಿಸಿದ್ದೇವೆ. ಇಲಾಖೆಯ ಬಗ್ಗೆ ಜನರ ಮನೋಭಾವವೇ ಬದಲಾಗಿದೆ. ಈಗ ಎಲ್ಲಾ ಸೇವೆಗಳೂ ಜನರ ಬೆರಳ ತುದಿಯಲ್ಲಿ ಲಭ್ಯವಿವೆ ಎಂದರು.

ಸರಕಾರದಿಂದ ಮಂಜೂರಾದ ಜಮೀನುಗಳಿಗೆ ಪಕ್ಕಾ ದಾಖಲೆ ಒದಗಿಸುವ ಉದ್ದೇಶದಿಂದ ಆರಂಭವಾದ ನನ್ನ ಭೂಮಿ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕಳೆದ ಒಂದು ವರ್ಷದಲ್ಲಿ 2,05,757 ರೈತರ ಜಮೀನುಗಳ ಸರ್ವೆ ಕೈಗೆತ್ತಿಕೊಳ್ಳಲಾಗಿದೆ. ಮಿಸ್ಸಿಂಗ್ ದಾಖಲೆಗಳಾಗಿ ಉಳಿದ 1,07,217 ಕಡತಗಳನ್ನು ಪರಿಶೀಲನೆಗೆ ಕಳುಹಿಸಲಾಗಿದ್ದು, ಮೂರು ತಿಂಗಳಲ್ಲಿ 50,000 ಕಡತಗಳನ್ನು ವಿಲೇವಾರಿ ಮಾಡಲು ಗಡುವು ನೀಡಲಾಗಿದೆ ಎಂದರು.

ಹಿಂದಿನ ಐದು ವರ್ಷಗಳಲ್ಲಿ ಕೇವಲ 8,500 ಮಂಜೂರಿ ಜಮೀನುಗಳಿಗೆ ಪೋಡಿ ದುರಸ್ತಿ ಮಾಡಲಾಗಿದ್ದರೆ, ಈಗ ಅಧಿಕಾರಿಗಳೇ ರೈತರ ಮನೆಗೆ ತೆರಳಿ ಸರ್ವೆ, ಸ್ಕೆಚ್, ಆರ್‌ಟಿಸಿ ಮತ್ತು ಇಂಡೀಕರಣ ಸೇರಿದಂತೆ ಸಂಪೂರ್ಣ ದಾಖಲೆಗಳನ್ನು ಸಿದ್ಧಪಡಿಸಿ ಮಾಲೀಕತ್ವದ ಭೂ ಗ್ಯಾರಂಟಿ ಅಭಿಯಾನ ಕಳೆದ ಒಂದು ವರ್ಷಗಳಿಂದ ನೀಡಲಾಗುತ್ತಿದೆ ಜತೆಗೆ ಸರ್ವೆ ಇಲಾಖೆಯನ್ನು ಸಂಪೂರ್ಣ ಕಾಗದರಹಿತಗೊಳಿಸುವ ಉದ್ದೇಶದಿಂದ ರೋವರ್ ತಂತ್ರಜ್ಞಾನ ಬಳಸಿ ಸರ್ವೆ ಕಾರ್ಯ ನಡೆಸುವ ಯೋಜನೆ ರೂಪಿಸಲಾಗಿದೆ. ವರ್ಷದ ಅಂತ್ಯದೊಳಗೆ ಎಂಡ್-ಟು-ಎಂಡ್ ಡಿಜಿಟಲೀಕರಣಗೊಳಿಸುವ ಗುರಿ ಹೊಂದಲಾಗಿದೆ ಎಂದರು.

ಸಭೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ನೋಂದಣಿ ಮತ್ತು ಮುದ್ರಾಂಕ ಇಲಾಖೆ ಪ್ರಧಾನ ಕಾರ್ಯದರ್ಶಿ ಮೌನಿಶ್ ಮುದಗಲ್, ಕಂದಾಯ ಆಯುಕ್ತ ಮೀನಾ ನಾಗರಾಜ್, ಭೂ ದಾಖಲೆಗಳು ಮತ್ತು ಸರ್ವೆ ಇಲಾಖೆಯ ಆಯುಕ್ತ ವೆಂಕಟರಾಜು ಉಪಸ್ಥಿತರಿದ್ದರು.



ಭೂ ದಾಖಲೆಗಳ ಸುರಕ್ಷತೆಗೆ ಭೂ ಸುರಕ್ಷಾ ಅಭಿಯಾನದಡಿ 71.19 ಕೋಟಿ ಪುಟಗಳ ಸ್ಕ್ಯಾನ್ ಮಾಡಲಾಗಿದೆ. ಉಳಿದ 30 ಕೋಟಿ ಪುಟಗಳ ಸ್ಕ್ಯಾನಿಂಗ್ ಕಾರ್ಯವನ್ನು ಏಪ್ರಿಲ್ ಅಂತ್ಯದೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ. ಈಗಾಗಲೇ 52.70 ಲಕ್ಷ ಪುಟಗಳನ್ನು ಜನರಿಗೆ ಆನ್‌ಲೈನ್ ಮೂಲಕ ವಿತರಿಸಲಾಗಿದೆ. ಶೀಘ್ರದಲ್ಲಿ ಎಲ್ಲಾ ಭೂ ದಾಖಲೆಗಳು ಆನ್‌ಲೈನ್ ಮೂಲಕ ವಿತರಿಸಲಾಗುವುದು.

- ಕೃಷ್ಣ ಬೈರೇಗೌಡ ಕಂದಾಯ ಸಚಿವ

ಪೌತಿ ಖಾತೆ ಅಭಿಯಾನದಲ್ಲಿ ಹೊಸ ಮೈಲುಗಲ್ಲು

ರಾಜ್ಯದಲ್ಲಿ ಸುಮಾರು 49 ಲಕ್ಷ ಜಮೀನುಗಳು ಮೃತರ ಹೆಸರಿನಲ್ಲಿದ್ದು, ವಾರಸುದಾರರಿಗೆ ಸೌಲಭ್ಯ ಸಿಗದ ಪರಿಸ್ಥಿತಿಯನ್ನು ಸರಿಪಡಿಸಲು ಇ-ಪೌತಿ ಖಾತಾ ಅಭಿಯಾನ ಆರಂಭಿಸಲಾಗಿದೆ. ಈಗಾಗಲೇ 13 ಲಕ್ಷ ಜಮೀನುಗಳಿಗೆ ವಾರಸುದಾರರ ಹೆಸರಿಗೆ ಖಾತೆ ಬದಲಾವಣೆ ಮಾಡಲಾಗಿದೆ. ಅತ್ಯಧಿಕ ಪೌತಿ ಖಾತೆ ಕಾರ್ಯನಿರ್ವಹಿಸಿದ ಗ್ರಾಮ ಆಡಳಿತಾಧಿಕಾರಿಗಳು ಮತ್ತು ಸಹಾಯಕರಿಗೆ 5 ಕೋಟಿ ರು. ಸರಕಾರದಿಂದ ಪ್ರೋತ್ಸಾಹಧನ ಘೋಷಿಸಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ದಾವಣಗೆರೆಯಲ್ಲಿ ಜೈನ ಪದ್ಧತಿ ಪ್ರಕಾರ ಸನ್ಯಾಸ ದೀಕ್ಷೆ
ಆಚಾರ್ಯ ಅಭಯ ಶೇಖರ ಸುರೀಶ್ವರ ಮಹಾರಾಜ್ ಸಾನ್ನಿಧ್ಯ

ಉದ್ಯಮಿ ದಂಪತಿ, ಇಬ್ಬರು ಯುವತಿಯರಿಂದ ಸನ್ಯಾಸ ಸ್ವೀಕಾರ

ದಾವಣಗೆರೆ: ನಗರದಲ್ಲಿ ಉದ್ಯಮಿ ದಂಪತಿ ಹಾಗೂ ಇಬ್ಬರು ಯುವತಿಯರು ಲೌಕಿಕ ಸುಖ-ಸಂತೋಷಗಳನ್ನು ತ್ಯಜಿಸಿ, ಕಠಿಣ ಜೈನ ಸನ್ಯಾಸ ದೀಕ್ಷೆ ಸ್ವೀಕರಿಸಿದ್ದಾರೆ. ಆಚಾರ್ಯ ಶ್ರೀ ಅಭಯ ಶೇಖರ ಸುರೀಶ್ವರ ಜೀ ಮಹಾರಾಜ್ ಅವರ ಸಾನ್ನಿಧ್ಯದಲ್ಲಿ ಪುಣೆಯ ಸಿಂಬಯೋಸಿಸ್ ಕಾಲೇಜಿನಲ್ಲಿ ಎಂಬಿಎ ಪದವಿ ಪಡೆದುಕೊಂಡಿರುವ ಕ್ರುನಾಲ್ ಬೇನ್ (30), ದಾವಣಗೆರೆಯ ಬಿಕಾಂ ಪದವೀಧರೆ ದೀಕ್ಷಿತಾ ಬೇನ್ (28) ಸನ್ಯಾಸತ್ವದ ದೀಕ್ಷೆ ಪಡೆದುಕೊಂಡಿದ್ದಾರೆ. ಅಲ್ಲದೇ ದಾವಣಗೆರೆಯ ಲಲಿತ್ ಗಾರ್ಮೆಂಟ್ಸ್ ಮಾಲೀಕರಾದ ಭರತ್ ಜೈನ್ (52), ಪತ್ನಿ ಆರತಿ ಬೇನ್ (50) ಕೂಡ ಸನ್ಯಾಸತ್ವದ ದೀಕ್ಷೆ ಸ್ವೀಕರಿಸಿದ್ದಾರೆ.

ಕ್ರುನಾಲಿ ಜೈನ್ ಅವರು ಕಮಲೇಶ್ ಜೈನ್ ಮತ್ತು ಬಬಿತಾ ಜೈನ್ ಅವರ ಪುತ್ರಿಯಾಗಿದ್ದು, ದೀಕ್ಷಿತಾ ಜೈನ್ ಅವರು ಮೂಲತಃ ದಾವಣಗೆರೆಯವರಾಗಿದ್ದು, ಅರುಣ್ ಕುಮಾರ್ ಜೈನ್ ಹಾಗೂ ಅನ್ನಪೂರ್ಣ ಬಾಯಿ ಅವರ ಪುತ್ರಿಯಾಗಿದ್ದಾರೆ. ಇನ್ನು ಭರತ್ ಜೈನ್, ಆರತಿ ಬೇನ್ ದಂಪತಿಯ ಇಬ್ಬರು ಪುತ್ರರು ಮೂರು ವರ್ಷಗಳ ಹಿಂದೆಯೇ ಸನ್ಯಾಸತ್ವ ಸ್ವೀಕರಿಸಿದ್ದರು. ಈಗ ದಂಪತಿ ಕೋಟ್ಯಂತರ ರೂಪಾಯಿಯ ಹಣ-ಆಸ್ತಿ ದಾನ ಮಾಡಿ ಸನ್ಯಾಸತ್ವ ಸ್ವೀಕರಿಸಿದ್ದಾರೆ.

ಜೈನ ಧರ್ಮದಲ್ಲಿ ಸನ್ಯಾಸತ್ವ ಸ್ವೀಕರಿಸುವುದು ಎಂದರೆ ಸುಲಭದ ಮಾತಲ್ಲ. ಅದು ಕೆಂಡದ ಮೇಲೆ ನಡೆದಂತೆ. ಜೀವನ ಪೂರ್ತಿ ಬರಿಗಾಲಿನ ನಡಿಗೆ, ಅತಿಸೂಕ್ಷ್ಮ ಜೀವಿಗಳಿಗೂ ನೋವಾಗದಂತೆ ಬದುಕುವುದು, ಕೈಯಿಂದಲೇ ಕೂದಲನ್ನು ಕಿತ್ತುಕೊಳ್ಳುವ ಕಠಿಣ ವಿಧಿವಿಧಾನ, ಮೊಬೈಲ್, ವಿದ್ಯುತ್, ವಾಹನ ಸೇರಿದಂತೆ ಯಾವುದೇ ಭೌತಿಕ ವಸ್ತುಗಳನ್ನು ಬಳಸುವಂತಿಲ್ಲ.

2024ರಿಂದಲೇ ಪರಮಾಣು ಶಸ್ತ್ರಾಸ್ತ್ರ ಹೊಂದದಂತೆ ಇರಾನ್‌ಗೆ ಸೂಚಿಸಿದ್ದ ಟ್ರಂಪ್
ಅಮೆರಿಕ ಶ್ವೇತಭವನದಿಂದ ಮಾಹಿತಿ ಬಹಿರಂಗ, ಎಚ್ಚರಿಕೆಯ ದಿನಾಂಕಗಳು ಪ್ರಕಟ

ದಾಳಿಗೆ ಮುನ್ನ 74 ಬಾರಿ ಇರಾನ್‌ಗೆ ಎಚ್ಚರಿಕೆ ನೀಡಿದ್ದ ಟ್ರಂಪ್!

ವಾಷಿಂಗ್ಟನ್: ಹಲವು ದಶಕಗಳಿಂದ ಇರಾನ್‌ಗೆ ಅಮೆರಿಕ ಎಚ್ಚರಿಕೆಯನ್ನು ನೀಡುತ್ತಲೇ ಇದೆ. ಒಂದೆರಡಲ್ಲ ಬರೋಬ್ಬರಿ 74 ಬಾರಿ ಇರಾನ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್ಚರಿಕೆ ನೀಡಿದ್ದರು. ಇರಾನ್ ವಿರುದ್ಧ ಮಿಲಿಟರಿ ದಾಳಿಗೆ ಕರೆ ನೀಡುವ ಮೊದಲು ಟೆಹ್ರಾನ್ ಪರಮಾಣು ಶಸ್ತ್ರಾಸ್ತ್ರವನ್ನು ಹೊಂದಲು ಸಾಧ್ಯವಿಲ್ಲ ಎನ್ನುವ ಎಚ್ಚರಿಕೆಯನ್ನು ಟ್ರಂಪ್ ಹಲವು ಬಾರಿ ನೀಡಿದ್ದರು ಎಂದು ಸೋಮವಾರ ಶ್ವೇತಭವನ ತಿಳಿಸಿದೆ.

2011ರ ನವೆಂಬರ್ ತಿಂಗಳಿನಿಂದ ಸುಮಾರು 15 ವರ್ಷಗಳ ಕಾಲ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಪರಮಾಣು ಶಸ್ತ್ರಾಸ್ತ್ರವನ್ನು ಪಡೆಯಲು ಎಂದಿಗೂ ಅನುಮತಿಸುವುದಿಲ್ಲ ಎಂದು ಹೇಳುತ್ತಲೇ ಇದ್ದರು. ಈ ಕುರಿತಾದ ಅವರ ಹೇಳಿಕೆಗಳ ಸಂಕಲನವನ್ನು ಸೋಮವಾರ ಶ್ವೇತಭವನ ಬಿಡುಗಡೆ ಮಾಡಿದೆ.

2026ರ ಫೆಬ್ರವರಿ 24ರಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್‌ಗೆ ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸಲು ಭವಿಷ್ಯದಲ್ಲಿ ಯಾವುದೇ ಪ್ರಯತ್ನಗಳನ್ನು ಮಾಡಬೇಡಿ ಎಂದು ಅಂತಿಮ ಎಚ್ಚರಿಕೆ ನೀಡಲಾಯಿತು. ಆದರೂ ಇರಾನ್ ಇದನ್ನು ನಿರ್ಲಕ್ಷಿಸಿತ್ತು. ವಿಶ್ವಕ್ಕೆ ಅಪಾಯಕಾರಿಯಾಗಿರುವ ಪರಮಾಣು ಶಸ್ತ್ರಾಸ್ತ್ರವನ್ನು ಹೊಂದಲು ಇರಾನ್‌ಗೆ ನಾನು ಎಂದಿಗೂ ಅನುಮತಿಸುವುದಿಲ್ಲ ಎಂದು ಹೇಳಿದ್ದರು.

ಇದಕ್ಕೂ ಐದು ದಿನಗಳ ಮೊದಲು ಫೆಬ್ರವರಿ 19ರಂದು ಅವರು, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಲು ಸಾಧ್ಯವಿಲ್ಲ. ಅವರಿಗೆ ಅದನ್ನು ಬಲವಾಗಿ ಹೇಳಲಾಗಿದೆ ಎಂದು ಹೇಳಿದ್ದರು. ಫೆಬ್ರವರಿ 13ರಂದು, ಅವರು ನಮ್ಮ ಎಚ್ಚರಿಕೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿದರು ಎಂದು ಶ್ವೇತಭವನ ಹೇಳಿದೆ.

ಫೆಬ್ರವರಿ 9, ಫೆಬ್ರವರಿ 6, ಜನವರಿ 29, ಕಳೆದ ವರ್ಷ ಜೂನ್ 25ರಂದು ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದಲು ಸಾಧ್ಯವಿಲ್ಲ ಎಂದು ನಾನು ಹೇಳಿದ್ದೇನೆ. ನಾನು ರಾಜಕೀಯ ಕೆಲಸ ಮಾಡುವ ಮೊದಲೇ ಅದನ್ನು ಹೇಳಿದ್ದೆ. 2024ರ ನವೆಂಬರ್ 3ರಂದು ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದಬಾರದು, ಪರಮಾಣು ಶಸ್ತ್ರಾಸ್ತ್ರಗಳು ನಮ್ಮ ದೇಶಕ್ಕೆ ಮಾತ್ರವಲ್ಲ ಇಡೀ ಜಗತ್ತಿಗೆ ಏಕೈಕ ಬೆದರಿಕೆಯಾಗಿದೆ ಎಂದು ಟ್ರಂಪ್ ಇರಾನ್‌ಗೆ ಎಚ್ಚರಿಸಿದ್ದರು ಎಂದು ಶ್ವೇತಭವನ ಹೇಳಿದೆ. 2024ರ ಆಗಸ್ಟ್ 27ರಂದು ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದಲು ಸಾಧ್ಯವಿಲ್ಲ. ನಾವು ಅವರಿಗೆ ಪರಮಾಣು ಶಸ್ತ್ರಾಸ್ತ್ರ ಹೊಂದಲು ಬಿಡಬಾರದು. ನಾನು ಇದನ್ನು ಹೇಳುತ್ತೇನೆ. ಅವರು ನಿಜವಾಗಿಯೂ ಪರಮಾಣು ಶಸ್ತ್ರಾಸ್ತ್ರ ಹೊಂದಿದರೆ ಇಸ್ರೇಲ್ ಮಾತ್ರವಲ್ಲ ಅದು ಕೂಡ ಇಲ್ಲವಾಗುತ್ತದೆ ಎಂದು ಹೇಳಿದ್ದರು.

2020ರ ಜನವರಿ 6ರಂದು, ಇರಾನ್ ಎಂದಿಗೂ ಪರಮಾಣು ಶಸ್ತ್ರಾಸ್ತ್ರವನ್ನು ಹೊಂದಿರುವುದಿಲ್ಲ, 2019ರ ಜೂನ್ 22ರಂದು, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಲು ಸಾಧ್ಯವಿಲ್ಲ, 2011ರ ನವೆಂಬರ್ 4ರಂದು ಶ್ವೇತಭವನವನ್ನು ಪ್ರವೇಶಿಸುವ ವರ್ಷಗಳ ಮೊದಲೇ ಅವರು ನಾವು ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಲು ಅನುಮತಿಸುವುದಿಲ್ಲ ಎಂದಿದ್ದರು.

ಹೀಗೆ ಅಮೆರಿಕ ಅಧ್ಯಕ್ಷರು ಹಲವು ಎಚ್ಚರಿಕೆಯನ್ನು ನೀಡಿದ್ದರು. ಇರಾನ್ ಮಾತ್ರ ಇದನ್ನು ನಿರ್ಲಕ್ಷಿಸಿತ್ತು. ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದುವುದನ್ನು ತಡೆಯುವುದೊಂದೇ ಅಮೆರಿಕನ್ ನಿಲುವಾಗಿದೆ ಎಂದು ಶ್ವೇತಭವನ ಹೇಳಿದೆ.

ಖಮೇನಿ ಹತ್ಯೆಯ ವಿರುದ್ಧ ನಡೆದ ಪ್ರತಿಭಟನೆಗಳು | ಮಾಧ್ಯಮಗಳ ವಿರುದ್ಧ ಪ್ರಕರಣ ದಾಖಲು

ಜಮ್ಮು-ಕಾಶ್ಮೀರ ಪೊಲೀಸರಿಂದ ಎಫ್‌ಐಆರ್

ಶ್ರೀನಗರ: ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಹತ್ಯೆಯ ವಿರುದ್ಧ ನಡೆದ ಪ್ರತಿಭಟನೆಗಳಿಗೆ ಸಂಬಂಧಿಸಿದಂತೆ ಅಶಾಂತಿಯನ್ನು ಪ್ರಚೋದಿಸುವ ಮತ್ತು ಸಾರ್ವಜನಿಕ ಸುವ್ಯವಸ್ಥೆಯನ್ನು ಭಂಗಗೊಳಿಸುವ ಉದ್ದೇಶದಿಂದ ಸುಳ್ಳು ಮತ್ತು ದಾರಿತಪ್ಪಿಸುವ ಮಾಹಿತಿಯನ್ನು ಪ್ರಸಾರ ಮಾಡಿದ ಆರೋಪದ ಮೇಲೆ ಶ್ರೀನಗರದಲ್ಲಿ ಮಂಗಳವಾರ ಕೆಲವು ಮಾಧ್ಯಮಗಳು ಮತ್ತು ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಎಲೆಕ್ಟ್ರಾನಿಕ್ ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಕೆಲವು ಸುದ್ದಿ ವಾಹಿನಿಗಳು, ಮಾಧ್ಯಮಗಳು ಮತ್ತು ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ಸುಳ್ಳು, ಕೃತ್ರಿಮ ಮತ್ತು ದಾರಿತಪ್ಪಿಸುವ ಮಾಹಿತಿಯನ್ನು ಪ್ರಸಾರ ಮಾಡುವುದನ್ನು ಶ್ರೀನಗರ ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಮಾಧ್ಯಮಗಳು ಮತ್ತು ವ್ಯಕ್ತಿಗಳ ವಿವರಗಳು ತಕ್ಷಣಕ್ಕೆ ತಿಳಿದುಬಂದಿಲ್ಲ. ಈ ಅಂಶಗಳು ಅಶಾಂತಿಯನ್ನು ಪ್ರಚೋದಿಸುವ, ಸಾರ್ವಜನಿಕ ಸುವ್ಯವಸ್ಥೆಯನ್ನು ಭಂಗಗೊಳಿಸುವ ಮತ್ತು ಸಮಾಜದಲ್ಲಿ ಅಶಾಂತಿಯನ್ನು ಸೃಷ್ಟಿಸುವ ಸ್ಪಷ್ಟ ಉದ್ದೇಶದಿಂದ ವಿಕೃತ ನಿರೂಪಣೆಗಳು ಮತ್ತು ಪರಿಶೀಲಿಸದ ವಿಷಯವನ್ನು ಹರಡಲು 'ವ್ಯವಸ್ಥಿತವಾಗಿ ಪ್ರಯತ್ನಿಸುತ್ತಿವೆ' ಎಂದು ಪೊಲೀಸ್ ವಕ್ತಾರರು ಹೇಳಿದರು. ಇಂತಹ ದುರುದ್ದೇಶಪೂರಿತ ತಪ್ಪು ಮಾಹಿತಿ ಪ್ರಚಾರಗಳು ರಾಷ್ಟ್ರದ ಶಾಂತಿ, ಭದ್ರತೆ ಮತ್ತು ಸಮಗ್ರತೆಗೆ ಗಂಭೀರ ಅಪಾಯವನ್ನುಂಟುಮಾಡುತ್ತವೆ ಎಂದು ವಕ್ತಾರರು ಹೇಳಿದರು.

ಶ್ರೀನಗರ ಪೊಲೀಸರು ಸಂಬಂಧಿತ ಕಾನೂನು ನಿಬಂಧನೆಗಳ ಅಡಿಯಲ್ಲಿ ಸೈಬರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಅವರು ಹೇಳಿದ್ದಾರೆ. ಹಲವಾರು ಪ್ರೊಫೈಲ್‌ಗಳನ್ನು ಗುರುತಿಸಲಾಗಿದೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳನ್ನು ಸೈಬರ್ ಸೆಲ್‌ಗೆ ಕರೆಸಲಾಗಿದೆ. ತನಿಖೆ ಸಕ್ರಿಯವಾಗಿ ನಡೆಯುತ್ತಿದೆ ಮತ್ತು ಅಪರಾಧದಲ್ಲಿ ಭಾಗಿಯಾಗಿರುವುದು ಕಂಡುಬಂದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ನಕಲಿ ಸುದ್ದಿ, ಪ್ರಚೋದನಕಾರಿ ವಿಷಯ ಅಥವಾ ಪರಿಶೀಲಿಸದ ಮಾಹಿತಿಯನ್ನು ಹರಡುವುದು ಕಠಿಣ ಕಾನೂನು ಪರಿಣಾಮಗಳಿಗೆ ಕಾರಣವಾಗುತ್ತದೆ ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ. ಕೋಮು ಸಾಮರಸ್ಯ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವ ಯಾವುದೇ ವಿಷಯವನ್ನು ಹಂಚಿಕೊಳ್ಳುವ ಮೊದಲು ನಾಗರಿಕರು ಮತ್ತು ಮಾಧ್ಯಮ ಸಂಸ್ಥೆಗಳು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಮತ್ತು ಅಧಿಕೃತ ಮತ್ತು ವಿಶ್ವಾಸಾರ್ಹ ಮೂಲಗಳಿಂದ ಮಾತ್ರ ಸತ್ಯಗಳನ್ನು ಪರಿಶೀಲಿಸಬೇಕು ಎಂದು ವಕ್ತಾರರು ತಿಳಿಸಿದ್ದಾರೆ.

ವರದಿ ಮಾಡುವಲ್ಲಿ ಅತ್ಯುನ್ನತ ಮಟ್ಟದ ಜವಾಬ್ದಾರಿ ಮತ್ತು ವೃತ್ತಿಪರತೆಯನ್ನು ಪಾಲಿಸಲು ಎಲ್ಲಾ ಮಾಧ್ಯಮ ಸಂಸ್ಥೆಗಳು ಮತ್ತು ಸುದ್ದಿ ವೇದಿಕೆಗಳನ್ನು ಒತ್ತಾಯಿಸಿ ಪೊಲೀಸರು ಸೋಮವಾರ ಸಲಹೆ ನೀಡಿದ್ದರು.

ಸಾರ್ವಜನಿಕ ನಂಬಿಕೆಯನ್ನು ಕಾಪಾಡಿಕೊಳ್ಳಲು ಮತ್ತು ತಪ್ಪು ಮಾಹಿತಿಯನ್ನು ತಡೆಯಲು ಜವಾಬ್ದಾರಿಯುತ ಮತ್ತು ನಿಖರವಾದ ವರದಿ ಅತ್ಯಗತ್ಯ ಎಂದು ಪೊಲೀಸರು ಹೇಳಿದ್ದಾರೆ. ಶನಿವಾರ ಮುಂಜಾನೆ ಅಮೆರಿಕ ಮತ್ತು ಇಸ್ರೇಲ್ ಜಂಟಿ ವಾಯುದಾಳಿಯಲ್ಲಿ ಖಮೇನಿ ಹತ್ಯೆಗೆ ಸಂಬಂಧಿಸಿದಂತೆ ಕಾಶ್ಮೀರ ಕಣಿವೆಯಲ್ಲಿ ಬೃಹತ್ ಪ್ರತಿಭಟನೆಗಳು ನಡೆದಿವೆ.

ದುಬೈನಲ್ಲಿ ಸಿಲುಕಿರುವ ಪ್ರವಾಸಿಗರಿಗೆ ಅನಿವಾಸಿ ಕನ್ನಡಿಗರ ಸಹಾಯ

ಕನ್ನಡಿಗಾಸ್ ಹೆಲ್ಪ್‌ಲೈನ್ ನೆರವು

ದುಬೈ/ಬೆಂಗಳೂರು: ದುಬೈನಲ್ಲಿ ಸಿಲುಕಿರುವ ಕನ್ನಡಿಗರ ಸುರಕ್ಷತೆಗೆ ಆದ್ಯತೆ ನೀಡಿರುವ 'ಕನ್ನಡಿಗಾಸ್ ಹೆಲ್ಪ್‌ಲೈನ್' ತಂಡ ಪ್ರವಾಸಿಗರಲ್ಲಿ ಆತ್ಮವಿಶ್ವಾಸ ತುಂಬಿದೆ. ಇರಾನ್-ಇಸ್ರೇಲ್ ಯುದ್ಧದಿಂದಾಗಿ ಉದ್ವಿಗ್ನತೆ ಹೆಚ್ಚಾಗಿದ್ದರಿಂದ ಪ್ರವಾಸಕ್ಕೆ ತೆರಳಿದ್ದ ಕನ್ನಡಿಗರು ದುಬೈನಲ್ಲಿ ಸಿಲುಕಿಕೊಂಡು ತವರಿಗೆ ಮರಳಲಾಗದೇ ಸಂಕಷ್ಟದಲ್ಲಿದ್ದಾರೆ. ಅಂಥವರ ನೆರವಿಗೆ ಅನಿವಾಸಿ ಕನ್ನಡಿಗ ಪೋಷಕರಾದ ರೊನಾಲ್ಡ್ ಕೊಲಸೊ ನೇತೃತ್ವದ 'ಕನ್ನಡಿಗಾಸ್ ಹೆಲ್ಪ್‌ಲೈನ್' ತಂಡ ಧಾವಿಸಿದೆ. ಯುಎಇಯಲ್ಲಿ ಸಿಲುಕಿರುವ ಕನ್ನಡಿಗರಿಗಾಗಿ 'ಕನ್ನಡಿಗಾಸ್ ಹೆಲ್ಪ್‌ಲೈನ್' ಸಹಾಯಹಸ್ತ ಚಾಚಿದ್ದು, ಕನ್ನಡಿಗರ ಮಾಹಿತಿ ಸಂಗ್ರಹಿಸಿ ತುರ್ತು ಸಹಾಯಕ್ಕಾಗಿ ಸರಕಾರಕ್ಕೆ ಮನವಿ ಮಾಡಿದೆ. ಪ್ರವಾಸಿಗರ ತುರ್ತು ವೆಚ್ಚ ಭರಿಸಲು ಸಹ ಸಿದ್ಧತೆ ನಡೆಸಿದೆ. ವೈದ್ಯಕೀಯ ಸೇವೆಗಾಗಿ 'ಕನ್ನಡಿಗಾಸ್ ಹೆಲ್ಪ್‌ಲೈನ್' ಸಂಪರ್ಕಿಸುವಂತೆ ಮನವಿ ಮಾಡಿಕೊಂಡಿದೆ. ದುಬೈ, ಶಾರ್ಜಾ, ಅಬುಧಾಬಿ, ಅಜ್ಮಾನ್‌ನಲ್ಲಿದ್ದರೂ 'ಕನ್ನಡಿಗಾಸ್ ಹೆಲ್ಪ್‌ಲೈನ್' ಸಂಪರ್ಕಿಸುವಂತೆ ತಿಳಿಸಿದೆ

ರೊನಾಲ್ಡ್ ಕೊಲಸೊ ಅವರು ಈ ಕುರಿತು ಮಾತನಾಡಿ, 'ಯುಎಇ ಅತ್ಯಂತ ಸುರಕ್ಷಿತ ದೇಶ, ಪರಿಸ್ಥಿತಿ ಶೀಘ್ರದಲ್ಲೇ ಮೊದಲಿನಂತೆ ಆಗುತ್ತದೆ. ಎಲ್ಲರೂ ಯುಎಇ ಸರಕಾರದ ಮಾರ್ಗದರ್ಶನ ಪಾಲಿಸಿ ಸಹಕರಿಸಬೇಕು ಎಂದರು. ಈಗ ಸಂಕಷ್ಟದಲ್ಲಿರುವ ಪ್ರವಾಸಿಗರಿಗೆ ತುರ್ತು ವ್ಯವಸ್ಥೆಯನ್ನು ಕಲ್ಪಿಸಬೇಕಿದೆ, ಇದಕ್ಕೆ ಬೇಕಾದ ವೆಚ್ಚವನ್ನು ಭರಿಸಲು ತಯಾರಿದ್ದೇವೆ, ಅದೇ ರೀತಿ ಕರ್ನಾಟಕ ಸರಕಾರ ತುರ್ತು ಪರಿಹಾರ ಸಹಾಯಧನ ಘೋಷಣೆ ಮಾಡಲು ಒತ್ತಾಯಿಸುತ್ತೇನೆ' ಎಂದು ಹೇಳಿದರು

ಚಂದ್ರಗ್ರಹಣ: ಸಂಪ್ರದಾಯದಂತೆ ಪೂಜೆ ನೆರವೇರಿಸಿ ಭಕ್ತರ ದರ್ಶನಕ್ಕೆ ದೇಗುಲ ಮುಕ್ತ

ಶುದ್ಧೀಕರಿಸಿ ದೇವರ ದರ್ಶನಕ್ಕೆ ಅವಕಾಶ

ಬೆಂಗಳೂರು: ಬಾಹ್ಯಾಕಾಶ ಲೋಕದಲ್ಲಿ ಕುತೂಹಲ ಕೆರಳಿಸಿದ್ದ ವರ್ಷದ ಮೊದಲ ಕೇತುಗ್ರಸ್ತ ಚಂದ್ರಗ್ರಹಣದ ಹಿನ್ನೆಲೆಯಲ್ಲಿ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ದೇವಾಲಯಗಳು ಮಂಗಳವಾರ ಮಧ್ಯಾಹ್ನದಿಂದ ಸಂಜೆವರೆಗೆ ಬಂದ್ ಆಗಿದ್ದವು. ಗ್ರಹಣ ಮುಗಿದ ನಂತರ ದೇಗುಲಗಳ ಶುಚಿಗೊಳಿಸಿ, ಸಂಪ್ರದಾಯದಂತೆ ಪೂಜೆ ನೆರವೇರಿಸಿ ಭಕ್ತರ ದರ್ಶನಕ್ಕೆ ಮುಕ್ತಗೊಳಿಸಲಾಯಿತು.

ನಾಡಿನ ಪ್ರಮುಖ ದೇಗುಲಗಳು ಬಂದ್: ಬೆಂಗಳೂರಿನ ಗವಿಗಂಗಾಧರೇಶ್ವರ ದೇಗುಲ, ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಮಧ್ಯಾಹ್ನ 2ರಿಂದ ರಾತ್ರಿ 8.30ರವರೆಗೆ ದರ್ಶನ ಸ್ಥಗಿತಗೊಳಿಸಲಾಗಿತ್ತು. ಶ್ರೀರಂಗಪಟ್ಟಣದ ನಿಮಿಷಾಂಭ, ಮೇಲುಕೋಟೆ ಚೆಲುವನಾರಾಯಣಸ್ವಾಮಿ ಬಾಗಿಲು ಮುಚ್ಚಲಾಗಿತ್ತು. ಕೊಪ್ಪಳದ ಹುಲಿಗೆಮ್ಮ ದೇವಿ ದೇವಸ್ಥಾನ ಮತ್ತು ಅಂಜನಾದ್ರಿಯಲ್ಲಿ ಗ್ರಹಣ ನಿವಾರಣೆಯಾದ ನಂತರ ಗಂಗಾಜಲದಿಂದ ಶುದ್ಧೀಕರಣ ನಡೆಸಿ ವಿಶೇಷ ಪೂಜೆ ಸಲ್ಲಿಸಲಾಯಿತು.

ವಿಶೇಷವೆಂದರೆ, ಕಳೆದ ಒಂದು ವಾರದಿಂದ ಭಕ್ತ ಸಾಗರದಿಂದ ಕಿಕ್ಕಿರಿದು ತುಂಬಿದ್ದ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಾರಿಕಾಂಬಾ ದೇವಿಯ ಜಾತ್ರಾ, ಆವರಣ ಗ್ರಹಣದ ಅವಧಿಯಲ್ಲಿ ಭಕ್ತರಿಲ್ಲದೆ ಖಾಲಿ ಖಾಲಿಯಾಗಿತ್ತು. ಹಂಪಿಯ ವಿರೂಪಾಕ್ಷೇಶ್ವರ, ಸವದತ್ತಿ ಯಲ್ಲಮ್ಮ, ಶೃಂಗೇರಿ ಶಾರದಾಂಬೆ ಮತ್ತು ಹೊರನಾಡ ಅನ್ನಪೂರ್ಣೇಶ್ವರಿ ದೇಗುಲಗಳಲ್ಲೂ ಮಧ್ಯಾಹ್ನದಿಂದಲೇ ಸೇವೆಗಳನ್ನು ಸ್ಥಗಿತಗೊಳಿಸಲಾಗಿತ್ತು.

ಧರ್ಮಸ್ಥಳ, ಕುಕ್ಕೆಯಲ್ಲೂ ದರ್ಶನ ಸಮಯ ಬದಲು: ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲೂ ಸಮಯ ಬದಲಾವಣೆ ಆಗಿತ್ತು. ಧರ್ಮಸ್ಥಳದಲ್ಲಿ ಮಂಗಳವಾರ ಬೆಳಗ್ಗೆ 6.30 ರಿಂದ ಮಧ್ಯಾಹ್ನ 1.30ರ ತನಕ ಮಾತ್ರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಎಲ್ಲೆಡೆ ಟೊಮೇಟೊ ಪೂರೈಕೆ ಪ್ರಮಾಣ ಕುಸಿತ | ಬೆಂಗಳೂರಿನಲ್ಲಿ 13 ಕೆ.ಜಿ ಬಾಕ್ಸ್‌ಗೆ 400-450 ಇದ್ದ ಬೆಲೆ 80-120 ರು.ಗೆ ಇಳಿಕೆ

ಏಕಾಏಕಿ ಕುಸಿದ ಟೊಮೇಟೊ ದರ: ರೈತರು ಕಂಗಾಲು

ಹೂವಪ್ಪ. ಹೆಚ್ ಇ ಬೆಂಗಳೂರು

ಏಷ್ಯಾದ ಅತೀ ದೊಡ್ಡ ಟೊಮೇಟೊ ಮಾರುಕಟ್ಟೆಗಳಲ್ಲಿ ಒಂದಾದ ನಮ್ಮ ರಾಜ್ಯದ ಕೋಲಾರ ಮಾರುಕಟ್ಟೆಯಲ್ಲಿ ಬೆಲೆಯ ಏರಿಳಿತ ಸಾಮಾನ್ಯವಾದರೂ, ಈ ಬಾರಿಯ ತೀವ್ರ ಬೆಲೆ ಕುಸಿತ ರೈತರನ್ನು ಹೆಚ್ಚು ಸಂಕಷ್ಟಕ್ಕೆ ತಳ್ಳಿದೆ. ಗ್ರಾಹಕರಿಗೆ ಟೊಮೇಟೊ ಕಡಿಮೆ ಬೆಲೆಗೆ ಸಿಗುತ್ತಿರುವುದು ಅನುಕೂಲವಾದರೂ ಅನ್ನದಾತರ ನಷ್ಟ ಬಹುದೊಡ್ಡ ಪ್ರಶ್ನೆಯಾಗಿ ಉಳಿದಿದೆ.

ಮಹಾರಾಷ್ಟ್ರ, ಒಡಿಶಾ ಮತ್ತು ತಮಿಳುನಾಡು ರಾಜ್ಯಗಳಿಗೆ ಕೋಲಾರದಿಂದ ಹೋಗುತ್ತಿದ್ದ ಟೊಮೇಟೊ ಪೂರೈಕೆಯ ಪ್ರಮಾಣ ತೀರಾ ಕುಸಿದಿದೆ. ಈ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ಹೆಚ್ಚುವರಿ ಸಂಗ್ರಹ ಉಂಟಾಗಿದೆ. ಸ್ಥಳೀಯ ಉತ್ಪಾದನೆ ಹೆಚ್ಚಾಗಿರುವುದು ಮತ್ತು ಬೇಡಿಕೆ ಕಡಿಮೆಯಾಗಿರುವುದು ಕೋಲಾರ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ. ಇದು ಮಾರುಕಟ್ಟೆಯಲ್ಲಿ ಬೆಲೆ ಕುಸಿಯಲು ಪ್ರಮುಖ ಕಾರಣವಾಗಿದೆ.

ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳ ಟೊಮೇಟೊ ಬೆಳೆಯುವ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಗೊಬ್ಬರ, ಕೂಲಿ ಸೇರಿದಂತೆ ಎಕರೆಗೆ 80 ಸಾವಿರಕ್ಕೂ ಹೆಚ್ಚು ವೆಚ್ಚವಾಗಿದ್ದರೂ, ಮಾರುಕಟ್ಟೆಯಲ್ಲಿ ಟೊಮೇಟೊ ಧಾರಣೆ ಪಾತಾಳಕ್ಕೆ ಕುಸಿದಿದೆ. ಪ್ರತಿದಿನ ಬೆಲೆ ಕುಸಿಯುತ್ತಿರುವುದರಿಂದ ಲಾಭದ ನಿರೀಕ್ಷೆಯಲ್ಲಿದ್ದ ರೈತರು ಭಾರೀ ನಿರಾಶೆಗೊಳಗಾಗಿದ್ದಾರೆ.

ಕೋಲಾರದಲ್ಲಿ ಕಳೆದ ತಿಂಗಳು 15 ಕೆ.ಜಿ ಬಾಕ್ಸ್‌ಗೆ ರು.300-400 ಇದ್ದ ದರವು ಇದೀಗ ಏಕಾಏಕಿ 50-130 ರು.ಗೆ ಕುಸಿತ ಕಂಡಿದೆ. ಬೆಂಗಳೂರು ಮಾರುಕಟ್ಟೆಯಲ್ಲಿ 13 ಕೆ.ಜಿ ಬಾಕ್ಸ್‌ಗೆ 300-350 ಇದ್ದ ಬೆಲೆಯು ಇದೀಗ 80-120 ರು.ಗೆ ಕುಸಿತ ಕಂಡಿದೆ. ಎಲ್ಲಾ ರಾಜ್ಯಗಳಲ್ಲಿ ಹೆಚ್ಚು ಫಸಲಿನ ಆಗಮನವು ಹೊರರಾಜ್ಯಗಳಿಗೆ ಪೂರೈಕೆ ಸ್ಥಗಿತಕ್ಕೆ ಪ್ರಮುಖ ಕಾರಣವಾಗಿದೆ ಎನ್ನುತ್ತಾರೆ ಕೋಲಾರ ಎಪಿಎಂಸಿ ಮಂಡಿ ವ್ಯಾಪಾರಿಗಳು.

ಮಾರುಕಟ್ಟೆಗೆ ಆಗಮಿಸುತ್ತಿರುವ ಟೊಮೇಟೊ ಪ್ರಮಾಣ ಕಡಿಮೆ ಇದೆಯಾದರೂ ಬೆಲೆ ಮಾತ್ರ ಏರಿಕೆಯಾಗುತ್ತಿಲ್ಲ, ಎಲ್ಲಾ ರಾಜ್ಯಗಳಲ್ಲಿ ಟೊಮೇಟೊ ಬೆಳೆ ಹೆಚ್ಚಾಗುತ್ತಿರುವುದು ಮತ್ತು ಬೇಡಿಕೆ ಕಡಿಮೆಯಾಗುತ್ತಿರುವುದು ಬೆಲೆ ಕುಸಿತಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ.

ಬೆಳೆಯುವ ವೆಚ್ಚ, ಸಾಗಾಣಿಕೆ ಮತ್ತು ಮಾರುಕಟ್ಟೆ ಶುಲ್ಕಗಳನ್ನು ಲೆಕ್ಕ ಹಾಕಿದರೆ ಪ್ರಸ್ತುತ ಬೆಲೆಯಲ್ಲಿ ಲಾಭ ಸಿಗುವುದು ಕಷ್ಟ. ಮುಂದಿನ ವಾರದಲ್ಲಿ ಮತ್ತಷ್ಟು ಬೆಲೆ ಕುಸಿತದ ಸಾಧ್ಯತೆಯಿದ್ದು ರೈತರು ಆತಂಕದಲ್ಲಿದ್ದಾರೆ. ಸರಕಾರ ಬೆಂಬಲ ಬೆಲೆ ಅಥವಾ ಇತರೆ ಸೌಲಭ್ಯಗಳನ್ನು ಘೋಷಿಸಬೇಕು ಎಂದು ರೈತರು ಆಗ್ರಹಿಸುತ್ತಿದ್ದಾರೆ.

ಮತ್ತೊಂದೆಡೆ ರಾಜ್ಯದ ಕೊಪ್ಪಳ ಗಂಗಾವತಿ ಲಕ್ಷ್ಮೇಶ್ವರ ರೈತರ ಗೋಳು ಹೇಳತೀರಾಗಿದೆ. ಒಂದು ಟ್ರೇ (20 ಕೆ.ಜಿ) ಕೇವಲ 20ರಿಂದ 30 ರು.ಮಾತ್ರ ಲಭಿಸುತ್ತಿದೆ, ಅಂದರೆ ಕೆ.ಜಿಗೆ ಕೇವಲ ಒಂದರಿಂದ ಒಂದೂವರೆ ರು. ಮಾತ್ರ, ಹೀಗಾಗಿ ಟೊಮೇಟೊ ಕಟಾವು ಮಾಡಿ ಮಾರುಕಟ್ಟೆಗೆ ತಂದ ವಾಹನದ ಬಾಡಿಗೆಯೂ ಲಭಿಸದ ಕಾರಣಕ್ಕೆ ಗಿಡದಲ್ಲಿಯೇ ಬಿಡುತ್ತಿದ್ದಾರೆ.

ಗೋವುಗಳಿಗೆ ಆಹಾರ: ಬೆಳೆದ ಟೊಮೇಟೊ ಹಾಳಾಗಬಾರದು ಎಂಬ ಕಾರಣಕ್ಕೆ ಸಾವಿರಾರು ಕೆ.ಜಿ ಟೊಮೇಟೊವನ್ನು ಗೋ ಶಾಲೆಯಲ್ಲಿರುವ ನೂರಾರು ಗೋವುಗಳಿಗೆ ಆಹಾರ ವಾಗಿ ನೀಡುತ್ತಿದ್ದಾರೆ. ತಾವು ಬೆಳೆದ ಟೊಮೇಟೊವನ್ನು ಮಾರುಕಟ್ಟೆಗೆ ತರಲೂ ರೈತರು ಹಿಂದೇಟು ಹಾಕುತ್ತಿದ್ದಾರೆ. ಕೊಪ್ಪಳ ಜಿಲ್ಲೆಯ ಕನಕಗಿರಿ, ಹುಲಿಹೈದರ, ವೆಂಕಟಗಿರಿ, ನವಲಿ ಹೋಬಳಿಯಲ್ಲಿ ಸಾಕಷ್ಟು ಪ್ರಮಾಣ ದಲ್ಲಿ ಬೆಳೆಯಲಾಗಿರುವ ಟೊಮೇಟೊವನ್ನು ಕೆಲ ರೈತರು ಕಟಾವು ಮಾಡದೇ ಗಿಡದಲ್ಲೇ ಬಿಟ್ಟಿದ್ದಾರೆ.

ಒಂದು ಎಕರೆ ಟೊಮೇಟೊ ಸಸಿ ತಂದು ನಾಟಿ ಮಾಡಲು ಸುಮಾರು 25 ಸಾವಿರ ಖರ್ಚಾಗುತ್ತದೆ. ಆಳುಗಳ ಕೂಲಿ, ಗೊಬ್ಬರ, ಕ್ರಿಮಿನಾಶಕ ಸಿಂಪಡಿಸುವ ಖರ್ಚು ಸೇರಿದಂತೆ ಲಕ್ಷಾಂತರ ದುಡ್ಡು ವೆಚ್ಚವಾಗುತ್ತದೆ. ಹಲವು ಕನಸು ಹೊತ್ತು ಸುಡು ಬೇಸಿಗೆಯಲ್ಲಿ ನೀರುಣಿಸಿ ಬೆಳೆದ ಟೊಮೇಟೊವನ್ನು ದಿಕ್ಕು ತೋಚದಂತೆ ರಸ್ತೆಯ ಪಕ್ಕದಲ್ಲಿ ಚೆಲ್ಲಿ ಹೋಗುವುದು ರೈತರ ಪಾಲಿಗೆ ಹೆತ್ತ ಮಗುವನ್ನು ಕತ್ತು ಹಿಸುಕಿ ಕೊಂದಂತೆ ಆಗುತ್ತದೆ ಎನ್ನುತ್ತಾರೆ ಟೊಮೇಟೊ ಬೆಳೆದು ಕೈ ಸುಟ್ಟುಕೊಂಡ ರೈತ ಅಬ್ದುಲ್ ಕರೀಮ್ ಸೂರಣಗಿ.

ಎಲ್ಲಾ ರಾಜ್ಯಗಳಲ್ಲಿ ಟೊಮೇಟೊ ಬೆಳೆ ಈ ಸಲ ಭಾರೀ ಬಂದಿದೆ. ಹೀಗಾಗಿ ಹೊರ ರಾಜ್ಯಗಳಿಗೆ ಸರಬರಾಜಾಗುತ್ತಿದ್ದ ಟೊಮೇಟೊ ಬೇಡಿಕೆ ಭಾರೀ ಕುಸಿದಿದೆ. ಇದು ಈ ಸಲದ ತೀವ್ರ ಬೆಲೆ ಕುಸಿತಕ್ಕೆ ಪ್ರಮುಖ ಕಾರಣ.

ಬಾಲಾಜಿ, ಟೊಮೇಟೊ ವರ್ತಕರು, ಕೋಲಾರ ಎಪಿಎಂಸಿ.

ರಸ್ತೆ ಪಾಲಾದ ಟೊಮೇಟೊ

ಲಕ್ಷ್ಮೇಶ್ವರ ತಾಲೂಕಿನಲ್ಲಿ ಬೆಲೆ ಕುಸಿತದಿಂದ ಕಂಗಾಲಾದ ರೈತರು ತಾವು ಬೆಳೆದ ಟೊಮೇಟೊವನ್ನು ರಸ್ತೆಯ ಪಕ್ಕದ ಚರಂಡಿಗೆ ಸುರಿದು ಹೋದ ಘಟನೆ ನಡೆದಿದೆ. ಸತತ ಒಂದು ವಾರದಿಂದ ಬೆಲೆ ನೆಲಕಚ್ಚಿದ್ದರಿಂದ ರೈತರು ಕಷ್ಟ ಪಟ್ಟು ಬೆಳೆದ ಟೊಮೇಟೊವನ್ನು ದೊಡ್ಡೂರ-ಲಕ್ಷ್ಮೇಶ್ವರ ಮಧ್ಯದ ರಸ್ತೆಯ ಪಕ್ಕದ ಚರಂಡಿಗೆ ಸುರಿದು ಹೋಗಿದ್ದಾರೆ. ಟೊಮೇಟೊ ಹಣ್ಣಿನ ಬೆಲೆ ಕಳೆದ ಒಂದು ವಾರದಿಂದ 20-25 ಕೆ.ಜಿ ಬಾಕ್ಸ್ ಒಂದಕ್ಕೆ ರು. 50-100ಕ್ಕೆ ಕುಸಿದಿದ್ದರಿಂದ ಟೊಮೇಟೊ ಹಣ್ಣನ್ನು ಕೀಳುವ ಆಳುಗಳ ಕೂಲಿಯೂ ಕೈಗೆ ಬಂದಂತಾಗುವುದಿಲ್ಲ ಎಂದು ರೈತರು ದಾರಿ ತೋಚದೆ ರಸ್ತೆಯ ಪಕ್ಕಕ್ಕೆ ಸುರಿದು ಹೋಗಿದ್ದಾರೆ.

ಸಮಾಚಾರ ಸಣ್ಣದಲ್ಲ

ಐಟಿಎಫ್ ಡಬ್ಲ್ಯು35: ವೈಷ್ಣವಿ ಭರ್ಜರಿ ಆರಂಭ



ಕಲಬುರಗಿ: ಕಲಬುರಗಿಯಲ್ಲಿ ನಡೆಯುತ್ತಿರುವ ಐಟಿಎಫ್‌ಡಬ್ಲ್ಯು 35 ಮುಖ್ಯ ಹಂತದ ಪಂದ್ಯಗಳು ರೋಚಕವಾಗಿ ಆರಂಭಗೊಂಡಿದ್ದು, ಭಾರತದ ಮೂರನೇ ಸೀಡ್ ವೈಷ್ಣವಿ ಅಡ್ಕರ್ ನೇರ ಸೆಟ್‌ಗಳ ಭರ್ಜರಿ ಜಯದೊಂದಿಗೆ ಅಭಿಯಾನಕ್ಕೆ ಚಾಲನೆ ನೀಡಿದರು. ಮುಖ್ಯ ಡ್ರಾದ ಮೊದಲ ಪಂದ್ಯದಲ್ಲೇ ಆಡ್ಕರ್, ಚೆವಿಕಾ ರೆಡ್ಡಿ ಸಾಮ ಅವರನ್ನು 6-0, 6-3 ಅಂತರದಲ್ಲಿ ಸೋಲಿಸಿದರು. ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಅವರು 4-0 ಮುನ್ನಡೆ ಸಾಧಿಸಿ ಮೊದಲ ಸೆಟ್‌ಅನ್ನು 6-0ರಿಂದ ಕಬಳಿಸಿದರು. ಎರಡನೇ ಸೆಟ್‌ನಲ್ಲಿ ಸಾಮ ಮೊದಲ ಗೇಮ್‌ನಲ್ಲಿ ಬ್ರೇಕ್ ಪಡೆದರೂ, ಆಡ್ಕರ್ ತಕ್ಷಣ ಪ್ರತಿಬ್ರೇಕ್ ಮಾಡಿ ಲಯಕ್ಕೆ ಮರಳಿದರು. ನಿರ್ಣಾಯಕ ಹೊತ್ತಿನಲ್ಲಿ ಸರಣಿ ವಿಜೇತ ಹೊಡೆತಗಳಿಂದ 5-3 ಮುನ್ನಡೆ ಸಾಧಿಸಿ 6-3ರಿಂದ ಪಂದ್ಯ ಮುಕ್ತಾಯಗೊಳಿಸಿದರು. ಅರ್ಹತಾ ಸುತ್ತಿನಿಂದ ಬಂದ ಲಕ್ಷ್ಮೀಸಿರಿ ದಂಡು, ಜಪಾನ್‌ನ ಏಳನೇ ಸೀಡ್ ಮಿಚಿಕಾ ಒಜೆಕಿ ವಿರುದ್ಧ ಮೊದಲ ಸೆಟ್‌ನ್ನು 6-4ರಿಂದ ಗೆದ್ದರೂ, ಬಳಿಕ 6-1, 6-0 ಅಂತರದಲ್ಲಿ ಸೋತರು. ಡಬಲ್ಸ್‌ನಲ್ಲಿಶ್ರೀವಳ್ಳಿ-ರಶ್ಮಿಕಾ ಪಾಟಿ-ಜಾಸ್ಮಿನ್ ಗಿಂಬ್ರೆರೆ ಜೋಡಿ 6-4, 6-4ರಿಂದ ಜಯಿಸಿದರು.

ಶಿಕ್ಷಕನಿಂದ ಲಂಚ: ಬಿಇಒ ಲೋಕಾ ಬಲೆಗೆ

ಶಿವಮೊಗ್ಗ: ಶಿಕ್ಷಕರೊಬ್ಬರ ವಾರ್ಷಿಕ ವೇತನ ಬಡ್ತಿ ಹಾಗೂ ಇತರೆ ಸರಕಾರಿ ಭತ್ಯೆಗಳನ್ನು ಮಂಜೂರು ಮಾಡುವುದಕ್ಕಾಗಿ ಲಂಚಕ್ಕೆ ಬೇಡಿಕೆ ಇಟ್ಟು ಹಣ ಸ್ವೀಕರಿಸುತ್ತಿದ್ದ ವೇಳೆ ಭದ್ರಾವತಿ ಬಿಇಒ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಬಿಇಒ ಎ.ಕೆ.ನಾಗೇಂದ್ರಪ್ಪ, ಮಧ್ಯವರ್ತಿ ಮಂಜುನಾಥ್‌ನ ವಶಕ್ಕೆ ಪಡೆಯಲಾಗಿದೆ. ಶಿಕ್ಷಕ ಲಿಂಗರಾಜು 2011ರಿಂದ 2023ರವರೆಗೆ ತಮ್ಮ ಇಲಾಖೆಯಿಂದ ಬರಬೇಕಾದ ವಾರ್ಷಿಕ ವೇತನ ಬಡ್ತಿ ಹಾಗೂ ಇತರೆ ಭತ್ಯೆಗಳನ್ನು ಮಂಜೂರು ಮಾಡುವಂತೆ ಹಲವು ಬಾರಿ ಬಿಇಒ ಹಾಗೂ ಮೇಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಅಲ್ಲದೇ ಕಚೇರಿಗೆ ಅಲೆದು ಸುಸ್ತಾಗಿ ಹೋಗಿದ್ದರು. ಕೆಲಸ ಮಾತ್ರ ಆಗಿರಲಿಲ್ಲ. ಇತ್ತೀಚೆಗೆ ಬಿಇಒ ಮತ್ತು ಮಧ್ಯವರ್ತಿ ಇಬ್ಬರೂ ಸೇರಿಕೊಂಡು ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಮಾಡಿಕೊಡುವುದಕ್ಕೆ 4 ಲಕ್ಷ ರು.ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ.

ಬಿಸಿಲು ಜಾಸ್ತಿಯಾಗುವ ಪರಿಣಾಮ ದೇಶದ ಹಲವು ರಾಜ್ಯಗಳಲ್ಲಿ ಮಳೆ ಮುನ್ಸೂಚನೆ

ಮಾರ್ಚ್ 20 ರಿಂದ ಬಿಸಿಗಾಳಿ ಎಚ್ಚರಿಕೆ

ದೆಹಲಿ: ಶಿವರಾತ್ರಿ ಬಳಿಕ ಭಾರತದಲ್ಲಿ ಉಷ್ಣಾಂಶ ಏರುವುದು ಸಾಮಾನ್ಯ. ಈಗಾಗಲೇ ಕರ್ನಾಟಕ ಸೇರಿ ಎಲ್ಲ ಕಡೆ ಉಷ್ಣಾಂಶ ಏರುತ್ತಿದೆ. ಈ ಬಾರಿ ಉತ್ತರ ಭಾರತದಲ್ಲಿ ಹೋಳಿ ಹಬ್ಬಕ್ಕೂ ಮುನ್ನವೇ ಬೇಸಿಗೆಯು ಭರ್ಜರಿಯಾಗಿ ಪ್ರವೇಶ ಮಾಡಿದೆ. ಹವಾಮಾನ ಇಲಾಖೆಯ ವರದಿಯ ಪ್ರಕಾರ, ವಾಯವ್ಯ ಮತ್ತು ಮಧ್ಯಭಾರತದ ಹಲವು ರಾಜ್ಯಗಳಲ್ಲಿ ತಾಪಮಾನವು ಸಾಮಾನ್ಯಕ್ಕಿಂತ 4 ರಿಂದ 7 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಿದೆ. ಏಪ್ರಿಲ್‌ನಲ್ಲಿ ಇರಬೇಕಾದ ಬಿಸಿಲು ಮಾರ್ಚ್ ಆರಂಭದಲ್ಲೇ ಜನರ ಬೆವರಿಳಿಸುತ್ತಿದೆ.

ಮುಂದಿನ 5 ದಿನಗಳಲ್ಲಿ ಬಯಲು ಪ್ರದೇಶಗಳಲ್ಲಿ ತಾಪಮಾನ ಇನ್ನೂ 2 ರಿಂದ 4 ಡಿಗ್ರಿ ಏರಿಕೆಯಾಗಲಿದೆ. ಮಾರ್ಚ್ 20 ರಿಂದ ಉತ್ತರ ಭಾರತದಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆ ಇರುವುದರಿಂದ, ಜನರು ಹೆಚ್ಚಿನ ನೀರು ಕುಡಿಯಲು ಮತ್ತು ಅನಗತ್ಯವಾಗಿ ಬಿಸಿಲಿಗೆ ಹೋಗದಂತೆ ಜಾಗರೂಕರಾಗಿರಲು ಹವಾಮಾನ ಇಲಾಖೆ ಸಲಹೆ ನೀಡಿದೆ.

ಮಳೆ, ಬಿರುಗಾಳಿಯ ಎಚ್ಚರಿಕೆ

ಹೋಳಿ ಹಬ್ಬಕ್ಕೆ 24 ಗಂಟೆಗಳ ಮೊದಲು ಹವಾಮಾನ ಇಲಾಖೆಯು ಸಿಹಿ ಸುದ್ದಿಯೊಂದನ್ನು ನೀಡಿದೆ. ಉತ್ತರಪ್ರದೇಶ, ಹರಿಯಾಣ, ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಮಾರ್ಚ್ 3ರಂದು ಹಗುರ ಮಳೆಯಾಗುವ ಸಾಧ್ಯತೆಯಿದೆ. ಅಷ್ಟೇ ಅಲ್ಲದೆ, ಅಸ್ಸಾಂ, ಮೇಘಾಲಯದಂತಹ ಈಶಾನ್ಯ ರಾಜ್ಯಗಳಲ್ಲಿ ಗುಡುಗು ಸಹಿತ ಮಳೆಯಾಗಬಹುದು. ವಿಶೇಷವೆಂದರೆ, ದಕ್ಷಿಣ ಭಾರತದ ಕೆಲವು ಭಾಗಗಳಲ್ಲೂ ಸ್ಥಳೀಯ ಹವಾಮಾನ ಬದಲಾವಣೆಯಿಂದಾಗಿ ಮಳೆಯ ಮುನ್ಸೂಚನೆ ಇದೆ.

ಪ್ರಮುಖ ರಾಜ್ಯಗಳಲ್ಲಿ ಹವಾಮಾನ ಹೇಗಿರಲಿದೆ?



ರಾಜ್ಯದ ಅಲ್ಲಲ್ಲಿ ತುಂತುರು ಮಳೆ

ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ (ಬೆಂಗಳೂರು, ಮೈಸೂರು, ಕೊಡಗು ಮತ್ತು ಹಾಸನ ಭಾಗಗಳಲ್ಲಿ) ಸ್ಥಳೀಯ ತೇವಾಂಶ ಮತ್ತು ಹವಾಮಾನ ಬದಲಾವಣೆಯಿಂದಾಗಿ ಸಂಜೆ ಅಥವಾ ರಾತ್ರಿಯ ವೇಳೆ ಹಗುರವಾದ ತುಂತುರು ಮಳೆಯಾಗುವ ಸಾಧ್ಯತೆಯಿದೆ.

ದೆಹಲಿ: ಹೋಳಿ ದಿನದಂದು (ಮಾರ್ಚ್ 4) ಆಕಾಶ ಸ್ವಚ್ಛವಾಗಿದ್ದು, ಮಧ್ಯಾಹ್ನ ತಾಪಮಾನ 31 ಡಿಗ್ರಿ ದಾಟಬಹುದು.

ಉತ್ತರಪ್ರದೇಶ: ಲಖನೌನಲ್ಲಿ ಸೆಖೆ ಹೆಚ್ಚಿರಲಿದ್ದು, ಗೋರಖ್‌ಪುರ, ಅಜಂಗಢ ಮತ್ತು ಮಿರ್ಜಾಪುರ ಜಿಲ್ಲೆಗಳಲ್ಲಿ ತುಂತುರು ಮಳೆಯಾಗುವ ಸಾಧ್ಯತೆ ಇದೆ.

ರಾಜಸ್ಥಾನ ಮತ್ತು ಮಧ್ಯಪ್ರದೇಶ: ಇಲ್ಲಿ ಮಳೆಯ ಸಾಧ್ಯತೆ ತೀರಾ ಕಡಿಮೆ. ಜೈಪುರ ಮತ್ತು ಭೋಪಾಲ್‌ನಲ್ಲಿ ತಾಪಮಾನ 33 ಡಿಗ್ರಿ ಸೆಲ್ಸಿಯಸ್ ತಲುಪಲಿದ್ದು, ಬಿಸಿಲು ತೀವ್ರವಾಗಿರಲಿದೆ.

ಜನಾಂದೋಲನ ಸಭೆಯಲ್ಲಿ ಶೃಂಗೇರಿ ಶಾಸಕ ರಾಜೇಗೌಡ ಕಣ್ಣೀರು
ಜೀವರಾಜ್ ಸ್ಪರ್ಧಿಸದಿದ್ದರೆ ನಾನೂ ಸ್ಪರ್ಧಿಸುವುದಿಲ್ಲ ಎಂದ ಶಾಸಕ

ನನ್ನ ಹೆಂಡತಿ, ಮಗನಿಗೆ ತೊಂದರೆ ಕೊಡುತ್ತಿದ್ದಾರೆ

ಬಾಳೆಹೊನ್ನೂರು: ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕ ಟಿ.ಡಿ.ರಾಜೇಗೌಡ ಜನಾಂದೋಲನ ಸಮಾವೇಶದಲ್ಲಿ ಕಣ್ಣೀರಿಟ್ಟ ಘಟನೆ ನಡೆದಿದೆ. ಬಹಿರಂಗ ಸಭೆಯಲ್ಲಿ ಕಣ್ಣೀರು ಹಾಕಿದ ಶೃಂಗೇರಿ ಶಾಸಕ ರಾಜೇಗೌಡರು, ನನ್ನ ಕುಟುಂಬವನ್ನು ಬೀದಿಗೆ ತಂದಿದ್ದಾರೆ, ದಿನ ನಿತ್ಯ ಕೋರ್ಟ್‌ಗೆ ಅಲೆದಾಡುವ ಸ್ಥಿತಿ ಬಂದಿದೆ ಎಂದು ಮಾಜಿ ಶಾಸಕ ಡಿ.ಎನ್.ಜೀವರಾಜ್ ಹೆಸರು ಹೇಳದೇ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನ ಬಾಳೆಹೊನ್ನೂರು ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷದಿಂದ ಹಮ್ಮಿಕೊಂಡಿದ್ದ ಜನಾಂದೋಲನ ಸಮಾವೇಶದಲ್ಲಿ ಅವರು ಮೇಲಿನಂತೆ ಮಾತನಾಡಿದ್ದಾರೆ.

ನನ್ನ ಮನೆಯನ್ನು ಹಾಳು ಮಾಡಿದ್ದೀರಿ, ಅನ್ಯಾಯ ಮಾಡಿದ್ದೀರಿ, ನಾನು ಸಾಲ ಮಾಡಿದ್ದೇನೆ, ನಾನು ಜನಕ್ಕೆ ಅನ್ಯಾಯವನ್ನು ಮಾಡಿಲ್ಲ, ನಾನು ಈ ಸಭೆ ಮೂಲಕ ಒಂದು ಘೋಷಣೆ ಮಾಡುತ್ತೇನೆ, ನಾನು ಚುನಾವಣೆಗೆ ಸ್ಪರ್ಧಿಸಲ್ಲ. ಯಾರಾದರೂ ನಿಲ್ಲಲಿ ಆದರೆ ಕೆಟ್ಟ ಮನಸ್ಥಿತಿಯ ವ್ಯಕ್ತಿ ಮತ್ತೆ ಶಾಸಕನಾಗಬಾರದು. ಶಾಸಕರಾದರೆ ಈ ಕ್ಷೇತ್ರಕ್ಕೆ ಮಾರಕ, ಯಾರ ಮನೆ ಹೆಣ್ಣು ಮಕ್ಕಳನ್ನು ಏನ್ ಮಾಡ್ತಾರೋ ಗೊತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಾಜಿ ಶಾಸಕ ಡಿ.ಎನ್.ಜೀವರಾಜ್‌ರನ್ನು ಉದ್ದೇಶಿಸಿ ಈ ಮಾತುಗಳನ್ನಾಡಿದ್ದಾರೆಂದು ಹೇಳಲಾಗಿದೆ.

ನನ್ನ ಹೆಂಡತಿ, ಮಗನಿಗೆ ತೊಂದರೆ ಕೊಡುತ್ತಿದ್ದಾರೆ, ನಾನು ಈ ಸಮಾವೇಶದ ಮೂಲಕ ಒಂದು ಘೋಷಣೆ ಮಾಡುತ್ತಿದ್ದೇನೆ, ಈ ಕ್ಷೇತ್ರದಲ್ಲಿ ಜನರಿಗೆ ವಿನಾಕಾರಣ ತೊಂದರೆ ಕೊಡುತ್ತಾ, ಮಹಿಳೆಯರಿಗೆ ತೊಂದರೆ ಕೊಟ್ಟಿರುವುದನ್ನು ಮನದಟ್ಟು ಮಾಡಿಕೊಂಡು ಚುನಾವಣೆಗೆ ಸ್ಪರ್ಧಿಸಲ್ಲ ಅಂತ ಘೋಷಣೆ ಮಾಡಲಿ. ನಾನು ಕೂಡ ಘೋಷಣೆ ಮಾಡುತ್ತೇನೆ, ನೀವು ಸ್ಪರ್ಧಿಸಲ್ಲ ಅಂದ್ರೆ ನಾನೂ ಸ್ಪರ್ಧಿಸಲ್ಲ, ನನ್ನ ಬದಲಿಗೆ ಕಾರ್ಯಕರ್ತರು ನಿಲ್ಲಲಿ ಎಂದು ಶಾಸಕರು ಹೇಳಿದ್ದಾರೆ.

ರಾಜೇಗೌಡರ ವಿರುದ್ಧ ಕಿಡಿಕಾರಿದ್ದ ಜೀವರಾಜ್: ಮಲೆನಾಡಿನಲ್ಲಿ ನಿರಂತರವಾಗಿ ಕಾಡಾನೆ ಹಾವಳಿ ವಿರೋಧಿಸಿ ನಡೆದಿದ್ದ ಪ್ರತಿಭಟನೆಯಲ್ಲಿ ಮಾಜಿ ಶಾಸಕ ಜೀವರಾಜ್ ಹಾಲಿ ಶಾಸಕರ ವಿರುದ್ಧ ಕಿಡಿಕಾರಿದ್ದರು. ಅಂದು ನಡೆದ ಪ್ರತಿಭಟನಾ ಸಭೆಯಲ್ಲಿ ಬಿಜೆಪಿ ಕಾರ್ಯಕರ್ತರು ಶಾಸಕರ ವಿರುದ್ಧ ಆರೋಪದ ಸುರುಮಳೆ ಸುರಿದಿದ್ದರು. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಪಕ್ಷದಿಂದ ಜನಾಂದೋಲನ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು.

ಖಾಸಗಿ ಶಾಲಾ ಶುಲ್ಕ ಏರಿಕೆ?

ಬೆಂಗಳೂರು: ಈಗಾಗಲೇ ದರ ಏರಿಕೆಯಿಂದ ತತ್ತರಿಸಿರುವ ಜನರಿಗೆ, ಮುಂದಿನ ವರ್ಷದಿಂದ ಮತ್ತೊಂದು ಶುಲ್ಕ ಬಿಸಿ ತಟ್ಟುವುದು ನಿಶ್ಚಿತವಾಗಿದೆ.

ಪ್ರತಿವರ್ಷ ಸಣ್ಣ ಪ್ರಮಾಣದಲ್ಲಿ ಶುಲ್ಕ ಏರಿಸುತ್ತಿದ್ದ ಖಾಸಗಿ ಶಾಲೆಗಳು ಈ ಬಾರಿ ಶೇ.15ರಷ್ಟು ಶುಲ್ಕ ಹೆಚ್ಚಿಸಲು ಮುಂದಾಗಿರುವುದು ಜನ ಸಾಮಾನ್ಯರಿಗೆ ನುಂಗಲಾರದ ತುತ್ತಾಗಿದೆ. ಈ ಹಿಂದೆ ಶೇ.8ರಷ್ಟು ಶುಲ್ಕವನ್ನು ಏರಿಸುತ್ತಿದ್ದ ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಈ ಬಾರಿ ಶೇ.10ರಿಂದ 15ರಷ್ಟು ಏರಿಸುವುದಾಗಿ ಬಹಿರಂಗ ವಾಗಿಯೇ ಹೇಳಿವೆ. ಇದರೊಂದಿಗೆ ಇನ್ನಿತರ ವೆಚ್ಚವೆಂದು ಇನ್ನಷ್ಟು ಶುಲ್ಕ ಪಡೆಯುವುದು ಪೋಷಕರ ಆತಂಕಕ್ಕೆ ಕಾರಣವಾಗಿದೆ.

ಈ ಬಗ್ಗೆ ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಬಿ. ಶಶಿಕುಮಾರ್ ಮಾತನಾಡಿದ್ದು, ಪ್ರತಿ ವರ್ಷ ಶೇ. 8ರಿಂದ 10ರಷ್ಟು ಶುಲ್ಕ ಹೆಚ್ಚಳ ಮಾಡಲಾಗುತ್ತಿತ್ತು. 2026-27ನೇ ಸಾಲಿಗೆ ಶೇ. 15 ರಷ್ಟು ಶುಲ್ಕ ಹೆಚ್ಚಳ ಮಾಡಲಾಗುತ್ತಿದೆ. ಕೆಲವು ಶಾಲೆಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಶುಲ್ಕ ಏರಿಕೆ ಮಾಡಲಿವೆ. ಕನಿಷ್ಠ ಶೇ. 8 ರಿಂದ ಗರಿಷ್ಠ 15ರವರೆಗೂ ಶುಲ್ಕ ಹೆಚ್ಚಳವಾಗಲಿದೆ ಎಂದು ತಿಳಿಸಿದ್ದಾರೆ.

ಸರಕಾರ ಮನಸ್ಸೋ ಇಚ್ಛೆ ಖಾಸಗಿ ಶಾಲೆಗಳಿಗೆ ಅನುಮತಿ ನೀಡುತ್ತಿದೆ. ಇದರಿಂದ ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. 30 ರಿಂದ 40 ಲಕ್ಷ ರು.ಗಳಷ್ಟು ಮೂಲ ಸೌಕರ್ಯ ಬಳಕೆಯಾಗದೇ ನಿರ್ವಹಣಾ ವೆಚ್ಚ ದುಬಾರಿಯಾಗುತ್ತಿದೆ. ಶಿಕ್ಷಕರ ವೇತನವೂ ಹೆಚ್ಚಾಗುತ್ತಿದೆ. ಹೀಗಾಗಿ ಶುಲ್ಕ ಏರಿಕೆ ಅನಿವಾರ್ಯ ಎಂದು ಸಮರ್ಥಿಸಿಕೊಂಡಿದ್ದಾರೆ.

ಕರ್ನಾಟಕದಲಷ್ಟೆ ಅಲ್ಲ, ದೇಶಾದ್ಯಂತ ಖಾಸಗಿ ಶಾಲೆಗಳಿಗೆ ಅನುಮತಿ ನೀಡುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ರಾಜ್ಯದಲ್ಲಿಯೇ 700 ರಿಂದ 800 ಖಾಸಗಿ ಶಾಲೆಗಳಿಗೆ ವರ್ಷ ಒಂದರಲ್ಲೆ ಅನುಮತಿ ನೀಡಲಾಗುತ್ತಿದೆ. ಈ ನಡುವೆ ಬಹುರಾಷ್ಟ್ರಿಯ ಕಂಪನಿಗಳು, ದೊಡ್ಡ ದೊಡ್ಡ ಸಂಸ್ಥೆಗಳು ಶಿಕ್ಷಣ ಕ್ಷೇತ್ರಕ್ಕೆ ಕಾಲಿಟ್ಟಿದೆ. ಕೋಟ್ಯಂತರ ರುಪಾಯಿ ಬಂಡವಾಳ ಹೂಡಿಕೆ ಮಾಡಿ ಶಾಲೆ ಆರಂಭಿಸುತ್ತಿವೆ. ಅದಕ್ಕನುಗುಣವಾಗಿಯೇ ಶುಲ್ಕವೂ ಹೆಚ್ಚಳವಾಗುತ್ತಿದೆ ಎಂದು ಹೇಳಿದರು.

ಹತ್ತಾರು ಎಕರೆ ಪ್ರದೇಶ ಬೆಂಕಿಗಾಹುತಿ | ಕಿಡಿಗೇಡಿಗಳ ಕೃತ್ಯ ಶಂಕೆ | ಸ್ಥಳೀಯರಲ್ಲಿ ಭಾರೀ ಆತಂಕ

ನಂದಿ ಬೆಟ್ಟದಲ್ಲಿ ಬೆಂಕಿ ಅನಾಹುತ

ಚಿಕ್ಕಬಳ್ಳಾಪುರ: ವಿಶ್ವವಿಖ್ಯಾತ ಪ್ರವಾಸಿ ತಾಣ ನಂದಿ ಬೆಟ್ಟದಲ್ಲಿ ಮಂಗಳವಾರ ಸಂಜೆ ಅಕಸ್ಮಾತ್ ಬೆಂಕಿ ಕಾಣಿಸಿಕೊಂಡು ಹತ್ತಾರು ಎಕರೆ ಪ್ರದೇಶ ಬೆಂಕಿಗಾಹುತಿಯಾದ ಘಟನೆ ಸಂಭವಿಸಿದೆ. ಕಿಡಿಗೇಡಿಗಳ ಕೃತ್ಯದಿಂದಲೇ ಬೆಂಕಿ ಹೊತ್ತಿಕೊಂಡಿರಬಹುದು ಎಂಬ ಅನುಮಾನ ವ್ಯಕ್ತವಾಗಿದೆ.

ಬೆಟ್ಟದ ಮಧ್ಯ ಭಾಗದಲ್ಲಿ ಹೊತ್ತಿಕೊಂಡ ಬೆಂಕಿ ಕ್ಷಣಕ್ಷಣಕ್ಕೂ ವ್ಯಾಪಿಸಿ, ಸುಲ್ತಾನ್‌ಪೇಟೆ ಭಾಗದ ಕಡೆಗೆ ಕೆನ್ನಾಲಿಗೆ ಚಾಚಿದ ದೃಶ್ಯಗಳು ದೂರದಿಂದಲೇ ಗೋಚರಿಸಿವೆ ಎಂಬುದು ದಾರಿಹೋಕರ ಮಾಹಿತಿಯಾಗಿದ್ದು ಬೆಂಕಿಯ ಜ್ವಾಲೆಗಳು ಎತ್ತರಕ್ಕೆ ಏರಿ ದಟ್ಟ ಹೊಗೆ ಆಕಾಶ ಮುಟ್ಟಿದಂತಿದ್ದು, ಸ್ಥಳೀಯರು ಆತಂಕಗೊಂಡಿದ್ದಾರೆ.

ಬೆಂಕಿ ಕಾಣಿಸಿಕೊಂಡ ಪ್ರದೇಶ ಕಡು ಬಂಡೆಗಲ್ಲುಗಳಿಂದ ಕೂಡಿದ್ದು, ಅಗ್ನಿಶಾಮಕ ದಳದ ವಾಹನಗಳು ನೇರವಾಗಿ ತಲುಪಲು ಸಾಧ್ಯವಾಗದಂತಹ ಸ್ಥಳವಾಗಿರುವುದರಿಂದ ಬೆಂಕಿ ನಂದಿಸುವ ಕಾರ್ಯದಲ್ಲಿ ಅಡಚಣೆ ಎದುರಾಗಿದೆ. ಸಿಬ್ಬಂದಿ ಪಾದಚಾರಿ ಮಾರ್ಗದಿಂದಲೇ ಮೇಲಕ್ಕೆ ತೆರಳಿ ಬೆಂಕಿ ನಿಯಂತ್ರಣಕ್ಕೆ ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಘಟನೆಯ ದೃಶ್ಯಗಳನ್ನು ಸುಲ್ತಾನ್‌ಪೇಟೆ ಸ್ಥಳೀಯರೊಬ್ಬರು ತಮ್ಮ ಮೊಬೈಲ್ ಫೋನ್‌ಗಳಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದು, ಆ ವಿಡಿಯೊಗಳು ವೈರಲ್ ಆಗಿವೆ.

ಸ್ಥಳಕ್ಕೆ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಸ್ಥಿತಿ ಅವಲೋಕನ ನಡೆಸಿರುವ ಬಗ್ಗೆ ಸ್ಥಳೀಯರಿಂದ ಮಾಹಿತಿ ಲಭ್ಯವಾಗಿದೆ. ಬೆಂಕಿ ಅನಾಹುತದ ನಿಖರ ಕಾರಣ ಮತ್ತು ಹಾನಿ ಪ್ರಮಾಣ ಕುರಿತು ಅಧಿಕೃತ ಮಾಹಿತಿ ಇನ್ನಷ್ಟೇ ತಿಳಿದುಬರಬೇಕಿದೆ.

ಪ್ರಕೃತಿ ಸೌಂದರ್ಯದ ಸಂಕೇತವಾದ ನಂದಿ ಬೆಟ್ಟದಲ್ಲಿ ಬೇಸಿಗೆಯಲ್ಲಿ ಈ ರೀತಿಯ ಘಟನೆಗಳು ಸಂಭವಿಸುವುದು ಪರಿಸರ ಪ್ರೇಮಿಗಳಲ್ಲಿ ತೀವ್ರ ಆತಂಕ ಮೂಡಿಸಿದೆ. ಜಿಲ್ಲಾಡಳಿತ ಅರಣ್ಯ ಇಲಾಖೆ ಇಂತಹ ಘಟನೆಗಳ ಬಗ್ಗೆ ಜಾಗೃತೆವಹಿಸಲಿ ಎನ್ನುವುದು ಸಾರ್ವಜನಿಕರ ಆಗ್ರಹವಾಗಿದೆ.

ಸಿನಿಮಾದತ್ತ ಧ್ರುವಂತ್ ಚಿತ್ತ

ಕಿರುತೆರೆಯ ಧಾರಾವಾಹಿಗಳಲ್ಲಿ ನಟಿಸಿ ಮನಗೆದ್ದ ನಟ ಧ್ರುವಂತ್, ಈ ಬಾರಿಯ ಬಿಗ್ ಬಾಸ್ ಮನೆಗೂ ಪ್ರವೇಶಿಸಿ ಗಮನಸೆಳೆದರು. ಬಿಗ್‌ಬಾಸ್‌ನಲ್ಲಿ ಮನೆಯಲ್ಲಿ ನೀಡಿದ ಟಾಸ್ಕ್‌ಗಳಲ್ಲಿ ಉತ್ತಮ ಪ್ರದರ್ಶನ ತೋರಿದ ಧ್ರುವಂತ್ ಗೆಲ್ಲುವ ಅಭ್ಯರ್ಥಿಯಾಗಿ ಗುರುತಿಸಿಕೊಂಡಿದ್ದರು. ಆದರೆ ಫೈನಲ್‌ಗೂ ಮೊದಲೇ ಮನೆಯಿಂದ ಹೊರಬಂದರು. ಬಿಗ್‌ಬಾಸ್ ಬಳಿಕ ಧ್ರುವಂತ್ ಮತ್ತೆ ಕಿರುತೆರೆಯ ಧಾರಾವಾಹಿಗಳಲ್ಲಿ ನಟಿಸುತ್ತಾರಾ ಎನ್ನುವ ಕುತೂಹಲ ಹಲವರಲ್ಲಿತ್ತು. ಆದರೆ ಧ್ರುವಂತ್ ಸಿನಿಮಾಗಳತ್ತ ಆಸಕ್ತಿ ವಹಿಸಿದ್ದಾರೆ. ಬಿಗ್‌ಬಾಸ್ ಬಳಿಕ ಹಲವು ಸಿನಿಮಾಗಳಲ್ಲಿ ನಟಿಸುವ ಅವಕಾಶಗಳು ಅರಸಿ ಬಂದಿದ್ದು, ಸದ್ಯ ಕಥೆ ಕೇಳುತ್ತಿದ್ದೇನೆ, ಒಳ್ಳೆಯ ಕಥೆ ಹಾಗೂ ಪಾತ್ರ ಸಿಕ್ಕಿದರೆ ಖಂಡಿತಾ ನಟಿಸುತ್ತೇನೆ ಎನ್ನುತ್ತಾರೆ ಧ್ರುವಂತ್.

ಈ ನಡುವೆ ಧ್ರುವಂತ್ ತಾವೇ ಒಂದು ಕಥೆ ಬರೆದಿದ್ದು, ಅದನ್ನು ಸಿನಿಮಾ ರೂಪದಲ್ಲಿ ತೆರೆಗೆ ತರಲು ಉತ್ಸುಕರಾಗಿದ್ದಾರೆ. ಸದ್ಯ ಇನ್ನು ನಿರ್ದೇಶನದ ಬಗ್ಗೆ ಕಲಿಯಬೇಕಾಗಿರುವುದರಿಂದ ಕಥೆ, ಚಿತ್ರಕಥೆ ಬರೆದಿದ್ದು ಪ್ರಮುಖ ಪಾತ್ರದಲ್ಲಿ ಅಭಿನಯಿಸಲು ಸಿದ್ಧತೆ ನಡೆಸಿದ್ದಾರೆ. ಧ್ರುವಂತ್, ಮೈಜುಂ ಎನ್ನಿಸುವ ಕ್ರೈಂ ಥ್ರಿಲ್ಲರ್ ಕಥೆಯನ್ನು ಹೆಣೆದಿದ್ದಾರೆ. ಒಂದು ಮಗುವಿನ ಸಾವಿನ ಸುತ್ತ ಸಾಗುವ ರೋಚಕ ಸ್ಟೋರಿಯ ಅದಾಗಿದ್ದು, ನಿರ್ಮಾಪಕರಿಗೂ ಕಥೆ ಹೇಳಿದ್ದಾರೆ. ಕಥೆ ಕೇಳಿ ಮೆಚ್ಚಿರುವ ನಿರ್ಮಾಪಕರು ನಿರ್ಮಾಣಕ್ಕೂ ಸಮ್ಮತಿಸಿದ್ದಾರೆ.

ಲಂಡನ್‌ನಲ್ಲಿನೆಲೆಸಿರುವ ನಾಯಕ ಸಂಬಂಧಿಕರ ಮದುವೆಗಾಗಿ ಭಾರತಕ್ಕೆ ಬರುತ್ತಾನೆ. ಈ ಸಂದರ್ಭ ಆತನಿಗೆ ಕಾಪಾಡಿ.. ಕಾಪಾಡಿ.. ಎಂಬ ದನಿ ಎಲ್ಲಿ ಹೋದರೂ ಕೇಳುತ್ತಾ ಕಾಡುತ್ತಿರುತ್ತದೆ. ಅದು ಏನು ಎಂದು ಹುಡುಕಲು ಹೊರಟಾಗ ಹಲವು ರೋಚಕ ತಿರುವುಗಳು ತೆರೆದುಕೊಳ್ಳುತ್ತವೆ. ಇದು ಹಾರರ್ ಸಿನಿಮಾದಂತೆಯೇ ಭಾಸವಾಗುತ್ತದೆ. ಈ ಚಿತ್ರವನ್ನು ಕನ್ನಡ ಸೇರಿದಂತೆ ಪಂಚ ಭಾಷೆಗಳಲ್ಲಿ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ ಎಂದು ಧ್ರುವಂತ್ ಹೇಳಿದರು.

> **ನನ್ನ ಜೀವನದಲ್ಲಿ ಕೆಲವು ಕಹಿ ಘಟನೆಗಳು ನಡೆದವು. ಅದೆಲ್ಲವನ್ನೂ ಮರೆಸಿದ್ದು ಕನ್ನಡದ ಬಿಗ್‌ಬಾಸ್ ಎಂಬ ಹೆಮ್ಮೆ ಇದೆ. ಅದರ ಜತೆಗೆ ನನ್ನನ್ನು ಕರುನಾಡಿಗೆ ಪರಿಚಯಿಸಿತು. ಇಂದು ನಾನು ಎಲ್ಲೇ ಹೋದರೂ ಎಲ್ಲರೂ ಧ್ರುವಂತ್ ಎಂದು ಗುರುತಿಸುತ್ತಾರೆ. ನಿಜವಾಗಿಯೂ ಅದು ಖುಷಿಕೊಟ್ಟಿದೆ.**

> **ಬಿಗ್‌ಬಾಸ್ ಮನೆಗೆ ಹೋಗಿ ಬಂದ ಮೇಲೆ ಕಿರುತೆರೆಯಲ್ಲಿ ನಟಿಸಲು ಅವಕಾಶಗಳು ಅರಸಿ ಬಂದವು. ಆದರೆ ನನಗೆ ಧಾರಾವಾಹಿಗಳಿಗಿಂತ ಸಿನಿಮಾದ ಮೇಲೆ ಆಸಕ್ತಿ ಇದೆ. ಕೆಲವು ಚಿತ್ರಗಳ ಕಥೆ ಕೇಳಿದ್ದೇನೆ. ಅದರ ಜತೆಗೆ ನಾನೇ ಬರೆದಿರುವ ಕಥೆಯನ್ನು ಸಿನಿಮಾ ರೂಪದಲ್ಲಿ ತೆರೆಗೆ ತರಲು ಕಾಯುತ್ತಿದ್ದೇನೆ.**

ಪ್ರೇಮದ ಊರಲಿ ಸಂಬಂಧಗಳ ಕಥನ

ಈ ಹಿಂದೆ ಅಕ್ಷಿ ಸಿನಿಮಾ ನಿರ್ದೇಶನ ಮಾಡಿ ರಾಷ್ಟ್ರ ಪ್ರಶಸ್ತಿ ಮುಡಿಗೇರಿಸಿಕೊಂಡ ಮನೋಜ್ ಕುಮಾರ್, ಹೊಸ ಕಥೆಯೊಂದಿಗೆ ಬಂದಿದ್ದಾರೆ. ಈ ಬಾರಿ ಮ್ಯೂಸಿಕಲ್ ಲವ್ ಸ್ಟೋರಿ ಹೇಳುತ್ತಿದ್ದಾರೆ. ಪ್ರೇಮದ ಊರಲಿ ಎಂಬ ಶೀರ್ಷಿಕೆಯಲಿ ಚಿತ್ರ ನಿರ್ದೇಶನ ಮಾಡಿದ್ದು ತೆರೆಗೆ ತರಲು ರೆಡಿಯಾಗಿದ್ದಾರೆ. ಈ ಚಿತ್ರದ ಟೀಸರ್ ರಿಲೀಸ್ ಆಗಿದ್ದು ಸಿನಿಪ್ರಿಯರನ್ನು ಸೆಳೆಯುತ್ತಿದೆ. ಇದೊಂದು ತ್ರಿಕೋನಾ ಪ್ರೇಮಕಥೆಯ ಸಿನಿಮಾವಾಗಿದ್ದು, ಸೆಂಟಿಮೆಂಟ್ ಕೂಡ ಬೆರೆತಿದೆ.

ಶ್ರೀರಾಮ್, ರಂಗಾಯಣ ರಘು, ತಪಸ್ವಿನಿ, ರಮಿಕಾ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.

> **ಪ್ರೇಮದ ಊರಲಿ ಮ್ಯೂಸಿಕಲ್ ಲವ್ ಸ್ಟೋರಿಯ ಸಿನಿಮಾಗಿದ್ದ ಮನಸನ್ನು ಕಾಡುತ್ತದೆ. ಅಂತೆಯೇ ಚಿತ್ರದಲ್ಲಿ ನಾಗಣ್ಣ ಹಾಗೂ ಸಂತುವಿನ ಪುಟ್ಟಲೋಕ ಅನಾವರಣವಾಗಲಿದೆ. ಒಂದು ಮನೆಯಲ್ಲಿ ಎಲ್ಲರೂ ಲವಲವಿಕೆಯಿಂದ, ಖುಷಿಯಿಂದ, ಪ್ರೀತಿಯಿಂದ ಇದ್ದರೆ ಅದೇ ನಮಗೆ ದೊಡ್ಡ ಊರು. ಅದೇ ಪ್ರೇಮದ ಊರಲಿ. ರಂಗಾಯಣ ರಘು ಅವರು ಈ ಚಿತ್ರದ ಕೇಂದ್ರಬಿಂದು. ಅವರು ಒಂದು ವಿಶಿಷ್ಟವಾದ ಪಾತ್ರದಲ್ಲಿ ನಟಿಸಿದ್ದಾರೆ.**
>
> **-ಮನೋಜ್ ಕುಮಾರ್** ನಿರ್ದೇಶಕ

ತಪ್ಪುಗಳನ್ನು ಮಾಡುತ್ತಾ ಜೀವನದ ಪಾಠ ಕಲಿಯುವ ಪಾತ್ರದಲ್ಲಿ ನಾನು ನಟಿಸಿದ್ದೇನೆ. ನನಗೆ ಹಳ್ಳಿಗಾಡಿನ ಕಥೆಗಳು ಎಂದರೆ ಇಷ್ಟ. ಈ ಸಿನಿಮಾದಲ್ಲಿಯೂ ಗ್ರಾಮೀಣ ಸೊಗಡಿನ ಸ್ಟೋರಿ ಇದೆ. ಹಾಗಾಗಿ ನಟಿಸಲು ಸಂತಸದಿಂದ ಸಮ್ಮತಿಸಿದೆ. ನಾನು

ಸಿನಿಮಾದ ಚಿತ್ರೀಕರಣದಲ್ಲಿ ಪಾಲ್ಗೊಂಡು ಕೊನೆಗೆ ನಾನು ಹಳ್ಳಿಯವನೇ ಎನ್ನುವ ಭಾವ ನನ್ನನ್ನು ಆವರಿಸಿತ್ತು ಎಂದು ರಣಗಾಯಣ ರಘು ಸಂತಸದಿಂದ ನುಡಿದರು.

ಪ್ರೇಮದ ಊರಲಿ ಚಿತ್ರವನ್ನು ವೆನಿಲ್ಲಾ ಎಂಟರ್‌ಟೇನ್‌ಮೆಂಟ್ ಹಾಗೂ ಜಾನಕಮ್ಮ ಪ್ರೊಡಕ್ಷನ್‌ನಲ್ಲಿ ಮಮತಾ ದೇವೇಂದ್ರ, ಪ್ರಶಾಂತ್ ಹಾಗೂ ರಮೇಶ್ ನಿರ್ಮಾಣ ಮಾಡಿದ್ದಾರೆ. ಸುನಾದ ಗೌತಮ್ ಸಂಗೀತ ನಿರ್ದೇಶನ, ರಾಜಕಾಂತ್ ಛಾಯಾಗ್ರಹಣ, ಹರ್ಷಿತ್ ಪ್ರಭು ಸಂಕಲನ ಈ ಚಿತ್ರಕ್ಕಿದೆ.

ನ್ಯಾಯಬೆಲೆ ಅಂಗಡಿಯಲಿ ಸಾಮಾಜಿಕ ಕಳಕಳಿ

ಸರ್ಕಾರಿ ನ್ಯಾಯಬೆಲೆ ಅಂಗಡಿ ಶೀರ್ಷಿಕೆಯಲ್ಲಿ ಸಿನಿಮಾ ನಿರ್ಮಾಣವಾಗಿದೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಚಿತ್ರ ತೆರೆಗೂ ಸಿದ್ಧವಾಗಿದೆ. ಸಿನಿಮಾದ ಶೀರ್ಷಿಕೆಯೇ ಹೇಳುವಂತೆ ಇದು ಸರ್ಕಾರಿ ನ್ಯಾಯಬೆಲೆ ಅಂಗಡಿ ಮತ್ತು ಪಡಿತರ ವ್ಯವಸ್ಥೆಯ ಸುತ್ತ ನಡೆಯುವ ಕಥಾಹಂದರ ಚಿತ್ರದಲ್ಲಿದ್ದು, ಗ್ರಾಮೀಣ ಸೊಗಡಿನಲ್ಲಿ ಕಥೆ ಸಾಗುತ್ತದೆ. ಸರ್ಕಾರಿ ನ್ಯಾಯಬೆಲೆ ಅಂಗಡಿ ಚಿತ್ರದಲ್ಲಿ ನಟಿ ರಾಗಿಣಿ ದ್ವಿವೇದಿ ಪಾರ್ವತಿ ಎಂಬ ಗ್ರಾಮೀಣ ಮಹಿಳೆಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ನಟರಾದ ಕುಮಾರ ಬಂಗಾರಪ್ಪ, ದೊಡ್ಡಣ್ಣ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರದ ಪೋಸ್ಟರನ್ನು ಕೇಂದ್ರ ಸಚಿವ ವಿ.ಸೋಮಣ್ಣ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಜನ ಸಾಮಾನ್ಯರು, ಬಡವರು ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಮೂಲಕ ದಿನಸಿ ಮತ್ತು ಆಹಾರ ಸಾಮಾಗ್ರಿಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದೆ. ಆದರೆ, ಈ ವ್ಯವಸ್ಥೆಯಲ್ಲಿರುವ ಕೆಲವು ಲೋಪಗಳಿಂದ ಇದರ ಉದ್ದೇಶ ಪರಿಣಾಮಕಾರಿಯಾಗಿ ಈಡೇರುತ್ತಿಲ್ಲ. ಈಗ ಇದೇ ವಿಷಯವನ್ನು ಸಿನಿಮಾ ರೂಪದಲ್ಲಿ ತೆರೆಗೆ ತರುತ್ತಿದ್ದಾರೆ ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯ ಎಂದು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಇಡೀ ದೇಶದಲ್ಲಿಯೇ ಸರ್ಕಾರಿ ನ್ಯಾಯಬೆಲೆ ಅಂಗಡಿ ಮತ್ತು ಪಡಿತರ ವ್ಯವಸ್ಥೆಯ ಮೇಲೆ ಮೂಡಿಬರುತ್ತಿರುವ ಮೊಟ್ಟ ಮೊದಲ ಸಿನಿಮಾ ಇದಾಗಿದೆ. ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿ ಈ ಸಿನಿಮಾ ಸಾಗುತ್ತದೆ. ಮನರಂಜನೆ ಜತೆಗೆ ಒಂದು ಒಳ್ಳೆಯ ಸಂದೇಶ ಕೂಡ ಈ ಸಿನಿಮಾದಲ್ಲಿದೆ. ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ಏನೇನು ವ್ಯವಹಾರಗಳು, ಅವ್ಯವಹಾರಗಳು ನಡೆಯುತ್ತದೆ ಎಂಬುದನ್ನು ಸಮಾಜಕ್ಕೆ ತೋರಿಸುವಂಥ ಪ್ರಯತ್ನ ಚಿತ್ರದಲ್ಲಿದೆ ಎಂದು ಕುಮಾರ್ ಬಂಗಾರಪ್ಪ ಹೇಳಿದರು.

ಬಿ.ರಾಮಮೂರ್ತಿ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದಿರುವ ಈ ಚಿತ್ರವನ್ನು ಸಾತ್ವಿಕ್ ಪವನ್ ಕುಮಾರ್ ನಿರ್ದೇಶನ ಮಾಡಿದ್ದಾರೆ. ಜಯಶಂಕರ ಟಾಕೀಸ್ ಬ್ಯಾನರಿನಲ್ಲಿ ನಿರ್ಮಾಣವಾಗುತ್ತಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿ ಚಿತ್ರವನ್ನು ತೇಜು ಮೂರ್ತಿ ಮತ್ತು ಪದ್ಮಾವತಿ ಚಂದ್ರಶೇಖರ್ ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರದ ಹಾಡುಗಳಿಗೆ ಅನಂತ್ ಆರ್ಯನ್ ಸಂಗೀತ ಸಂಯೋಜಿಸಿದ್ದಾರೆ. ಮಂಡ್ಯದ ಸುತ್ತಮುತ್ತ ಸುಮಾರು ಐವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಸದ್ಯ ಶೂಟಿಂಗ್ ಮುಗಿಸಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

ವಿಶ್ವವಾಣಿ ಬೆಂಗಳೂರು 04-03-2026 ಬುಧವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ



ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com



ಸಾವಿಗೆ ಸವಾಲು ಹಾಕಿ ಗೆದ್ದ ವಿಜ್ಞಾನಿಗಳು!

‘ಯುರೇಕಾ’ ಎಂದರೆ ‘ನಾನು ಕಂಡುಕೊಂಡೆ’ ಎಂದರ್ಥ. ವಿಜ್ಞಾನದಲ್ಲಿ ಬಹುಕಾಲದ ಸಮಸ್ಯೆಗೆ ಉತ್ತರವೊಂದು ಮಿಂಚಿನಂತೆ ಹೊಳೆಯುವ ಕ್ಷಣವನ್ನು ‘ಯುರೇಕಾ’ ಅಥವಾ ‘ಮಿಂಚಿನ ಹೊಳಹು’ ಎನ್ನಬಹುದು. ಆರ್ಕಿಮಿಡೀಸನು ಪ್ಲವನತೆಯ (ಬಾಯುನ್ಸಿ) ತತ್ತ್ವವನ್ನು ಕಂಡುಹಿಡಿದದ್ದು, ನ್ಯೂಟನ್ ಗುರುತ್ವಾಕರ್ಷಣೆಯ ನಿಯಮವನ್ನು ಕಂಡುಕೊಂಡದ್ದು, ಕೆಕುಲೆ ಬೆಂಜೀನ್ ರಚನೆಯನ್ನು ಕಲ್ಪಿಸಿಕೊಂಡದ್ದು, ಅಲೆಗ್ಸಾಂಡರ್ ಫ್ಲೆಮಿಂಗ್ ಪೆನಿಸಿಲಿನ್ ಅನ್ನು ಗುರುತಿಸಿದ್ದು ಇಂಥ ಮಿಂಚಿನ ಹೊಳಹುಗಳಿಂದಲೇ! ಅಂಥ ಮತ್ತೊಂದು ಹೊಳಹನ್ನು ಈಗ ನೋಡೋಣ.

ಒಬ್ಬ ವಿಜ್ಞಾನಿಯ ಬದುಕಿನಲ್ಲಿ ಯುರೇಕಾ ಕ್ಷಣಗಳು ಕೇವಲ ಆಕಸ್ಮಿಕದಿಂದ ಬರುವುದಿಲ್ಲ. ಅವರು ಆ ವಿಷಯದ ಬಗ್ಗೆ ತಿಂಗಳುಗಟ್ಟಲೆ ಅಥವಾ ವರ್ಷಗಟ್ಟಲೆ ನಿರಂತರವಾಗಿ ಚಿಂತನ-ಮಂಥನವನ್ನು ನಡೆಸಬೇಕಾಗುತ್ತದೆ. ವೇದಕಾಲದ ಋಷಿಗಳ ಹಾಗೆ ಯಾವುದೋ ಒಂದು ಕ್ಷಣದಲ್ಲಿ ಹೇಗೆ ನಿರ್ದಿಷ್ಟ ಮಂತ್ರವು ಸ್ಫುರಿಸುತ್ತದೆಯೋ, ಹಾಗೆಯೇ ವಿಜ್ಞಾನಿಗಳಿಗೂ ಪರಿಹಾರವು ಮಿಂಚಿನಂತೆ ಹೊಳೆಯುತ್ತದೆ. ಅಂಥ ಮಿಂಚಿನ ಹೊಳಹು ‘ಹೃದಯದ ಗತಿನಿಯಂತ್ರಕ’ದ (ಕಾರ್ಡಿಯಾಕ್ ಪೇಸ್‌ಮೇಕರ್) ಆವಿಷ್ಕಾರಕ್ಕೆ ಅನುವು ಮಾಡಿಕೊಟ್ಟ ಕಥೆಯು ರೋಚಕವಾಗಿದೆ.

1956. ವಿಲ್ಸನ್ ಗ್ರೇಟ್‌ಬ್ಯಾಚ್ (1919-2011) ಅಮೆರಿಕದ ಬಫೆಲೋ ವಿಶ್ವವಿದ್ಯಾಲಯದ ಇಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಸಹ ಪ್ರಾಧ್ಯಾಪಕನಾಗಿ (ಅಸಿಸ್ಟೆಂಟ್ ಪ್ರೊಫೆಸರ್) ಆಗಿ ಕೆಲಸವನ್ನು ಮಾಡುತ್ತಿದ್ದರು. ವೇಗವಾಗಿ ಮಿಡಿಯುತ್ತಿರುವ ಹೃದಯದ ಮಿಡಿತವನ್ನು ದಾಖಲಿಸುವಂತಹ ಒಂದು ಆಂದೋಲಕವನ್ನು (ಆಸಿಲೇಟರ್) ರೂಪಿಸುವಂತೆ ದೀರ್ಘಕಾಲಿಕ ರೋಗಗಳ ಸಂಶೋಧನಾ ಸಂಸ್ಥೆಯವರು ಕೇಳಿಕೊಂಡಿದ್ದರು. ಆ ಸಾಧನವನ್ನು ನಿರ್ಮಿಸುವ ಕೆಲಸದಲ್ಲಿ ಗ್ರೇಟ್‌ಬ್ಯಾಚ್ ಮಗ್ನರಾಗಿದ್ದರು.

ಹೊಸ ಆಂದೋಲಕವನ್ನು ಸೃಜಿಸಲು, ವಿವಿಧ ಇಲೆಕ್ಟ್ರಾನಿಕ್ ಬಿಡಿಭಾಗಗಳನ್ನು ಮೇಜಿನ ಮೇಲೆ ಹರಡಿಕೊಂಡಿದ್ದರು. ಆ ಬಿಡಿಭಾಗಗಳನ್ನು ತಾವೇ ಬೆಸುಗೆ (ಸಾಲ್ಡರಿಂಗ್) ಹಾಕಿ ಜೋಡಿಸುತ್ತಿದ್ದರು. ಹೀಗೇ 10,000 ಓಮ್ ನಿರೋಧಕವನ್ನು (ರೆಸಿಸ್ಟರ್) ತೆಗೆದುಕೊಳ್ಳಲೆಂದು ಅಪ್ರಜ್ಞಾಪೂರ್ವಕವಾಗಿ ಕೈಯನ್ನು ಚಾಚಿದರು. ಅವರ ಕೈ 10,000 ಓಮ್ ಇದ್ದ ಪೆಟ್ಟಿಗೆಯ ಒಳಗೆ ಹೋಗುವ ಬದಲು, 1000 ಓಮ್ ಇದ್ದ ಪೆಟ್ಟಿಗೆಯೊಳಗೆ ಹೋಯಿತು. 1000 ಓಮ್ ಮೌಲ್ಯದ ನಿರೋಧಕವನ್ನು ಮಂಡಲದಲ್ಲಿ ಇಟ್ಟು ಬೆಸುಗೆಯನ್ನು ಹಾಕಿದರು. ಆಂದೋಲಕವು ನಿರಂತರವಾಗಿ ‘ಹಂ’ಕಾರವನ್ನು ಮಾಡುವುದನ್ನು ನಿರೀಕ್ಷಿಸಿದ್ದರು. ಆದರೆ ಆಂದೋಲಕವು ತಾಳಬದ್ಧವಾಗಿ ‘ಬೀಪ್.... ಬೀಪ್’ ಎಂದು ಸ್ಪಂದಿಸಲಾರಂಭಿಸಿತು. ಈ ಸ್ಪಂದನವು ಪ್ರತಿ 1.8 ಸೆಕೆಂಡಿಗೆ ಒಂದು ಸಲ ಬೀಪ್ ಶಬ್ದವನ್ನು ಹೊರಡಿಸಿ, 1 ಸೆಕೆಂಡಿನ ಕಾಲ ವಿಶ್ರಾಂತಿಯನ್ನು ತೆಗೆದುಕೊಂಡು ಮತ್ತೆ 1.8 ಸೆಕೆಂಡಿನ ಅವಧಿಯ ಬೀಪ್ ಶಬ್ದವನ್ನು ಹೊರಡಿಸುತ್ತಿತ್ತು. ಈ ಸ್ಪಂದನವು ನಿಯತವಾಗಿ ಹಾಗೂ ತಾಳಬದ್ಧವಾಗಿ ನಿಮಿಷಕ್ಕೆ 60 ಸಲ ಸ್ಪಂದಿಸುತ್ತಿತ್ತು. ಬೇರೆ ಯಾರಾದರೂ ಆಗಿದ್ದರೆ, ‘ತಪ್ಪು ಬಿಡಿಭಾಗವನ್ನು ಜೋಡಿಸಿದ್ದೇನೆ’ ಎಂದು 1000 ಓಮ್ ನಿರೋಧಕವನ್ನು ತೆಗೆದುಹಾಕುತ್ತಿದ್ದರು. ಆದರೆ ಗ್ರೇಟ್‌ಬ್ಯಾಚ್ ಹಾಗೆ ಮಾಡಲಿಲ್ಲ, ಕಾರಣ ಅಂದಿಗೆ ಐದು ವರ್ಷಗಳ ಹಿಂದೆ, ಹೃದಯ ಹಾಗೂ ಹೃದಯ ಮಿಡಿತದ ಬಗ್ಗೆ ಅವರು ಗಳಿಸಿದ್ದ ಅರಿವೇ ಅದಕ್ಕೆ ಕಾರಣವಾಗಿತ್ತು.

● **ಕುರಿ-ಮೇಕೆಗಳೊಡನೆ:** ವೃತ್ತಿಯಲ್ಲಿ ಹಾಗೂ ಇಲೆಕ್ಟ್ರಾನಿಕ್ ವಿಜ್ಞಾನಗಳ ನಡುವೆ ಇದ್ದ ಅಪೂರ್ವ ಸಂಬಂಧವನ್ನು ಗ್ರೇಟ್‌ಬ್ಯಾಚ್ ಗ್ರಹಿಸಿದ್ದರು. ಇದಕ್ಕೆ 1951ರಲ್ಲಿ ಅವರು ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ನಡೆದಿದ್ದ ಘಟನೆಯೇ ಕಾರಣವಾಗಿತ್ತು. 1951ರಲ್ಲಿ ಗ್ರೇಟ್‌ಬ್ಯಾಚ್ ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದರು. ಅಲ್ಲಿ ‘ಕಾರ್ನೆಲ್ ಬಿಹೇವಿಯರ್ ಫಾರ್ಮ್’ನಲ್ಲಿ ಕುರಿ ಮತ್ತು ಮೇಕೆಗಳು ಅಪಾರ ಮಾನಸಿಕ ಒತ್ತಡಕ್ಕೆ ಒಳಗಾದಾಗ, ಅವುಗಳ ಹೃದಯವು ಹೇಗೆ ವರ್ತಿಸುತ್ತದೆ ಎನ್ನುವುದರ ಬಗ್ಗೆ ಸಂಶೋಧನೆಯಲ್ಲಿ ಭಾಗಿಯಾಗಿದ್ದರು. ಹಾಗಾಗಿ ಸೂಕ್ತ ಸಲಕರಣೆಗಳ ನೆರವಿನಿಂದ ಅವುಗಳ ಹೃದಯದ ಪ್ರತಿಕ್ರಿಯೆಯನ್ನು ಅಧ್ಯಯನ ಮಾಡುತ್ತಿದ್ದರು. ಒಂದು ದಿನ ಬಫೆಲೋದಲ್ಲಿದ್ದ ‘ವೆಟೆರನ್ಸ್ ಅಡ್ಮಿನಿಸ್ಟ್ರೇಶನ್ ಹಾಸ್ಪಿಟಲ್’ನಿಂದ ಇಬ್ಬರು ಹೃದಯ ಶಸ್ತ್ರವೈದ್ಯರು, ಡಾ. ವಿಲಿಯಮ್ ಚಾರ್ಡಾಕ್ (1914-2006) ಮತ್ತು ಡಾ. ಆಂಡ್ರ್ಯೂ ಗೇಜ್ (1922-2024) ಬಿಹೇವಿಯರ್ ಫಾರ್ಮ್‌ಗೆ ಬಂದರು. ಮಾನಸಿಕ ಒತ್ತಡದಲ್ಲಿರುವ ಪ್ರಾಣಿಗಳು ಹೇಗೆ ವರ್ತಿಸುತ್ತವೆ ಎನ್ನುವುದನ್ನು ತಿಳಿದುಕೊಳ್ಳುವ ಕುತೂಹಲ ಅವರಲ್ಲಿತ್ತು. ಊಟದ ಸಮಯ. ಗ್ರೇಟ್‌ಬ್ಯಾಚ್ ಮತ್ತು ಇಬ್ಬರು ಶಸ್ತ್ರವೈದ್ಯರು ಊಟಮಾಡುತ್ತಾ ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು; ಆಗ ಹೃದಯದಲ್ಲಿ ಕಂಡುಬರುವ ‘ಸಂಪೂರ್ಣ ವಿದ್ಯುತ್ ವಹನ ರೋಧ’ (ಕಂಪ್ಲೀಟ್ ಹಾರ್ಟ್ ಬ್ಲಾಕ್) ಬಗೆಗಿನ ಮಾತಾಗಿತ್ತು.

● **ಹೃದಯ ವಿದ್ಯುತ್‌ಜನಕ:** ಹೃದಯವು ತನಗೆ ಅಗತ್ಯವಾದ ವಿದ್ಯುತ್ ಉತ್ಪಾದನೆಯನ್ನು ತಾನೇ ಮಾಡಿಕೊಳ್ಳಬೇಕಾಗುತ್ತದೆ ಹಾಗೂ ವಿತರಿಸಿಕೊಳ್ಳಬೇಕಾಗುತ್ತದೆ. ಹೃದಯದಲ್ಲಿ ವಿದ್ಯುತ್ತನ್ನು ಉತ್ಪಾದಿಸಲೆಂದು ಎರಡು ವಿದ್ಯುತ್ ಜನಕ ಅಥವಾ ‘ಜನರೇಟರ್’ ಇವೆ. ಮೊದಲನೆಯದು ಪ್ರಧಾನ ವಿದ್ಯುತ್ ಜನಕ. ಇದನ್ನು ‘ಹೃತ್ಕುಕ್ಷಿ ಗಂಟು’ (ಸೈನೋಏಟ್ರಿಯಲ್ ನೋಡ್, ಎಸ್‌ಎ ನೋಡ್) ಎಂದು ಕರೆಯುವರು. ಎರಡನೆಯದು ಸ್ಟಾಂಡ್-ಬೈ ಜನರೇಟರ್ ಇದನ್ನು ‘ಕರ್ಣಕುಕ್ಷಿ ಗಂಟು’ (ಏಟ್ರಿಯೋವೆಂಟ್ರಿಕ್ಯುಲಾರ್ ನೋಡ್, ಎವಿ ನೋಡ್) ಎನ್ನುವರು. ಈ ವಿದ್ಯುತ್ ಜನಕಗಳು ಉತ್ಪಾದಿಸಿದ ವಿದ್ಯುತ್ತನ್ನು ಹೃದಯದಾದ್ಯಂತ ವಿತರಿಸಲು ‘ಹಿಸ್ ಕಂತೆ’ (ಬಂಡ್ಲ್ ಆಫ್ ಹಿಸ್) ಮತ್ತು ‘ಪರ್ಕಿಂಜೆ ತಂತುಗಳು’ (ಪರ್ಕಿಂಜೆ ಫೈಬರ್ಸ್) ಎಂಬ ವ್ಯವಸ್ಥೆಯಿದೆ. ಸಾಮಾನ್ಯವಾಗಿ ಪ್ರಧಾನ ವಿದ್ಯುತ್ ಜನಕದಲ್ಲಿ ಉತ್ಪಾದನೆಯಾದ ವಿದ್ಯುತ್ ಅಲೆಯು ಎಡ ಹಾಗೂ ಬಲ ಹೃತ್ಕರ್ಣಗಳಿಗೆ ವ್ಯಾಪಿಸುತ್ತದೆ. ಆಗ ಎರಡೂ ಹೃತ್ಕರ್ಣಗಳು ಸಂಕುಚಿಸಿ, ತಮ್ಮಲ್ಲಿರುವ ರಕ್ತವನ್ನು ಎರಡೂ ಹೃತ್ಕುಕ್ಷಿಗಳ ಒಳಗೆ ಪಂಪ್ ಮಾಡುತ್ತವೆ. ವಿದ್ಯುತ್ ಅಲೆಗಳು ಸ್ಟಾಂಡ್-ಬೈ ಜನರೇಟರಿನ ಬಳಿ ಬಂದಾಗ, ಅದು ವಿದ್ಯುತ್ ಅಲೆಗಳನ್ನು ಸುಮಾರು 0.1 ಸೆಕೆಂಡುಗಳ ಕಾಲ ತಡೆಹಿಡಿದು, ನಂತರ ‘ಹಿಸ್ ಕಂತೆ’ಯ ಮೂಲಕ, ‘ಪರ್ಕಿಂಜೆ ತಂತು’ಗಳ ಮೂಲಕ ಇಡೀ ಹೃದಯದ ಸ್ನಾಯುಗಳಿಗೆ ವಿದ್ಯುತ್ತನ್ನು ಪೂರೈಸುತ್ತದೆ. ಆಗ ಹೃತ್ಕುಕ್ಷಿಗಳು ಸಂಕುಚಿಸಿ, ರಕ್ತವನ್ನು ಪಂಪ್ ಮಾಡುತ್ತವೆ. ಈ ಪ್ರಕ್ರಿಯೆಯು ನಿಮಿಷಕ್ಕೆ 40-60 ಸಲ ನಡೆಯುತ್ತದೆ.

ಸಂಪೂರ್ಣ ವಿದ್ಯುತ್ ವಹನ ನಿರ್ಬಂಧದಲ್ಲಿ ಪ್ರಧಾನ ಜನಕದಲ್ಲಿ ಉತ್ಪಾದನೆಯಾದ ವಿದ್ಯುತ್ತು, ತನ್ನ ಅಲೆಗಳನ್ನು ಎರಡು ಹೃತ್ಕರ್ಣಗಳಲ್ಲಿ ಹರಿಯಬಿಟ್ಟು, ಎರಡು ಹೃತ್ಕುಕ್ಷಿಗಳ ಬಳಿ ಬಂದಾಗ, ಪೂರ್ಣ ಸ್ಥಗಿತವಾಗುತ್ತದೆ. ಹೃದಯವು ಆರೋಗ್ಯವಾಗಿಯೇ ಇರುತ್ತದೆ. ಆದರೆ ವಿದ್ಯುತ್ ವಹನ ಮಾತ್ರ ಪೂರ್ಣ ನಿಂತುಹೋಗಿರುತ್ತದೆ. ಈಗ ವಿದ್ಯುತ್ ಹೃತ್ಕುಕ್ಷಿಯೊಳಗೆ ಹರಿಯಬೇಕಾದರೆ ಒಂದು ಸಣ್ಣ ವಿದ್ಯುತ್ ಘಾತ ಬೇಕಾಗುತ್ತದೆ. ಈ ಘಾತವನ್ನು ಹೊರಗಿನಿಂದ ಪೂರೈಸಬೇಕಾಗುತ್ತದೆ. ಇದನ್ನು ‘ಬಾಹ್ಯ ಗತಿನಿಯಂತ್ರಕ’ (ಎಕ್ಸ್‌ಟರ್ನಲ್ ಪೇಸ್‌ಮೇಕರ್) ಎಂದು ಕರೆಯುತ್ತಿದ್ದರು.

ಈ ಗತಿನಿಯಂತ್ರಕಗಳು ಒಂದು ಟೆಲಿವಿಷನ್ ಸೆಟ್‌ನಷ್ಟು ದೊಡ್ಡದಿದ್ದವು. ಅದು ನೀಡುವ ಘಾತವು ಉಗ್ರಪ್ರಮಾಣದಲ್ಲಿದ್ದು, ರೋಗಿಗೆ ಅಪಾರ ನೋವನ್ನು ಕೊಡುತ್ತಿತ್ತು. ಅನೇಕ ಸಲ ಘಾತವನ್ನು ನೀಡಿದ ಸ್ಥಳದಲ್ಲಿ ಚರ್ಮವು ಸುಟ್ಟುಹೋಗುತ್ತಿತ್ತು. ನಿಗದಿತ ಪ್ರಮಾಣದ ಅತ್ಯಲ್ಪ ವಿದ್ಯುತ್ ಘಾತವನ್ನು ಇವು ನೀಡಲಾರದಾಗಿದ್ದವು. ಒಂದು ವೇಳೆ ಯಾವುದಾದರೂ ಕಾರಣದಿಂದ ವಿದ್ಯುತ್ ಸರಬರಾಜು ನಿಂತರೆ, ಆ ವ್ಯಕ್ತಿ ಸಾಯುವ ಸಾಧ್ಯತೆಯು ಹೆಚ್ಚಾಗಿರುತ್ತಿತ್ತು. ಹಾಗಾಗಿ ‘ಹೃದಯದ ಒಳಗೇ ಅಳವಡಿಸಬಹುದಾದ, ಅಗತ್ಯ ಪ್ರಮಾಣದ ವಿದ್ಯುತ್ತನ್ನು ಮಾತ್ರ ಪೂರೈಸುವ, ಸುರಕ್ಷಿತ ಹಾಗೂ ಸ್ವಯಂಚಾಲಿತ ಉಪಕರಣವು ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಅವರೆಲ್ಲ ಬದುಕಿಕೊಳ್ಳುತ್ತಿದ್ದರು...’ ಹೀಗೆ ಇಬ್ಬರೂ ಶಸ್ತ್ರವೈದ್ಯರು ಗ್ರೇಟ್‌ಬ್ಯಾಚ್ ಬಳಿ ಮಾತುಕತೆಯನ್ನಾಡಿದ್ದರು.

● **ಮಿಂಚಿನ ಹೊಳಹು:** ಗ್ರೇಟ್‌ಬ್ಯಾಚ್ ಆಗಷ್ಟೇ ರೂಪಿಸಿದ್ದ ಆಂದೋಲಕವು ನಿಯತವಾಗಿ ಸ್ಪಂದಿಸುತ್ತಿತ್ತು. ನಿಮಿಷಕ್ಕೆ 60 ಸಲ! ಆಗ ತಕ್ಷಣವೇ ಐದು ವರ್ಷಗಳ ಹಿಂದೆ ಇಬ್ಬರು ಶಸ್ತ್ರವೈದ್ಯರು ವಿವರಿಸಿದ್ದ ಹೃದಯ ವಿದ್ಯುತ್ ವ್ಯವಸ್ಥೆಯ ಮಾಹಿತಿಯೆಲ್ಲ ಕಣ್ಣ ಮುಂದೆ ಬಂದಿತು. ಪ್ರಧಾನ ವಿದ್ಯುತ್ ಜನಕವು ನಿಮಿಷಕ್ಕೆ 60 ಸಲ ವಿದ್ಯುತ್ತಿನ ಅಲೆಗಳನ್ನು ಹೊರಡಿಸುತ್ತಿತ್ತು. ಇಲ್ಲಿಯೂ ಈ ಆಂದೋಲಕವೂ ನಿಮಿಷಕ್ಕೆ 60 ಸಲ ವಿದ್ಯುತ್ತನ್ನು ಹರಿಸಿ, ನಡುವೆ 1 ಸೆಕೆಂಡಿನ ಕಾಲ ವಿಶ್ರಾಂತಿಯನ್ನು ಪಡೆಯುತ್ತಿತ್ತು. ಅಂದರೆ ಆ ಶಸ್ತ್ರವೈದ್ಯರಿಬ್ಬರೂ ನಿರೀಕ್ಷಿಸಿದ್ದ ವಿದ್ಯುತ್ ಜನಕವನ್ನು ತಾನು ಈಗಷ್ಟೇ ರೂಪಿಸಿದ್ದೇನೆ ಎಂಬ ಅರಿವು ಅವರಿಗೆ ಮಿಂಚಿನಂತೆ ಹೊಳೆಯಿತು.

● **ಕೈದೋಟದ ಕೊಟ್ಟಿಗೆ:** ಗ್ರೇಟ್‌ಬ್ಯಾಚ್ ಅವರ ಮುಂದೆ ಎರಡು ಸವಾಲುಗಳಿದ್ದವು. ಮೊದಲನೆಯದು ಹೃದಯದ ಒಳಗೆ ಅಳವಡಿಸಬಹುದಾದಷ್ಟು ಚಿಕ್ಕ ಸಾಧನವನ್ನು ರೂಪಿಸಬೇಕಾಗಿತ್ತು. ಎರಡನೆಯದು ಬ್ಯಾಟರಿಯನ್ನೂ ಒಳಗೊಂಡಿರುವ ಪೇಸ್‌ಮೇಕರ್, ಹೃದಯಕ್ಕೆ ಯಾವುದೇ ರೀತಿಯಲ್ಲಿ ಹಾನಿಯನ್ನು ಉಂಟುಮಾಡದೆ ಸುರಕ್ಷತೆಯ ಭರವಸೆಯನ್ನು ನೀಡಬೇಕಿತ್ತು.

1958. ಗ್ರೇಟ್‌ಬ್ಯಾಚ್ ಪುಟ್ಟದಾಗಿರುವ, ಸುರಕ್ಷಿತವಾಗಿರುವ ಹಾಗೂ ಹೃದಯದ ಒಳಗೆ ಅಳವಡಿಸಬಹುದಾದ ಗತಿನಿಯಂತ್ರಕವನ್ನು ರೂಪಿಸಬೇಕೆಂದು ತೀರ್ಮಾನಿಸಿದರು. ತಮ್ಮ ಅಧ್ಯಾಪಕ ವೃತ್ತಿಗೆ ರಾಜೀನಾಮೆಯನ್ನು ನೀಡಿದರು. ತಮ್ಮ ಬ್ಯಾಂಕ್ ಖಾತೆಯನ್ನು ನೋಡಿದರು. ಬರೀ 2,000 ಡಾಲರುಗಳ ಮಾತ್ರ ಇದ್ದವು. ಆದರೂ ಎದೆಗುಂದಲಿಲ್ಲ. ತಮ್ಮ ಮನೆಯ ಹಿಂದಿದ್ದ ಕೈದೋಟದ ಕೊಟ್ಟಿಗೆಯನ್ನೇ (ಪಾಟಿಂಗ್ ಶೆಡ್- ಹೂವಿನ ಕುಂಡಗಳು ಹಾಗೂ ಇತರ ಕೈದೋಟದ ವಸ್ತುಗಳಿರುವ ಮರದಿಂದ ನಿರ್ಮಾಣವಾದ ಪುಟ್ಟ ರಚನೆ) ನೂತನ ಪ್ರಯೋಗಾಲಯವನ್ನಾಗಿ ಪರಿವರ್ತಿಸಿಕೊಂಡರು. ಮನುಕುಲದ ಮಹಾಸೇವೆಯನ್ನು ಮಾಡುವ ಸಂಶೋಧನೆಯ ಅಭಿಯಾನವು, ಕೇವಲ 2000 ಡಾಲರುಗಳ ಬಂಡವಾಳದೊಡನೆ, ಒಂದು ಕೈದೋಟದ ಶೆಡ್ಡಿನಲ್ಲಿ ಆರಂಭವಾಯಿತು ಎಂದರೆ, ಅದನ್ನು ನಂಬಲು ಕಷ್ಟವಾಗುತ್ತದೆ. ಆದರೆ ಇದು ವಿಚಿತ್ರವಾದರೂ ಸತ್ಯವಾಗಿತ್ತು.

ಕೈದೋಟದ ಸಸಿಗಳ ಕುಂಡಗಳ ನಡುವೆ, ಗೊಬ್ಬರಚೀಲಗಳನ್ನು ಪಕ್ಕಕ್ಕೆ ಸರಿಸಿ, ಹಾರೆ, ಗುದ್ದಲಿ, ಪಿಕಾಸಿಗಳಂಥ ಉಪಕರಣಗಳನ್ನು ಮೂಲೆಗೆ ಸೇರಿಸಿ, ನಡುವೆ ಒಂದು ಮೇಜನ್ನು ಇರಿಸುವಷ್ಟು ಸ್ಥಳವನ್ನು ರೂಪಿಸಿಕೊಂಡರು. ಅಲ್ಲಿಯೇ ಪುಟ್ಟ ಪೇಸ್‌ಮೇಕರ್ ನಿರ್ಮಾಣದ ಕೆಲಸವನ್ನು ಆರಂಭಿಸಿದರು. ಅವರು ಎಪಾಕ್ಸಿ ರೆಸಿನ್ ಎಂಬ ವಸ್ತುವಿನಿಂದ ತಯಾರಾದ ಒಂದು ಪುಟ್ಟ ಪೆಟ್ಟಿಗೆಯನ್ನು ರೂಪಿಸಿ, ಅದರ ಒಳಗೆ ಅದಕ್ಕಿಂತಲೂ ಪುಟ್ಟದಾದ ಪೇಸ್‌ಮೇಕರ್ ಸಾಧನವನ್ನು ಅಳವಡಿಸಿದರು. ಈ ಸಾಧನವು ಕೆಲಸ ಮಾಡುತ್ತದೆಯೇ ಎನ್ನುವುದನ್ನು ಪರೀಕ್ಷಿಸಿ ನೋಡಬೇಕಾಗಿತ್ತು. ಹಾಗಾಗಿ ಅವರು ಇಬ್ಬರು ಹೃದಯ ಶಸ್ತ್ರಚಿಕಿತ್ಸಾ ತಜ್ಞರನ್ನು ಭೇಟಿ ಮಾಡಿದರು. ತಮ್ಮ ನೂತನ ಗತಿನಿಯಂತ್ರಕವನ್ನು ತೋರಿಸಿದರು. ಇದನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲು ಸಾಧ್ಯವೇ ಎಂದು ಕೇಳಿದರು.

● **ಪ್ರಾಣಿ ಪ್ರಯೋಗ:** ಹೃದಯ ಶಸ್ತ್ರವೈದ್ಯರಿಬ್ಬರಿಗೂ ಕುತೂಹಲವುಂಟಾಯಿತು. ಆದರೆ ಅವರಿಗೆ ಅವರದ್ದೇ ಆದ ಅನುಮಾನಗಳಿದ್ದವು. ಮಿಗಿಲಾಗಿ ಶಸ್ತ್ರಚಿಕಿತ್ಸಾ ವಿಧಿವಿಧಾನದ ನಿರೀಕ್ಷಿತ ಹಾಗೂ ಅನಿರೀಕ್ಷಿತ ಸವಾಲುಗಳಿದ್ದವು. ಹಾಗಾಗಿ ಅವರು ಈ ನೂತನ ಗತಿನಿಯಂತ್ರಕವನ್ನು ನೇರವಾಗಿ ಮನುಷ್ಯರ ಮೇಲೆ ಪ್ರಯೋಗಿಸುವ ಬದಲು, ಮೊದಲು ಒಂದು ಸಲ ಪ್ರಾಣಿಯ ಮೇಲೆ ಪರೀಕ್ಷಿಸೋಣವೆಂದು ನಿರ್ಧರಿಸಿದರು.

ಮೇ 7, 1958. ಬಫೆಲೋ ವೆಟರನ್ಸ್ ಅಡ್ಮಿನಿಸ್ಟ್ರೇಷನ್ ಹಾಸ್ಪಿಟಲ್. ಇಬ್ಬರು ಹೃದಯ ಶಸ್ತ್ರವೈದ್ಯರು ಹಾಗೂ ಒಬ್ಬ ಇಲೆಕ್ಟ್ರಿಕ್ ಎಂಜಿನಿಯರ್. ಆಸ್ಪತ್ರೆಯ ಆಪರೇಷನ್ ಥಿಯೇಟರಿಗೆ ಒಂದು ನಾಯಿಯನ್ನು ತಂದರು. ಅದಕ್ಕೆ ಅರಿವಳಿಕೆಯನ್ನು ನೀಡಿದರು. ಅದರ ಎದೆಗೂಡನ್ನು ಛೇದಿಸಿ, ಗತಿನಿಯಂತ್ರಕವನ್ನು ಹೃದಯಕ್ಕೆ ಸಮೀಪದಲ್ಲಿ ಎಲ್ಲಿಡಬಹುದೆಂದು ಯೋಚಿಸಿದರು. ಗ್ರೇಟ್‌ಬ್ಯಾಚ್ ರೂಪಿಸಿದ ಗತಿನಿಯಂತ್ರಕದ ಗಾತ್ರವು ಒಂದು ಪಾಕೆಟ್ ವಾಚಿನಷ್ಟು ಮಾತ್ರ ಇತ್ತು. ಹಾಗಾಗಿ ಗತಿನಿಯಂತ್ರಕವನ್ನು ಅಳವಡಿಸುವುದು ಅಷ್ಟು ಕಷ್ಟವಾಗಲಿಲ್ಲ. ನೂತನ ಗತಿನಿಯಂತ್ರಕವು ವಿದ್ಯುತ್ತನ್ನು ಹರಿಸಲಾರಂಭಿಸಿತು. ನಾಯಿಯ ಹೃದಯವು ಹರಿಸುತ್ತಿದ್ದ ಸಹಜ ವಿದ್ಯುತ್ ಅಲೆಗಳು ಸ್ಥಗಿತವಾದವು. ಅಳವಡಿಸಿದ್ದ ಗತಿನಿಯಂತ್ರಕವು ಕರಾರುವಾಕ್ಕಾಗಿ ತನ್ನ ವಿದ್ಯುತ್ ಅಲೆಗಳನ್ನು ಹರಿಸಲಾರಂಭಿ ಸಿತು. ಅದು ಮಾನಿಟರಿನ ಪರದೆಯ ಮೇಲೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಮಾನವನ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ಎದೆಗೂಡಿನಲ್ಲಿದ್ದ ಪುಟ್ಟ ಸಾಧನವೊಂದು ಹೃದಯದ ಕೆಲಸ ಕಾರ್ಯಗಳನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಪಡೆದಿತ್ತು. ಮೂವರಿಗೂ ತುಂಬಾ ಸಂತೋಷವಾಯಿತು. ಆದರೆ, ನಾಯಿಯಲ್ಲಿ ಯಶಸ್ವಿಯಾದ ಪ್ರಯೋಗವು ಮನುಷ್ಯರಲ್ಲೂ ಯಶಸ್ವಿಯಾಗಬೇಕೆಂಬ ನಿಯಮವೇನೂ ಇಲ್ಲವಲ್ಲ!

● **ಮಾನವ ಮೈಲಿಗಲ್ಲು:** 1960ರ ಏಪ್ರಿಲ್ 15. 77 ವರ್ಷದ ಹಿರಿಯನಿಗೆ ಸಂಪೂರ್ಣ ವಿದ್ಯುತ್ ವಹನ ನಿರ್ಬಂಧವು ಉಂಟಾಗಿತ್ತು. ಅವನು ಹಾಸಿಗೆಯನ್ನು ಹಿಡಿದಿದ್ದ. ಮೃತ್ಯುಮುಖನಾಗಿದ್ದ. ಯಾವ ಕ್ಷಣದಲ್ಲಿ ಬೇಕಾದರೂ ಸಾಯಬಹುದಾಗಿತ್ತು. ಆಗ ರೋಗಿಯ ಮನೆಯವರನ್ನು ಹಾಗೂ ಆಸ್ಪತ್ರೆಯ ಆಡಳಿತವರ್ಗವನ್ನೂ ಒಪ್ಪಿಸಿ, ಗ್ರೇಟ್‌ಬ್ಯಾಚ್ ನಿರ್ಮಿಸಿದ್ದ ನೂತನ ಗತಿನಿಯಂತ್ರಕವನ್ನು ಆ ಹಿರಿಯನ ಹೃದಯದ ಒಳಗೆ ಅಳವಡಿಸಿದರು. ಆಗ ಆ ಹಿರಿಯನ ಹೃದಯವು ಸಂಗೀತಗಾರನ ಲಯವನ್ನು ನಿಖರವಾಗಿ ಗುರುತಿಸುವ ‘ಲಯಮಾಪಕ’ (ಮೆಟ್ರೋನೀಮ್) ಯಂತ್ರದಂತೆ ಕರಾರುವಾಕ್ಕಾಗಿ ಮಿಡಿಯಲಾರಂಭಿಸಿತು. ಸಾವಿನ ಬಾಯಲ್ಲಿದ್ದ ಹಿರಿಯ, ಗ್ರೇಟ್‌ಬ್ಯಾಚ್ ರೂಪಿಸಿದ್ದ ಸಾಧನದ ಕಾರಣ, ಸಾವಿನಿಂದ ಪೂರ್ಣ ಪಾರಾಗಿದ್ದ! ಆ ಹಿರಿಯ ನೂತನ ಗತಿನಿಯಂತ್ರಕದೊಡನೆ 18 ತಿಂಗಳ ಕಾಲ ಬದುಕಿದ್ದ. ಗ್ರೇಟ್‌ಬ್ಯಾಚ್ ರೂಪಿಸಿದ್ದ ಗತಿನಿಯಂತ್ರಕದಲ್ಲಿದ್ದ ಬ್ಯಾಟರಿ 2 ವರ್ಷಗಳ ಕಾಲ ಮಾತ್ರ ಬಾಳಿಕೆ ಬರುತ್ತಿತ್ತು. ನಂತರ ಶಸ್ತ್ರಚಿಕಿತ್ಸೆಯಿಂದ ಗತಿನಿಯಂತ್ರಕವನ್ನು ಹೊರತೆಗೆದು, ಹೊಸ ಬ್ಯಾಟರಿಯನ್ನು ಹಾಕಿ, ಮತ್ತೆ ಹೃದಯದ ಒಳಗೆ ಅಳವಡಿಸಬೇಕಿತ್ತು. ಕೊನೆಗೆ ಲಿಥಿಯಂ-ಅಯೋಡಿನ್ ಬ್ಯಾಟರಿಗಳ ಆವಿಷ್ಕಾರವಾದವು. ಗ್ರೇಟ್‌ಬ್ಯಾಚ್ ಈ ಬ್ಯಾಟರಿಗಳ ಹಕ್ಕುಗಳನ್ನು ಕೊಂಡು, ರೂಪಿಸಿದ ಗತಿನಿಯಂತ್ರಕಗಳು ದಶಕಗಳ ಕಾಲ ಬಾಳಿಕೆಗೆ ಬರಲಾರಂಭಿಸಿದವು.

● **ಮೌಢ್ಯ:** ಮಾನವನ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ಒಂದು ವಿದ್ಯುನ್ಮಾನ ಉಪಕರಣವು, ಮನುಷ್ಯನ ಒಡಲಿನೊಳಗೆ ಸ್ವಸ್ಥವಾಗಿ ಕುಳಿತ್ತಿತ್ತು. ಈಗಲೋ ಆಗಲೋ ಸಾಯಬೇಕಾಗಿದ್ದ ಮನುಷ್ಯನು 18 ತಿಂಗಳ ಕಾಲ ಬದುಕಿದ್ದನೆಂದರೆ, ಅದು ಅಂದಿನ ಕಾಲಕ್ಕೆ ‘ಪವಾಡ’ಸದೃಶವಾಗಿತ್ತು; ಹಾಗೆಯೇ ಯಾರೂ ನಿರೀಕ್ಷಿಸದೇ ಇದ್ದ ಮೌಢ್ಯವೊಂದರ ಆರ್ಭಟಕ್ಕೂ ಅದು ಕಾರಣವಾದದ್ದು ವಿಪರ್ಯಾಸಕರ. 1960ರ ದಶಕದಲ್ಲಿ ‘ಹೃದಯದಲ್ಲಿ ಆತ್ಮವಿರುತ್ತದೆ, ಹೃದಯವು ಸ್ಥಗಿತವಾದಾಗ ಆತ್ಮವು ಹೃದಯವನ್ನು ತ್ಯಜಿಸುವುದರಿಂದ ಸಾವು ಸಂಭವಿಸುತ್ತದೆ’ ಇತ್ಯಾದಿ ನಂಬಿಕೆಗಳಿದ್ದವು. ಈಗ ಅಂಥ ಪರಮಪವಿತ್ರವಾದ ಆತ್ಮವಿರುವ ಹೃದಯದೊಳಗೇ ವಿದ್ಯುನ್ಮಾನ ಸಾಧನವನ್ನು ಇಟ್ಟರೆ, ಅದು ಆತ್ಮಕ್ಕೆ ತೊಂದರೆಯನ್ನುಂಟು ಮಾಡಬಹುದು; ಬ್ಯಾಟರಿಯ ವಿದ್ಯುತ್ತು ಆತ್ಮವನ್ನು ‘ಕದಿಯಬಹುದು’ ಆಗ ಮನುಷ್ಯನಲ್ಲಿ ಮಾನವೀಯತೆಯು ಕಡಿಮೆಯಾಗಬಹುದು... ಹೀಗೆಲ್ಲ ಗಾಳಿಸುದ್ದಿಗಳು ಹರಡಲಾರಂಭಿಸಿದವು. ಈ ಗಾಳಿಸುದ್ದಿಗಳಿಂದ ಗ್ರೇಟ್‌ಬ್ಯಾಚ್ ವಿಚಲಿತರಾಗದಿದ್ದರೂ, ‘ಮನುಕುಲಕ್ಕೆ ಇಂಥ ಒಂದು ಕಾಣಿಕೆಯನ್ನು ನೀಡುವ ಭಾಗ್ಯವನ್ನು ಆ ದೇವರು ನನಗೆ ಕರುಣಿಸಿದ್ದಾನೆ’ ಎಂದೇ ನಂಬಿದ್ದರು.

● **ಜೀವದಾಯಕ:** ಗ್ರೇಟ್‌ಬ್ಯಾಚ್ ರೂಪಿಸಿದ ಗತಿನಿಯಂತ್ರಕಗಳು ಇಂದು ಸಾಕಷ್ಟು ಸುಧಾರಿಸಿವೆ. ಒಂದು ಕ್ಯಾಪ್ಸೂಲಿನಷ್ಟು ಕಿರಿದಾದ ಗತಿನಿಯಂತ್ರಕಗಳು ದೊರೆಯುತ್ತಿವೆ. ಗತಿನಿಯಂತ್ರಕವನ್ನು ಹಾಕಿಕೊಂಡಿರುವ ವ್ಯಕ್ತಿಯ ದೈಹಿಕ-ಮಾನಸಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಹೃದಯದ ಮಿಡಿತದ ಗತಿಯನ್ನು ಕಾದಿಡುವ ಗತಿನಿಯಂತ್ರಕಗಳು ಈಗ ಲಭ್ಯವಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ರೋಗಿಯ ಹೃದಯದೊಳಗಿರುವ ಗತಿನಿಯಂತ್ರಕವು ತನ್ನ ಆರೋಗ್ಯ-ಅನಾರೋಗ್ಯದ ಬಗ್ಗೆ ಬ್ಲೂಟೂತ್ ಮೂಲಕ ಸದಾ ಮಾಹಿತಿಯನ್ನು ವೈದ್ಯರ ಮೊಬೈಲಿಗೆ ರವಾನಿಸುತ್ತಿರುತ್ತದೆ. ಗತಿನಿಯಂತ್ರಕವು ಸೋಲುತ್ತಿರುವ ಸುದ್ದಿಯು ರೋಗಿಗೆ ಗೊತ್ತಾಗುವುದಕ್ಕೆ ಮೊದಲೇ ವೈದ್ಯರಿಗೆ ಗೊತ್ತಾಗುತ್ತದೆ. ಕೂಡಲೇ ವೈದ್ಯರು ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

ಗ್ರೇಟ್‌ಬ್ಯಾಚ್ ಮಾಡಿರುವ ಸಂಶೋಧನೆಯು ‘ನ್ಯೂರೋಮಾಡ್ಯುಲೇಶನ್’ ಎಂಬ ಜ್ಞಾನಶಾಖೆಗೆ ಜನ್ಮವನ್ನು ನೀಡಿದೆ. ವಿದ್ಯುತ್ ಅಲೆಗಳನ್ನು ಹಾಯಿಸಿ, ಪಾರ್ಕಿನ್ಸನ್ ಕಾಯಿಲೆಯನ್ನು ನಿಯಂತ್ರಿಸುವ ಹಾಗೂ ಅಪಸ್ಮಾರವನ್ನು ತಡೆಗಟ್ಟುವ ಮತ್ತು ದೀರ್ಘಕಾಲದ ನೋವನ್ನು ಗುಣಪಡಿಸುವ ಪ್ರಯತ್ನಗಳು ನಡೆಯುತ್ತಿವೆ.

● ಸತ್ ಶ್ರೀ ಸುಬ್ರಹ್ಮಣ್ಯ ಶಿವಬಾಲನ್

ಆಂತರಿಕ ಸ್ವಾತಂತ್ರ್ಯ: ಪ್ರತಿಕ್ರಿಯೆ ಮತ್ತು ಚಿಂತನೆಗೆ ಮೀರಿದ ಮಾರ್ಗ

ನಿಜವಾದ ಜ್ಞಾನಿಯು ಇತರರ ಸ್ವಾತಂತ್ರ್ಯದಲ್ಲಿ ಎಂದಿಗೂ ಹಸ್ತಕ್ಷೇಪ ಮಾಡುವುದಿಲ್ಲ. ಈ ಸಿದ್ಧಾಂತವು ಆಧ್ಯಾತ್ಮಿಕ ಮಾರ್ಗದಲ್ಲಿ ಅತ್ಯಂತ ಮುಖ್ಯವಾದ ಸತ್ಯಗಳಲ್ಲಿ ಒಂದನ್ನು ಬಹಿರಂಗಪಡಿಸುತ್ತದೆ. ಪ್ರತಿಯೊಬ್ಬರೂ ತಮ್ಮದೇ ಆದ ಪ್ರಯಾಣದಲ್ಲಿದ್ದಾರೆ, ಆ ಆಯ್ಕೆಗಳು ನಮ್ಮ ಮೇಲೆ ನೇರವಾಗಿ ಪರಿಣಾಮ ಬೀರಿದರೂ ತಮ್ಮದೇ ಆಗಿರುವ ಆಯ್ಕೆಗಳನ್ನು ಮಾಡುವ ಸಹಜ ಹಕ್ಕನ್ನು ಅವರು ಹೊಂದಿದ್ದಾರೆ.

ಈ ತಿಳಿವಳಿಕೆಯನ್ನು ಅಂಗೀಕರಿಸುವುದು ಯಾವಾಗಲೂ ಸುಲಭವಲ್ಲ. ನಮ್ಮ ಸ್ವಾಭಾವಿಕ ಪ್ರೇರಣೆ ಸಾಮಾನ್ಯವಾಗಿ ಇತರರನ್ನು ಸರಿಪಡಿಸುವುದು, ಫಲಿತಾಂಶಗಳನ್ನು ನಿಯಂತ್ರಿಸುವುದು ಅಥವಾ ನಮ್ಮ ಇಚ್ಛೆಯ ಪ್ರಕಾರ ಸನ್ನಿವೇಶಗಳನ್ನು ರೂಪಿಸುವುದು ಆಗಿರುತ್ತದೆ. ಆದರೆ ನಾವು ಹಿಂದೆ ಸರಿದು ತೀರ್ಪು ಅಥವಾ ಒತ್ತಡ ಇಲ್ಲದೆ ಜೀವನವನ್ನು ತೆರೆಯಲು ಅವಕಾಶ ನೀಡಿದಾಗ ನಿಜವಾದ ಬೆಳವಣಿಗೆ ಆಗುತ್ತದೆ. ನಮ್ಮೊಳಗೆ ಸ್ವಾತಂತ್ರ್ಯವನ್ನು ಅನುಭವಿಸಲು ಪ್ರಾರಂಭಿಸಿದಾಗ, ನಾವು ಇತರರ ಸ್ವಾತಂತ್ರ್ಯವನ್ನು ನಿಜವಾಗಿ ಗೌರವಿಸುತ್ತೇವೆ.

● **ಆಂತರಿಕ ಸ್ವಾತಂತ್ರ್ಯದ ಅಡಿಪಾಯ**

ಆಂತರಿಕ ಸ್ವಾತಂತ್ರ್ಯಕ್ಕೆ ಒಂದು ಸರಳ ಉದಾಹರಣೆ: ಒಮ್ಮೆ ಒಬ್ಬ ಆಧ್ಯಾತ್ಮಿಕ ಅನ್ವೇಷಕನು ಊರಿನಿಂದ ಊರಿಗೆ ಪ್ರಯಾಣಿಸುತ್ತಿದ್ದನು. ಒಂದು ಮಧ್ಯಾಹ್ನ ಸೂರ್ಯನ ಕೆಳಗೆ ಹಲವು ಗಂಟೆಗಳ ಕಾಲ ನಡೆದ ನಂತರ ಅವನಿಗೆ ತುಂಬಾ ಹಸಿವಾಗಲು ಪ್ರಾರಂಭಿಸಿತು. ಅವನು ಒಂದು ಸಣ್ಣ ಮನೆಯ ಬಳಿಗೆ ಹೋದನು. ಅಲ್ಲಿ ಒಬ್ಬ ವ್ಯಕ್ತಿ ನೆರಳಿನಲ್ಲಿ ಕುಳಿತಿದ್ದನು. ಅವನ ಹತ್ತಿರ ‘‘ದಯವಿಟ್ಟು ನನಗೆ ಸ್ವಲ್ಪ ಆಹಾರವನ್ನು ನೀಡಬಹುದೇ, ಬೆಳಗ್ಗೆಯಿಂದ ನಾನು ಏನೂ ತಿನ್ನಲಿಲ್ಲ’’ ಎಂದು ಸೌಮ್ಯವಾಗಿ ಕೇಳಿದನು. ಆಗ ಆ ವ್ಯಕ್ತಿ ಇವನನ್ನು ಸೂಕ್ಷ್ಮವಾಗಿ ನೋಡಿ ‘‘ಇಂದು ಇಲ್ಲ’’ ಎಂದು ಉತ್ತರಿಸಿದನು. ಮರುಮಾತಿಲ್ಲದೆ ಹಿಂದಿರುಗಿದ ಅನ್ವೇಷಕನು ಒಂದು ಕ್ಷಣ ಮೌನವಾಗಿ ನಿಂತನು. ನಂತರ ತನ್ನ ತಲೆಯನ್ನು ಬಾಗಿಸಿ ಆ ಉತ್ತರವನ್ನು ಯಾವುದೇ ದ್ವೇಷವಿಲ್ಲದೆ ಶಾಂತವಾಗಿ ಸ್ವೀಕರಿಸಿದನು. ತನಗೆ ಕೇಳುವ ಸ್ವಾತಂತ್ರ್ಯವಿದ್ದಂತೆ, ಆ ವ್ಯಕ್ತಿಗೆ ‘ಇಲ್ಲ’ ಎಂದು ಹೇಳುವ ಸ್ವಾತಂತ್ರ್ಯವಿದೆ ಎಂದು ಅರ್ಥಮಾಡಿಕೊಳ್ಳುವ ಅರಿವು ಅವನಲ್ಲಿತ್ತು.

ಇಂಥ ಕ್ಷಣಗಳಲ್ಲಿಯೇ ನಿಜವಾದ ಅಭ್ಯಾಸ ಪ್ರಾರಂಭವಾಗುತ್ತದೆ. ನಮ್ಮ ಜೀವನದಲ್ಲಿಯೂ ಈ ರೀತಿಯ ಸರಳ ಕ್ಷಣಗಳು ನಾವು ನಿಜವಾಗಿ ಎಷ್ಟು ಬೆಳೆದಿದ್ದೇವೆ ಎಂಬುದನ್ನು ಬಹಿರಂಗಪಡಿಸುತ್ತವೆ. ಇತರರು ಹೇಗೆ ವರ್ತಿಸಬೇಕು ಎಂಬ ನಮ್ಮ ನಿರೀಕ್ಷೆಗಳನ್ನು ಬಿಟ್ಟುಬಿಟ್ಟಾಗ ನಾವು ನಿಜವಾಗಿ ಎಷ್ಟು ಮುಕ್ತರಾಗಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ಈ ಅನುಭವಗಳು ನಮ್ಮ ಆಧ್ಯಾತ್ಮಿಕ ಪರಿಪಕ್ವತೆಯ ಪರೀಕ್ಷೆಗಳಾಗಿ ಕಾರ್ಯನಿರ್ವಹಿಸುತ್ತವೆ.

● **ಪ್ರತಿಕ್ರಿಯೆಗೆ ಮೀರಿದವ ಸಾಧು**

ಸಾಧು ಒಂದು ಗಮನಾರ್ಹವಾದ ಗುಣವನ್ನು ಹೊಂದಿದ್ದಾರೆ. ಅವರು ಯಾವುದೇ ಸಂದರ್ಭಗಳಲ್ಲೂ ಪ್ರತಿಕ್ರಿಯಿಸುವುದಿಲ್ಲ. ಆಹ್ಲಾದಕರ ಅಥವಾ ಅಹಿತಕರವಾದದ್ದನ್ನು ಎದುರಿಸಿದರೂ ಅವರು ಶಾಂತರಾಗಿ ಮತ್ತು ಸ್ಥಿರವಾಗಿ ಉಳಿಯುತ್ತಾರೆ. ಇದರ ಅರ್ಥ ಅವರು ಅಸಾಧ್ಯರು ಅಥವಾ ಕಾಳಜಿ ಇಲ್ಲದವರು ಎಂದಲ್ಲ. ಬದಲಿಗೆ ಪ್ರತಿಕ್ರಿಯಾತ್ಮಕ ಭಾವನೆಗಳು ಹೆಚ್ಚು ಆಂತರಿಕವಾಗಿ ಗೊಂದಲಗಳನ್ನು ಮಾತ್ರ ಸೃಷ್ಟಿಸುತ್ತವೆ ಎಂದು ಅರ್ಥಮಾಡಿಕೊಂಡು, ಸಂದರ್ಭಗಳನ್ನು ಲೆಕ್ಕಿಸದೆ ಶಾಂತಿಯನ್ನು ಕಾಪಾಡಿಕೊಳ್ಳಲು ಕಲಿತಿದ್ದಾರೆ ಎಂದರ್ಥ.

ಬಾಹ್ಯ ಘಟನೆಗಳು ಆಂತರಿಕ ಸ್ಥಿತಿಗಳನ್ನು ನಿರ್ದೇಶಿಸುವ ಅಗತ್ಯವಿಲ್ಲ ಎಂಬುದನ್ನು ಸಾಧು ಕಂಡುಕೊಂಡಿದ್ದಾರೆ. ಅವರು ಪ್ರತಿಕ್ರಿಯಿಸುವ ಬದಲು ಪ್ರತಿಸ್ಪಂದಿಸುತ್ತಾರೆ. ಭಾವನಾತ್ಮಕ ಬಲವಂತಕ್ಕಿಂತ ಸ್ಥಿರವಾದ ಅರಿವಿನಿಂದ ಜೀವನದೊಂದಿಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

● **ಚಿಂತನೆಗೆ ಮೀರಿದವ ಪರಮಸಾಧು**

ಚಿಂತನೆಯನ್ನು ಮೀರಿ ಇರುವ, ‘ಪರಮಸಾಧು’ ಎಂದು ಕರೆಯಲ್ಪಡುವ ಇನ್ನೂ ಉನ್ನತವಾದ ಸ್ಥಿತಿ ಅಸ್ತಿತ್ವದಲ್ಲಿದೆ. ಹೆಚ್ಚಿನ ಜನರು ನಿರಂತರ ಮಾನಸಿಕ ಚಟುವಟಿಕೆಯಿಂದ ನಿಯಂತ್ರಿಸಲ್ಪಡುತ್ತಾರೆ- ಅಂದರೆ, ಭೂತಕಾಲದ ಬಗ್ಗೆ ತುಂಬಾ ಯೋಚಿಸುವುದು, ಭವಿಷ್ಯದ ಬಗ್ಗೆ ಚಿಂತಿಸುವುದು ಮತ್ತು ವರ್ತಮಾನದ ಬಗ್ಗೆ ತೀರ್ಪು ನೀಡುವುದು ಇತ್ಯಾದಿ. ಪರಮಸಾಧುವು ಈ ಮಾನಸಿಕ ಗೊಂದಲಕ್ಕೆ ಮೀರಿ ಬದುಕುತ್ತಾರೆ. ಇದರ ಅರ್ಥ, ಅವರು ಅಗತ್ಯವಿದ್ದಾಗ ಯೋಚಿಸುವ ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆ ಎಂದಲ್ಲ ಅಥವಾ ಅಗತ್ಯವಿದ್ದಾಗ ಅವರು ಯೋಚಿಸಲಾರರು ಎಂದಲ್ಲ; ಆದರೆ ಈಗ ಅವರ ಚಿಂತನೆಗಳು ಅವರನ್ನು ಆಳುವುದಿಲ್ಲ. ನಿರಂತರ ಅನಗತ್ಯ ಚಿಂತನೆಯ ಒತ್ತಡದಿಂದ ಮುಕ್ತರಾಗಿ ಯಾವಾಗ ಯೋಚಿಸುವುದು ಮತ್ತು ಯಾವಾಗ ಬಿಡುವುದು ಎಂಬುದನ್ನು ಅವರೇ ಆರಿಸಿಕೊಳ್ಳುತ್ತಾರೆ.

● **ಆಧ್ಯಾತ್ಮಿಕ ಬೆಳವಣಿಗೆಯ ಪ್ರಗತಿ**

- ಸಾಧಾರಣ ವ್ಯಕ್ತಿಯು ಎಲ್ಲಕ್ಕೂ ಭಾವನೆಗಳು ಮತ್ತು ಆಲೋಚನೆಗಳೊಂದಿಗೆ ಪ್ರತಿಕ್ರಿಯಿಸುತ್ತಾನೆ. ಬಾಹ್ಯ ಸಂದರ್ಭಗಳಿಗೆ ಸಿಲುಕುತ್ತಾನೆ.
- ಸಾಧುವು ಪ್ರತಿಕ್ರಿಯಿಸದಿರಲು ಕಲಿತಿರುತ್ತಾನೆ, ಸುತ್ತಲೂ ಏನೇ ನಡೆದರೂ ಶಾಂತನಾಗಿ ಉಳಿಯುತ್ತಾನೆ.
- ಪರಮಸಾಧುವು ಚಿಂತನೆಯನ್ನು ಮೀರಿ ಇರುತ್ತಾನೆ, ಮಾನಸಿಕ ಗದ್ದಲಕ್ಕೆ ಮೀರಿ ಬದುಕುತ್ತಾನೆ.

● **ದೈನಂದಿನ ಜೀವನಕ್ಕೆ ಬೇಕಾಗಿರುವ ಅರಿವು**

ಈ ಬೋಧನೆಗಳು ಕೇವಲ ಸಿದ್ಧಾಂತವಲ್ಲ. ಅವು ಪ್ರತಿದಿನ ಬದುಕಲು ಬೇಕಾಗಿರುವ ಅರಿವು. ಪರಿವರ್ತನೆಯ ಮಾರ್ಗವು ಪ್ರಾಮಾಣಿಕ ಸ್ವಯಂ ವಿಚಾರಣೆಯೊಂದಿಗೆ ಪ್ರಾರಂಭವಾಗುತ್ತದೆ. ಯಾರಾದರೂ ನಮ್ಮನ್ನು ಅಸಭ್ಯವಾಗಿ ನಡೆಸಿಕೊಂಡಾಗ ನಾವು ಶಾಂತರಾಗಿ ಉಳಿಯಬಹುದೇ? ನಮಗೆ ಬೇಕಾದದ್ದು ಸಿಗದಿದ್ದಾಗ ನಾವು ಅದನ್ನು ಶಾಂತಿಯುತವಾಗಿ ಸ್ವೀಕರಿಸಬಹುದೇ? ನಮ್ಮ ಮನಸ್ಸು ಚಿಂತೆಯಿಂದ ತುಂಬಿದಾಗ ಎಲ್ಲಾ ಆಲೋಚನೆಗಳನ್ನು ಮೀರಿ ಇರುವ ಮೌನದಿಂದ ಅರಿವನ್ನು ಕಂಡುಕೊಳ್ಳಬಹುದು. ಈ ವಿಧಾನವು ಸಾಮಾನ್ಯ ಜೀವನವನ್ನು ನಿಜವಾದ ಆಧ್ಯಾತ್ಮಿಕ ಅಭ್ಯಾಸವಾಗಿ ಬದಲಾಯಿಸುತ್ತದೆ. ಇದು ನಿರ್ವಹಿಸಬಹುದಾದ ಹಂತಗಳೊಂದಿಗೆ ಪ್ರಾರಂಭವಾಗುತ್ತದೆ- ನಿರೀಕ್ಷೆಗಿಂತ ಹೆಚ್ಚು ಕಾಯಬೇಕಾದಾಗ ದೂರು ನೀಡದಿರುವುದು, ಯಾರಾದರೂ ಅಸಭ್ಯವಾಗಿ ಮಾತನಾಡಿದಾಗ ಪ್ರತಿಕ್ರಿಯಿಸದಿರುವುದು ಮತ್ತು ಕ್ರಮೇಣ ಬಾಹ್ಯ ಸಂದರ್ಭಗಳನ್ನು ಲೆಕ್ಕಿಸದೆ ಆಂತರಿಕ ಶಾಂತಿಯನ್ನು ಕಂಡುಕೊಳ್ಳಲು ಕಲಿಯುವುದು.

● **ಮನಸ್ಸಿನ ಪರಿವರ್ತನೆ**

ನಮ್ಮ ಭಾವನೆಗಳು ಮತ್ತು ವೇಗದ ಆಲೋಚನೆಗಳು ಇನ್ನೂ ಮುಂದೆ ನಮ್ಮನ್ನು ನಿಯಂತ್ರಿಸದಿದ್ದಾಗ ಬರುವ ಶಾಂತಿ ಮತ್ತು ಸ್ವಾತಂತ್ರ್ಯವನ್ನು ಕಂಡುಕೊಳ್ಳುವುದೇ ನಮ್ಮ ಗುರಿ. ಈ ಪ್ರಯಾಣವು ಆಧ್ಯಾತ್ಮಿಕ ಪರಿವರ್ತನೆಯ ಸಾರವನ್ನು ಪ್ರತಿನಿಧಿಸುತ್ತದೆ. ಜೀವನವು ಯಾವುದೇ ಪರೀಕ್ಷೆ ಕೊಟ್ಟರೂ ಪರಿಸ್ಥಿತಿಗಳ ದಾಸರಾಗುವುದರಿಂದ ನಮ್ಮ ಒಳಗಿನ ಸ್ಥಿತಿಯ ನಿಯಂತ್ರಕರಾಗುವವರೆಗೆ ವಿಕಸನಗೊಳ್ಳುವುದು.

ನಿಜವಾದ ಸ್ವಾತಂತ್ರ್ಯವು ಇತರರನ್ನು ಅಥವಾ ಪರಿಸ್ಥಿತಿಗಳನ್ನು ನಿಯಂತ್ರಿಸುವುದರಲ್ಲಿ ಅಲ್ಲ, ಬದಲಿಗೆ ನಮ್ಮೊಳಗೆ ಇರುವ ಅಚಲವಾದ ಶಾಂತಿಯನ್ನು ಕಂಡುಕೊಳ್ಳುವುದರಲ್ಲಿ ಇದೆ. ಈ ಶಾಂತಿಯನ್ನು ಯಾವ ಬಾಹ್ಯ ಪರಿಸ್ಥಿತಿಯೂ ಮುಟ್ಟಲು ಸಾಧ್ಯವಿಲ್ಲ.

(ಲೇಖಕರು ಆಧ್ಯಾತ್ಮಿಕ ಗುರುಗಳು)

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1			2	■	3			4
	■	■	5	6		■	■	
7		8	■		■	9		
	■		■		■		■	
■	■	10		■	11		■	■
12	■		■	13	■		■	14
15			■		■	16		
	■	■	17		18	■	■	
19				■	20			

ಎಡದಿಂದ ಬಲಕ್ಕೆ

1. ಹತೋಟಿಗೆ ತರು ಅಥವಾ ಸಮತಟ್ಟಾಗಿ ಮಾಡು (4)
3. ಬುದ್ಧನ ಮತ್ತೊಂದು ಹೆಸರಿದು (4)
5. ಶಿಸ್ತಿನಿಂದ ದೇಶವನ್ನು ಕಾಯುವ ಸೈನಿಕ (3)
7. ಪೂಜೆ ಮಾಡುವಾಗ ನೀರು ತುಂಬಿಡುವ ಕೊಡ (3)
9. ರಂಗನ ಜತೆಗಿರುವುದು ಒಂದು ಜಾತಿಯ ಜಿಂಕೆ (3)
10. ಕತ್ತಲೆಯಲ್ಲಿ ನಡೆಯುವಾಗ ಕೈಯಲ್ಲಿ ಹಿಡಿದುಕೊಂಡ ದೀವಟಿಗೆ (2)
11. ಎರಡಕ್ಷರದ ಆಡು (2)
15. ಸರದ ನಡುವೆಯೇ ಸಿಲುಕಿದೆ ಗಾಳಿ (3)
16. ಮುಖ ನೋಡಿಕೊಳ್ಳಲು ಇರುವ ದರ್ಪಣ (3)
17. ಸ್ವರ್ಗಕ್ಕೆ ಹೋಗದ ನರ ಇಲ್ಲಿಗೇ ಹೋದಾನು (3)
19. ಆನೆಯ ಮೋರೆಯ ದೇವರು (4)
20. ಕಿವಿಯಲ್ಲಿ ಗುಟ್ಟಾಗಿ ಹೇಳಿದ ಮಾತು (4)

ಮೇಲಿಂದ ಕೆಳಕ್ಕೆ

1. ಹೂವಿನಿಂದ ರಸ ಹೀರುವ ದುಂಬಿ (4)
2. ಕುಗ್ಗು ಅಥವಾ ಕೆಳಕ್ಕೆ ಇಳಿಯುವುದು (2)
3. ಹ್ರಸ್ವವಾಗಿ ಬಂದಿರುವ ಅಮ್ಮ (2)
4. ವಿದ್ಯಾರ್ಥಿಗಳು ಪಾಠ ಕೇಳುವ ಕಕ್ಷೆ (4)
6. ಸ್ವಾಮೀಜಿಗಳು ತೊಡುವ ಮರದ ಮೆಟ್ಟು (3)
8. ಬಾಣಗಳಿಂದ ಮಾಡಿರುವ ಗೂಡು, ಹಳೆಯ ಚಲನಚಿತ್ರವೊಂದನ್ನು ನೆನಪಿಸೀತು (5)
9. ಆರಂಭದಲ್ಲಿ ಸತ್ವವನ್ನು ಕಟ್ಟಿಕೊಂಡಿರುವ ಅನಿಲಧಾತು (5)
12. ರಸಾನುಭವಕ್ಕೆ ಉಂಟಾಗುವ ಅಡ್ಡಿ (4)
13. ಅತಿ ತೀಕ್ಷ್ಣವಾದ ಎಂದರ್ಥ (3)
14. ಗೊಂದಲ ಅಥವಾ ಅವಸರ (4)
17. ಕೈ, ಕಾಲಿನಲ್ಲಿ ಬೆಳೆಯುವ ಉಗುರು (2)
18. ಮತ್ತೊಂದು ವಾನರ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಮಟ್ಟಹಾಕು 3.ತಥಾಗತ 5.ಸಿಪಾಯಿ 7.ಕಲಶ 9.ಸಾರಂಗ 10.ಪಂಜು 11.ಅಜ 15.ಸಮೀರ 16.ಕನ್ನಡಿ 17.ನರಕ 19.ಗಜಮುಖ 20.ಪಿಸುನುಡಿ

ಮೇಲಿಂದ ಕೆಳಕ್ಕೆ
1.ಮಧುಕರ 2.ಕುಸಿ 3.ತಯಿ 4.ತರಗತಿ 6.ಪಾದುಕೆ 8.ಶರಪಂಜರ 9.ಸಾರಜನಕ 12.ರಸಭಂಗ 13.ಪ್ರಖರ 14.ಗಡಿಬಿಡಿ 17.ನಖ 18.ಕಪಿ

ಹತ್ತು ಹೆಜ್ಜೆಗಳ ಬೆಲೆ ಅರಿತ ಪುಟ್ಟ ಹುಡುಗನ ಸಾಧನೆ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಕೆನಡಾದ ಕೆಂಪ್ಟ್‌ವಿಲ್ಲೆ ಎಂಬ ಪುಟ್ಟ ಹಳ್ಳಿಯ ಆ ಶಾಲೆ ಅಂದು ಎಂದಿನಂತಿತ್ತು. ಆದರೆ ಆರು ವರ್ಷದ ರಯಾನ್ ಹ್ರೆಲ್ಜಾಕ್‌ಗೆ ಮಾತ್ರ ಆ ದಿನ ಬದುಕಿನ ದಿಕ್ಕನ್ನೇ ಬದಲಿಸಿತು. ಅವನ ಶಿಕ್ಷಕಿ ಮಿಸೆಸ್ ಪ್ರೆಸ್ಟ್ ಅಂದು ಆಫ್ರಿಕಾದ ಮಕ್ಕಳ ಕಷ್ಟಗಳ ಬಗ್ಗೆ ಪಾಠ ಮಾಡುತ್ತಿದ್ದರು. ‘ಅಲ್ಲಿನ ಮಕ್ಕಳು ಶುದ್ಧ ನೀರಿಲ್ಲದೆ ಸಾಯುತ್ತಿದ್ದಾರೆ, ಒಂದು ಬಕೆಟ್ ನೀರಿಗಾಗಿ ಮೈಲಿಗಟ್ಟಲೆ ನಡೆಯಬೇಕು’ ಎಂಬ ಶಿಕ್ಷಕಿಯ ಮಾತು ರಯಾನ್‌ನ ಪುಟ್ಟ ಹೃದಯವನ್ನು ಚುಚ್ಚಿತು.

ಅವನು ತನ್ನ ತರಗತಿಯ ಪಕ್ಕದಲ್ಲೇ ಇದ್ದ ಹೊಳೆಯುವ ವಾಟರ್ ಫೌಂಟೇನ್ ಕಡೆ ನೋಡಿದ. ಕೇವಲ ಹತ್ತು ಹೆಜ್ಜೆಗಳು! ತನಗೆ ಬೇಕಾದಾಗ ಕೈಗೆಟುಕುವ ಈ ನೀರು, ಸಮಾನ ವಯಸ್ಸಿನ ಆಫ್ರಿಕಾದ ಮಕ್ಕಳಿಗೆ ಏಕಿಲ್ಲ ಎಂಬ ಪ್ರಶ್ನೆ ಅವನನ್ನು ಕಾಡತೊಡಗಿತು. ಮನೆಗೆ ಬಂದ ಕೂಡಲೇ ಅವನು ಅಮ್ಮನ ಬಳಿ, ‘‘ಅಮ್ಮ, ನನಗೆ ಆಫ್ರಿಕಾದಲ್ಲಿ ಬಾವಿ ತೋಡಲು 70 ಡಾಲರ್ ಹಣ ಬೇಕು’’ ಎಂದು ಹಠ ಹಿಡಿದ. ಮಗನ ಉತ್ಸಾಹ ಕಂಡು ತಾಯಿ ಸುಸಾನ್ ನಿರಾಕರಿಸಲಿಲ್ಲ, ಬದಲಾಗಿ ಒಂದು ಸವಾಲು ಹಾಕಿದರು: ‘‘ನೀನೇ ಕೆಲಸ ಮಾಡಿ ಆ ಹಣ ಗಳಿಸು’’. ರಯಾನ್ ಹಿಂದೆ ಸರಿಯಲಿಲ್ಲ. ಕಿಟಕಿ ತೊಳೆಯು ವುದು, ಕಸ ಗುಡಿಸು ವುದು, ನೆರೆಹೊರೆಯವರ ಗಾರ್ಡನ್ ಸ್ವಚ್ಛಗೊಳಿಸು ವುದು ಹೀಗೆ ನಾಲ್ಕು ತಿಂಗಳು ಸತತವಾಗಿ ಶ್ರಮಿಸಿದ. ಆಟವಾಡುವ ವಯಸ್ಸಿನಲ್ಲಿ ಅವನು ಆರಿಸಿಕೊಂಡಿದ್ದು ‘ಸೇವೆ’.

ಆದರೆ ವಾಸ್ತವ ಬೇರೆಯೇ ಇತ್ತು. ಅವನು ಸಂಗ್ರಹಿಸಿದ 70 ಡಾಲರ್ ಹಿಡಿದು ‘ವಾಟರ್ ಕ್ಯಾನ್’ ಸಂಸ್ಥೆಗೆ ಹೋದಾಗ ತಿಳಿದ ವಿಷಯವೆಂದರೆ, ಒಂದು ಬಾವಿ ತೋಡಲು ಬೇಕಾಗಿದ್ದುದು 2,000 ಡಾಲರ್! ಯಾವುದೇ ದೊಡ್ಡವರಿಗಾದರೂ ಇದು ಅಸಾಧ್ಯವೆನಿಸುತ್ತಿತ್ತು. ಆದರೆ ರಯಾನ್ ಕ್ಷಣಕಾಲ ಮೌನವಾಗಿದ್ದು ನಂತರ ಹೇಳಿದ- ‘ಹಾಗಾದರೆ ನಾನು ಇನ್ನೂ ಹೆಚ್ಚಿನ ಕೆಲಸ ಮಾಡುತ್ತೇನೆ’.

ಅವನ ಈ ದೃಢ ಸಂಕಲ್ಪದ ಕಥೆ ಪತ್ರಿಕೆಗಳಲ್ಲಿ ಪ್ರಕಟವಾಗಿ, ಜಗತ್ತಿನಾದ್ಯಂತದ ಜನರು ಹಣ ಕಳುಹಿಸಲು ಆರಂಭಿಸಿದರು. 1999ರಲ್ಲಿ, ರಯಾನ್ ತನ್ನ ಏಳನೇ ವಯಸ್ಸಿನಲ್ಲಿ ಉಗಾಂಡಾದ ಆಂಗೊಲೊ ಶಾಲೆಯಲ್ಲಿ ತನ್ನ ಮೊದಲ ಬಾವಿಯನ್ನು ನಿರ್ಮಿಸಿದ. ಅಲ್ಲಿ ಅವನಿಗೆ ಜಿಮ್ಮಿ ಅಕಾನಾ ಎಂಬ ‘ಪೆನ್ ಪಾಲ್’ (ಲೇಖನಿ ಗೆಳೆಯ) ಸಿಕ್ಕಿದ. ಜಿಮ್ಮಿಯ ಬದುಕು ದುಸ್ತರವಾಗಿತ್ತು. ಬಂಡಾಯಗಾರರಿಂದ ಅಪಹರಣಕ್ಕೊಳಗಾಗಿ, ನರಕಯಾತನೆ ಅನುಭವಿಸಿ ತಪ್ಪಿಸಿಕೊಂಡು ಬಂದಿದ್ದ ಜಿಮ್ಮಿಯನ್ನು ರಯಾನ್ ಮತ್ತು ಅವನ ಕುಟುಂಬ ಕೈಬಿಡಲಿಲ್ಲ. 2003ರಲ್ಲಿ ಕಾನೂನು ಹೋರಾಟ ನಡೆಸಿ ಜಿಮ್ಮಿಯನ್ನು ಕೆನಡಾಕ್ಕೆ ಕರೆತಂದು ತಮ್ಮ ಮನೆಯ ಮಗನನ್ನಾಗಿ ಮಾಡಿಕೊಂಡರು. ಅಂದು ಪೆನ್-ಪಾಲ್‌ಗಳಾಗಿದ್ದ ಇಬ್ಬರು ಇಂದು ಸಹೋದರರಾಗಿ ಬದುಕುತ್ತಿದ್ದಾರೆ. ಇಂದು ‘ರಯಾನ್ಸ್ ವೆಲ್ ಫೌಂಡೇಷನ್’ 17 ದೇಶಗಳಲ್ಲಿ 1,700ಕ್ಕೂ ಹೆಚ್ಚು ನೀರಿನ ಯೋಜನೆಗಳನ್ನು ಪೂರೈಸಿದೆ. 15 ಲಕ್ಷಕ್ಕೂ ಹೆಚ್ಚು ಜನರಿಗೆ ಇಂದು ಶುದ್ಧ ಕುಡಿಯುವ ನೀರು ಸಿಗುತ್ತಿದೆ.

ಬದಲಾವಣೆ ತರಲು ವಯಸ್ಸು ಅಥವಾ ಅಧಿಕಾರ ಮುಖ್ಯವಲ್ಲ, ‘ಮಾಡಲೇಬೇಕು’ ಎಂಬ ಛಲವಿದ್ದರೆ ಸಾಕು. ರಯಾನ್ ಹೇಳುವಂತೆ, ‘ಜಗತ್ತು ಎಂಬ ಈ ಒಗಟಿಗೆ ನನ್ನ ಉತ್ತರ ನೀರು. ನಿಮ್ಮ ಉತ್ತರ ಯಾವುದು ಎಂದು ನೀವು ಕಂಡುಕೊಳ್ಳಿ’.

ಒಬ್ಬ ಬಾಲಕನ ಹತ್ತು ಹೆಜ್ಜೆಗಳು ಇಂದು ಲಕ್ಷಾಂತರ ಜನರ ಬದುಕಿನಲ್ಲಿ ಭರವಸೆಯ ನಡಿಗೆಯಾಗಿ ಮಾರ್ಪಟ್ಟಿವೆ. ಇಂಥ ಕಥೆಗಳನ್ನು ನಮ್ಮ ಮಕ್ಕಳಿಗೆ ಹೇಳಿದರೆ, ಎಲ್ಲಾ ಅನುಕೂಲಗಳು ಇರುವ ಸಾಮಾನ್ಯ ಬದುಕಿನ ಮಹತ್ವವನ್ನು ಅವರಿಗೆ ತಿಳಿಸಿಕೊಟ್ಟಂತಾಗುತ್ತದೆ. ಎಳೆ ವಯಸಿನಲ್ಲಿ ಮಕ್ಕಳಿಗೆ ಪ್ರಪಂಚದ ಆಗುಹೋಗುಗಳ ಬಗ್ಗೆ ತಿಳಿಸಿದಾಗ ತಾವು ಎಂಥ ಸೌಕರ್ಯದಲ್ಲಿ ಬದುಕುತ್ತಿದ್ದೇವೆ ಹಾಗೂ ತಮಗಿಂತ ಕೆಳಸ್ತರದಲ್ಲಿ ಇರುವವರಿಗೆ ಹೇಗೆ ಸಹಾಯ ಮಾಡಬಹುದು ಎನ್ನುವ ಸಹಾನುಭೂತಿ ಬೆಳೆಯುತ್ತದೆ. ಇದರಿಂದ ಅವರು ಇರುವ ಸೌಲಭ್ಯಗಳನ್ನು ಪೋಲು ಮಾಡದೆ, ಜವಾಬ್ದಾರಿಯುತ ನಾಗರಿಕರಾಗಿ ಬೆಳೆಯಲು ನಾವು ಪ್ರೇರೇಪಿಸಿದಂತಾಗುತ್ತದೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಟಿ-20 ಮಹೋತ್ಸವ ವಿಶ್ವಕಪ್ 2026

ಭಾರತ ಶ್ರೀಲಂಕಾ
ಫೆಬ್ರವರಿ 7ರಿಂದ ಮಾರ್ಚ್ 8

ICC MEN'S T20 WORLD CUP INDIA & SRI LANKA 2026

ಒಂದ್ ಕಪ್ ಮಾತು

2 ಸೆಮೀಸ್‌ಗೆ ಅಂಪೈರ್‌ಗಳು

ದೆಹಲಿ: ಬುಧವಾರ ನಡೆಯುವ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಮೊದಲ ಸೆಮಿಫೈನಲ್ ಪಂದ್ಯಕ್ಕೆ ರಿಚರ್ಡ್ ಇಲ್ಲಿಂಗ್‌ವರ್ತ್ ಮತ್ತು ಅಲೆಕ್ಸ್ ವಾರ್ಫ್ ಆನ್-ಫೀಲ್ಡ್ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸಲಿದ್ದಾರೆ. ಭಾರತದ ನಿತಿನ್ ಮೆನನ್ ಮೂರನೇ ಅಂಪೈರ್ ಆಗಿ ಮತ್ತು ರಾಡ್ ಟಕರ್ ನಾಲ್ಕನೇ ಅಂಪೈರ್ ಆಗಿ ಹಾಗೂ ಕನ್ನಡಿಗ ಜಾವಗಲ್ ಶ್ರೀನಾಥ್ ಮ್ಯಾಚ್ ರೆಫರಿಯಾಗಿ ನೇಮಕಗೊಂಡಿದ್ದಾರೆ. 2ನೇ ಸೆಮಿಫೈನಲ್ ಪಂದ್ಯವು ಭಾರತ ಮತ್ತು ಇಂಗ್ಲೆಂಡ್ ನಡುವೆ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ನಡೆಯಲಿದ್ದು, ಆ ಪಂದ್ಯಕ್ಕೆ ಕ್ರಿಸ್ ಗಫಾನಿ ಮತ್ತು ಅಲ್ಲಾಹುದ್ದೀನ್ ಪಾಲೇಕರ್ ಆನ್-ಫೀಲ್ಡ್ ಅಂಪೈರ್‌ಗಳಾಗಿರು ತ್ತಾರೆ. ಆಡ್ರಿಯನ್ ಹೋಲ್ಡ್‌ಸ್ಟಾಕ್ ಮೂರನೇ ಅಂಪೈರ್, ಮತ್ತು ಪಾಲ್ ರೀಫೆಲ್ ನಾಲ್ಕನೇ ಅಂಪೈರ್ ಆಗಿರುತ್ತಾರೆ.

ಬುಮ್ರಾ ಆರಂಭದಲ್ಲೇ ಬೌಲಿಂಗ್‌ಗೆ ಇಳಿಯಲಿ

ಮುಂಬೈ: ಗುರುವಾರ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಸೆಮಿಫೈನಲ್

ಪಂದ್ಯದಲ್ಲಿ ಭಾರತ ತಂಡ ಬೌಲಿಂಗ್ ಕ್ರಮಾಂಕ ಬದಲಾವಣೆಯನ್ನು ಮಾಡಿಕೊಳ್ಳಬೇಕೆಂದು ಕ್ರಿಕೆಟ್ ದಿಗ್ಗಜ ಸುನಿಲ್ ಗವಾಸ್ಕರ್ ಆಗ್ರಹಿಸಿದ್ದಾರೆ. ಇಂಗ್ಲೆಂಡ್ ತಂಡದ ಅಗ್ರ ಕ್ರಮಾಂಕದ ಬ್ಯಾಟ್ಸ್ ಮನ್‌ಗಳನ್ನು ಕಟ್ಟಿ ಹಾಕಲು ಭಾರತ ತಂಡ, ಪವರ್ ಪ್ಲೇನಲ್ಲಿ ಹಿರಿಯ ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ ಅವರನ್ನು ಬಳಸಿಕೊಳ್ಳಬೇಕೆಂದು ಅವರು ಹೇಳಿದ್ದಾರೆ. ಮಾಧ್ಯಮಗ ಳೊಂದಿಗೆ ಮಾತನಾಡಿದ ಗವಾಸ್ಕರ್, ಮೊದಲ ಆರು ಓವರ್‌ಗಳಲ್ಲಿ ಕನಿಷ್ಠ ಎರಡು ಓವರ್‌ಗಳನ್ನು ಜಸ್ಪ್ರೀತ್ ಬುಮ್ರಾ ಅವರಿಗೆ ನೀಡಬೇಕು ಎಂದು ಅಭಿಪ್ರಾಯಪಟ್ಟರು.

ಭಾರತಕ್ಕೆ ಮರಳಿದ ಸಿಂಧು

ಬೆಂಗಳೂರು: ಇಸ್ರೇಲ್-ಇರಾನ್ ಯುದ್ಧದಿಂದಾಗಿ ರದ್ದುಗೊಂಡಿದ್ದ ವಿಮಾನಯಾನ ಸೇವೆ ಸೋಮವಾರ

ಪುನರಾರಂಭವಾಗಿದ್ದು, ದುಬೈ ವಿಮಾನ ನಿಲ್ದಾಣದಲ್ಲಿ ಹಲವು ದಿನಗಳಿಂದ ಸಿಲುಕಿಕೊಂಡಿದ್ದ ಭಾರತದ ಖ್ಯಾತ ಬ್ಯಾಡ್ಮಿಂಟನ್ ತಾರೆ ಪಿ.ವಿ ಸಿಂಧು ಮಂಗಳವಾರ ಭಾರತಕ್ಕೆ ಮರಳಿದ್ದಾರೆ. ಬೆಂಗಳೂರಿಗೆ ಮರಳಿದ ಅವರು ಈ ವಿಚಾರವನ್ನು ತಮ್ಮ ಟ್ವಿಟರ್ (ಎಕ್ಸ್) ನಲ್ಲಿ ಹಂಚಿಕೊಂಡಿದ್ದಾರೆ. ‘ಸುರಕ್ಷಿತವಾಗಿ ಮನೆಗೆ ತಲುಪಿದೆ’ ಎಂದು ಪೋಸ್ಟ್ ಮಾಡಿದ್ದಾರೆ. ಆಲ್ ಇಂಗ್ಲೆಂಡ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲು ತೆರಳುತ್ತಿದ್ದ ಸಿಂಧು, ಫೆಬ್ರವರಿ 28 ರ ಶನಿವಾರದಿಂದ ದುಬೈನಲ್ಲಿ ಸಿಲುಕಿಕೊಂಡಿದ್ದರು. ತಾನು ಸುರಕ್ಷಿತವಾಗಿ ಮನೆಗೆ ಮರಳುವಂತೆ ಮಾಡಿದ್ದಕ್ಕಾಗಿ ದುಬೈ ಅಧಿಕಾರಿಗಳು, ವಿಮಾನ ನಿಲ್ದಾಣ ಸಿಬ್ಬಂದಿ ಮತ್ತು ರಾಯಭಾರ ಕಚೇರಿಯ ಅಧಿಕಾರಿಗಳಿಗೆ ಧನ್ಯವಾದ ಅರ್ಪಿಸಿದ್ದಾರೆ.

ಅಜೇಯ ದ.ಆಫ್ರಿಕಾ ಪಡೆಗೆ ನ್ಯೂಜಿಲೆಂಡ್ ಸವಾಲು | ಈ ವರೆಗೂ ತಲಾ ಒಂದು ಸಲ ಫೈನಲ್ ಪ್ರವೇಶಿಸಿದ್ದ 2 ತಂಡಗಳು

ಇಂದು ಕಿವಿ-ಹರಿಣಗಳ ಸೆಮಿಫೈನಲ್ ಕಾದಾಟ

ಕೋಲ್ಕತ್ತಾ: ಟಿ20 ವಿಶ್ವಕಪ್‌ನ ಸೆಮಿಫೈನಲ್ ಹಣಾಹಣಿಗೆ ಅಖಾಡ ಸಿದ್ಧವಾಗಿದೆ. ಇಂದು ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆಯುವ ಮೊದಲ ಸೆಮೀಸ್‌ನಲ್ಲಿ ನ್ಯೂಜಿಲೆಂಡ್ ತಂಡವು ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ.

ಈ ಬಾರಿಯ ಟಿ20 ವಿಶ್ವಕಪ್ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾ ತಂಡವು ಅಜೇಯವಾಗಿ ಸೆಮಿಫೈನಲ್ ತಲುಪಿದೆ. ತಂಡವು ಗುಂಪು ಹಂತದಲ್ಲಿ 4 ಹಾಗೂ ಸೂಪರ್-8 ಹಂತದ ಎಲ್ಲಾ 3 ಪಂದ್ಯಗಳಲ್ಲೂ ಗೆದ್ದು ಬೀಗಿದೆ.

ಗ್ರೂಪ್ ಹಂತದ ಮೊದಲ ಪಂದ್ಯದಲ್ಲಿ ಐಡೆನ್ ಮಾರ್ಕ್ರಮ್ ನಾಯಕತ್ವದ ದ.ಆಫ್ರಿಕಾ ತಂಡವು ಕೆನಡಾ ವಿರುದ್ಧ ಫೆ.9ರಂದು ನಡೆದ ಪಂದ್ಯದಲ್ಲಿ 57 ರನ್‌ಗಳಿಂದ ಜಯ ಸಾಧಿಸಿತ್ತು. ಆ ನಂತರ ಫೆ.11ರಂದು ನಡೆದ ಪಂದ್ಯದಲ್ಲಿ ಅಫಘಾನಿಸ್ತಾನದ ವಿರುದ್ಧ ಹರಿಣ ಪಡೆಯು ಸೂಪರ್ ಓವರ್‌ನಲ್ಲಿ 4 ರನ್‌ಗಳ ಗೆಲುವನ್ನು ಸಾಧಿಸಿತ್ತು. ಬಳಿಕ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಫೆ.14ರಂದು ದ.ಆಫ್ರಿಕಾ 7 ವಿಕೆಟ್‌ಗಳ ಭಾರೀ ಅಂತರದಲ್ಲಿ ಗೆಲುವನ್ನು ತನ್ನದನ್ನಾಗಿಸಿತ್ತು. ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಯುಎಇ ವಿರುದ್ಧ 6 ವಿಕೆಟ್‌ಗಳ ಅಂತರದದಲ್ಲಿ ಪಂದ್ಯವನ್ನು ಗೆದ್ದಿತ್ತು.

ಸೂಪರ್-8 ಹಂತದಲ್ಲಿ ನಡೆದ ಮೊದಲ ಪಂದ್ಯದಲ್ಲಿ ದ.ಆಫ್ರಿಕಾ ಭಾರತದ ವಿರುದ್ಧ 76 ರನ್‌ಗಳ ಭಾರೀ ಅಂತರದಲ್ಲಿ ಗೆಲುವನ್ನು ಪಡೆದಿತ್ತು. ಫೆ.26ರಂದು ನಡೆದ 2ನೇ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಗೆಲುವನ್ನು ದಾಖಲಿಸಿದರೆ, ತನ್ನ ಕೊನೆಯ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ 5 ವಿಕೆಟ್ ಅಂತರದ ಜಯ ದಾಖಲಿಸಿ ಈ ವಿಶ್ವಕಪ್‌ನಲ್ಲಿ ಅಜೇಯ ತಂಡ ಎಂಬ ಹೆಗ್ಗಳಿಕೆ ಪಡೆಯಿತು. ಕಳೆದ ಆವೃತ್ತಿಯಲ್ಲೂ ಕೂಡಾ ದ.ಆಫ್ರಿಕಾ ತಂಡ ಅಜೇಯವಾಗಿ ಫೈನಲ್ ತಲುಪಿತ್ತು, ಆದರೆ ಫೈನಲ್‌ನಲ್ಲಿ ಭಾರತ ವಿರುದ್ಧ ಸೋಲು ಕಂಡಿತ್ತು.

ಮುಖಾಮುಖಿ

ಉಭಯ ತಂಡಗಳು ಈ ವರೆಗೆ ಟಿ20 ಕ್ರಿಕೆಟ್‌ನಲ್ಲಿ 19 ಬಾರಿ ಮುಖಾಮುಖಿಯಾಗಿವೆ. ಈ ಪೈಕಿ ದಕ್ಷಿಣ ಆಫ್ರಿಕಾ 12 ಪಂದ್ಯ ಗೆದ್ದರೆ, ನ್ಯೂಜಿಲೆಂಡ್ 7 ಪಂದ್ಯಗಳನ್ನು ಮಾತ್ರ ಗೆದ್ದಿದೆ.

ಮಿಚೆಲ್ ಸ್ಯಾಂಟ್ನರ್ ನಾಯಕತ್ವದ ನ್ಯೂಜಿಲೆಂಡ್ ತಂಡವು ಈ ಬಾರಿಯ ವಿಶ್ವಕಪ್ ಗ್ರೂಪ್ ಹಂತದ ಮೊದಲ ಪಂದ್ಯದಲ್ಲಿ ಫೆ.8ರಂದು ಅಫಘಾನಿಸ್ತಾನವನ್ನು 5 ವಿಕೆಟ್‌ಗಳಿಂದ ಮಣಿಸಿ ಶುಭಾರಂಭ ಮಾಡಿತ್ತು. ಆ ಬಳಿಕ ಫೆ.10ರಂದು ಯುಎಇ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸುವಲ್ಲಿ ಸಫಲವಾಯಿತು. ಫೆ.14ರಂದು ನಡೆದ ಪಂದ್ಯದಲ್ಲಿ ದ.ಆಫ್ರಿಕಾ ತಂಡದ ವಿರುದ್ಧ ನ್ಯೂಜಿಲೆಂಡ್ ಶರಣಾಯಿತು. ಆ ಬಳಿಕ ಫೆ.17ರಂದು ಆಯೋಜನೆಗೊಂಡಿದ್ದ ಪಂದ್ಯದಲ್ಲಿ ಕಿವೀಸ್ ತಂಡವು ಕೆನಡಾ ವಿರುದ್ಧ 8 ವಿಕೆಟ್‌ಗಳ ಗೆಲುವು ದಾಖಲಿಸಿತ್ತು.

ಸೂಪರ್-8 ಹಂತದ ಮೊದಲ ಪಂದ್ಯಕ್ಕೆ ಮಳೆ ಅಡ್ಡಿಯಾಗಿ, ಆಟ ನಡೆಯದ ಕಾರಣ ನ್ಯೂಜಿಲೆಂಡ್ ತಂಡವು ಪಾಕಿಸ್ತಾನ ಜತೆ ಒಂದು ಅಂಕ ಮಾತ್ರ ಗಳಿಸಿತ್ತು. ತನ್ನ ಮುಂದಿನ ಪಂದ್ಯದಲ್ಲಿ ಕಿವೀಸ್ ತಂಡವು ಅತಿಥೇಯ ಶ್ರೀಲಂಕಾವನ್ನು 61 ರನ್‌ಗಳಿಂದ ಮಣಿಸುವಲ್ಲಿ ಯಶಸ್ವಿಯಾಯಿತು. ಕೊನೆಯ ಪಂದ್ಯದಲ್ಲಿ ಕಿವೀಸ್ ವಿರುದ್ಧ ಇಂಗ್ಲೆಂಡ್ 4 ವಿಕೆಟ್‌ಗಳ ಜಯ ಸಾಧಿಸಿದ್ದರೂ ನ್ಯೂಜಿಲೆಂಡ್ ಸೆಮಿ ಫೈನಲ್ ತಲುಪುವಲ್ಲಿ ಯಶಸ್ವಿಯಾಯಿತು.

ದ.ಆಫ್ರಿಕಾ ಸಂಭಾವ್ಯ ತಂಡ

ಐಡೆನ್ ಮಾರ್ಕ್ರಮ್ (ನಾಯಕ), ಕ್ವಿಂಟನ್ ಡಿ ಕಾಕ್ (ಕೀಪರ್), ರಿಯಾನ್ ರಿಕಲ್ಟನ್, ಡೆವಾಲ್ಡ್ ಬ್ರೆವಿಸ್, ಡೇವಿಡ್ ಮಿಲ್ಲರ್, ಟ್ರಿಸ್ಟಾನ್ ಸ್ಟಬ್ಸ್, ಮಾರ್ಕೊ ಜಾನ್ಸೆನ್, ಕಾರ್ಬಿನ್ ಬಾಷ್, ಕಾಗಿಸೊ ರಬಾಡ, ಕೇಶವ್ ಮಹಾರಾಜ್, ಲುಂಗಿ ಎನ್‌ಗಿಡಿ.

ನ್ಯೂಜಿಲೆಂಡ್ ಸಂಭಾವ್ಯ ತಂಡ

ಮಿಚೆಲ್ ಸ್ಯಾಂಟ್ನರ್ (ನಾಯಕ), ಟಿಮ್ ಸೀಫರ್ಟ್ (ಕೀಪರ್), ಫಿನ್ ಅಲೆನ್, ರಚಿನ್ ರವೀಂದ್ರ, ಗ್ಲೆನ್ ಫಿಲಿಪ್ಸ್, ಡ್ಯಾರಿಲ್ ಮಿಚೆಲ್, ಮಾರ್ಕ್ ಚಾಪ್ಮನ್, ಕೋಲ್ ಮೆಕ್‌ಕೊಂಚಿ, ಮ್ಯಾಟ್ ಹೆನ್ರಿ, ಇಶ್ ಸೋಧಿ, ಲಾಕಿ ಫರ್ಗುಸನ್.

ಇದು ನ್ಯೂಜಿಲೆಂಡ್‌ಗೆ 5ನೇ ಹಾಗೂ ದಕ್ಷಿಣ ಆಫ್ರಿಕಾಗೆ 4ನೇ ಸೆಮಿ ಫೈನಲ್ ಪಂದ್ಯವಾಗಿದೆ. ಇದುವರೆಗಿನ ಟಿ20 ವಿಶ್ವಕಪ್‌ನಲ್ಲಿ ದ.ಆಫ್ರಿಕಾ ಮತ್ತು ನ್ಯೂಜಿಲೆಂಡ್ ಟ್ರೋಫಿ ಗೆದ್ದಿಲ್ಲ. 2021ರಲ್ಲಿ ಫೈನಲ್ ಪ್ರವೇಶಿಸಿದ್ದ ನ್ಯೂಜಿಲೆಂಡ್ ತಂಡವು ಆಸ್ಟ್ರೇಲಿಯಾ ವಿರುದ್ಧ ಸೋತು ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟಿತ್ತು. 2024ರಲ್ಲಿ ದ.ಆಫ್ರಿಕಾ ತಂಡವು ಫೈನಲ್ ಪ್ರವೇಶಿಸಿತ್ತಾದರೂ ಭಾರತದ ವಿರುದ್ಧ ಸೋತು ರನ್ನರ್ ಅಪ್ ಸ್ಥಾನ ಗಿಟ್ಟಿಸಿತ್ತು. ಈ ಸಲವೂ ಮತ್ತೆ ಎರಡೂ ತಂಡಗಳ ಪೈಕಿ ಒಂದು ತಂಡಕ್ಕೆ ಫೈನಲ್ ಪ್ರವೇಶಿಸುವ ಅದೃಷ್ಟ ಎದುರಾಗಿದೆ.

ಪಿಚ್ ರಿಪೋರ್ಟ್: ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣವು ಬ್ಯಾಟಿಂಗ್‌ಸ್ನೇಹಿ ಪಿಚ್ ಆಗಿದ್ದು ಪಂದ್ಯದಲ್ಲಿ ಹೈ ಸ್ಕೋರಿಂಗ್ ನಿರೀಕ್ಷಿಸಲಾಗುತ್ತಿದೆ. ಆರಂಭದಲ್ಲಿ ಸ್ಥಿರವಾದ ಬೌನ್ಸ್ ಮತ್ತು ವೇಗವನ್ನು ನೀಡುವ ಮೇಲ್ಮೈ ಪಿಚ್‌ನಲ್ಲಿ ಬ್ಯಾಟರ್‌ಗಳು ತಮ್ಮ ಹೊಡೆತಗಳನ್ನು ಮುಕ್ತವಾಗಿ ಆಡಲು ಅನುವು ಮಾಡಿಕೊಡುತ್ತದೆ. ಆಟ ಮುಂದುವರಿದಂತೆ, ಪಿಚ್ ಸ್ವಲ್ಪ ಹಿಡಿತ ಸಾಧಿಸಬಹುದು, ಸ್ಪಿನ್ನರ್‌ಗಳಿಗೆ ನೆರವಾಗಬಹುದು. ರಾತ್ರಿ ಇಬ್ಬನಿ ಬೀಳುವ ಕಾರಣ ಟಾಸ್ ಕೂಡ ಬಹುಮುಖ್ಯ ಪಾತ್ರವಹಿಸಲಿದೆ.

ಮಳೆ ಭೀತಿ ಇಲ್ಲ: ಬುಧವಾರ ನಡೆಯುವ ಸೆಮಿ ಫೈನಲ್ ಪಂದ್ಯಕ್ಕೆ ಯಾವುದೇ ಮಳೆ ಭೀತಿ ಇಲ್ಲ. ಅಕ್ಯೂವೆದರ್ ಮುನ್ಸೂಚನೆ ಪ್ರಕಾರ ಪಂದ್ಯದ ಸಮಯದಲ್ಲಿ ಸುಮಾರು 30ರಿಂದ 28 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರಲಿದೆ. ಅಕಾಲಿಕವಾಗಿ ಮಳೆ ಬಂದರೂ ಮೀಸಲು ದಿನವಿದೆ. ನಿಗದಿತ ದಿನದಂದು ಮಳೆಯಿಂದ ಪಂದ್ಯ ಪೂರ್ಣಗೊಳ್ಳದಿದ್ದರೆ, ಮರುದಿನ ಅಲ್ಲಿಂದಲೇ ಪಂದ್ಯ ಆರಂಭಿಸಲಾಗುವ ಅವಕಾಶ ಇದೆ.

ಮಹಿಳಾ ಏಕದಿನ ಕ್ರಿಕೆಟ್ ಶ್ರೇಯಾಂಕ ಪ್ರಕಟ

ಬ್ಯಾಟಿಂಗ್‌ನಲ್ಲಿ ಸ್ಮೃತಿ ನಂ.1

ದುಬೈ: ಇತ್ತೀಚೆಗೆ ಮುಕ್ತಾಯಗೊಂಡ ಆಸ್ಟ್ರೇಲಿಯಾ ವಿರುದ್ಧದ ಮೂರು ಪಂದ್ಯಗಳ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಹಿನ್ನೆಲೆಯಲ್ಲಿ ಭಾರತದ ಆರಂಭಿಕ ಆಟಗಾರ್ತಿ ಸ್ಮೃತಿ ಮಂಧಾನಾ ಮಂಗಳವಾರ ಪ್ರಕಟಗೊಂಡ ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಅಗ್ರಸ್ಥಾನಕ್ಕೆ ಏರಿದ್ದಾರೆ.

ಸ್ಮೃತಿ (790 ಅಂಕಗಳು), ದಕ್ಷಿಣ ಆಫ್ರಿಕಾದ ಲಾರಾ ವೋಲ್ವಾರ್ಟ್ (782) ಅವರನ್ನು ಹಿಂದಿಕ್ಕಿದ್ದಾರೆ. ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡ ನ್ಯೂಜಿಲೆಂಡ್ ವಿರುದ್ಧ ಸರಣಿ ಆಡಲಿದ್ದು ಲಾರಾ ವೋಲ್ವಾರ್ಟ್ ಅವರಿಗೆ ಮತ್ತೆ ಅಗ್ರಸ್ಥಾನವನ್ನು ಪಡೆಯುವ ಅವಕಾಶವಿದೆ. ವಿದಾಯದ ಸರಣಿಯ ಕೊನೆಯ ಪಂದ್ಯದಲ್ಲಿ ಶತಕ ಗಳಿಸಿದ ಅಲಿಸಾ ಹೀಲಿ, ಶ್ರೇಯಾಂಕದಲ್ಲಿ ನಾಲ್ಕನೇ ಸ್ಥಾನ (744) ಪಡೆದರು. ಬೆತ್ ಮೂನಿ (749) ಮೂರನೇ ಮತ್ತು ಆಶ್ಲೀ ಗಾರ್ಡ್ನರ್ (724) 5ನೇ ಸ್ಥಾನದಲ್ಲಿದ್ದಾರೆ.

ಭಾರತದ ನಾಯಕಿ ಹರ್ಮನ್‌ಪ್ರೀತ್ ಕೌರ್ ಒಂಬತ್ತನೇ ಸ್ಥಾನದಲ್ಲಿರುವ ಅಗ್ರ 10ರಲ್ಲಿರುವ ಮತ್ತೊಬ್ಬ ಭಾರತೀಯ ಆಟಗಾರ್ತಿಯಾಗಿದ್ದರೆ, ಜೆಮಿಮಾ ರೊಡ್ರಿಗಸ್ 12ನೇ ಸ್ಥಾನದಲ್ಲಿದ್ದಾರೆ. ಈ ಮಧ್ಯೆ ಅಲಾನಾ ಕಿಂಗ್ (775) ಮಹಿಳಾ ಏಕದಿನ ಬೌಲಿಂಗ್ ಶ್ರೇಯಾಂಕದಲ್ಲಿ ಅಗ್ರಸ್ಥಾನಕ್ಕೆ ಜಿಗಿದಿದ್ದಾರೆ. ಸೋಫಿ ಎಕ್ಲೆಸ್ಟೋನ್ ಅವರ ನಾಲ್ಕು ವರ್ಷಗಳ ಸತತ ಸ್ಥಾನವನ್ನು ಅವರು ಅಳಿಸಿದ್ದಾರೆ. ಭಾರತ ಸರಣಿಯಲ್ಲಿ ಲೆಗ್‌ಸ್ಪಿನ್ನರ್ ಅಲಾನಾ ಕಿಂಗ್ ಏಳು ವಿಕೆಟ್‌ಗಳನ್ನು ಗಳಿಸಿದ್ದಾರೆ, ಅವರ ಈಗಿನ 775 ರೇಟಿಂಗ್ ವೃತ್ತಿಜೀವನದ ಗರಿಷ್ಠ ರೇಟಿಂಗ್ ಆಗಿದೆ.

ಕಿಂಗ್ ಜೊತೆಗೆ ಆಸ್ಟ್ರೇಲಿಯಾದ ನಾಲ್ವರು ಬೌಲರ್‌ಗಳಾದ ಗಾರ್ಡ್ನರ್ (3ನೇ), ಅನ್ನಾಬೆಲ್ ಸದರ್ಲ್ಯಾಂಡ್ (5ನೇ), ಮೇಗನ್ ಶುಟ್ (7ನೇ) ಮತ್ತು ಕಿಮ್ ಗಾರ್ತ್ (8ನೇ) ಅಗ್ರ ಎಂಟರಲ್ಲಿ ಸ್ಥಾನ ಪಡೆದಿದ್ದಾರೆ. ದೀಪ್ತಿ ಶರ್ಮಾ ಅಗ್ರ 10ರಲ್ಲಿ ಸ್ಥಾನ ಪಡೆದ ಏಕೈಕ ಭಾರತೀಯರಾಗಿದ್ದಾರೆ.

ನಾಳೆ ಅರ್ಜುನ್ ಚಾಂಡೋಕ್ ಮದುವೆ

ಮುಂಬೈ: ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಅವರ ಮನೆಯಲ್ಲಿ ಸದ್ಯ ಮದುವೆಯ ಸಂಭ್ರಮ ಆರಂಭವಾಗಿದೆ. ಅವರ ಪುತ್ರ ಅರ್ಜುನ್ ತೆಂಡೂಲ್ಕರ್ ಅವರ ಮದುವೆ ಮಾರ್ಚ್ 5ರಂದು ತನ್ನ ದೀರ್ಘಾವಧಿ ಗೆಳತಿ ಸಾನಿಯಾ ಚಾಂಡೋಕ್ ಅವರೊಂದಿಗೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ತೆಂಡೂಲ್ಕರ್ ಮನೆಯಲ್ಲಿ ಸಂಭ್ರಮ ಮುಗಿಲೇರಿದೆ. ಮುಂಬೈನಲ್ಲಿರುವ ಸಚಿನ್ ಅವರ ನಿವಾಸ ಪುಷ್ಪಾಲಂಕಾರದಿಂದ ಕಂಗೊಳಿಸುತ್ತಿದೆ. ಅದಕ್ಕೆ ಸಂಬಂಧಿಸಿದ ಫೋಟೋಗಳು ಹಾಗೂ ವಿಡಿಯೋಗಳು ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿವೆ. ಮುಂಬೈ ಇಂಡಿಯನ್ಸ್ ತಂಡವು ಅರ್ಜುನ್ ಮತ್ತು ಸಾನಿಯಾ ಒಟ್ಟಿಗೆ ಕಾಣಿಸಿಕೊಂಡಿರುವ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿತ್ತು.



ಮಧ್ಯಪ್ರಾಚ್ಯ ಉದ್ವಿಗ್ನ | ಅಂತಾರಾಷ್ಟ್ರೀಯ ವಾಯುಪ್ರದೇಶಗಳ ನಿರ್ಬಂಧ

ಭಾರತದಲ್ಲೇ ಸಿಲುಕಿರುವ ವಿಂಡೀಸ್, ಜಿಂಬಾಬ್ವೆ

ದೆಹಲಿ: ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯಿಂದಾಗಿ ವಿಶ್ವದ ಹಲವು ಭಾಗಗಳಲ್ಲಿ ಕ್ರೀಡಾಪಟುಗಳ, ಕ್ರೀಡಾ ಚಟುವಟಿಕೆಗಳ ಮೇಲೂ ಕಾರ್ಮೋಡ ಕವಿದಿದೆ. ಟಿ20 ವಿಶ್ವಕಪ್ ಆಡಲು ಭಾರತ ಮತ್ತು ಶ್ರೀಲಂಕಾಗೆ ಬಂದಿದ್ದ ವೆಸ್ಟ್ ಇಂಡೀಸ್ ಮತ್ತು ಜಿಂಬಾಬ್ವೆ ತಂಡಗಳು ಸ್ಪರ್ಧೆಯಿಂದ ನಿರ್ಗಮಿಸಿದರೂ ಅಂತಾರಾಷ್ಟ್ರೀಯ ವಾಯುಪ್ರದೇಶದ ನಿರ್ಬಂಧಗಳಿಂದಾಗಿ ಭಾರತದಲ್ಲೇ ಉಳಿಯುವಂತಾಗಿದೆ.

ಆಟಗಾರರು ಮತ್ತು ಸಿಬ್ಬಂದಿಗಳ ಸುರಕ್ಷಿತ ಪ್ರಯಾಣವನ್ನು ಖಚಿತಪಡಿಸಿಕೊಳ್ಳಲು ಕ್ರಿಕೆಟ್ ವೆಸ್ಟ್ ಇಂಡೀಸ್ (ಸಿಡಬ್ಲ್ಯುಐ) ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಮತ್ತು ಸಂಬಂಧಿತ ಸರಕಾರಿ ಅಧಿಕಾರಿಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದೆ.

ಟಿ20 ವಿಶ್ವಕಪ್‌ನಿಂದ ಹೊರಬಿದ್ದ ನಂತರ, ವೆಸ್ಟ್ ಇಂಡೀಸ್ ತಂಡವು ಭಾರತದಿಂದ ನಿರ್ಗಮಿಸುವುದು ಅಂತಾರಾಷ್ಟ್ರೀಯ ವಾಯುಪ್ರದೇಶದ ನಿರ್ಬಂಧಗಳಿಂದಾಗಿ ವಿಳಂಬವಾಗಿದೆ ಎಂದು ಕ್ರಿಕೆಟ್ ವೆಸ್ಟ್ ಇಂಡೀಸ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಕೋಲ್ಕತ್ತಾದಲ್ಲಿ ಭಾರತದ ವಿರುದ್ಧ ಗೆಲ್ಲಲೇಬೇಕಾದ ಸೂಪರ್ ಎಂಟನೇ ಪಂದ್ಯದಲ್ಲಿ ಸೋತ ನಂತರ ವೆಸ್ಟ್ ಇಂಡೀಸ್ ತಂಡವು ಪಂದ್ಯಾವಳಿಯಿಂದ ಹೊರಬಿದ್ದಿತ್ತು. ವಿಶ್ವದ ಅತ್ಯಂತ ಜನನಿಬಿಡ ವಿಮಾನ ನಿಲ್ದಾಣಗಳಲ್ಲಿ ಒಂದಾದ ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಯೂ ಹಾನಿ ಸಂಭವಿಸಿದ್ದು, ಭದ್ರತಾ ಕಾಳಜಿ ಹೆಚ್ಚಾದ ಕಾರಣ ಗಲ್ಫ್ ಪ್ರದೇಶದ ಕೆಲವು ಭಾಗಗಳಲ್ಲಿ ವಿಮಾನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ.

ಈ ಅಡಚಣೆಯಿಂದಾಗಿ ಜಿಂಬಾಬ್ವೆ ತಂಡವೂ ತೊಂದರೆಗೀಡಾಗಿದೆ. ಜಿಂಬಾಬ್ವೆ ತಂಡದ ಆಟಗಾರರು ಸದ್ಯ ದೆಹಲಿಯಲ್ಲಿಯೇ ಉಳಿದಿದ್ದು, ಪರ್ಯಾಯ ಪ್ರಯಾಣ ವ್ಯವಸ್ಥೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ದೃಢಪಡಿಸಿದೆ. ತಂಡವು ದುಬೈ ಮೂಲಕ ತವರಿಗೆ ಮರಳಬೇಕಿತ್ತು, ಆದರೆ ಮಧ್ಯಪ್ರಾಚ್ಯದಲ್ಲಿ ಉಂಟಾಗುತ್ತಿರುವ ಪರಿಸ್ಥಿತಿಯಿಂದಾಗಿ ಅದರ ಪ್ರಯಾಣ ಯೋಜನೆಗಳ ಮೇಲೆ ಪರಿಣಾಮ ಬೀರಿತು. ಭಾನುವಾರ ನಡೆದ ತನ್ನ ಕೊನೆಯ ಸೂಪರ್ ಎಂಟನೇ ಪಂದ್ಯದಲ್ಲಿ ಜಿಂಬಾಬ್ವೆ ತಂಡ ದಕ್ಷಿಣ ಆಫ್ರಿಕಾ ವಿರುದ್ಧ ಐದು ವಿಕೆಟ್ ಅಂತರದ ಸೋಲು ಕಂಡಿತ್ತು.

ಐಸಿಸಿ ತುರ್ತು ಕ್ರಮಗಳನ್ನು ಸಕ್ರಿಯಗೊಳಿಸಿದ್ದು, ಪರ್ಯಾಯ ವ್ಯವಸ್ಥೆಗಳನ್ನು ಪಡೆಯಲು ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದೆ. ಈ ತಿಂಗಳ ಕೊನೆಯಲ್ಲಿ ಆರಂಭಗೊಳ್ಳಬೇಕಿರುವ ಐಪಿಎಲ್‌ಗಾಗಿ ಕೆಲ ತಂಡಗಳು ಈಗಾಗಲೇ ಅಭ್ಯಾಸ ಶಿಬಿರ ಆರಂಭಿಸಿದೆ. ಇದಕ್ಕಾಗಿ ಕೆಲ ವಿದೇಶಿ ಆಟಗಾರರು ಭಾರತಕ್ಕೆ ಪ್ರಯಾಣಿಸುವ ಸಿದ್ಧತೆಯಲ್ಲಿದ್ದರು, ಆದರೆ ಯುದ್ಧ ಸ್ಥಿತಿ ನಿರ್ಮಾಣವಾಗಿರುವುದರಿಂದ ಅವರ ಭಾರತ ಪ್ರಯಾಣ ವಿಳಂಬಗೊಳ್ಳುವ ಸಾಧ್ಯತೆಯಿದೆ ಎಂದು ವರದಿಯಾಗಿದೆ.

ಭಾರತ ಮಹಿಳಾ ಕ್ರಿಕೆಟ್ ತಂಡ ನಾಮನಿರ್ದೇಶನ

ಮ್ಯಾಡ್ರಿಡ್ (ಸ್ಪೇನ್): 2026ರ ಲಾರೆಸ್ ವಿಶ್ವ ಕ್ರೀಡಾ ಪ್ರಶಸ್ತಿಗಳಿಗೆ ನಾಮನಿರ್ದೇಶನಗಳನ್ನು ಪ್ರಕಟಿಸಲಾಗಿದೆ. 2025ರಲ್ಲಿ ಏಕದಿನ ವಿಶ್ವಕಪ್ ಗೆದ್ದ ಭಾರತೀಯ ಮಹಿಳಾ ಕ್ರಿಕೆಟ್ ತಂಡವನ್ನು ಸಹ ನಾಮನಿರ್ದೇಶನಗೊಂಡ ತಂಡಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ವಿಭಾಗದಲ್ಲಿ ಭಾರತ ಮಹಿಳಾ ತಂಡವನ್ನು ಹೊರತುಪಡಿಸಿ ವಿವಿಧ ಕ್ರೀಡೆಗಳಲ್ಲಿ ತಮ್ಮ ಛಾಪು ಮೂಡಿಸಿರುವ ಪ್ರಪಂಚದಾದ್ಯಂತದ ಐದು ಇತರೆ ತಂಡಗಳನ್ನು ಆಯ್ಕೆ ಮಾಡಲಾಗಿದೆ.

ವಿಶ್ವ ಚಾಂಪಿಯನ್ ಭಾರತೀಯ ಮಹಿಳಾ ಕ್ರಿಕೆಟ್ ತಂಡವನ್ನು ಹೊರತುಪಡಿಸಿ ಲಾರೆಸ್ ವರ್ಷದ ತಂಡ ಪ್ರಶಸ್ತಿಗಾಗಿ ಸ್ಪರ್ಧಿಸಲಿರುವ ಇತರ ಐದು ತಂಡಗಳಲ್ಲಿ ಇಂಗ್ಲೆಂಡ್ ಮಹಿಳಾ ಫುಟ್ಬಾಲ್ ತಂಡ, ಯುರೋಪಿಯನ್ ರೈಡರ್ ಕಪ್ ತಂಡ (ಗಾಲ್ಫ್), ಮೆಕ್‌ಲಾರೆನ್ ಫಾರ್ಮುಲಾ 1 ತಂಡ (ಯುಕೆ), ಬ್ಯಾಸ್ಕೆಟ್‌ಬಾಲ್‌ನ ಒಕ್ಲಹೋಮ ಸಿಟಿ ಥಂಡರ್ (ಯುಎಸ್‌ಎ) ಮತ್ತು ಫುಟ್‌ಬಾಲ್ ಕ್ಲಬ್ ಪ್ಯಾರಿಸ್ ಸೇಂಟ್-ಜರ್ಮೈನ್ (ಫ್ರಾನ್ಸ್) ಸೇರಿವೆ. ಲಾರೆಸ್ ವಿಶ್ವ ಕ್ರೀಡಾಳು ಪ್ರಶಸ್ತಿಗೆ ನಾಮನಿರ್ದೇಶನಗೊಂಡವರಲ್ಲಿ ಟೆನಿಸ್ ತಾರೆಗಳಾದ ಕಾರ್ಲೋಸ್ ಅಲ್ಕರಾಜ್ ಮತ್ತು ಮೊಂಡೊ ಡುಪ್ಲಾಂಟಿಸ್ ಸೇರಿದ್ದಾರೆ. ಲಾರೆಸ್ ವಿಶ್ವ ಕ್ರೀಡಾಳು ಪ್ರಶಸ್ತಿಗೆ ನಾಮನಿರ್ದೇಶನಗೊಂಡವರಲ್ಲಿ ಅರಿನಾ ಸಬಲೆಂಕಾ, ಇವಾನಾ ಬೊನ್ಮಾಟಿ ಮತ್ತು ವಿಶ್ವ ಪ್ರಸಿದ್ಧ ಈಜುಗಾರ್ತಿ ಕೇಟೀ ಲೆಡೆಕಿ ಸೇರಿದ್ದಾರೆ. ಇವರೆಲ್ಲರೂ 2025ರಲ್ಲಿ ನೀಡಿದ ಉತ್ತಮ ಪ್ರದರ್ಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ.

ಟೆಸ್ಟ್‌ಗೆ ನಬಿ ಅತ್ಯುತ್ತಮ ಆಯ್ಕೆ: ಗಂಗೂಲಿ

ದೆಹಲಿ: ಜಮ್ಮು-ಕಾಶ್ಮೀರ ತಂಡದ ವೇಗಿ ಆಖಿಬ್ ನಬಿ ಅವರನ್ನು ಭಾರತ ತಂಡಕ್ಕೆ ಆಯ್ಕೆ ಮಾಡುವಂತೆ ಟೀಮ್ ಇಂಡಿಯಾದ ಮಾಜಿ

ನಾಯಕ ಸೌರವ್ ಗಂಗೂಲಿ ಸಲಹೆ ನೀಡಿದ್ದಾರೆ. 2025-26ರ ದೇಶೀಯ ಕ್ರಿಕೆಟ್ ಆವೃತ್ತಿಯಲ್ಲಿ ನಬಿ ಅವರ ಅದ್ಭುತ ಪ್ರದರ್ಶನವನ್ನು ಕೊಂಡಾಡಿರುವ ಗಂಗೂಲಿ, ಅವರ ಆಯ್ಕೆಗೆ ಇದು ಸೂಕ್ತವಾದ ಸಮಯ ಎಂದಿದ್ದಾರೆ.

ಚೊಚ್ಚಲ ಬಾರಿ ಜಮ್ಮು-ಕಾಶ್ಮೀರ ತಂಡವು ಚಾಂಪಿಯನ್ ಪಟ್ಟ ಅಲಂಕರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಇದರ ಬೆನ್ನಲ್ಲೇ ನಬಿ ಅವರನ್ನು ಭಾರತ ತಂಡಕ್ಕೆ ಆಯ್ಕೆ ಮಾಡುವಂತೆ ಗಂಗೂಲಿ ಸೂಚಿಸಿದ್ದಾರೆ.

‘ಆಖಿಬ್ ನಬಿ ಶೀಘ್ರದಲ್ಲೇ ಟೀಮ್ ಇಂಡಿಯಾ ಪರ ಆಡಲಿದ್ದಾರೆ ಎಂಬ ವಿಶ್ವಾಸವಿದೆ. ಜುಲೈ 2026ರ ಇಂಗ್ಲೆಂಡ್ ಪ್ರವಾಸಕ್ಕೆ ಇವರು ಅತ್ಯಂತ ಸೂಕ್ತ ಬೌಲರ್. ಇಂಗ್ಲೆಂಡ್‌ನಂತಹ ಸ್ವಿಂಗ್ ಪೂರಕ ಪರಿಸ್ಥಿತಿಗಳಲ್ಲಿ ಚೆಂಡನ್ನು ಎರಡೂ ಕಡೆ ಮೂವ್ ಮಾಡುವ ನಬಿ ಅವರ ಕಲೆ ಭಾರತ ತಂಡಕ್ಕೆ ದೊಡ್ಡ ಶಕ್ತಿಯಾಗಲಿದೆ’ ಎಂದು ಗಂಗೂಲಿ ಅಭಿಪ್ರಾಯಪಟ್ಟಿದ್ದಾರೆ. ರಣಜಿ ಟ್ರೋಫಿ 2025-26ರ ಆವೃತ್ತಿಯಲ್ಲಿ ಕೇವಲ 10 ಪಂದ್ಯಗಳಲ್ಲಿ 60 ವಿಕೆಟ್ ಪಡೆಯುವ ಮೂಲಕ ಆಖಿಬ್ ನಬಿ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿಕೊಂಡಿದ್ದಾರೆ.

ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹೇಳಿಕೆ | ಬೆಂಗಳೂರಿನಲ್ಲೇ ಐದು ಪಂದ್ಯ ಆಡಲಿರುವ ಆರ್‌ಸಿಬಿ

ಚಿನ್ನಸ್ವಾಮಿಯಲ್ಲಿ ಮತ್ತೆ ಆರ್‌ಸಿಬಿ ಐಪಿಎಲ್ ಕಲರವ

ಬೆಂಗಳೂರು: ಐಪಿಎಲ್‌ನ ಹಾಲಿ ಚಾಂಪಿಯನ್ಸ್ ‘ರಾಯಲ್ ಚಾಲೆಂಜರ್ಸ್ ಬೆಂಗಳೂರು’ (ಆರ್‌ಸಿಬಿ) ತಂಡವು ಎಂ. ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ತವರಿನ ಮೈದಾನವಾಗಿ ಮರಳುವುದು ಅಧಿಕೃತವಾಗಿ ಘೋಷಣೆಯಾಗಿದೆ. ಮುಂದಿನ ತಿಂಗಳು ಆರಂಭವಾಗಲಿರುವ ಐಪಿಎಲ್ 19ರ ಆವೃತ್ತಿಯಲ್ಲಿ ತನ್ನ 5 ತವರು ಪಂದ್ಯಗಳು ಬೆಂಗಳೂರಿನಲ್ಲೇ ನಡೆಯಲಿವೆ ಎಂದು ಆರ್‌ಸಿಬಿ ಫ್ರಾಂಚೈಸಿ ಪ್ರಕಟಣೆಯಲ್ಲಿ ತಿಳಿಸಿದ ಬೆನ್ನಲ್ಲೇ ಈ ವಿಷಯವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಶನ್ (ಕೆಎಸ್‌ಸಿಎ) ಅಧ್ಯಕ್ಷ ಕೆ.ವೆಂಕಟೇಶ್ ಪ್ರಸಾದ್ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಸಂಜೆ ಖಚಿತಪಡಿಸಿದ್ದಾರೆ.

ಐಪಿಎಲ್ 2026ರ ಅವೃತ್ತಿಯ ಆರ್‌ಸಿಬಿಯ ಉಳಿದ ಎರಡು ತವರು ಪಂದ್ಯಗಳು ಈಗಾಗಲೇ ಘೋಷಣೆ ಆಗಿರುವಂತೆ ರಾಯ್‌ಪುರದ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿವೆ.

ಅಭಿಮಾನಿಗಳಿಗಾಗಿ ಪಂದ್ಯಗಳನ್ನು ತವರು ನೆಲಕ್ಕೆ ಮರಳಿ ತರುವ ಉದ್ದೇಶದಿಂದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಡೆಸಿದ ಹಲವಾರು ತಿಂಗಳ ಪರಿಶ್ರಮ ಮತ್ತು ಸಮನ್ವಯದ ಫಲವಾಗಿ ಈ ಮಹತ್ವದ ಬೆಳವಣಿಗೆ ಸಾಧ್ಯವಾಗಿದೆ ಎಂದು ಆರ್‌ಸಿಬಿ ಫ್ರಾಂಚೈಸಿ ಹೇಳಿತ್ತು.

ಬೆಂಗಳೂರಿನಲ್ಲಿ ಪಂದ್ಯಗಳನ್ನು ಆಯೋಜಿಸಲು ಮಾರ್ಗದರ್ಶನ, ಸಹಕಾರ ಮತ್ತು ಬೆಂಬಲ ನೀಡಿದ ಕರ್ನಾಟಕ ಸರಕಾರ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮತ್ತು ಕರ್ನಾಟಕ ಪೊಲೀಸರಿಗೆ ಆರ್‌ಸಿಬಿ ತನ್ನ ಕೃತಜ್ಞತೆಗಳನ್ನು ಸಲ್ಲಿಸಿದೆ. ಐಪಿಎಲ್ ಸೀಸನ್ ಆರಂಭಕ್ಕೂ ಮುನ್ನ ಮೂಲಸೌಕರ್ಯ ಮತ್ತು ಸುರಕ್ಷತಾ ಕ್ರಮಗಳನ್ನು ಹೆಚ್ಚಿಸಲು ನಡೆಸಿದ ಸಾಮೂಹಿಕ ಪ್ರಯತ್ನಗಳಿಂದಾಗಿ, ಹಾಲಿ ಚಾಂಪಿಯನ್ ತಮ್ಮ ಹೆಚ್ಚಿನ ತವರು ಪಂದ್ಯಗಳನ್ನು ತಮ್ಮದೇ ಮೈದಾನದಲ್ಲಿ ಆಡುವಂತಾಗಿದೆ.

ಈ ಬಗ್ಗೆ ಮಾತನಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಿಇಒ ರಾಜೇಶ್ ಮೆನನ್, ‘ಚಿನ್ನಸ್ವಾಮಿ ಕ್ರೀಡಾಂಗಣವು ಕೇವಲ ನಮ್ಮ ತವರು ಮೈದಾನವಲ್ಲ, ಇದು ಒಂದು ತಂಡವಾಗಿ ನಮ್ಮ ಅಸ್ಮಿತೆಯು ಜೀವಂತವಾಗಿರಿಸುವ ತಾಣವಾಗಿದೆ. ಬೆಂಗಳೂರಿನ ಅಭಿಮಾನಿಗಳು ನೀಡುವ ಅದ್ಭುತ ಶಕ್ತಿಯು ನಮ್ಮ ಆಟಗಾರರಿಗೆ ಆಟದ ಪ್ರತೀ ಹಂತದಲ್ಲೂ ಸ್ಫೂರ್ತಿಯಾಗಿ ನಿಂತಿದೆ. ನಮ್ಮ ಅಭಿಮಾನಿಗಳು ನಮಗೆ ಬೇಷರತ್ತಾದ ಬೆಂಬಲ ನೀಡಿದ್ದರಲ್ಲದೆ, ಅವರು ತಮ್ಮ ತಂಡವನ್ನು ತವರು ನೆಲದಲ್ಲಿ ಆಡುವುದನ್ನು ನೋಡಲು ಆತುರದಲ್ಲಿದ್ದಾರೆ’ ಎಂದಿದ್ದಾರೆ.

ಆರ್‌ಸಿಬಿ ತಂಡ ಕಳೆದ ವರ್ಷ ಐಪಿಎಲ್ ಟ್ರೋಫಿ ಗೆದ್ದ ಬಳಿಕ ಜೂನ್ 4ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭ್ರಮಾಚರಣೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಅಸಂಖ್ಯ ಅಭಿಮಾನಿಗಳು ಜಮಾಯಿಸಿದ್ದರಿಂದ ಕಾಲ್ತುಳಿತವುಂಟಾಗಿ 11 ಮಂದಿ ಮೃತಪಟ್ಟು 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಆ ನಂತರ ಕರ್ನಾಟಕ ಸರಕಾರವು ಭದ್ರತೆ ಕಾರಣಕ್ಕಾಗಿ ಚಿನ್ನಸ್ವಾಮಿ ಮೈದಾನದಲ್ಲಿ ಕ್ರಿಕೆಟ್ ಪಂದ್ಯಕ್ಕೆ ಅನುಮತಿ ನಿರಾಕರಿಸಿತ್ತು.

ಅಭಿಮಾನಿಗಳಿಗೆ ಸಂತಸ

‘ಆರ್‌ಸಿಬಿ ಫ್ರಾಂಚೈಸಿ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಅನ್ನು ಮತ್ತೆ ತವರು ಕ್ರೀಡಾಂಗಣವಾಗಿ ಆಯ್ಕೆ ಮಾಡಿರುವುದು ಆರ್‌ಸಿಬಿ ಅಭಿಮಾನಿಗಳ ಪಾಲಿಗೆ ನಿಜಕ್ಕೂ ಸಂತಸದ ವಿಷಯ’ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಶನ್ ಅಧ್ಯಕ್ಷ ಕೆ. ವೆಂಕಟೇಶ್ ಪ್ರಸಾದ್ ಹೇಳಿದ್ದಾರೆ. ‘ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಈ ಸಲದ ಐಪಿಎಲ್‌ನಲ್ಲಿ ಈಗಿನ ನಿರ್ಧಾರದಂತೆ ಒಟ್ಟು 5 ಪಂದ್ಯಗಳು ನಡೆಯಲಿವೆ. ಕೆಎಸ್‌ಸಿಎಯ ನಮ್ಮ ಹೊಸ ಆಡಳಿತ ಮಂಡಳಿಯ ಪ್ರಾಮಾಣಿಕ ಪ್ರಯತ್ನದಿಂದಾಗಿ ಈ ನಿರ್ಧಾರ ಸಾಧ್ಯವಾಗಿದ್ದು, ನಮ್ಮ ತಂಡವು ಆರ್‌ಸಿಬಿ ಅಭಿಮಾನಿಗಳಿಗೆ ನೀಡಿದ ಮಾತನ್ನು ಉಳಿಸಿಕೊಂಡಿದೆ’ ಎಂದು ವೆಂಕಿ ಹೇಳಿದ್ದಾರೆ.

ಕೊಹ್ಲಿ ‘ಆರ್‌ಸಿಬಿ’ ಐಕಾನ್

ಬೆಂಗಳೂರು: ಆರ್‌ಸಿಬಿ ಫ್ರಾಂಚೈಸಿ ನಿರ್ದೇಶಕ ಮೊ ಬೊಬಾಟ್ ವಿರಾಟ್ ಕೊಹ್ಲಿಗೆ ಗೌರವ ಸಲ್ಲಿಸಿದ್ದು, ಅವರನ್ನು ಆರ್‌ಸಿಬಿಯ ಶಾಶ್ವತ ಐಕಾನ್ ಮತ್ತು ನಾಯಕ ಎಂದು ಕರೆದಿದ್ದಾರೆ. ಅವರ ಈ ಹೇಳಿಕೆಯಿಂದಾಗಿ ಈಗಾಗಲೇ ಅಂತಾರಾಷ್ಟ್ರೀಯ ಟಿ20ಯಿಂದ ನಿವೃತ್ತಿ ಪಡೆದಿರುವ ವಿರಾಟ್ ಕೊಹ್ಲಿ ಇದೀಗ ಐಪಿಎಲ್‌ಗೂ ನಿವೃತ್ತಿ ಹೇಳಲಿದ್ದಾರಾ ಎಂಬ ಸಂದೇಹ ಅಭಿಮಾನಿಗಳಿಗೆ ಕಾಡಲಾರಂಭಿಸಿದೆ.

‘ವಿರಾಟ್ ಕೊಹ್ಲಿ ಶಾಶ್ವತವಾಗಿ ನಮ್ಮ ತಂಡದ ಜತೆಗಿರುತ್ತಾರೆ ಮತ್ತು ಅವರ ಆ ನಿರ್ಧಾರ ಕೊನೆಗೊಳ್ಳುತ್ತದೆ ಎಂದು ನಾನು ಭಾವಿಸುವುದಿಲ್ಲ, ಅವರು ಅದಕ್ಕೆ ಅರ್ಹರು. ಅವರ ಟ್ರ್ಯಾಕ್ ರೆಕಾರ್ಡ್ ಅದ್ಭುತವಾಗಿದೆ’ ಎಂದು ಬೊಬಟ್ ಆರ್‌ಸಿಬಿ ಪಾಡ್‌ಕ್ಯಾಸ್ಟ್‌ನಲ್ಲಿ ಹೇಳಿದ್ದಾರೆ.

‘ಅವರು ನಮ್ಮ ಆರ್‌ಸಿಬಿಗಾಗಿ ಎಷ್ಟೇ ರನ್ ಗಳಿಸಿದ್ದರೂ 18 ವರ್ಷ ಒಂದೇ ಶರ್ಟ್ ಧರಿಸಿದ್ದರು. ನಾವು ತಂಡದ ಭವಿಷ್ಯದ ನಿರ್ಧಾರದ ಬಗ್ಗೆ ಯೋಚಿಸುತ್ತಾ ಸಾಕಷ್ಟು ಸಮಯ ಕಳೆದೆವು. ನನ್ನ ವೃತ್ತಿಜೀವನದಲ್ಲಿ ನಾನು ಅಷ್ಟು ದೀರ್ಘ ಮತ್ತು ಆಳವಾಗಿ ಯೋಚಿಸಿದ ನಿರ್ಧಾರಗಳು ಇನ್ನೊಂದಿಲ್ಲ ಎಂದು ಹೇಳಲು ನನಗೆ ಅಭ್ಯಂತರವಿಲ್ಲ. ಆ ಚಿಂತನೆಯು ಹಿಂದಿನ ಋತುವಿನಲ್ಲಿ ಪ್ರಾರಂಭವಾಯಿತು’ ಎಂದು ಬೋಬಾಟ್ ಹೇಳಿದರು. ಐಪಿಎಲ್ ಆರಂಭವಾದಗಿನಿಂದ ಆರ್‌ಸಿಬಿ ತಂಡವನ್ನು ಪ್ರತಿನಿಧಿಸಿರುವ ಕೊಹ್ಲಿ, ಫ್ರಾಂಚೈಸಿಗೆ ನಿಷ್ಠಾವಂತ ಆಟಗಾರನಾಗಿದ್ದಾರೆ.